DAMAGE BOOK

THE BOOK WAS DRENCHED

TEXT LITE WITHIN THE BOOK ONLY

UNIVERSAL LIBRARY
OU_200261
UNIVERSAL LIBRARY

# ಪುರುಷಾವತಾರ

(ಕಾದಂಬರಿ)

ತ. ರಾ. ಸು.

ಂದ್ ಬ್ರದರ್ಸ್ — ಪ್ರಕಾಶಕರು — ಬೆಂಗ

ಮೊದಲ ಮುದ್ರಣ : ೧೯೫೮

ಎಲ್ಲ ಹಕ್ಕುಗಳೂ ಲೇಖಕರವು

ಬೆಲೆ : ೧—೧೫—೦

ಮುದ್ರಣ :
ಹಂಸ ಲಿಮಿಟೆಡ್
[illegible]ರಾಯನಕೆರೆ — ಮೈಸೂರು

# ಮೊದಲ ಮಾತು

"ಪುರುಷಾವತಾರ" ಕನ್ನಡ ಕಾದಂಬರಿಗಳಲ್ಲೊಂದು ಹೊಸಬಗೆಯ ಪ್ರಯತ್ನ. ಈ ಕಾದಂಬರೀರಂಗದಲ್ಲಿ ಸುಳಿಯುವ ಪ್ರಧಾನ ಪಾತ್ರಗಳು ಸಮಾಜದ ಗಣ್ಯ ವ್ಯಕ್ತಿಗಳಲ್ಲ, ಕಲಾವಿದರಲ್ಲ, ರಾಜಕಾರಣಿಗಳಲ್ಲ— ಯಾವೊಂದು ಬಗೆಯ ಹೊಳಪೂ ಇಲ್ಲದೆ, ದಿನದ ಅನ್ನಕ್ಕೆ ಮೈ ಮಿದುಳನ್ನು ಮಾರಿಕೊಂಡ ಯಾಂತ್ರಿಕ ಮನುಷ್ಯವರ್ಗದ ಜೀವಿಯಲ್ಲ, ಮುಂಬರುವ ಕ್ರಾಂತಿಯ, ಮಸೆಯುತ್ತಿರುವ ಕೈದುಗಳಾದ ಕೂಲಿಗಾರರೂ ಅಲ್ಲ: ಯಾರಿಗೂ ಬೇಡವಾದ, ಯಾರ ಕಣ್ಣಿಗೂ ಕಾಣದ 'ಬೇವಾರಿಸ್'ಗಳು. ಇವರು ಅರ್ಧ ಮನುಷ್ಯ–ಅರ್ಧ ಪಶು. ಹುಟ್ಟು ಮನುಷ್ಯರಂತೆ, ಬದುಕು ಪಶುಗಳಂತೆ.

೧೯೬೭ರ ಕೊನೆಯ ಭಾಗದಲ್ಲಿ ನಾನು 'ವಿಶ್ವಕರ್ನಾಟಕ' ದಿನಪತ್ರಿಕೆಯಲ್ಲಿ ಉಪಸಂಪಾದಕನಾಗಿ ಕೆಲಸಕ್ಕೆ ಸೇರಿದಾಗ, ಉಡುಪಿಯ ಹೋಟಲಿನ ಹಿಂಭಾಗದ ಎಂಜಲೆಲೆಯ ತೊಟ್ಟಿಯ ಬಳಿ ಇವರ ಪ್ರಥಮ ದರ್ಶನವಾಯಿತು. ಬಡತನದ ಹಲವಾರು ದಾರುಣ ಚಿತ್ರಗಳನ್ನು ನೋಡಿದ್ದ ನಾನು, ನನ್ನಂತೆಯೇ ಮಾನವನಂತಿರುವ ಹುಡುಗನೊಬ್ಬ ಎಂಜಲೆಲೆಯಿಂದ ಆಯ್ದು, ಹೊಟ್ಟೆ ತುಂಬಿಕೊಳ್ಳುವ ದುರಂತ ದೃಶ್ಯವನ್ನು ಕಂಡುದು ಇದೇ ಮೊದಲು. ನೊಂದಿರಡುಮೂರು ದಿನ ತಿನ್ನುವ ಅನ್ನ, ಅದರ ನೆನಪಿನಿಂದಾಗಿ ಹೊಟ್ಟೆಯೊಳಗೆ ಇಳಿಯದಂತಾಯಿತು. ಅದರೊಂದಿಗೇ ಇವರ ವಿಷಯ ತಿಳಿದುಕೊಳ್ಳಬೇಕೆಂಬ ಕುತೂಹಲವೂ ಮೂಡಿತು. ಆಗಾಗ ಅವರಿಗೆ ಬೀಡಿಗೆ ಕಾಸು ಕೊಟ್ಟು, ಅವರ 'ದೋಸ್ತಿ' ಮಾಡಿದೆ. ಅವರ ಜೀವನದ ರೀತಿ–ನೀತಿ, ನೆಲೆ–ಬೆಲೆಯನ್ನು ಅರಿತುಕೊಳ್ಳಲು ಯತ್ನಿಸಿದೆ. ಸುಮಾರು ಒಂದು-ಒಂದೂವರೆ ವರ್ಷಗಳ ಕಾಲ ನಡೆಯಿತು ನಮ್ಮ 'ಸ್ನೇಹ.'

ಅದರ ಪರಿಣಾಮವು "ಮುಂಜಾವಿನಿಂದ ಮುಂಜಾವಿ"ನಲ್ಲಿ ಸೂಕ್ಷ್ಮ ಚಿತ್ರವಾಗಿ, ಇಲ್ಲಿ ಕಾದಂಬರಿಯಾಗಿ ಮೂಡಿಬಂದಿದೆ.

ಸಮಾಜದ ಆಕಾಶದಲ್ಲಿ ದಿಕ್ಕುದೆಸೆಯಿಲ್ಲದೆ, ಉಲ್ಕೆಗಳಂತೆ ಅಲೆಯುವ ಈ ಜೀವಗಳು, ಇಂದಿನ ಸಮಾಜ ಪದ್ಧತಿಯಲ್ಲಿ ಅಂತರ್ಗತವಾಗಿರುವ ಹಲಬಗೆಯ ವಿಷಮತೆಯ ಸಾಕಾರ ಸ್ವರೂಪಗಳು; ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪ್ರತಿಭೆಯನ್ನು ವಿಕಾಸಗೊಳಿಸಿಕೊಳ್ಳಲು ಅವಕಾಶ, ವಿಕಾಸಗೊಳಿಸಿಕೊಳ್ಳಬೇಕೆಂಬ ಅರಿವು—ಎರಡೂ ಇಲ್ಲದೆ, ಹೆಸರು ದೆಸೆ ಇಲ್ಲದೆ ಹುಟ್ಟಿ ಬೆಳೆದು, ಕಡೆಗೆ ಬಹುಹುಟ್ಟಿಗೆ ಸಮಾಜಕಂಟಕರಾಗಿ ಪರಿಣಮಿಸುವ ಈ ಮಾನವ ಜೀವಗಳು, ಮಾನವನ ಅಮಾನುಷತೆಯ ಜೀವಂತ ಸಾಕ್ಷಿಗಳು; "ಪ್ರಾಣಿಗಳೊಳು ದಯೆಯಿಡು, ಸೋವಾಗುವುದವಕೆ" ಎಂದು ಹಾಡುತ್ತಾ, 'ಪ್ರಾಣಿದಯಾ ಸಂಘ'ಗಳನ್ನು ಸ್ಥಾಪಿಸಿ, ಪ್ರಾಣಿಗಳ ಬಗ್ಗೆ ಕಠೋರ ವರ್ತನೆಯನ್ನು ತಡೆಯಲು ಶಾಸನಗಳನ್ನು ನಿರ್ಮಾಣ ಮಾಡಿ, ಧನ್ಯರೆಂದುಕೊಳ್ಳುವ ನಾವು ಮಾನವರ ಬಗ್ಗೆಯೇ ಎಂತಹ ಪಾಶವೀ ತಾತ್ಸಾರದ ಧೋರಣೆಯನ್ನು ತಳೆದಿದ್ದೇವೆ ಎಂಬುವರ ಸಜೀವ ದೃಷ್ಟಾಂತ.

ಮಾನವ ಸಹಜವಾದ ಕರುಣೆ, ಕೊಂಚ ಪ್ರೀತಿ, ನಾಲ್ಕು ಆತ್ಮೀಯತೆಯ ಮಾತು, ನೆಲೆ ತಪ್ಪಿದ ಇಂತಹ ಪಶು-ಮಾನವ ಮತ್ತೆ ಮನುಷ್ಯನಾಗಲು ಹೇಗೆ ಕಾರಣವಾಗಬಹುದು ಎಂದು ನಾನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದೇನೆ. ಹಾಗೇ ಅವನು ಸಮಾಜಕಂಟಕನಾಗಿ ಪರಿಣಮಿಸಲು ಎಂತಹ ಪರಿಸ್ಥಿತಿಗಳು ಕಾರಣವಾಗಬಹುದೆಂದೂ ಸೂಚ್ಯವಾಗಿ ತೋರಿಸಲು ಪ್ರಯತ್ನಿಸಿದೇನೆ.

ನಾವಿಂದು ನೂತನ ಸಮಾಜ ನಿರ್ಮಾಣದ ಮಾರ್ಗದಲ್ಲಿದ್ದೇವೆ. ಎಲ್ಲ ಬಗೆಯ ಅಸಮತೆ, ವಿಷಮತೆಗಳನ್ನು ಅಳಿಸಿ, ಸ್ವಾತಂತ್ರ್ಯಚತುಷ್ಟಯದ ತಳಹದಿಯ ಮೇಲೆ, ಮಾನವನ ಹಿರಿಮೆಯ ಭವ್ಯ ಸೌಧವನ್ನು ನಿರ್ಮಾಣ ಮಾಡುವ ಪ್ರಯತ್ನದಲ್ಲಿದೇವೆ. ಎಂತಲೇ ಇಂಥ ಮಾನವರ ಉದ್ಧಾರದ ಬಗ್ಗೆ ನಮ್ಮ ದೃಷ್ಟಿ, ವಿಚಾರ, ಕರ್ತವ್ಯ ಬುದ್ಧಿ ಹೊರಳಬೇಕು. ಹಾಗಲ್ಲದೆ ಇಂಥ ಅತೃಪ್ತ ಜೀವಿಗಳನ್ನು ಮರೆತು, ನೂತನ ಸಮಾಜ ನಿರ್ಮಿಸಲು ಯತ್ನಿಸಿದರೆ, ಆ ಪ್ರಯತ್ನ, ತಳ ಸೋಸದೆ, ಗೆದ್ದಲು

ಹುತ್ತದ ಮೇಲೆ ಮನೆ ಕಟ್ಟಿದಂತಾಗುವುದು ಖಂಡಿತ. **ಈ** ಎಚ್ಚರಿಕೆಯ ಮಾತನ್ನು ಹೇಳಬೇಕು, ಯಾರ ಪಾಪಕ್ಕೋ ತಮ್ಮ ಬಾಳನ್ನು ಬಲಿಗೊಡುತ್ತಿರುವ **ಈ** ನಿರ್ಭಾಗ್ಯ ಸೋದರರ ಬಾಳು ಹಸನಾಗಬೇಕು ಎಂಬ ಉದ್ದೇಶದಿಂದ **ಈ** ಕಾದಂಬರಿಯನ್ನು ಬರೆದಿದೇನೆ.

ಈ ಕಾದಂಬರಿಯನ್ನು ಓದಿ, ಒಬ್ಬಿಬ್ಬರ ದೃಷ್ಟಿಯಾದರೂ **ಈ** ಅನಾಥರ ಉದ್ಧಾರದತ್ತ ಹೊರಳಿಸಿದರೆ ನನ್ನ ಶ್ರಮ ಸಾರ್ಥಕವಾಗುತ್ತದೆ; ಆ ಬಾಲಕರು ನನ್ನಲ್ಲಿ ತೋರಿದ ವಿಶ್ವಾಸದ ಋಣಕ್ಕೆ ಅಲ್ಪ ಪರಿಹಾರ ಸಂದಾಯವಾದಂತಾಗುತ್ತದೆ.

ಈ ಕಾದಂಬರಿಯನ್ನು ಮುದ್ರಿಸಲು ಮುಂದಾದ ಬೆಂಗಳೂರಿನ ಆನಂದ ಬ್ರದರ್ಸ್ ಸಂಸ್ಥೆಯ ವ್ಯವಸ್ಥಾಪಕರಿಗೂ, ಇದನ್ನು ಮುದ್ರಿಸಿದ ಮೈಸೂರಿನ ಹಂಸ ಮುದ್ರಣಾಲಯದ ಮಿತ್ರರಿಗೂ ನನ್ನ ಕೃತಜ್ಞತೆ.

೨೧-೨-೧೯೫೧
೧೩೭೫, ಕೃಷ್ಣಮೂರ್ತಿಪುರಂ
ಮೈಸೂರು

ತ. ರಾ. ಸು.

# ಅರ್ಪಣೆ

ದೀನ, ದಲಿತ, ಶ್ರಮಜೀವಿಗಳ ಉದ್ಧಾರಕ್ಕೆ
ತನ್ನ ಬಾಳನ್ನು ಮೀಸಲಿಟ್ಟು
ನಿಸ್ವಾರ್ಥ ಸೇವೆಯ ನಿತ್ಯವ್ರತ ಕೈಕೊಂಡ
' ಸತ್ಯಾಗ್ರಹಿ '

**ಗೆಳೆಯ ಎಚ್. ಡಿ. ಶಂಕರ್‌ಗೆ**

# ಪುರುಷಾವತಾರ

## ೧

"ಹೈ.......ಹಚಾ.......ಹಚಾ"

ಹೋಟಲಿನ ಆಳು, ಕುದಿಯುವ ನೀರು ತುಂಬಿದ್ದ ಬಕೆಟ್ಟನ್ನು ನಾಲ್ಕಾರು ಬಾರಿ ಸುತ್ತಿಸಿ, ನೀರನ್ನು ತೂರಿದ. ಸುತ್ತಿ ಸುತ್ತಿ ಬಿಟ್ಟ ಕವಣೆಯ ಕಲ್ಲಿನಂತೆ, ಹೊಗೆಯಾಡುವ ನೀರು ಚಿಲ್ಲೆಂದು ಚಿಮ್ಮಿ, ಎರಗಿತು—ತೊಟ್ಟಿಯ ಬಳಿ, ಎಂಜಲು ಎಲೆಗಳಿಂದ ಅನ್ನವನ್ನು ಆಯುತ್ತಿದ್ದ ಹುಡುಗರ ಗುಂಪಿನಮೇಲೆ. ಸಿಡಿಲೆರಗಿದಂತೆ ಒಂದು ಗಳಿಗೆ ಸುಮ್ಮನಿದ್ದು, ಹುಡುಗರು, ಬಾಯಿಗೆ ಬಂದ ಮಾತುಗಳಿಂದ ಶಪಿಸುತ್ತಾ, ಕವಣೆಯಕಲ್ಲು ತಗುಲಿದ ಗಿಳಿಗಳ ಹಿಂಡಿನಂತೆ ದಿಕ್ಕಾಪಾಲಾಗಿ ಓಡಿದರು. ಕುದಿಯುವ ನೀರು, ಬೆಂಕಿಯಂತೆ, ಸಿಡಿದತ್ತ ಅವರ ಮೈಮೇಲೆ, ಬೊಬ್ಬೆ ಬರಿಸಿ, ಸೂಜಿ ಚುಚ್ಚಿದಂತೆ ನೋವುಂಟು ಮಾಡಿತ್ತು. ಗುಂಪಿನ ಮಧ್ಯದಲ್ಲಿದ್ದು, ಬಿದ್ದ ನೀರಿನ ಬಹುಭಾಗವನ್ನು ಬೆನ್ನಮೇಲೆ ಧರಿಸಿದ ಹುಡುಗಿಯೊಬ್ಬಳು, ನೋವು ತಡೆಯಲಾರದೆ ಚೀರುತ್ತಿದ್ದಳು.

"ಇನ್ನೊಂದ್ಸಲಾ ಏನಾದ್ರೂ ಬಂದ್ರೆ, ಒಲೇಲಿರೋ ಕೆಂಡ ತಂದು ಹಾಕಿಬಿಡ್ತೀನಿ, ಸೂಳೆಮಕ್ಕಳ" ಎಂದು ಬೈದು, ಓಡುವ ಹುಡುಗರನ್ನು ಕಂಡು ಗಟ್ಟಿಯಾಗಿ ನಗುತ್ತಾ, ಹೋಟಲ ಆಳು ಬಾಗಿಲು ಹಾಕಿಕೊಂಡು ಹೊರಟುಹೋದ.

"[illegible], ಸತ್ನೋ.... ಅವ್ವಾ.. ಉರೀತದೇ......."

ಬಿ[illegible] ಬಾಣಕ್ಕೆ ಗುರಿಯಾದ ಹುಡುಗಿ, ನೆಲದಮೇಲೆ ಬಿದ್ದು ಹೊರಳಿ, ಅಳಲಾರಂಭಿಸಿದ್ದಳು. ಅವಳ ಅಳುವನ್ನು ಕೇಳಿ, ಅಷ್ಟು ದೂರ ಓಡಿಹೋದ ಹುಡುಗನೊಬ್ಬ, ಹಿಂದಿರುಗಿ ಅವಳ ಬಳಿಗೆ ಓಡಿ ಬಂದು, [illegible]. ಹುಡುಗಿಯ ಬರಿದಾದ ಬೆನ್ನಿನಮೇಲೆ, ಚಿತ್ರ

ಕೊರೆವಂತೆ, ಕುದಿನೀರು ಕಂದುಬಣ್ಣದ ಬೊಬ್ಬೆಗಳನ್ನು ಎಬ್ಬಿಸಿತ್ತು. ಅವಳ ಮುಕ್ಕಾಲು ಬೆತ್ತಲೆ ಮೈ, ಬಿರುಗಾಳಿಗೆ ಸಿಲುಕಿದ ಬಳ್ಳಿಯಂತೆ, ಕಂಪಿಸುತ್ತಿತ್ತು. ಕಂಬನಿ ಹರಿದ ಕೆನ್ನೆಗಳ ಮೇಲೆ ಸಣ್ಣ ಧೂಳು ತೊಡೆದು, ಕಣ್ಣೀರು ಹರಿದ ದಾರಿಯನ್ನು ಗುರುತಿಸಿತ್ತು. ಎಂಜಲಹಾಳೆಯೊಂದು, ಅವಳ ನೆತ್ತಿಗೆ ಹತ್ತಿತ್ತು.

ಹುಡುಗ ಒಂದು ಗಳಿಗೆ ಸುಮ್ಮನೆ ನಿಂತು, ನೆಲದಲ್ಲಿ ಹೊರಳುತ್ತಿದ್ದ ಹುಡುಗಿಯನ್ನು ನೋಡಿದ. ಅವನೆದೆಯಲ್ಲಿ ಕ್ರೋಧ ಹೊತ್ತಿ, ಉರಿಗೆದರಿ, ಅವನ ಹಸಿರುಬಣ್ಣದ ಬೆಕ್ಕಿನ ಕಣ್ಣುಗಳಲ್ಲಿ ಪ್ರಜ್ವಲಿಸಲಾರಂಭಿಸಿತು. ಜಗತ್ತನ್ನೇ ದಹಿಸುವಂತಿತ್ತು ಆ ದಾವಾಗ್ನಿ. ಸಿಟ್ಟಿನ ಕಡೆತದಲ್ಲಿ ನೆಲದಮೇಲೆ ಹೊರಳುವ ಹುಡುಗಿಯೂ ಅವನ ದೃಷ್ಟಿಯಿಂದ ಮರೆಯಾಗಿ ಹೋದಳು. ಬಾಗಿದ ಬೆನ್ನು ಸೆಟೆದು ನಿಂತಿತ್ತು. ಉರಿಯುವ ಕಣ್ಣುಗಳಿಂದ, ಮುಚ್ಚಿದ ಬಾಗಿಲನ್ನು ನೋಡಿದ. ಹತ್ತಿರದಲ್ಲೇ ಬಿದ್ದಿದ್ದ ದಪ್ಪ ಕಲ್ಲೊಂದನ್ನು ಎತ್ತಿ, ಬಾಗಿಲಿನತ್ತ ಬೀಸಿದ. ಬಲವಾಗಿ ಬೀಸಿದ ಕಲ್ಲು ರೊಯ್ಯೆಂದು ಹಾರಿ, ಬಾಗಿಲಿಗೆ ಬಡಿದು, ಪುಟಹಾರಿತು.

"ಬ್ಯಾಡಣ್ಣ, ಅವ್ರು ನಿನ್ನ ಕೊಂದ್ಹಾಕ್ಬಿಡ್ತಾರೆ.... "

ನೆಲದಮೇಲೆ ಉರುಳಿದ ಹುಡುಗಿ, ಮೇಲೇಳಲಾರದೆ, ಮಲಗಿದ ಹಾಗೇ ಕೂಗಿದಳು.

"ಬರ್ಲಿ, ಅದ್ಯಾವ್ಯಾವೋನು ಬರ್ತಾನೋ, ಏನಾಗ್ತದೋ ಆಗ್ಲಿ"

ಶತ್ರುಸಮೂಹವನ್ನು ಎದುರಿಸಲು ಸಿದ್ಧನಾಗಿ ನಿಂತ ಯೋಧನಂತೆ, ಹುಡುಗ, ಉರಿಗಣ್ಣನ್ನರಳಿಸಿ, ಬಾಗಿಲನ್ನೇ ನೋಡುತ್ತಾ ನಿಂತ. ಆದರೆ ಮುಚ್ಚಿದ ಬಾಗಿಲು ತೆರೆಯಲಿಲ್ಲ. ಕುದಿನೀರಿಗೆ ಬೆದರಿ ದೂರ ಓಡಿಹೋದ ಹುಡುಗರು ಒಬ್ಬೊಬ್ಬರಾಗಿ ಬಂದು, ಅವನ ಸುತ್ತ ಕಲೆತರು. ಎಲ್ಲರ ಕಣ್ಣೂ ಬಾಗಿಲು ತೆರೆವುದನ್ನೇ ನಿರೀಕ್ಷಿಸಿ, ಅಲ್ಲೇ ಕೀಲಿಸಿತ್ತು. ಒಬ್ಬೊಬ್ಬರ ಕೈಯಲ್ಲೂ ಕಲ್ಲು, ಹಾರಲು ಸಿದ್ಧವಾಗಿತ್ತು. ಆದರೆ ಬಾಗಿಲು ತೆರೆಯದೆ, ಅವರ ನಿರೀಕ್ಷೆ ವಿಫಲವಾದುದರಿಂದ, ಕಲ್ಲುಗಳನ್ನು ಬಿಸುಟು, ಮತ್ತೆ ಎಂಜಲು ಗುಂಡಿಯಿಂದ, ಅನ್ನವನ್ನು ಆಯುವುದರಲ್ಲಿ ಉದ್ಯುಕ್ತ

ರಾದರು. ಪ್ರತೀಕಾರತೃಷೆಗಿಂತ ಅವರ ಹಸಿವು ಬಲವಾಗಿತ್ತು. ಕಣ್ಣುಮರೆಯಾದ ಶತ್ರುವನ್ನು ಕೆರಳಿಸಿ, ಕ್ರೋಧತೃಪ್ತಿಮಾಡಿಕೊಳ್ಳುವುದಕ್ಕಿಂತ, ಕೆದರಿದ ಉದರಾಗ್ನಿಯನ್ನು ತಣಿಸುವುದರಲ್ಲಿ, ಅವರಿಗೆ ಆತುರವಿತ್ತು. ಅದರಲ್ಲಿ ಒಂದು ಗಳಿಗೆ ಸಹಜವಾಗಿ ಮೂಡಿಬಂದ, ಭ್ರಾತೃಭಾವವೂ ಮರೆಯಾಗಿ ಹೋಯಿತು. ಎಂಜಲು ಎಲೆಗಳ ತೊಟ್ಟಿ, ಎಲ್ಲವನ್ನೂ ಮರೆಯಿಸಿ, ಅವರನ್ನು ಕರೆಯಿತು.

"ಹೋಗ್ಲಿ ಬಿಡೋ ಕಣ್ಣ. ಅವನೆಲ್ಲಾದ್ರೂ ಸಿಕ್ಲಿ. ಆಗ ತೋರಿಸೋಣ"

—ಎಂದು, ಬಾಗಿಲನ್ನೇ ನೋಡುತ್ತಾ ನಿಂತ ಹುಡುಗನನ್ನು ಕರೆದರು. ಹುಡುಗ ಕಡೆಯಬಾರಿಗೆ ಬಾಗಿಲನ್ನು ಮರುಮರನೆ ನೋಡಿ, ಉಳಿದವರೊಂದಿಗೆ ತಾನೂ ಎಂಜಲೆಲೆಗಳಿಗೆ ಕೈಹಾಕಿ, ಕೈಗೆ ಸಿಕ್ಕಷ್ಟನ್ನು ತೆಗೆದುಕೊಂಡು, ನೆಲದಮೇಲೆ ಕುಳಿತಿದ್ದ ಹುಡುಗಿಯ ಹತ್ತಿರ ಬಂದು, ಕೈಯಲ್ಲಿದ್ದ ಅನ್ನವನ್ನು ಹುಡುಗಿಯ ಬಾಯಿಗಿಟ್ಟ. ಗಳಿಗೆ ಗಳಿಗೆಗೂ ಏರುತ್ತಿರುವ ನೋವನ್ನು ಸಹಿಸಲಾಗದೆ ಹುಡುಗಿ ಅಳುತ್ತಿದ್ದಳು.

"ಬಾಳ ನೋಯ್ತದಾ ಇಂದೂ ......'

ಅನ್ನವನ್ನು ಅವಳ ಬಾಯಿಗಿಡುತ್ತಲೇ ಕೇಳಿ, ಕಣ್ಣ ಬೊಬ್ಬೆಗಳು ತುಂಬಿದ ಅವಳ ಬೆನ್ನಿನಮೇಲೆ ಮೃದುವಾಗಿ ಕೈಯಾಡಿಸಿದ. ಅವನ ಕೈ ಸೋಕಿದ ಕೂಡಲೇ ಹುಡುಗಿ, ಬೆಂಕಿ ತಗುಲಿದವಳಂತೆ 'ಹಾ' ಎಂದಳು. ಆ ಕೂಗು ಕಣ್ಣನ ಕರುಳನ್ನು ಕಿವುಚಿತು. ಅವನ ಕಣ್ಣಲ್ಲೂ ನೀರು ತುಂಬಿತು. ಇಂದು ಮಾತನಾಡದೆ, ಕಣ್ಣ ಬಾಯೊಳಗಿಟ್ಟ ಅನ್ನವನ್ನು ಮೆಲ್ಲುತ್ತಲೇ ನೋವು ಹೆಚ್ಚಾಗಿದೆಯೆಂದು ಸೂಚಿಸಲು ತಲೆಯಾಡಿಸಿದಳು. ಆಗಬಹುದಾದ ನೋವಿಗೇ ಬೆದರಿ, ಅವಳ ಮುಖ ಬಿಗಿದು, ಮತ್ತೆ ಕಣ್ಣೀರು ಹರಿಯಲಾರಂಭಿಸಿತು. ಅವಳ ಮುಖವನ್ನು ನೋಡುತ್ತಿದ್ದಹಾಗೇ ಕಣ್ಣನ ಬಾಯಲ್ಲಿದ್ದ ಅನ್ನದ ತುತ್ತು ಕಹಿಯಾಗಿ ಹೋಯಿತು. ತನ್ನ ಹೊಟ್ಟೆಯೊಳಗಿನ ಸಿಟ್ಟನ್ನೆಲ್ಲಾ ಕಕ್ಕುವನಂತೆ, ಬಾಯಲ್ಲಿದ್ದುದನ್ನು ಉಗುಳಿ, ಎದ್ದು—

"ಹೋಗೋಣ ಬಾ ಇಂದೂ" ಎಂದ.

ಇಂದು ಮೇಲಕ್ಕೆ ಏಳಲು ಯತ್ನಿಸಿದಳು. ಆ ಪ್ರಯತ್ನಕ್ಕೆ ನೋವು ಕೆರಳಿತೇ ಆಗಲಿ, ಮೇಲೇಳಲಾಗಲಿಲ್ಲ. ಅರ್ಧ ಕುಳಿತು, ಸುಮ್ಮನೆ ಕಣ್ಣನ ಮುಖವನ್ನು ನೋಡಿದಳು. ನೋವಿಗೆ ಏಳಲಾಗದೆ, ಧೂಳಿನಲ್ಲಿ ಉರುಳಿದ ಹುಡುಗಿಯ ಅಸಹಾಯಕ ನೋಟ, ಶಲ್ಯದಂತೆ ಅವನ ಎದೆಯನ್ನಿರಿಯಿತು. ಬೇರೇನೂ ಮಾತನಾಡದೆ, ಹುಡುಗಿಯನ್ನು ಪ್ರಯಾಸಪಟ್ಟು ಹೆಗಲಿನ ಮೇಲೆ ಹಾಕಿಕೊಂಡು ಹೊರಟ. ಅವಳ ಭಾರಕ್ಕೆ ಅವನ ಕಾಲು ಕುಸಿಯುತ್ತಿತ್ತು. ಆದರೂ, ಕುಸಿದು ಜಾರುವ ಕಾಲನ್ನು ಸಾವರಿಸಿಕೊಳ್ಳುತ್ತಾ, ಅದಕ್ಕೆ ಕಾರಣರಾದವರನ್ನು ಶಪಿಸುತ್ತಾ, ಹೆಜ್ಜೆ ಹಾಕಿದ— ಮನೆಯತ್ತ.

ಅವನ ಮನೆ! ಊರವರು ದೆವ್ವದ ಮನೆಯೆಂದು ಹೆದರಿ, ಪಾಳು ಬಿಟ್ಟ ಮನೆಯ ಮುಂದಿನ, ಅರೆಬರೆ ಹೆಂಚು ಹಾರಿಹೋದ ಸೂರಿನ ಕೆಳಗಡೆಯ ಜಗಲಿ—ಅವನ ಮನೆ; ಗಾಳಿಗಾಗಲಿ, ಮಳೆಗಾಗಲಿ, ಬಿಸಲಿಗಾಗಲಿ, ಛಳಿಗಾಗಲಿ— ಯಾವುದಕ್ಕೂ ಮರೆಯಾಗದೆ ಹೋದರೂ, ನೋಡಿಕೊಳ್ಳುವವರಿಲ್ಲದೆ, ಜಗಲಿಗೆ ಹಾಸಿದ ಬಂಡೆಗಳು ಸಂದು ಸಡಲಿ, ಹಾವು ಚೇಳುಗಳ ಮನೆಯಾಗಿದ್ದರೂ, ಗಾಳಿ ಜೋರಾಗಿ ಬೀಸಿದಾಗೊಮ್ಮೆ, ಮುರಿದ ಹಂಚು ಹಾರಿ, ಮೈಮೇಲೆಬಿದ್ದು ಪೆಟ್ಟು ಮಾಡಿದರೂ— ಅವನ ಪಾಲಿಗೆ ಮಾತ್ರ ಅದೇ ಮನೆ. ಆ ಮನೆಯಲ್ಲಿ ಅವನು, ಅವನ ತಂಗಿ ಇಂದು, ಅವನಂಥವರೇ ಆರೇಳು ಜನ ಹುಡುಗರು, ಯಾರಿಗೂ ಬಾಡಿಗೆ, ಕಂದಾಯ ಕೊಡದೆ ವಾಸಮಾಡುತ್ತಾರೆ. ಮನೆ ಕಟ್ಟಿದವರನ್ನು ಹೆದರಿಸಿ ಓಡಿಸಿದ ಭೂತ, ಇವರಿಗೆ ಹೆದರಿದಂತೆ, ಗದ್ದಲ ಮಾಡದೆ ಇವರು ವಾಸಮಾಡಲು ಅವಕಾಶಕೊಟ್ಟದೆ. ಒಂದುವೇಳೆ ದೆವ್ವ ಹೆದರಿಸಿದರೂ, ಆ ಆಶ್ರಯವನ್ನು ಬಿಡುವಂತಿಲ್ಲ ಇವರು. ಏಕೆಂದರೆ— ಇಲ್ಲಿ ಅವರಿಗೆ ದೆವ್ವಕ್ಕಿಂತ ಕ್ರೂರವಾಗಿ ಕಾಡುವ ರಾತ್ರಿಯ 'ಬೀಟ್'ನ ಪೋಲೀಸರ ಕಾಟವಿಲ್ಲ.

ಮೊದಮೊದಲು ಇವರ ಗುಂಪು, ಹಗಲನ್ನು ಎಲ್ಲಾದರಲ್ಲಿ ಕಳೆದು, ಕೆಂಪೇಗೌಡ ರಸ್ತೆಯಲ್ಲಿದ್ದ ಧರ್ಮಾರ್ಥ ಆಸ್ಪತ್ರೆಯ ಕಟ್ಟೆಯ ಮೇಲೆ ರಾತ್ರಿ ಕಳೆಯುತ್ತಿದ್ದರು. ಕೆಲವು ತಿಂಗಳ ಕಾಲ ಹಾಗೆ ಕಳೆದಮೇಲೆ, ಒಂದು ದಿನ ಹತ್ತಿರದಲ್ಲೆಲ್ಲೋ, ಯಾರ ಮನೆಯಲ್ಲೋ ಕಳ್ಳತನವಾಗಿ, ಇವರಿಗೆ ಅಲ್ಲಿಂದ ಉಚ್ಚಾಟನೆಯಾಯಿತು. ಒಂದು ದಿನ ರಾತ್ರಿ ಎರಡು ಗಂಟೆಯ ಹೊತ್ತಿನಲ್ಲಿ, 'ಬೀಟು' ಬಂದ ಪೋಲೀಸಿನವನು, ಕಟ್ಟೆಯ ಮೇಲೆ ಸದ್ದು ಕೇಳಿ, ಬ್ಯಾಟರಿಯ ಬೆಳಕು ಬಿಟ್ಟುನೋಡಿ, ಅಲ್ಲಿ ಮಲಗಿದ್ದ ಹುಡುಗ ರನ್ನು ಕಂಡು, ಗದ್ದಲ ಮಾಡಿ ಎಬ್ಬಿಸಿ, ಬೇಗ ಏಳದವರಿಗೆ ನಾಲ್ಕೇಟು ಬಿಗಿದು, ಅಲ್ಲಿಂದ ಓಡಿಸಿದ. ಬೆಂಗಳೂರಿನ ಕೊರೆವ ಛಳಿಯಾಗಲಿ, ಸಣ್ಣಗೆ ಹನಿ ಹಾಕುತ್ತಿದ್ದ ಮುಗಿಲಾಗಲಿ, ಬೆದರಿ ಅಳುತ್ತಿರುವ ಹುಡುಗರ ಮುಖ ವಾಗಲಿ— ಯಾವುದೂ ಅವನಿಗೆ ಅಡ್ಡಿಯಾಗಲಿಲ್ಲ. ಇನ್ನೊಂದು ದಿನ ಎಲ್ಲಾದರೂ ಆಕಡೆ ಕಣ್ಣಿಗೆ ಬಿದ್ದರೆ 'ಬಲಿ ಹಾಕುವುದಾಗಿ' ಹೆದರಿಸಿ, ಅವರನ್ನು ಅಲ್ಲಿಂದ ಓಡಿಸಿದ. ಅಲ್ಲಿ ಅವರಿಗೆ ಎಷ್ಟೋ ಚೆನ್ನಾಗಿತ್ತು. ಅವರು ಯಾರಿಗೂ ಏನೂ ಅಪರಾಧಮಾಡಿರಲಿಲ್ಲ. ಅವರೂ ಅಲ್ಲಿಂದ, ಹನಿ ಮಳೆಯಲ್ಲಿ ಬೆತ್ತಲೆ ಮೈಯನ್ನು ತೋಯಿಸುತ್ತಾ ಓಡಬೇಕಾಯಿತು. ಇವರು ಅಲ್ಲಿಂದ ಓಡಿದಮೇಲೆ, ಈಗ ಅಲ್ಲಿ ರಾತ್ರಿಯಹೊತ್ತು, ನಿರ್ಭಯ ವಾಗಿ, ಗಂಧರ್ವಗಳು ಆಸ್ಪತ್ರೆಯ ಕಟ್ಟೆಯನ್ನು ಅಂತಃಪುರವಾಗಿ ಉಪ ಯೋಗಿಸುತ್ತಿವೆ: ಪೋಲಿಯ ದನಗಳು, ಸಿಕ್ಕಿದ್ದನ್ನು ಮೇದುಬಂದು, ಗಂಜಲ ಹರಿಸಿ, ಅಲ್ಲಿ ನಿಶ್ಚಿಂತೆಯಾಗಿ ಮಲಗಿ ನಿದ್ರೆಮಾಡುತ್ತವೆ. ಎಷ್ಟೋ ವೇಳೆ ನೀತಿಗೆಟ್ಟ ಮಾನವ ಪಶುಗಳು. ಅವುಗಳೊಂದಿಗೆ ಸ್ವಲ್ಪಹೊತ್ತು ಇದ್ದು, ತಮ್ಮ ಅವಸರ ತೀರಿಸಿಕೊಂಡು ಹೋಗುತ್ತಾರೆ. ಅವರಾರಿಗೂ ಪೋಲೀಸರ ಜವಾಬ್ದಾರಿಕೆಯಿಲ್ಲ. ಪೋಲೀಸರಿಗೂ ಅವರ ಮೇಲೆ ಹಗೆತನವಿಲ್ಲ. ಊರವರ ರೋಗಕ್ಕೆಲ್ಲ ಧರ್ಮಾರ್ಥವಾಗಿ ಔಷಧ ಕೊಡುವ ಆಸ್ಪತ್ರೆಯ ಛಾವಣಿಯೂ, ದಿಕ್ಕಿಲ್ಲದ ಇವರಿಗೆ ನೆಲೆ ನೀಡಲಾರದೆ ಹೋಯಿತು.

ಆ ನೆಲೆ ತಪ್ಪಿದ ಇವರು ಕೆಲವು ದಿನ ಅಲ್ಲಲ್ಲಿ ಸುತ್ತಾಡಿ, ನಾಲ್ಕಾರು ಕಡೆಯಿಂದ ಓಡಿಸಲ್ಪಟ್ಟು ಕಡೆಗೆ, ಪೋಲೀಸಿನವನು ಎಂದೂ ಸುಳಿಯದ

ಗಲ್ಲಿಯಲ್ಲಿದ್ದ, ಯಾರಿಗೂ ಬೇಡವಾದ ದೆವ್ವದಮನೆಯ ಜಗಲಿಯನ್ನು ಆಶ್ರಯಿಸಿದರು. ಕೆಲವು ತಿಂಗಳಿಂದ ಅಲ್ಲವರು ಜೀವಿಸುತ್ತಿದ್ದಾರೆ. ಭೀತಿ ಇಲ್ಲದೆ ಅಲ್ಲವರ ಜೀವನ ನಡೆಯುತ್ತಿದೆ. ಅದೇ ಅವನ ಮನೆ! ಅವರ ಮನೆ!

ಹೆಗಲಮೇಲೆ, ಹೊರಲಾರದೆ ಹೊತ್ತು ತಂದ ಹುಡುಗಿಯನ್ನು, ಕಣ್ಣ, ಮೂಲೆಯಲ್ಲಿ ತುರುಕಿದ ಗೋಣಿಪಟ್ಟೆಯ ಚಿಂದಿಯನ್ನು ಹಾಸಿ, ಅದರಮೇಲೆ ಮಲಗಿಸಿದ. ಬೆನ್ನಮೇಲೆ ಕುದಿನೀರು ಬಿದ್ದು ಬೊಬ್ಬೆಗಳು ಎದ್ದಿದ್ದುದರಿಂದ ಹುಡುಗಿ, ಮುಖಅಡಿಯಾಗಿ ಹೊರಳಿ, ನೋವಿನಿಂದ ನರಳಲಾರಂಭಿಸಿದಳು. ಅವಳನ್ನು ಮಲಗಿಸಿ, ಏದುತ್ತಾ ಕುಳಿತ ಕಣ್ಣನಿಗೆ, ಇಂದು ನರಳುವುದನ್ನು ಕೇಳಿ, ಹೊಟ್ಟೆಯಲ್ಲಿ ಕೆಂಡವನ್ನು ಕಲಕಿದಂತಾಗುತ್ತಿತ್ತು. ಆದರೆ ಏನು ಮಾಡಬೇಕೆಂಬುದು ಅವನಿಗೆ ತೋಚಲಿಲ್ಲ. ಸುಳಿಸುಳಿಯಾಗಿ ಸಿಂಬೆಸುತ್ತಿದ ಎಳೆನಾಗರಹಾವುಗಳ ಹೇಳಿಗೆಯಂತಿದ್ದ, ಕಂದುಬಣ್ಣದ, ಧೂಳುತುಂಬಿ ಜಡೆಗಟ್ಟಿದ ನೆತ್ತಿಯ ಗುಂಗುರು ಗೂದಲುಗಳನ್ನು ಕೆರೆದುಕೊಂಡ. ಕಣ್ಣ ನೋಟದಿಂದ ಅವಳ ಗಾಯಕ್ಕೆ ಮದ್ದು ಎರೆಯುವನಂತೆ, ನೋವು ತುಂಬಿದ ಕಣ್ಣಿನಿಂದ ಅವಳತ್ತ ನೋಡಿದ. ಆದರೆ ಅದಾವುದೂ ಅವಳ ನೋವಿಗೆ ಪಥ್ಯವಾಗ ಲಿಲ್ಲ. ಗಳಿಗೆಗಳಿಗೆಗೆ ಅವಳ ನರಳುವಿಕೆ ಹೆಚ್ಚಾಗುತ್ತಿತ್ತು. ನೋವಿಗೆ ಪರಿಹಾರ ತಿಳಿಯದ ಅವನ ಹೃದಯದಲ್ಲಿ, ಅದಕ್ಕೆ ಕಾರಣನಾದವನ ಮೇಲೆ ಸಿಟ್ಟು ಗರಿಗಟ್ಟುತ್ತಿತ್ತೇ ವಿನಾ, ಬೇರೇನೂ ತೋಚಲಿಲ್ಲ. ತಣ್ಣನೆಯ ನೀರಿನಿಂದ, ಬಿಸಿಯ ಮರಳಿನಮೇಲೆ ಒಗೆಯಲ್ಪಟ್ಟ ಮೀನಿನಂತೆ, ಅವನ ಹೃದಯ ಮೂಕಯಾತನೆಯ ಉಗ್ರಮುಷ್ಠಿಯಲ್ಲಿ ಸಿಲುಕಿ ಚಡಪಡಿಸು ತ್ತಿತ್ತು. ಏನು ಮಾಡಬೇಕೆಂದು ತೋಚದೆ, ಕಣ್ಣ ಗಟ್ಟಿಯಾಗಿ ಅತ್ತ. ಹರಿದ ಗೋಣೀಪಟ್ಟೆಯ ಚಿಂದಿಯಮೇಲೆ, ಅವನ ಹೃದಯವೇ ನೋವು ತಡೆಯ ಲಾರದೆ ಹೊರಳುತ್ತಿರುವಂತಿತ್ತು. ಒಂದು ಗಳಿಗೆ, ಬಿಡುವಿಲ್ಲದೆ, ಅವನ ಹೃದಯದಲ್ಲಿ ಕತ್ತರಿಯಾಡಿಸುತ್ತಾ ನರಳುತ್ತಿರುವ ಹುಡುಗಿಯಮೇಲೇ, ಸಿಟ್ಟು ಕಹದು ಬಂತು. ಲೇ, ಬಾಯ್ಮುಚ್ಕೊಂಡು ಮಲಕ್ಕೊಳ್ಳೆ' ಎಂದು

ಗದರಿಸಿದ. ಆದರೆ ಮರುಗಳಿಗೆಯಲ್ಲೇ ತನ್ನ ಮಾತಿಗಾಗಿ ಅವನಿಗೇ ಪಶ್ಚಾತ್ತಾಪವಾಗಿ, 'ಇಂದೂ.... ಇಂದೂ.... ಬಾಳ ನೋವಾಗ್ತದಾ ಇಂದೂ' ಎಂದು ಹಲುಬಿದ. ನರಳುತ್ತಾ ಮಲಗಿದ ಹುಡುಗಿಯ ಮುಖವನ್ನೇ ನೊಂದ ಪ್ರೀತಿ ತುಂಬಿದ ಕಣ್ಣುಗಳಿಂದ ನೋಡಿದ. ಮುಖವನ್ನು ಹಿಂಡುತ್ತಿರುವ ಯಾತನೆಯಲ್ಲೂ ಮುದ್ದಾಗಿತ್ತು ಅವನ ತಂಗಿಯ ಮುಖ. ಬಿರಿಗಣ್ಣು ಅರಳಿಸಿ ನೋಡುತ್ತಲೇ ಇದ್ದ ಅವಳನ್ನು.

## ೨

ಅವನ ತಂಗಿ! ಅವಳು ಅವನ ತಂಗಿಯೇ? ಯಾರಾದರೂ ಅವನನ್ನು ಆ ಪ್ರಶ್ನೆ ಕೇಳಿದ್ದರೆ 'ಹೂ' ಎಂದೇ ಉತ್ತರ ಕೊಡುತ್ತಿದ್ದ ಕಣ್ಣ. ಆದರೆ ಅವಳು ಯಾರೋ, ಎಲ್ಲಿಯವಳೋ, ಯಾರ ಮಗಳೋ, ಎಲ್ಲಿ ಹುಟ್ಟಿ ಹೇಗೆ ಬೆಳೆದಳೋ, ಯಾರು ಅವಳನ್ನು ಪಾಲಿಸಿ ಪೋಷಿಸಿದರೋ, ಯಾವ ತಾಯಿಯ ಹಾಲು ಅವಳನ್ನು ಬೆಳೆಸಿ ದೊಡ್ಡವಳನ್ನಾಗಿ ಮಾಡಿತೋ, ಅದಾವುದೂ ಅವನಿಗೆ ಗೊತ್ತಿಲ್ಲ. ಅವಳಿಗೆ ಗೊತ್ತಿದ್ದರೆ ತಾನೇ ಅವನಿಗೆ ಗೊತ್ತಿರುವುದು. ಅವಳದೇಕೆ ಅವನದೇ ಅವನಿಗೆ ಗೊತ್ತಿರಲಿಲ್ಲ.

ಎಷ್ಟೋ ಬಾರಿ— ಇದಕ್ಕಿದ್ದ ಹಾಗೇ ಅವನಿಗೆ ಅವನ ತಾಯಿಯ ನೆನಪಾಗುತ್ತಿತ್ತು. ಯಾರ ತೊಡೆಯಮೇಲೊ ಬೆಚ್ಚಗೆ ಮಲಗಿ, ಎದೆ ಹಾಲು ಕುಡಿದುದು ನೆನಪಿಗೆ ಬರುತ್ತಿತ್ತು. ಆದರೆ ಎಷ್ಟೆಷ್ಟು ಯೋಚಿಸಿದರೂ, ತನ್ನನ್ನು ತೊಡೆಯಮೇಲೆ ಮಲಗಿಸಿಕೊಂಡು, ಮುಖವನ್ನು ಎದೆಗೆ ಅವಚಿಕೊಂಡು, ಹಾಲು ಕುಡಿಸಿದವರ ಮುಖ ನೆನಪಿಗೆ ಬರುತ್ತಿರಲಿಲ್ಲ. ಅದು ಹಾಗಿದ್ದಿರಬಹುದೇ, ಹೀಗಿದ್ದಿರಬಹುದೇ ಎಂದು, ಕಣ್ಣಿಗೆ ಕಂಡ ಹೆಂಗಸರ ಮುಖದೊಂದಿಗೆ ಹೋಲಿಸಿ, ಹೀಗಿದ್ದಿರಬಹುದು ಎಂದು ತಾಳೆ ಹಾಕಲು, ಬುದ್ಧಿಬಂದ ಹನ್ನೆರಡು ವರ್ಷಗಳಿಂದ ಪ್ರಯತ್ನಿಸುತ್ತಿದ್ದನಾದರೂ, ಒಂದೇ ಒಂದು ಬಾರಿಯಾದರೂ ಆ ಸಾಮ್ಯ ನಿಷ್ಕರ್ಷೆಯಾಗಿರಲಿಲ್ಲ. ಅವನಿಗೆ ನೆನಪಿದ್ದುದೆಲ್ಲಾ— ತಾನು ಹುಡುಗನಾಗಿ,

ಯಾರೋ ಗುರುತರಿಯದವರ ಜೊತೆಗೆ ಇಂಥದೇ ಒಂದು ಜಗಲಿಯ ಮೇಲೆ ಮಣ್ಣಿನಲ್ಲಿ ಆಡುತ್ತಿದ್ದುದು.

ಅವನ ಜೊತೆಗಿದ್ದವರೂ ಅವನಂಥವರೇ— ವಿಚಿತ್ರ ಜನ. ಅವರು ಎಲ್ಲಿರುತ್ತಿದ್ದರೋ, ಏನು ಮಾಡುತ್ತಿದ್ದರೋ, ಏನೋ. ಇವನಂತೆಯೇ ಅವರಿಗೂ ಆ ಜಗಲಿಯೇ ವಾಸಸ್ಥಳವಾಗಿತ್ತು. ಹಗಲು ಎಲ್ಲೆಲ್ಲೋ ಅಲೆದು, ರಾತ್ರಿ ಅಲ್ಲಿ ಕಳೆಯುತ್ತಿದ್ದರು. ಅವರಲ್ಲಿಯೇ ಯಾರಾದರೊಬ್ಬರು, ಅವನಿಗೆ ಚೂರು ಅನ್ನವನ್ನು ಕೊಡುತ್ತಿದ್ದರು. ಯಾರಾದರೂ ಒಬ್ಬರು, ಅವನಿಗೂ ಒಂದು ಗೋಣಿ ಚಿಂದಿಯಲ್ಲಿ ಮಲಗಲು ಎಡೆ ಕೊಡುತ್ತಿದ್ದರು. ಅಲ್ಲಿ ಬೆಳಕೆಂದರೆ ಬಿಸಿಲಿನದು, ಇಲ್ಲವೇ ಯಾರಾದರೂ ಹೊತ್ತಿಸಿದ ಬೀಡಿಯದು; ಇಲ್ಲವಾದರೆ ಮಲಗುವವರೆಗೂ ಕಿಂದರಿಯನ್ನು ಹಿಡಿದು, ಸುತ್ತಲ ಜಗತ್ತಿನ ಪರಿವೆಯೇ ಇಲ್ಲದೆ ಹಾಡುತ್ತಿದ್ದವನು ಹೊತ್ತಿಸುತ್ತಿದ್ದ ಗಾಂಜಾ ಸೇದುವ ಮಣ್ಣಿನ ಕೊಳವಿಯಲ್ಲಿಟ್ಟ ಕೆಂಡದ್ದು. ಅದಿಲ್ಲವಾದರೆ—ಸಂಜೆಯಾಯಿತೆಂದರೆ, ಕತ್ತಲೇ ಕತ್ತಲು. ಸುತ್ತಲ ಮನೆಗಳಂತೆ ತಾವೂ ದೀಪ ಹೊತ್ತಿಸಬೇಕೆಂಬ ಚಿಂತೆಯಾಗಲಿ, ಅದರ ಅಗತ್ಯವಾಗಲಿ ಅವರಾರಿಗೂ ಇದ್ದಂತಿರಲಿಲ್ಲ. ಕತ್ತಲೇ ಅವರ ಬಾಳಿಗೆ ಓಂಟಿದ್ದಂತಿತ್ತು.

ಆದರೆ ಇವನಿಗೆ ಮಾತ್ರ ಒಂದೊಂದು ರಾತ್ರಿ—ಏಕೊ ಹೆದರಿಕೆಯಾಗಿ, ಕಣ್ಣನ್ನು ಕವಿದ ನಿದ್ರೆ ಹಾರಿಹೋಗಿ ಅಳಲಾರಂಭಿಸುತ್ತಿದ್ದ. ಹೆದರಿಕೆಯನ್ನು ತಡೆಯಲಾರದೆ, ಹತ್ತಿರವಿದ್ದವರ ಮೈಯಲ್ಲಿ ಮುದುಗಲು ಯತ್ನಿಸುತ್ತಿದ್ದ. ಆಗ ಅವನ ಭೀತಿಗೆ ಸಿಗುತ್ತಿದ್ದ ಪರಿಹಾರ—ಪಕ್ಕದಲ್ಲಿದ್ದವನು ಎದ್ದು, ಗದರಿಸಿಕೊಂಡು, ನಾಲ್ಕೇಟು ಬಿಗಿಯುತ್ತಿದ್ದುದೇ. ಆಗವನು ಅತ್ತತ್ತು, ಬಳಲಿ ನಿದ್ರೆ ಮಾಡುತ್ತಿದ್ದ. ಒಮ್ಮೊಮ್ಮೆ, ಯಾವಾಗಲಾದರೂ ಹೀಗೆ ಹೊಡೆಸಿಕೊಂಡಾಗ ಅವನಿಗೆ ಎಲ್ಲಾದರೂ ಓಡಿಹೋಗಬೇಕು ಎನಿಸುತ್ತಿತ್ತು. ಆದರೆ ಎಲ್ಲಿಗೆ? ಎಲ್ಲಾದರೂ ಹೋದರೆ, ಅವನಿಗೆ ನಿದ್ರೆ ಬಂದಾಗ ಮಲಗಲು ತಾವೆಲ್ಲಿ ಹಸಿವಾದಾಗ, ರಾತ್ರಿಯ ಹೊತ್ತಾದರೂ ಹೊಟ್ಟೆಗೆ ಹಾಕುವವರು ಯಾರು? ಎಲ್ಲಾದರೂ

ಹೋಗಬೇಕೆಂಬ ಭಾವನೆ ಬಂದ ಕೂಡಲೇ, ಇಷ್ಟದ್ದೂ ಹೆದರಿಕೆ ಹೆಚ್ಚುತ್ತಿತ್ತು. ಕೊರೆವ ಚಳಿಯಲ್ಲಿ, ಇದ್ದ ಕಡೆಯಲ್ಲೇ, ಮೊಳಕಾಲನ್ನು ಹೊಟ್ಟೆಯಲ್ಲಿ ಒತ್ತಿಕೊಂಡು, ಕೈಗಳಿಂದ ಕಾಲುಗಳನ್ನು ಬಿಗಿದು, ಕಾಲಸಂದಿಯಲ್ಲಿ ಮುಖವನ್ನೂ ಹುದುಗಿಸಿ ಮಲಗುತ್ತಿದ್ದ. ಕೊರೆವ ಚಳಿಯನ್ನು ಇದುರಿಸಲು ಅವನಿಗೆ ಗೊತ್ತಿದ್ದ ಸಾಧನ ಅದೊಂದೇ. ಸ್ವಲ್ಪ ಮೈ ಬಲಿತು ಓಡಾಡಲು ಆಗುವವರೆಗೂ ಹೀಗೇ ನಡೆಯಿತು. ಬೆಳೆಯುತ್ತ, ಬೆಳೆಯುತ್ತ, ಇವನೂ ಆ ಜಗಲಿಯ ವಾಸಿಗಳಲ್ಲಿಯೇ ಒಬ್ಬನಾದ. ಹಗಲು ಎಲ್ಲಿ ಸುತ್ತಿದರೂ, ಸಂಜೆಯಾಗುವ ವೇಳೆಗೆ, ಜಗಲಿಯನ್ನು ಸೇರಿ ಯಾರಾದರೂ ತನಗೆ ಅನ್ನ ತರುವುದನ್ನು ಕಾಯುತ್ತಿದ್ದ.

ಕೆಲವಾರು ದಿನ— ಎಷ್ಟು ಕಾಲವೋ ಅವನಿಗೆ ತಿಳಿಯದು; ಅವನಿಗೆ ತಿಳಿಯುತ್ತಿದ್ದುದು, ಹಗಲಾಗುವುದು, ಕತ್ತಲಾಗುವುದು ಎರಡೇ— ಕಳೆದಮೇಲೆ ಒಂದು ದಿನ ರಾತ್ರಿ ಇವನು, ಯಾರಾದರೂ ತನಗೆ ಅನ್ನ ತರಬಹುದೆಂದು ಕಾದುಕುಳಿತಿದ್ದ. ಆ ದಿನ ಅವನಿಗೆ ಯಾರೂ ತಾವೇ ಮುಂದಾಗಿ, ಅನ್ನ ಕೊಡಲಿಲ್ಲ. ಅವನೇ ಹಸಿವು ತಡೆಯದೆ ಕೇಳಿದಾಗ, ಒಬ್ಬನು ಗದರಿಕೊಂಡು—

"ಹೋಗೋ ಬೋ....ಮಗನೆ. ನಾನೇನು ನಿಮ್ಮಪ್ಪನ ಗಂಟು ತಿಂದಿದೇನಾ ದಿನಾ ತಂದು ಹಾಕೋಕೆ? ನೀನೂ ಎಲ್ಲಾದ್ರೂ ತಿರುಪೆ ಎತ್ತಿಕೊಂಡು ತಿನ್ನು. ಇಲ್ದಿಹೋದ್ರೆ ಸಾಯಿ" ಎಂದ.

"ಹಂಗಾದ್ರೆ ನನ್ಗೆ ಹೊಟ್ಟೇಗೆ ಯಾರೂ ಹಾಕೋಲ್ವ"

ತನಗಾರೂ ಅನ್ನ ಕೊಡದಿದ್ದುದನ್ನು ಕಂಡು, ಖಂಡಿತವಾಗಿ ಇಲ್ಲ ವೆಂದ ಅವನ ಮಾತು ಕೇಳಿ, ಹೆದರಿ, ಕಂಗಾಲಾಗಿ ಕೇಳಿದ. ಇವನ ಹೆದರಿಕೆ ಅವನ ಸುತ್ತಲಿದ್ದವರಾರನ್ನೂ ಮರುಗಿಸಲಿಲ್ಲ. ಮೊದಲು ಅವನ ಪ್ರಶ್ನೆಗೆ ಉತ್ತರ ಕೊಟ್ಟವನೇ, ಮತ್ತಷ್ಟು ಕಟುವಾಗಿ ಹೇಳಿದ—

"ನನ್ನೇನು ಕೇಳ್ತಿ, ನಿನ್ನ ಹುಟ್ಟಿಸಿದೋನ್ನ ಕೇಳು?"

ಅವನ ಉತ್ತರ ಇವನಿಗೆ ಅರ್ಥವಾಗಲಿಲ್ಲ. ಆದರೆ ಸುತ್ತಲಿದ್ದವರು ಮಾತ್ರ ಅದನ್ನು ಕೇಳಿ ನಗಲಾರಂಭಿಸಿದರು. ಆ ನಗುವೂ ಅವನಿಗೆ

ಅರ್ಥವಾಗಲಿಲ್ಲ. ಅರ್ಥವಾಗದ ಪ್ರಶ್ನೆ, ಅಷ್ಟೇನುಷ್ಟಿಗೆ ಅರ್ಥವಾಗದ ನಗು—ಎಲ್ಲವೂ ಬೆರೆತು, ಹೆದರಿಕೆ ಕವಿದ ಅವನ ಮಿದುಳಿನಲ್ಲಿ ಗೊಂದಲ ವನ್ನೇ ಬೆಳೆಸಿದವು. ಹೊಟ್ಟೆಯಲ್ಲಿ ಹಸಿವು ಗಾಳಿಬೀಸಿದ ಉರಿಯಂತೆ ಕೆದರುತ್ತಿತ್ತು. ಏನು ಮಾಡಬೇಕೆಂಬುದು ಅವನಿಗೆ ತೋಚಲಿಲ್ಲ. ಕತ್ತಲು ಕವಿದ ಮೂಲೆಯಲ್ಲಿ ಹುಡುಗ ಅಳಲಾರಂಭಿಸಿದ.

"ಏ! ಯಾಕಂಗಂಬೋ. ಒಂದ್ಸಾರು ಅನ್ನ ಇಕ್ಬಾರ್ದಿತ್ತ. ಮಗಾ ಅಳ್ತದೆ" ಎಂದು, ಆ ಗುಂಪಿಗೆ ಹೊಸದಾಗಿ ಬಂದುಸೇರಿದ ಹೆಂಗ ಸೊಬ್ಬಳು ಮರುಕ ತುಂಬಿದ ಧ್ವನಿಯಲ್ಲಿ ಹೇಳಿದಳು.

"ಅಳ್ಲೀಳು. ಹೊಟ್ಟೆ ಚುರ್ರಂದ್ರೆ ಮುದ್ದೆ ಹುಡುಕ್ಕೊಂಡು ಓಗ್ತಾನೆ. ದಿನಾ ತಂದಿಕ್ಕೋಕೆ ಅವನೇನು ಮಾರಾಜ್ರ ಮಗ್ನಾ? ಲೌಡಿಮಗ ಕೂತ್ಕೊಂಡು-ತಿಂದು ಕೊಬ್ಬಿದಾನೆ. ರಾತ್ರಿ ಆಯ್ತೂಂತಂದ್ರೆ ಸಾಲ ಕೊಟ್ಟೋನಾಗೆ ಕೇಳ್ತಾನೆ. ಇವರಪ್ಪನಮನೆ ಗಂಟು ತಿಂದಿದ್ನಾ ನಾನು—ಊರೋರ ಕೈಲೆಲ್ಲಾ ಅನ್ನಿಸ್ಕೊಂಡು, ತಿರುಪೇ ತಂದು ಇವ್ನಿಗೂ ಹಾಕೋಕೆ? ಕಾಲಿಲ್ದೋನು ನಾನು ತರೋಲ್ವ. ಇವ್ನಿಗೇನು ಧಾಡಿ."

"ಇವನಮ್ಮ ಎಲ್ಲಿ?" ಅದೇ ಹೆಂಗಸು ಮತ್ತೆ ಕೇಳಿದಳು.

"ಎಲ್ಲಿ ಸತ್ಲೋ, ಯಾವ್ನೋನ್ನ ಕಟ್ಕೊಂಡು ಓಡೋದ್ಲೋ, ಯಾರಿಗ್ಗೊತ್ತು ಹಡೆಯೋತನಕ ತೆವಲಿತ್ತು, ಹಾಳಾಗ್ಹೋದ್ಲು"

"ನಿಮ್ಜೊತೇಲಿ ಇರಲಿಲ್ವಾ ಅವಳು?"

"ಊಹೂ. ಅದ್ಯಾವೋಳೋ ಯಾರಿಗ್ಗೊತ್ತು. ಯಾರೋ ಒಂದಿನ ಹಗಲ್ನಾಗೆ ಮಗೂನ ತಂದು ಕಟ್ಟೇಮೇಲೆ ಮಲಗಿಸಿ ಓಗಿದ್ರು. ನಿನ್ನಂಗೇ ನಿಂಗೀಂತ ಒಬ್ಳಿದ್ಲು ಇಲ್ಲಿ. ಅವಳೇ ಹಾಲಾಕಿ ಬೆಳಸಿದ್ಲು. ಒಂದಿನ ಅವಳೂ ಎತ್ಲಾಗೋ ಓಡೋದ್ಲು. ಅವತ್ನಿಂದ ನಮ್ಮ ಕುತ್ತಿಗ್ಗೆ ಬಿದ್ದಿದೆ ಈ ಶನೇಶ್ವರ. ನಾನೆಷ್ಟು ದಿನಾಂತ ಇದರ ಹೊಟ್ಟೇಗೆ ಹಾಕಲಿ? ಊರೆಲ್ಲಾ ತಿರುಗಿದರೂ ನನ್ನ ಹೊಟ್ಟೇಗೇ ಸಿಕ್ಕೋಕಿಲ್ಲ"

"ಅವನ ಮಾತಿಗೆ ಆ ಹೆಂಗಸು ಏನೂ ಉತ್ತರ ಕೊಡಲಿಲ್ಲ. ಅವನ ಮಾತು ಕೇಳಿ ಏಕೋ ಅವಳ ಬಾಯಿಯೂ ಕಟ್ಟಿಹೋಗಿತ್ತು. ಆ ದಿನ

ರಾತ್ರಿ ಅವಳೇ ಅವನಿಗೆ, ತಾನು ತಂದದ್ದರಲ್ಲಿ ಅಷ್ಟು ಅನ್ನ ಕೊಟ್ಟಳು. ಅಂದಿನಿಂದ ಅವಳ ಕತ್ತಿಗೆ ಜೋತುಬಿದ್ದ ಇವನು. ಅವಳಿಗೆ ಇವನಮೇಲೆ ಎಷ್ಟು ಪ್ರೀತಿ. ಎಂದಾದರೊಂದು ದಿನ, ಇವನ ತಲೆಯಲ್ಲಿನ ಹೇನುಗಳಕಡಿತ ತುಂಬ ಹೆಚ್ಚಾಗಿ, ಇವನು ತಲೆಯನ್ನು ಪರಪರ ಕೆರೆಯುತ್ತಿದ್ದುದನ್ನು ಕಂಡಾಗ, ತನ್ನ ಬಳಿ ಇಟ್ಟುಕೊಂಡಿದ್ದ ಮುರುಕು ಹಣಿಗೆಯಲ್ಲಿ, ಇವನ ಕೆದರಿ, ಧೂಳು ತುಂಬಿ ಜಡೆಗಟ್ಟಿದ ಕೂದಲನ್ನು ಬಾಚಿ ಹೇನುಗಳನ್ನು ತೆಗೆಯುತ್ತಿದ್ದಳು. ತನ್ನ ಕೈಬೆರಳಿನಲ್ಲೇ ಕೂದಲು ಎಳೆಎಳೆಯನ್ನು ಬಿಡಿಸಿ, ಹೇನನ್ನು ತೆಗೆದು, ತನ್ನ ಹೆಬ್ಬೆರಳ ಉಗುರಿನ ಮೇಲಿಟ್ಟು ಕುಕ್ಕಿ ಕೊಲ್ಲುತ್ತಿದ್ದುದು, ಅವನ ಮನಸಿನಲ್ಲಿ ಅಳಿಸಲಾಗದ ಚಿತ್ರವಾಗಿತ್ತು. ಇನ್ನೊಮ್ಮೆ, ಹೇಗೋ ಅವನಿಗೆ ಕಜ್ಜಿಯಾಗಿ, ಮೈಯೆಲ್ಲಾ ಗಾಯತುಂಬಿ ರಣವಾಗಿ, ಸುತ್ತಲವರೆಲ್ಲರೂ ಅವನಿಗೆ ಹೇಸಿಕೊಂಡಾಗ, ಆಕೆಯೇ ಎಲ್ಲೆಲ್ಲೋ ತಿರುಗಿ, ಎಂಥದೋ ಹಸಿರು ಸೊಪ್ಪನ್ನು ತಂದು, ಇವನ ಮೈಗೆ ಹಚ್ಚಿ ಅದನ್ನು ವಾಸಿಮಾಡಿದ್ದಳು. ಆಕೆಯೇ ಇವನಿಗೆ 'ಕಣ್ಣ' ಎಂದು ಹೆಸರಿಟ್ಟದ್ದು. ತನಗೆ ಆಕೆ ಹೆಸರಿಟ್ಟು ಕೂಗಿದದಿನ, ಇವನ ಹೃದಯದಲ್ಲೂ, ಅಂದಿನವರೆಗೂ ಇರದ ಅಕ್ಕರೆ ಮೂಡಿಬಂದು—

"ಅವ್ವಾ, ನಿನ್ನ ಹೆಸರೇನು ?" ಎಂದು ಕೇಳಿದ್ದ. ಅದಕ್ಕೆ ಆಕೆ—

"ಗೌರಿ" ಎಂದು ಉತ್ತರ ಕೊಟ್ಟಿದ್ದಳು.

ಅಂದಿನಿಂದ ಅವನ ಪ್ರೀತಿಗೆ ಪಾತ್ರರಾದ ಎಲ್ಲ ಹೆಂಗಸರನ್ನು ನೆನಪಿಟ್ಟುಕೊಳ್ಳಲು ಅವನು 'ಗೌರಿ' ಎಂದು ಕರೆಯುತ್ತಿದ್ದ. ಒಬ್ಬೊಬ್ಬರಿಗೂ ಬೇರೆಬೇರೆ ಹೆಸರಿರುವುದೆಂದು ಅವನಿಗೆ ಆಗ ಗೊತ್ತಿರಲಿಲ್ಲ.

೨

ಆ ಜಗಲಿಯಮೇಲೆ ಜೀವಿಸುತ್ತಿದ್ದವರೆಲ್ಲಾ ವಿಚಿತ್ರವಾದವರು. ಅವರು ಯಾರೋ, ಎಲ್ಲಿಯವರೋ? ಎಲ್ಲಿಂದ ಬರುತ್ತಿದ್ದರೋ, ಎಲ್ಲಿಗೆ ಹೋಗುತ್ತಿದ್ದರೋ? ಒಂದು ದಿನ ಇದ್ದಕ್ಕಿದ್ದ ಹಾಗೇ ಅಲ್ಲಿಗೆ ಬರುತ್ತಿದ್ದರು; ಕೆಲವು ದಿನ ಅಲ್ಲಿದ್ದವರೊಂದಿಗೇ ಅವರೂ ಉಂಡು ಮಲಗುತ್ತಿದ್ದರು;

ಇನ್ನೊಂದು ದಿನ ಬಂದಹಾಗೇ ಎಲ್ಲಿಗೋ ಹೊರಟುಹೋಗುತ್ತಿದ್ದರು. ಹೆಂಗಸರು, ಗಂಡಸರು—ಎಲ್ಲಾ ಗಾಳಿಗೆ ತೂರಿದ ಎಕ್ಕೆಯ ಹತ್ತಿಯ ಎಸಳಿನಂತೆ ಎಲ್ಲಿಂದಲೋ ಬಂದು, ಎಲ್ಲಿಗೋ ಹೊರಟುಹೋಗುತ್ತಿದ್ದರು. ಒಬ್ಬರ ಹೆಸರು, ದಿಸೆಗಳು ಕೂಡಾ ಮತ್ತೊಬ್ಬರಿಗೆ ಗೊತ್ತಾಗುತ್ತಿರಲಿಲ್ಲ. ರಾತ್ರಿಯ ಅನ್ನಕ್ಕೆ ಅವರೇನು ಮಾಡುತ್ತಾರೆಂಬುದು ಕೂಡಾ ಅವನಿಗೆ ತಿಳಿದಿರಲಿಲ್ಲ. ಈ ಜನರ ಜೀವನದಷ್ಟೇ ಅವರ ಆಚಾರವ್ಯವಹಾರಗಳೂ ವಿಚಿತ್ರವಾಗಿತ್ತು. ಕುಂಟರು, ಕುರುಡರು, ಬೆಳವರು, ಮೂಕರು, ಕೋಲೇ ಬಸವನನ್ನು ಆಡಿಸುವವರು, ಕೋತಿಯನ್ನಾಡಿಸುವವರು, ರಾತ್ರಿಯಲ್ಲಾ ಭಂಗಿ ಸೇದುತ್ತಾ, ಮೂರುಮೂರು ದಿನ ಉಪವಾಸ ಮಾಡುತ್ತಾ, ಹಗಲಾಗುತ್ತಲೇ, ತಲೆಯಲ್ಲಿ ಉದ್ದವಾಗಿ ಬೆಳೆದ ಕೂದಲನ್ನು ನೆತ್ತಿಯಮೇಲೆ ಗಂಟುಹಾಕಿಕೊಂಡು, ಅದರ ತುದಿಗೊಂದು ನವಿಲು ಗರಿಯನ್ನು ಸಿಕ್ಕಿಸಿಕೊಂಡು ಹೋಗುವವರು— ಹೀಗೇ ಎಷ್ಟೋ ತರಹದ ಜನ. ಒಬ್ಬೊಬ್ಬರದು ಒಂದೊಂದು ಭಾಷೆ, ಒಂದೊಂದು ವೇಷ. ಹಗಲು ಹೊತ್ತು ಯಾರು ಎಲ್ಲಿಗೆ ಹೋಗುತ್ತಿದ್ದರೋ, ರಾತ್ರಿಯ ಹೊತ್ತು ಎಲ್ಲರೂ ಕಲೆತು, ತಂದದ್ದನ್ನು ಹಂಚಿತಿಂದು, ನಕ್ಕು, ಹಾಡಿ, ಜಗಳವಾಡಿ ಮಲಗುತ್ತಿದ್ದರು. ಮತ್ತೆ ಹಗಲಾಯಿತೆಂದರೆ, ಯಾರ ದಾರಿ ಅವರಿಗೆ; ಆಷಾಢದ ಮೋಡಗಳಂತೆ.

ಇವನು 'ಅವ್ವಾ' ಎಂದು ಕರೆದ ಹೆಂಗಸೂ ಹಾಗೇ ಒಂದು ದಿನ, ಬಿಸಿಲು ಮಳೆಯಂತೆ ಬಂದವಳು. ಆ ಮಳೆಯಂತೇ ಆಕೆ, ಅವನ ಹುಡುಗು ಹೃದಯದಲ್ಲಿ ತಂಪೆರೆದು, ಯಾರ ಬಗ್ಗೆಯೂ ಮಮತೆ ಚಿಗುರದ ಅವನ ಎದೆಯಲ್ಲಿ ಕೋಮಲ ಭಾವನೆಗಳನ್ನು ಅರಳಿಸಿದ್ದಳು. ಅವನ ಜೀವನಕ್ಕೆ ಒಂದು ರೂಪುಕೊಟ್ಟವಳು ಆಕೆ.

ಅವನು ವಾಸವಾಗಿದ್ದ ಜಗಲಿಯ ಇದಿರು ಒಂದು ಸಾರ್ವಜನಿಕ ಉದ್ಯಾನವಿತ್ತು. ಹಗಲೆಲ್ಲಾ ನಿರ್ಜನವಾಗಿರುತ್ತಿದ್ದ ಪಾರ್ಕು ಸಂಜೆಯಾದ ಕೂಡಲೇ, ಜನರಿಂದ ತುಂಬಿ ಜೀವಕಳೆತಳೆಯುತ್ತಿತ್ತು. ರೇಡಿಯೋ ಹಾಡಲಾರಂಭಿಸುತ್ತಿತ್ತು. ಅದನ್ನು ಕೇಳಲು ಎಷ್ಟೋ ಜನ

ಕಲೆಯುತ್ತಿದ್ದರು. ಗಂಡಸರೊಂದಿಗೆ, ಹುಡುಗರೂ ಬರುತ್ತಿದ್ದರು—ಹಸಿರು ಹುಲ್ಲಿನಮೇಲೆ ಆಟವಾಡಲು. ಅವರನ್ನೆಲ್ಲರನ್ನೂ ನೋಡಿದರೆ, ಅವನಿಗೆ ಎಷ್ಟೋ ಆಶ್ಚರ್ಯ. ಹೊಸ ಲೋಕವೊಂದನ್ನು ಕಂಡಂತಾಗುತ್ತಿತ್ತು. ಅದರೊಂದಿಗೆ ಹೊಸತನದ ಭೀತಿಯೂ, ಅವನ ಆಶ್ಚರ್ಯದಲ್ಲಿ ಬೆರೆಯುತ್ತಿತ್ತು. ಎಷ್ಟೋ ಬಾರಿ, ಅಲ್ಲಿ ಆಟವಾಡುತ್ತಿದ್ದ ಸಮವಯಸ್ಸಿನ ಹುಡುಗರು, ಅವರ ವೇಷ ಭೂಷಣ, ಕೂಗು— ಕೆಲೆದಾಟ ಕಂಡು, ತಾನೂ ಅವರೊಂದಿಗೆ ಬೆರೆಯಲು ಅವನ ಹೃದಯ ಹಾತೊರೆಯುತ್ತಿತ್ತು. ಆದರೆ, ಅವನಿಗೇ ಅರಿವಾಗದ ಯಾವುದೋ ಹೆದರಿಕೆ, ಮುನ್ನುಗ್ಗ ಬಯಸುವ ಅವನ ಕಾಲನ್ನು ಹಿಂದಕ್ಕೆ ಎಳೆಯುತ್ತಿತ್ತು. ಏಕೆಂದು ಅವನಿಗೆ ತಿಳಿಯದೆಯೋ, ಅವರೊಂದಿಗೆ ಬೆರೆಯಲು ಅವನಿಗೆ ನಾಚಿಕೆಯಾಗುತ್ತಿತ್ತು. ಅವರ ಹಾಗೆ ತಾನೂ ಅಂದವಾದ ಬಟ್ಟೆಗಳನ್ನುಟ್ಟು, ಅಲ್ಲಿ ಮಾರಬರುವ ತಿಂಡಿಗಳನ್ನು ತಿನ್ನಬೇಕೆಂದು ಆಸೆಯಾಗುತ್ತಿತ್ತು. ದಿನದಿನವೂ ಎದೆಯಲ್ಲಿ ಕೆದರುತ್ತಿದ್ದ ಬಯಕೆಯನ್ನವನು, ಆಕೆಯಿಂದ ಬಹುಕಾಲ ಮುಚ್ಚಿಡಲಾಗಲಿಲ್ಲ. ಒಂದು ದಿನ ರಾತ್ರಿ ಆಕೆಯನ್ನು ಕೇಳಿಯೇ ಬಿಟ್ಟ—

"ಅವ್ವ, ನನಗೊಂದು ಹೊಸ ಅಂಗಿ ಹೊಲಿಸಿಕೊಡ್ತೀಯ ?"

ಅವನ ಮಾತನ್ನು ಕೇಳಿ ಅವಳು ಅಪ್ರತಿಭಳಾದಳು. ಈ ಪ್ರಶ್ನೆಯನ್ನಾಕೆ, ಅವನಿಂದ ನಿರೀಕ್ಷಿಸಿರಲಿಲ್ಲ. ಹಾಗೇ ಅವನ ಪ್ರಶ್ನೆಗೆ ಏನು ಉತ್ತರಕೊಡಬೇಕೆಂದೂ ಅವಳಿಗೆ ತೋಚಲಿಲ್ಲ. ಸುಮ್ಮನಿದ್ದು ಮಾತು ಮರೆಸಲು ಯತ್ನಿಸಿದಳು. ಆದರೆ ಅವನು ಸುಮ್ಮನಾಗಬೇಕಲ್ಲ.

"ಆ ಹುಡುಗ್ರೆಲ್ಲಾ ಎಂಥ ಅಂಗಿ 'ಹಾಕ್ಕೋತಾರೆ. ನಾನೂ ಹಾಕ್ಕೋಬೇಕು ಕಣವ್ವಾ"

ಯಾವ ಹುಡುಗರು ?'

"ಅಲ್ಲಿ ದಿನಾ ಸಂಜೆ ಆಡಲಿಕ್ಕೆ ಬರ್ತಾರಲ್ಲಾ ಆ ಹುಡುಗ್ರು" ಪಾರ್ಕಿನ ಕಡೆ ಕೈತೋರಿಸಿ ಕಣ್ಣ ಉತ್ತರ ಕೊಟ್ಟ.

"ಆ ಪುಣ್ಯ ನನಗೂ, ನಿನಗೂ ಇಲ್ಲ ಕಣ್ಣ."

"ಯಾಕವ್ವಾ ?"

"ಯೋಗಿ ಪಡೆದದ್ದು ಯೋಗೀಗೆ, ಜೋಗಿ ಪಡೆದದ್ದು ಜೋಗೀಗೆ. ಅವ್ರೆಲ್ಲಾ ದುಡ್ಡಿದ್ದೋರ ಮಕ್ಕಳು."

"ನಾನು ?"

"ನೀನು . . . . "

ಒಂದು ನಿಮಿಷ ಹೇಗೆ ಹೇಳಬೇಕೆಂದು ತೋಚದೆ, ತಡೆತಡೆದು ಉತ್ತರ ಕೊಟ್ಟಳು ಆಕೆ. ಆಕೆಯ ಹೃದಯವನ್ನೇ ಹಿಂಡಿಬಂದಂತಿತ್ತು ಆ ಮಾತು—

"ನೀನು ನನ್ನಂಥ ತಿರುಪೆಯೋಳ ಮಗ ಕನ್ನಾ "

"ಅಂಗಾದ್ರೆ, ನನಗ್ಯಾರೂ ಹೊಸಂಗಿ ಹೊಲಿಸಿಕೊಡಾಕಿಲ್ವಾ "

"ಊಹು "

"ಯಾಕೆ ?"

ಆಕೆ ಅವನ ಮಾತಿಗೆ ಉತ್ತರ ಕೊಡಲಿಲ್ಲ. ಕತ್ತಲಲ್ಲಿ ಆಕೆಯನ್ನು ತಬ್ಬಿ ಮಲಗಿದ್ದ, ಅವನ ಕೆನ್ನೆ ಒದ್ದೆಯಾಯಿತು. ತನ್ನ ಕೈಯ್ಯಿಂದ ಆಕೆಯ ಕಣ್ಣನ್ನು ತಡವಿ ನೋಡಿದ. ಆಕೆಯ ಕಣ್ಣನದೇ ನೀರು. ತಣ್ಣಗಿರುವ ಕಣ್ಣೀರ ಹನಿ, ಕೆಂಡದಂತೆ ಅವನ ಕೈ ಸುಟ್ಟಿತು.

"ಯಾಕವ್ವ ಅಳ್ತೀಯ ?"

ಆ ಪ್ರಶ್ನೆಗೂ ಆಕೆಯಿಂದ ಉತ್ತರ ಬರಲಿಲ್ಲ.

"ನಾನು ಅಂಗಿ ಕೇಳ್ದೇಂತ ಕ್ವಾಪ ಬಂತಾ ಅವ್ವಾ "

"ಇಲ್ಲ ಕಣ್ಣಾ " ತನ್ನ ದುಃಖವನ್ನು ನುಂಗಿಕೊಂಡು ಆಕೆ ಉತ್ತರ ಕೊಟ್ಟಳು.

"ಮತ್ಯಾಕವ್ವ ಅಳೋದು ?"

"ಕಣ್ಣಾ. ಇನ್ಮ್ಯಾಕೆ ನೀನು ಆ ವುಡುಗರ ಜೊತೆಗೆ ಓಗಬ್ಯಾಡ"

"ಯಾಕವ್ವಾ ?"

"ದೊಡ್ಡೋರ ಮಕ್ಳ ಜೊತೆ ಆಟ ಆಡಬಾರ್ದು ಕಣ್ಣಾ. ನನ್ಮಾತು ಕೇಳೋಕಿಲ್ವಾ ?"

ಅವಳಾಡಿದ ಮಾತಿನ ಅರ್ಥ ಅವನಿಗೆ ಆಗದಿದ್ದರೂ, ಅವಳ ಮೇಲಿನ ಪ್ರೀತಿ ಅವನಿಂದ ಆಡಿಸಿತು.

"ಕೇಳ್ತೀನಿ ಕಣವ್ವಾ"

ಪಕ್ಕದಲ್ಲಿ ಮಲಗಿದ್ದ ಜೋಗಿಯೊಬ್ಬನು "ತಾಯಿ-ಮಕ್ಕಳ" ಸಂವಾದ ಎಷ್ಟು ಹೊತ್ತಾದರೂ ಮುಗಿಯದಿದ್ದುದನ್ನು ಕಂಡು, ರೇಗಿ ಕೂಗಿದ—

"ಏ, ಬಿದ್ಕೊಳ್ರೊ, ರಾತ್ರಿಯೆಲ್ಲಾ ಪರಸಂಗ ಓದ್ಬ್ಯಾಡ.... ಇವಳದಂತೂ ಕೇಳಾಕಿಲ್ಲ. ಹಡದೋಳ್ಗಿಂತ ಹೆಚ್ಚಾಗಿ ಮುಲಗ್ತಾಳೆ, ಬೇವಾರ್ಸಿ."

ಅವನ ಮಾತು ಕೇಳಿ, ಏಕೋ ಅವಳಿಗೂ ರೇಗಿತು. ಸಿಟ್ಟು ಉಕ್ಕುವ ಧ್ವನಿಯಲ್ಲಿ ಹೇಳಿದಳು—

"ನಿಮ್ಮಪ್ಪ ಬೇವಾರ್ಸಿ. ಅಲ್ಕ ಬಡ್ಡಿಮಗನೆ. ನಿದ್ದೆ ಬರದಿದ್ರೆ ಎದ್ದೋಗು. ನಿಮ್ಮಜ್ಜಂದೇ ಈ ಕಟ್ಟೆ"

ಅವಳ ಕಂಠಸ್ವರಕ್ಕೇ ಆ ಜೋಗಿ ಮೆತ್ತಗಾದ. ಅವಳಿಗೆ ಯಾರ ಮೇಲೋ ತುಂಬಾ ಸಿಟ್ಟು ಬಂದಂತಿತ್ತು. 'ಅಲ್ಕ ಪ್ರಪಂಚ, ಅಲ್ಕ ಜನ' ಎಂದ ಒಟಗುಟ್ಟುತ್ತಿದ್ದಳು. ಅವಳು ಸಿಟ್ಟಾದುದನ್ನು ಕಂಡು, ಕಣ್ಣನಿಗೂ ಅವಳನ್ನು ಮಾತನಾಡಿಸುವ ಧೈರ್ಯವಾಗಲಿಲ್ಲ. ಸುಮ್ಮನೆ ಮಲಗಿ ನಿದ್ದೆಹೋದ.

ಅಂದಿನಿಂದ, ಅವನು, ಸಂಜೆ ಪಾರ್ಕಿನ ಬಳಿ ಕುಳಿತು, ಆಡುವ ಹುಡುಗರನ್ನು ನೋಡುವಾಗ, ಆಕೆ ಹೇಳಿದ ಮಾತು ನೆನಪಿಗೆ ಬಂದು ದೂರ ಕುಳಿತುಕೊಳ್ಳುತ್ತಿದ್ದ. ಬಾಲ ಸಹಜವಾದ ಉತ್ಸಾಹ, ಅವನನ್ನು ಅವರತ್ತ ಸಮ್ಮೋಹಿಸುತ್ತಿತ್ತು. ತಾನೂ ಅವರೊಂದಿಗೆ ಕುಣಿದು, ಕುಪ್ಪಳಿಸಬೇಕು ಎನ್ನಿಸುತ್ತಿತ್ತು. ಆದರೆ ಹೋಗಲು, ಆಕೆಯ ಮಾತು ಅಡ್ಡಿಯಾಗುತ್ತಿತ್ತು. ಹೋದರೆ ಹೇಗೋ ಏನೋ ಎಂಬ ಭೀತಿ. ಹೀಗಾಗಿ ಅವನು ಅವರ ಆಟಗಳನ್ನು, ದೂರದಲ್ಲಿ ಕುಳಿತು, ಆಡುತ್ತಿರುವ ಹಾವನ್ನು ದೂರ ಕುಳಿತು ನೋಡುವವನಂತೆ, ಆಕರ್ಷಿತ ನೇತ್ರನಾಗಿ ನೋಡುತ್ತಿದ್ದ.

ಒಂದು ದಿನ ಸಂಜೆ ಹಾಗೇ ನೋಡುತ್ತಾ ಕುಳಿತಿದ್ದ. ಇಬ್ಬರು ಹುಡುಗರು ಹತ್ತಿರದ ಹುಲ್ಲಿನಮೇಲೆ 'ಘೂ' ಟಾಟ ಆಡುತ್ತಿದ್ದರು. ದೊಡ್ಡವನು 'ಘೂಟ್'ಎಂದು ಒಡುತ್ತಿದ್ದ. ಸಣ್ಣವನು ಅವನನ್ನು ಹಿಡಿಯಲು ಓಡುತ್ತಿದ್ದ. ಒಂದು ಸಲ ದೊಡ್ಡವನು, ಇನ್ನೇನು ಸಿಕ್ಕುತ್ತೇನೆ ಎನ್ನುವಾಗ, ಸಣ್ಣವನಿಗೆ ತೊಡರುಕಾಲು ಕೊಟ್ಟು, ಜಿಗಿದ. ಜೋರಾಗಿ ಓಡಿ ಬಂದ ಮಗು ನೆಲಕ್ಕೆ ಬಿದ್ದು, ಚಿಟಾರನೆ ಚೀರಿತು. ಸುಮ್ಮಗೆ ಕುಳಿತು ಅವರ ಆಟವನ್ನು ನೋಡುತ್ತಿದ್ದ ಕಣ್ಣ ಏನು ಮಾಡುತ್ತೇನೆಂದರಿಯದೆ, ಸರಕ್ಕನೆ ಮಗುವಿನ ಸನಿಹಕ್ಕೆ ಹಾರಿ, ಅದನ್ನು ಮೇಲೆತ್ತಿದ. ಅದರ ಮಂಡಿ ತರಿಮುಹೋಗಿ ರಕ್ತ ಸುರಿಯುತ್ತಿತ್ತು. ಕಣ್ಣ ಗಾಯಕ್ಕೆ ಹತ್ತಿದ ಮಣ್ಣನ್ನು ಒರೆಸಲೆತ್ನಿಸಿದ. ಮಗು ಮತ್ತಷ್ಟು ಗಟ್ಟಿಯಾಗಿ ಅಳಲಾರಂಭಿಸಿತು. ಎಷ್ಟು ಮುದ್ದಾದ ಮಗು ಅದು. ಕಣ್ಣ ಅದರ ಕಣ್ಣಿನಿಂದ ಹರಿಯುತ್ತಿದ್ದ ನೀರನ್ನು ಒರೆಸಿ 'ಅಳಬ್ಯಾಡ' ಎಂದು ಸಮಾಧಾನ ಮಾಡಲೆತ್ನಿಸಿದ. ಆದರೆ ಮಗು ಆ ಮಾತಿಗೆ ಸಮಾಧಾನವಾಗದೆ, ಮತ್ತಷ್ಟು ಗಟ್ಟಿಯಾಗಿ ಅಳಲಾರಂಭಿಸಿತು.

ಅದರ ಅಳುವನ್ನು ಕೇಳಿ, ಮಗುವಿನ ಹಿರಿಯರು ಬೇಗ ಬೇಗ ಅತ್ತಕಡೆ ಬಂದುನೋಡಿದರು. ಅವರಿಗೇಕೆ ಅವನ ಮೇಲೆ ಸಿಟ್ಟು ಬಂದಿತೋ, ತಾನೇನು ಮಾಡಬಾರದ್ದನ್ನೂ ಮಾಡಿದನೋ, ಕಣ್ಣನಿಗೆ ಯಾವುದೂ ತಿಳಿಯಲಿಲ್ಲ. ಇವನನ್ನೂ ಅಳುವ ಮಗುವನ್ನೂ ನೋಡಿದ ಕೂಡಲೇ ಅವನು—

"ಮಗೂಗೆ ಏನ್ಮಾಡ್ದ್ಯೊ ಕಳ್ಳ ಸೂ....ಮಗನೆ" ಎಂದು ಗುಡುಗಿ, ಕಣ್ಣನಿಗೆ ಮಾತಾಡಲೂ ಅವಕಾಶ ಕೊಡದೆ, ನೆತ್ತಿ ಸುತ್ತುವಂತೆ ಕಪಾಳಕ್ಕೆ ಬಿಗಿದರು. ಹೊಡೆತದ ವೇಗಕ್ಕೆ ಕಣ್ಣ ಅಷ್ಟು ದೂರ ಹಾರಿ ಬಿದ್ದ. ಅದುವರೆಗೂ ಅಳುತ್ತಿದ್ದ ಮಗು, ಇವನು ಬಿದ್ದದ್ದನ್ನು ಕಂಡ ಕೂಡಲೇ 'ಹಾಗೇ ಆಗಬೇಕು, ಹಲ್ಲು ಮುರಿಬೇಕು, ನೀನಳಬೇಕು, ನಾ ನಗಬೇಕು" ಎಂದು ಹೇಳಿಕೊಂಡು, ಚಪ್ಪಾಳೆ ತಟ್ಟಿ ಕುಣಿಯಲಾರಂಭಿಸಿತು.

"ಇನ್ನೊಂದ್ಸಲ ಮಗೂನೇನಾದ್ರೂ ಮುಟ್ಟು, ತಗ್ಗು ತೆಗೆದು ಹೂತು ಬಿಡ್ತೇನೆ" ಎಂದವನೇ ಆತ ಮಗುವನ್ನು ಎತ್ತಿಕೊಂಡ.

ಕಣ್ಣ ದಿಗ್ಭ್ರಮೆಯಾದವನಂತಿದ್ದ. ಹೊಡೆತದ ಜೋರಿಗೆ, ಕೆನ್ನೆ ಊದಿ, ತಲೆ ಸುತ್ತುತ್ತಿತ್ತು. ನೆಲಕ್ಕೆ ಬಿದ್ದಾಗ ಹುಲ್ಲಿನಲ್ಲಿದ್ದ ಚೂಪಾದ ಕಲ್ಲು ಹಣೆಗೆ ಹೊಡೆದು, ಹಣೆಯಿಂದ ರಕ್ತ ಸುರಿಯುತ್ತಿತ್ತು. ನೋವು ತಡೆಯಲಾರದೆ, ಕಣ್ಣ ಚೀರಲಾರಂಭಿಸಿದ.

ಅವನು ಚೀರಿದ್ದನ್ನು ಕಂಡು, ಅವನನ್ನು ಹೊಡೆದವನಿಗೆ ಮರುಕ ಮೂಡಲಿಲ್ಲ. ಹುಡುಗನೆಂದು ಕರುಣೆಯೂ ಕೊನರಲಿಲ್ಲ; ಸಿಟ್ಟೇ ಏರಿತು.

"ಮಗೂನ ಕೆಡವಿ, ಸೀನೇ ಅಳ್ತೀಯ ರ್ಯಾಸ್ಕಲ್" ಎಂದು ಮತ್ತೆ ನಾಲ್ಕೇಟು ಏರಿಸಿದ ಆತ.

ಅವರ ಕೂಗು, ಕಣ್ಣನ ಅಳು ಕೇಳಿದ ಸುತ್ತಮುತ್ತಲಿದ್ದ ಜನ ಗುಂಪು ಸೇರಿದರು. ಹಣೆಯೊಡೆದು ನೆತ್ತರಿಡುತ್ತಿದ್ದ ಕಣ್ಣನನ್ನು ಯಾರೂ ವಿಚಾರಿಸಲಿಲ್ಲ. ಎಲ್ಲರೂ ಆವನ ಹೆಗಲ ಮೇಲಿದ್ದ ಮಗುವನ್ನು ನೋಡಿ "ಏನಾಯಿತು ಸಾರ್" ಎಂದು ವಿಚಾರಿಸುವರೇ.

"ನೋಡಿ. ಇದ್ಯಾವುದೋ ಪಿಶಾಚಿ, ಮಗೂನ ಕೆಡವಿ, ತಾನೇ ಅರಚ್ತಾ ಇವಾನೆ" ಎಂದ, ಅವರ ಪ್ರಶ್ನೆಗೆ ಉತ್ತರ ಕೊಡುತ್ತಾ, ಮಗುವನ್ನು ಎತ್ತಿಕೊಂಡಾತ.

"ನಾಲ್ಕೇಟು ಬಿಗೀಬೇಕಾಗಿತ್ತು" ಯಾರೋ ಹೇಳಿದರು.

"ಒಂದೇಟು ಕೊಟ್ಟೆ" ಎಂದ ಆತ.

"ಇನ್ನೂ ನಾಲ್ಕು ಬಿಗೀಬೇಕಾಗಿತ್ತು. ಸೊಕ್ಕಿದಾರೆ ಈ ಸೂ.... ಮಕ್ಕಳು. ಅವನಿರೋದು ನೋಡಿ! ಅವನೋ, ಅವನ ಅವತಾರಾನೋ, ಚಿಂದಿನೋ, ಚಿಂದರು ಕೂದಲೋ....ಒಂದಕ್ಕಿಂತ ಒಂದು. ಶುದ್ಧ ಕಳ್ಳ ಕೊರಮ! ಚರ್ಮ ಸುಲಿದು ತಮಟೆ ಮಾಡಿದರೂ ಪಾಪ ಬರೋಲ್ಲ"— ಮತ್ತೊಬ್ಬಾತ ಘರ್ಜಿಸಿದ.

ಆ ಗುಂಪಿನಲ್ಲಿ ಅವನಿಗೆ ಅಯ್ಯೋ ಎನ್ನುವವರು ಒಬ್ಬರೂ ಇರಲಿಲ್ಲ. ನಾಯಿಗಳ ಗುಂಪಿನ ನಡುವೆ ಸಿಕ್ಕ ಬೆಕ್ಕಿನಂತಾಗಿದ್ದ ಕಣ್ಣ. ನೋವಿಗಿಂತ ಅವನಿಗೆ ಹೆದರಿಕೆಯೇ ಹೆಚ್ಚಾಯಿತು. ಮೊದಲ ನೋಟಕ್ಕೆ ಮುದ್ದಾಗಿ ಕಂಡ ಮಗು, ಕಿಲಿಕಿಲಿ ನಗುತ್ತಾ 'ಹಾಗೇ ಆಗಬೇಕು.......' ಎಂದು ಚಪ್ಪಾಳೆ ತಟ್ಟುತ್ತಿತ್ತು.

"ತುಂಬಾ ಸುಟಿಯಾದ ಮಗು" ಎಂದರು ಮತ್ತೊಬ್ಬರು, ಅದರ ನೆತ್ತಿಯನ್ನು ನೇವರಿಸಿ.

ಕಣ್ಣ ಮಗುವನ್ನೇ ನೋಡಿದ. ಅದರ ಬಗ್ಗೆ ಅವನ ಹೃದಯದಲ್ಲಿ ದ್ವೇಷ ಕಡೆದು ಬಂತು. ಯಾರೂ ಇಲ್ಲವಾಗಿದ್ದರೆ, ಅದರ ಕತ್ತನ್ನೇ ಮುರಿದು ಹಾಕುತ್ತಿದ್ದನೇನೋ ಆ ಸಿಟ್ಟಿನಲ್ಲಿ. ಅವರೆ ಸುತ್ತ ಕವಿದ ಜನ, ಅವನಲ್ಲಿಯ ಆ ಭಾವನೆ ಕಾರ್ಯಗತವಾಗಲು ಪೋಷಕವಾಗಲಿಲ್ಲ. ನೋಟದಲ್ಲೇ ನುಂಗುವನಂತೆ, ಆ ಜನರನ್ನೂ, ಅಷ್ಟೆಲ್ಲಕ್ಕೂ ಕಾರಣವಾದ ಆ ಮಗುವನ್ನೂ ದುರುಗುಟ್ಟಿ ನೋಡುತ್ತಾ ನಿಂತ. ಹಣೆಯ ಗಾಯ ದಲ್ಲಿ ಒಡೆದ ರಕ್ತ ಧಾರೆಗಟ್ಟಿ ಅವರ ಕಣ್ಣಿನ ಮೇಲೆ ಹರಿಯುತ್ತಿತ್ತು.

"ಹೋಗೋ.... ಏನು ನೋಡ್ತಾ ನಿಂತಿದೀಯೋ ಹಜಾಮ" ಎಂದು ಹತ್ತಿರವಿದ್ದವನು, ಅವನ ಕಪಾಳಕ್ಕೆ ಮತ್ತೊಂದು ಏಟು ಏರಿಸಿದ.

"ಮನೇಗೆ ಹೋದ ಕೂಡಲೇ ಮಗೂಗೆ ದೃಷ್ಟಿ ತೆಗೆಸಿ ಸಾರ್" ಎಂದ ಮತ್ತೊಬ್ಬ.

"ಇನ್ನೂ ನಿಂತಿದೀಯಾ...." ಎಂದು ಮೊದಲು ಹೊಡೆದವನು ಮತ್ತೊಮ್ಮೆ ಮುಷ್ಟಿ ಬಿಗಿದ. ಕಣ್ಣ ಹೆದರಿ "ಅಪ್ಪಾ" ಎಂದು ಕೂಗುತ್ತಾ ಓಡಿದ. ವೇಗವಾಗಿ ಹರಿಯಲಾರಂಭಿಸಿದ ರಕ್ತ ಕಣ್ಣಿನ ಮೇಲೆ ಹರಿಯು ತ್ತಿದ್ದುದರಿಂದ, ಎದುರಿಗೆ ಬೇಲಿ ಇದ್ದುದೂ ಅವನಿಗೆ ಕಾಣಲಿಲ್ಲ. ಮುಗ್ಗರಿಸಿ ಬಿದ್ದ. ಅವನ ಹಿಂದೆಯೇ ಕಲ್ಲೊಂದು ಹಾರಿಬಂತು. ನೆತ್ತರಿಡುವ ಹಣೆಯನ್ನಾಗಲಿ, ತರಚಿದ ಮುಖಮುಂಡಿಯನ್ನಾಗಲಿ ಲಕ್ಷಿಸದೆ, ಕಣ್ಣ, ಬೇಟೆಯ ನಾಯಿ ಬೆನ್ನಟ್ಟಿದ ನೊಲದಂತೆ ಹೆದರಿ ಓಡಿದ.

ನೋವು ಅವನನ್ನು ಹುಚ್ಚನನ್ನಾಗಿ ಮಾಡಿತ್ತು. ಅದಕ್ಕಿಂತ ಹೆಚ್ಚಾಗಿ ಅವರೆಲ್ಲಾ ತನ್ನನ್ನೇಕೆ ಹಾಗೆ ಹೊಡೆದರು ಎಂಬ ಪ್ರಶ್ನೆ ಅವನ ಮುಗ್ಧ ಮನಸ್ಸನ್ನು ದಿಗ್ಭ್ರಮೆಗೊಳಿಸಿತ್ತು. ಬಿದ್ದ ಮಗುವನ್ನು ಎತ್ತಿದ್ದಕ್ಕೆ ಇಷ್ಟು ಶಿಕ್ಷೆಯೇ? ಎಲ್ಲಕ್ಕಿಂತ ಹೆಚ್ಚಾಗಿ, ತನಗೆ ಏಟು ಬಿದ್ದದ್ದನ್ನು ಕಂಡು, ಚಪ್ಪಾಳೆ ತಟ್ಟುವ ಮಗುವಿನ ನಗುಮುಖ, ಅವನೆದೆಯಲ್ಲಿ ಕ್ರೋಧವನ್ನು ತಡೆಯುತ್ತಿತ್ತು. ಎಂದೂ ಯೋಚಿಸುವ ಶ್ರಮತೆಗೆದುಕೊಳ್ಳದ ಅವನ

ಮಿದುಳು, ಹೀಗೇಕಾಯಿತು, ಹೀಗೇಕಾಯಿತು ಎಂದು ಚಿಂತಿಸಿ, ಚಿಂತಿಸಿ ಬಳಲುತ್ತಿತ್ತು. ಜಗುಲಿಯಮೇಲಿನ ಮೂಲೆಯಲ್ಲಿ ನರಳುತ್ತಾ ಮುದುರಿಕೊಂಡ ಕಣ್ಣ.

೪

ರಾತ್ರಿ ಎಷ್ಟೋ ಹೊತ್ತಿನ ಮೇಲೆ, ಅವಳು ಅನ್ನ ತೆಗೆದುಕೊಂಡು ಬಂದಳು. ಮೂಲೆಯಲ್ಲಿ ಮುಲುಗುತ್ತಿದ್ದ ಕಣ್ಣನ ಧ್ವನಿ ಕೇಳಿದ ಕೂಡಲೇ, ಒಂದೇ ಹಾರಿಗೆ ಅವನ ಸಮೀಪಕ್ಕೆ ಹಾರಿ ಕಣ್ಣನನ್ನು ಎತ್ತಿ ಎದೆಗವಚಿಕೊಂಡು—'ಏನಾಯಿತೋ ಕಣ್ಣಾ' ಎಂದಳು.

ಅವಳನ್ನು ನೋಡಿದ ಕೂಡಲೇ ಕೊಂಚ ಸಮಾಧಾನಕ್ಕೆ ಬಂದಿದ್ದ ಕಣ್ಣನ ದುಃಖ ಮರುಕಳಿಸಿ, ಮತ್ತೆ ಅಳಲಾರಂಭಿಸಿದ. ಅವಳು ಉದ್ವಿಗ್ನಳಾಗಿ, ಕಣ್ಣನ ಮುಖ, ಕೈ, ಕಾಲುಗಳನ್ನು ತಡವಿ ನೋಡಿದಳು. ಕತ್ತಲಲ್ಲಿ ಏನೂ ಕಾಣಲಿಲ್ಲ. ಹಾಗೇ ಅವನನ್ನು ಹೆಗಲ ಮೇಲೆ ಹೊತ್ತುಕೊಂಡು, ಹತ್ತಿರದಲ್ಲಿದ್ದ ದೇವಿಯ ದೀಪದ ಬಳಿಗೆ ಓಡಿ, ಬೆಳಕಿನಲ್ಲಿ ಆಗ ತಾನೇ ಆರುತ್ತಿದ್ದ ರಕ್ತ ಸೋರಿದ ಹಣೆಯ ಗಾಯವನ್ನೂ, ತರೆದ ಮೊಳಕಾಲ ಮಂಡಿಗಳನ್ನೂ ನೋಡಿ —

"ಏನಾಯಿತೋ ?" ಎಂದಳು.

ಮಾತಾಡುತ್ತ ಆಡುತ್ತಲೇ ಅವಳ ಕಣ್ಣಲ್ಲಿ ಹನಿಯೊಡೆಯುತ್ತಿತ್ತು. ಅವಳ ಕಣ್ಣಲ್ಲಿ ಕಂಬನಿ ಕಂಡ ಮೇಲೆ ಕಣ್ಣನ ದುಃಖ ಮತ್ತಷ್ಟು ಒತ್ತರಿಸಿತು.

"ಏನಾಯಿತು ಬಗುಳೋ ಕುನ್ನಿ ?"

ಬಿಗಿದ ಧ್ವನಿಯಿಂದ ಅವಳು ಕೇಳಿದಳು. ಅವಳ ಬಿಗಿದ ಧ್ವನಿಯಲ್ಲಿ ಯಾವುದೋ ಭಾವ ಬುಟ್ಟಿಯೊಳಗಿಟ್ಟ ಹಾವಿನಂತೆ ಬುಸುಗುಟ್ಟುತ್ತಿತ್ತು. ಕಣ್ಣನೂ ಹೆದರಿದ, ಆ ಮಾತಿನ ತೀವ್ರತೆಗೆ. ಅಳಅಳುತ್ತಲೇ ನಡೆದುದನ್ನು ವಿವರಿಸಿದ. ಅವನ ಮಾತು ಕೇಳಿ, ಅವಳಿಗೇನಾಯಿತೋ ಏನೋ. ಕಣ್ಣನ ಕೈಯನ್ನು ಬಿಗಿಯಾಗಿ ಹಿಡಿದೆಳೆದು—

"ಅವರ ಸಂಗ ಮಾಡ್ಬ್ಯಾಡಾಂದ್ರೆ, ಹೋಗ್ತಿಯ" ಎಂದು ಅವನ ಮುಖ, ಮೋರೆಯನ್ನು ನೋಡದೆ ಹೊಡೆಯಲಾರಂಭಿಸಿದಳು. ಕಣ್ಣ ಏಟು ತಡೆಯಲಾರದೆ, ತಪ್ಪಿಸಿಕೊಳ್ಳಲು ಕೊಸರತೊಡಗಿದ. ಕೊಸರಿ ದಷ್ಟೂ ಏಟು ಬೀಳುವುದು ಹೆಚ್ಚಾಯಿತು. ಏಟು ಬಿದ್ದಷ್ಟೂ ಜೋರಾಗಿ ಕಣ್ಣ ಚೀರಲಾರಂಭಿಸಿದ. ಆ ಗದ್ದಲ ಕೇಳಿ ರಸ್ತೆಯಲ್ಲಿ ಹೋಗು ತ್ತಿದ್ದವರು ಒಂದಿಬ್ಬರು ಗದ್ದಲ ನೋಡಲು ನಿಂತರು.

ಕಣ್ಣನಿಗೆ ಏನಾಯಿತೋ ಏನೋ. ಇದ್ದಕ್ಕಿದ್ದಂತೆ ಅವನಿಗೆ, ನೋವು, ಹೆದರಿಕೆ ಎಲ್ಲಾ ಮರೆತುಹೋಗಿ, ಬಲವಾಗಿ ಕೊಡಹಿಕೊಂಡು ದೂರ ಹಾರಿ, ಕೆರಳಿದ ಪಶುವಿನಂತೆ ಅವಳತ್ತ ನೋಡುತ್ತಾ, ಹತ್ತಿರದಲ್ಲಿ ಬಿದ್ದಿದ್ದ ಕಲ್ಲನ್ನು ಕೈಗೆ ತೆಗೆದುಕೊಂಡು—

"ನೀನ್ಯಾವೋಳೆ ಬೋ........ಡಿ. ಹೊಡೀತೀಯಾ?" ಎಂದ, ಗುರುಗುಟ್ಟುತ್ತಾ.

ಸುತ್ತ ನಿಂತವರು ಅವನ ಮಾತು ಕೇಳಿ ನಗಲಾರಂಭಿಸಿದರು. ಅದನ್ನು ಕೇಳಿ ಅವಳಿಗೆ ಇದ್ದದ್ದೂ ಕೆರಳಿತು.

"ಬೊಯ್ತೀಯಾ" ಎಂದವಳೇ, ಅವನು ಬೀರಿದ ಕಲ್ಲು ಮುಖಕ್ಕೆ ಬಿದ್ದುದನ್ನೂ ಲೆಕ್ಕಿಸದೆ, ಅವನನ್ನು ಹಿಡಿದು ರಾಚಿದಳು. ಅವನು ಬೀರಿದ ಕಲ್ಲು ಅವಳ ಮೂಗಿಗೆ ಬಿದ್ದು, ಅವಳ ಮೂಗಿನಿಂದ ರಕ್ತ ಹರಿಯುತ್ತಿತ್ತು. ಆದರೆ ಅವಳಿಗೆ ಅದರ ಪರಿವೆಯೇ ಇದ್ದಂತಿರಲಿಲ್ಲ ಏರು ರೋಷದಲ್ಲಿ. ಕೈ ಸುಮ್ಮನೆ ಕಣ್ಣನ ಮೈಮೇಲೆ ಯಂತ್ರದಂತೆ ಎರಗುತ್ತಿತ್ತು.

"ಏ....ಏ....ಎಷ್ಟು ಹೊಡೀತೀ ಬಿಡೇ" ಎಂದು ಅದುವರೆಗೂ ನೋಡುತ್ತಾ ನಿಂತಿದ್ದ ದಾರಿಹೋಕ ಬಿಡಿಸಲು ಯತ್ನಿಸಿದ.

ಅವಳ ಸಿಟ್ಟು ಕಣ್ಣನಿಂದ ಅವನತ್ತ ತಿರುಗಿತು. ಕಣ್ಣು ಕಳೆದು ಕೊಂಡ, ಗಾಯಗೊಂಡ ಹುಲಿಯಂತಿತ್ತು ಅವಳ ಕ್ರೋಧ.

"ನೀನ್ಯಾವನೋ ಕೇಳೋಕೆ? ಓಗೋ ದಾಸಯ್ಯ. ಮರ್ವಾದೆ ಯಿಂದ ಒಂಟೋಗು" ಎಂದಳು. ಗಳಿಗೆ ಗಳಿಗೆಗೆ ಅವಳಾ ಧ್ವನಿ ಏರು ತ್ತಿತ್ತು.

"ಮಾತಾಡಿಸಿದರೆ ಮೈಮೇಲೇ ಬರ್ತ್ತಾಳೆ ಈ ರಂಡೆ" ಎಂದ ಒಬ್ಬ.

"ಯಾರ ಹತ್ತಿರ ಹೋಗಿದ್ದಳೋ. ನಾಲ್ಕು ಕಾಸು ಸಿಕ್ಕಿತೂಂತ ಕಾಣುತ್ತೆ. ಪಟ್ಟಾಗಿ ಕುಡಿದಿದಾಳೆ" ಎಂದ ಮತ್ತೊಬ್ಬ. ಅವನ ಮಾತು ಅವಳ ಕ್ರೋಧಕ್ಕೆ ಎಣ್ಣೆಯನ್ನೆರೆಯಿತು.

"ಇನ್ನೊಂದ್ಸಲಾ ಅಂಗಂದ್ರೆ ಕ್ಯಾಕರಿಸಿ ಉಗಿಬಿಟ್ತೇನೆ ಹಜಾಮ. ಬಾಯಿಗೆ ಬಂದಾಗೆ ಮಾತಾಡ್ತೀಯಾ ? ನಿಮ್ಮವ್ವನಿಗೆ ಹೇಳು ಆ ಮಾತು"

"ತಿರುಪೆ ಕೂಳು ಸೊಕ್ಕು ಇವಳಿಗೆ. ಬನ್ನಿ ಸಾರ್ ಹೋಗೋಣ. ಎಲ್ಲಿ ಹಲ್ಕಾ ಸಹವಾಸ ?" ಎಂದು ಮೂರನೆಯವರೊಬ್ಬರು, ಮೊದಲು ಮಾತಾಡಿದವನನ್ನು ಕರೆದೊಯ್ಯಲು ಯತ್ನಿಸಿದರು.

"ಇವಳ ಮಾತು ಕೇಳಿ. ಮರ್‍ಯಾದೆ ಒಂದು ಅಳುತ್ತೆ ಇವಳಿಗೆ ! ಎನ್ನುತ್ತಾ ಗುಂಪು ಚೆದರಿತು.

"ನೀನೊಬ್ನೆ ಮನ್ಸ. ನಿನ್ನೊಬ್ಬನಿಗೇ ಮರ್‍ವಾದೆಇರೋದು— ಬಿಳೀಬಟ್ಟೆ ಹಾಕ್ಬುಟ್ರೆ ಮರ್‍ವಾದೆ ಬಂದೋಯ್ತು. ಬಾಯಿಗ್ಬಂದಾಗೆ ಮಾತಾಡ್ತಾನೆ ಲುಚ್ಚಾ ಲುಚ್ಚಾ" ಎಂದು, ಅವನು ಹೋದ ಕಡೆಯತ್ತಲೇ ಕ್ಯಾಕರಿಸಿ ಉಗಿದಳು. ಅವಳ ಸಿಟ್ಟು ಅವರ ಮೇಲೆ ತಿರುಗಿ, ಕಣ್ಣ ಅಲ್ಲಿರುವುದೇ ಅವಳಿಗೆ ಮರೆತುಹೋಗಿತ್ತು. ಗುಂಪು ಚೆದರಿದ ಮೇಲೆ ಅವಳು ಕಣ್ಣನತ್ತ ತಿರುಗಿ ನೋಡಿದಳು. ಕಣ್ಣ ಹೆದರಿ ನಿಂತಂತೆಯೇ ಮುದುರಿಕೊಂಡಿದ್ದ. ಅವಳು ತನ್ನತ್ತ ತಿರುಗಿದ ಕೂಡಲೇ ಹೆದರಿ ಓಡಿದ.

"ಘೂತ್ ! ಹಾವಿನ ಮರಿ" ಎಂದಳು ಅವಳು. ಆದರೆ ಅವಳ ಕ್ರೋಧವನ್ನು ಮೀರಿ, ಯಾವುದೋ ದುಃಖ ಅವಳ ಮೈಯನ್ನು ನಡುಗಿ ಸುತ್ತಿತ್ತು.

ಅವಳಿಗೆ ಹೆದರಿ ಓಡಿದ ಕಣ್ಣ, ಎಲ್ಲಿ ಅಟ್ಟಿಸಿಕೊಂಡುಬರುತ್ತಾಳೋ ಎಂದು ಪಾರ್ಕಿನ ಬೇಲಿಯಲ್ಲಿ ಅವಿತುಕೊಂಡಿದ್ದ. ಅವಳು ತನ್ನ ಹಿಂದೆ ಬರದೆ, ಜಗಲಿಯತ್ತ ಹೋದುದನ್ನು ಕಂಡು, ಅವನ ಭಯ ಕಡಮೆ ಯಾಯಿತು. ಭಯ ಕಡಮೆಯಾದಂತೆ, ಅದುವರೆಗೂ ಮರೆತುಹೋದ ಹಸಿವು ಉಗ್ರವಾಗಿ ಕೆದರಿತು. ಅನ್ನಕ್ಕಿದ್ದುದು ಒಂದೇ ದಾರಿ—ಅವಳ

ಹತ್ತಿರ ಹೋಗುವುದು. ಆದರೆ ಅವಳ ಬಳಿ ಹೋಗಲು ಭೀತಿ. ಹೊತ್ತು ಸರಿದಂತೆ, ಭೀತಿಗಿಂತ ಹಸಿವು ಬಲವಾಯಿತು. ಸಂಜೆಯಿಂದಲೂ ಏಟಿನ ಮೇಲೆ ಏಟು ತಿಂದು ಬಳಲಿದ ಮೈ, ಚಳಿಯಲ್ಲಿ ಎಲ್ಲಾದರೂ ಬೆಚ್ಚಗೆ ಮಲಗಬೇಕು ಎಂದು ಬಯಸುತ್ತಿತ್ತು. ಅದೆಲ್ಲಕ್ಕೂ ಅವನಿಗೆ ಗೊತ್ತಿದ್ದುದು ಒಂದೇ ಸ್ಥಳ—ಜಗಲಿಯ ಕಟ್ಟೆ. ಆದರೆ ಅಲ್ಲಿ ಹೆದರಿಕೆ ಹೆಡೆಯಾಡಿಸುತ್ತಿತ್ತು. ಹೋಗಲು ಹೆದರಿ ಹುಲ್ಲಿನ ಮೇಲೇ ಮಲಗಿಕೊಂಡ. ಆದರೆ ಹಸಿದ ಹೊಟ್ಟೆ ಕೇಳಲಿಲ್ಲ. ಹೆದಹೆದರುತ್ತಲೇ ಜಗಲಿಯತ್ತ ಹೆಜ್ಜೆ ಹಾಕಿದ.

ಅಲ್ಲಿಗೆ ಹೋದಾಗ, ಅವನು ನಿರೀಕ್ಷಿಸಿದಂತೆ, ಅವಳು ಅವನ ಮೇಲೆ ಹಾರಿಬೀಳಲಿಲ್ಲ. ಅವಳು ಬಿಕ್ಕಿಬಿಕ್ಕಿ ಅಳುವುದು ಇವನ ಕಿವಿಗೆ ಬಿತ್ತು. ಆದರೂ ಮಾತಾಡಿಸಲು ಹೆದರಿ, ಅವಳ ಹತ್ತಿರ ಮೂಲೆಯಲ್ಲಿ ಹುದುಗಿ ಕೂತುಕೊಂಡ. ಅವಳು ಅವನನ್ನು ಮಾತಾಡಿಸಲೂ ಇಲ್ಲ. ಅವನನ್ನು ನೋಡಿ ಅವಳ ಅಳು ನಿಲ್ಲಲೂ ಇಲ್ಲ. ಅವಳ ರೋಧನ ಗರಗಸದಂತೆ ಅವನ ಎದೆಯನ್ನು ಕುಯ್ಯಲಾರಂಭಿಸಿತು. ಮಾತನಾಡಿಸಿದರೆ ಹೇಗೋ ಏನೋ ಎಂದು ಹೆದರುತ್ತಲೇ—

"ಯಾಕವ್ವ ಅಳ್ತೀಯ?" ಎಂದ.

ಅವಳು ಅವನಿಗೆ ಉತ್ತರ ಕೊಡಲಿಲ್ಲ. ಅವಳ ಅಳುವೂ ತಗ್ಗಲಿಲ್ಲ. ಅವಳ ಅಳು ಕೇಳಿ, ಗವಿಯಲ್ಲಿ ಬರುವ ಮಾರ್ದನಿಯಂತೆ ಅವನ ಹೃದಯದಲ್ಲೂ ಅಳು ಉಕ್ಕುತ್ತಿತ್ತು. ಹಸಿವು ಅವನನ್ನು ಹಿಂಡುತ್ತಿತ್ತು.

"ಅವ್ವಾ.... ನನಗೆ ಅನ್ನಾ ಇಕ್ಕೋಕಿಲ್ವಾ" ಎಂದ, ತಾನೂ ಅಳುತ್ತಲೇ.

ಅವನ ಮಾತು ಕೇಳಿ, ಅವಳು ಅವನನ್ನು ತಬ್ಬಿಕೊಂಡು, ಅಳಲಾರಂಭಿಸಿದಳು. ಕೊಂಚ ಹೊತ್ತಾದಮೇಲೆ ನೆರೆ ಇಳಿದಂತೆ, ಅವರಿಬ್ಬರ ದುಃಖ ಶಮನವಾಯಿತು.

"ಕಣ್ಣಾ....ಕಣ್ಣಾ....—ನನ್ನ ಕೈ ಸೇದಿಹೋಗ. ಬಾಳನೋವಾಯ್ತೇನೊ?" ಎಂದಳು ಅವಳು.

"ನನಗ್ಯಾಕವ್ವ ಹೊಡೆದದ್ದು?" ತನ್ನ ತಲೆಯನ್ನು ತಿನ್ನುತ್ತಿದ್ದ ಪ್ರಶ್ನೆಯನ್ನು ಕಣ್ಣ ಕೇಳಿದ.

"ಪುತ್ತೆ ನೀನು ನನ್ಮಾತು ಕೇಳ್ದೆ, ಯಾರ್ಯಾರ ಹತ್ರೊ ಹೋಗಿ ಹೊಡೆಸಿಕೊಂಡು ಬಂದ್ರೆ ನಾನೇನ್ಮಾಡ್ಲಿ ಹೇಳು. ನನ್ನಿಟ್ಟೆ ನಾನ್ಯಾರ ಮೇಲೆ ತೀರಿಸ್ಕೊಳ್ಳಿ. ಇನ್ಮೊಂದ್ಸಲಾ ಆ ಹುಡುಗರ ತವ ಓಗ್ಬ್ಯಾಡ. ನನ್ಮಾತು ಕೇಳಂಕಿಲ್ವಾ ಕಣ್ಣಾ!"

ಅವಳ ಧ್ವನಿಯಲ್ಲಿನ ಯಾತನೆ, ಅಸಹಾಯಕತೆ, ದೀನಯಾಚನೆ ಅವನ ಪುಟ್ಟಹೃದಯವನ್ನೂ ಕರಗಿಸಿತು.

"ಇಲ್ಲಕಣವ್ವ. ಓಗಾಕಿಲ್ಲ. ಸುಂಸುಂಕೆ ಒದ್ರು. ಆ ಮಗೀಗೆ ನಾನೇನೂ ಮಾಡ್ಲಿಲ್ಲ ಕಣವ್ವ" ಎಂದ ಕಣ್ಣ.

"ಓದು. ನಮ್ಮಂಥೋರ್ನ ಕಂಡ್ರೆ ಆಗೆ, ಆ ಜನಕ್ಕೆ."

"ಯಾಕವ್ವಾ?"

ಅವನ ಪ್ರಶ್ನೆಗೆ ಕೂಡಲೇ ಏನು ಉತ್ತರ ಕೊಡಬೇಕೆಂದು ಅವಳಿಗೆ ತೋಚಲಿಲ್ಲ. ಸ್ವಲ್ಪ ಹೊತ್ತು ಸುಮ್ಮನಿದ್ದು ಹೇಳಿದಳು—

"ನಾವೆಲ್ಲಾ ಗರೀಬ್ರು, ತಿರುಪೆಯೋರು. ಅದಕ್ಕೆ ಕಣ್ಣ"

"ಗರೀಬ್ರಾದ್ರೆ ಕಂಡೋರೆಲ್ಲಾ ಸುಂಸುಮ್ನೆ ಒದಿಬೇಕೇ?"

"ಹೂ"

"ಅಂಗಾದ್ರೆ ನಾನು ಗರೀಬನಾಗೊಲ್ಲ ಅವ್ವ"

"ಮತ್ತೇನಾಗ್ತೀಯ, ಮಾರಾಜನಾಗ್ತೀಯ?" ಅವನ ಮಾತು ಕೇಳಿ, ನಗುತ್ತಾ ಕೇಳಿದಳು ಅವಳು.

"ಹೂ. ಯಾಕೆ? ಆಗಾಕಿಲ್ವ?"

"ಆಗ್ತೋದು. ಹೊಟ್ಟೆ ಹಸಿಯಾಕಿಲ್ವೇನು?"

"ಊಕಣವ್ವಾ. ತುಂಬಾ ಹಸೀತದೆ."

ಕತ್ತಲಲ್ಲೇ ಅವಳು, ಹತ್ತಿರವಿದ್ದ ಮಡಿಕೆಯನ್ನೆಳೆದುಕೊಂಡು, ಅವನ ಬಾಯಲ್ಲಿ ಅನ್ನದ ತುತ್ತನಿಟ್ಟಳು. ಮಾತನಾಡದೆ ಕಣ್ಣ ತಿಂದು ಮುಗಿಸಿ, ಅವಳು ಕೊಟ್ಟ ನೀರು ಕುಡಿದು—

"ನೀನು ಉಣ್ಣಾಕಿಲ್ವಾ ಅವ್ವ? ಎಂದ.

"ಉಣ್ತೇನಿ"

"ಈಗ್ಲೇ ಉಣ್ಣಾಕಿಲ್ವಾ ?"

"ಈಗ್ಬ್ಯಾಡ"

"ಮತ್ಯಾವಾಗ ಉಣ್ತಿ ?"

"ನೀನು ಮಾರಾಜನಾದಾಗ. ನೀನು ಮಾರಾಜನಾದಾಗ ನಂಗೆ ಉಂಬಾಕಿಕ್ತೀಯಾ ಕಣ್ಣಾ ?"

"ಓ ?"

ಅವಳು ಮಾತಾಡದೆ, ಅವನ ನೆತ್ತಿಯಮೇಲೆ ಚಿಟಿಕೆ ಮುರಿದು, ಚಳಿಗೆ ನಡುಗುತ್ತಿದ್ದ ಅವನ ಮೈಯನ್ನು ತಬ್ಬಿಕೊಂಡು—

"ಏನಾಗ್ತೀಯೋ ಆಗು. ಈಗ ಮಲಕ್ಕೋ" ಎಂದಳು.

"ಅವ್ವಾ, ಮಾರಾಜ ಅಂದ್ರೆ ಎಂಗಿರ್ತಾನೆ ?" ಕಣ್ಣುಮುಚ್ಚುತ್ತಲೇ ಕಣ್ಣ ಕೇಳಿದ.

"ನೀನಾಗೋವಾಗ ಗೊತ್ತಾಯ್ತದೆ. ಮಲಕ್ಕೆಳ್ಳೋ ಮೂಳ" ಎಂದು, ಅವನ ಏಟುತಿಂದು ನೊಂದ, ಬೆನ್ನನ್ನು ನೇವರಿಸುತ್ತಾ ಹೇಳಿದಳು ಅವಳು.

ತುಂಬಿದ ಹೊಟ್ಟೆ, ನೊಂದ ಮೈ, ಸೂಜಿಗಲ್ಲಿನಂತೆ ನಿದ್ದೆಯನ್ನು ಆಕರ್ಷಿಸಿತು.

## ೫

ಒಂದು ದಿನ ಏಕೋ ಅವಳು ಇದ್ದಕ್ಕಿದ್ದಂತೆಯೇ ಕಣ್ಣನನ್ನು ಕೇಳಿದಳು.

"ಕಣ್ಣಾ, ನಾನೆಲ್ಲಾದ್ರೂ ಒಂಟೋದ್ರೆ ನೀನೇನ್ಮಾಡ್ತೀಯ ?"

ಅನಿರೀಕ್ಷಿತವಾದ ಆ ಪ್ರಶ್ನೆ, ಕಣ್ಣನನ್ನು ದಿಗ್ಭ್ರಮೆಗೊಳಿಸಿತು. ಅವಳೊಂದಿಗೆ ಬೆಳೆದ ಕೆಲವು ವರ್ಷಗಳಲ್ಲಿ, ಅವನಿಗೆ, ಒಂದಲ್ಲ ಒಂದು ದಿನ ಅವಳು ತನ್ನನ್ನು ಬಿಟ್ಟು ಎಲ್ಲಿಯಾದರೂ ಹೋಗಬಹುದೆಂದು, ಎಳ್ಳುಕಾಳು ಮುಳ್ಳುಮೊನೆಯಷ್ಟಾದರೂ ಸಂಶಯ ಬಂದಿರಲಿಲ್ಲ. ಯಾವ ಕಾರಣವೂ ಇಲ್ಲದೆಯೇ ಅವನು, ಅವಳು ತನ್ನನ್ನು ಎಂದೂ ಬಿಟ್ಟು

ಹೋಗುವುದಿಲ್ಲವೆಂದೂ, ತಾವಿಬ್ಬರೂ ಯಾವಾಗಲೂ ಹೀಗೆಯೇ ಜೊತೆಯಾಗಿಯೇ ಇರುವೆನೆಂದೂ ನಂಬಿದ್ದ. ಆದರೆ ಈ ದಿನ ಇದ್ದಕ್ಕಿದ್ದ ಹಾಗೇ ಅವಳು ಆ ಪ್ರಶ್ನೆ ಕೇಳಿ, ಅವನ ನಂಬಿಕೆಯು ಗೋಪುರಕ್ಕೆ ಸಿಡಿಲೇಟು ಜಡಿದಳು. ಕಣ್ಣ ಕಪ್ಪಿಬ್ಬಲಾಗಿ ಹೋದ. ಅವಳು ಹೊರಟುಹೋದರೆ ತನ್ನ ಗತಿ ಏನು? ತನ್ನ ಹೊಟ್ಟೆಗೆ ಹಾಕುವವರು ಯಾರು? ಊಹು— ಅವಳು ಹೊರಟುಹೋದರೆ ತಾನು ಹೊಟ್ಟೆಗಿಲ್ಲದೆ ಸಾಯುವುದೇ ಸರಿ ಎಂದು ತೋರಿತು ಅವನಿಗೆ. ಆ ಮಾತನ್ನೇ ಹೇಳಿದ.

"ನೀನು ಒಂಟೋದ್ರೆ ನಾನು ಸತ್ತೇ ಹೋಯ್ತೀನಿ"

"ಯಾಕೆ?"

"ಮತ್ತೆ ನನ್ನ ಹೊಟ್ಟೇಗೆ ಹಾಕೋರು ಯಾರು?"

"ನಾನೇ ಆಕ್ಬೇಕಾ? ನೀನೇನು ಗಂಡಸು ಮಗ ಅಲ್ವ. ನಾಕ್ಮನೆ ಬಿಕ್ಸ ಎತ್ತಿದ್ರೆ ಒಟ್ಟೆ ತುಂಬ್ತದೆ."

"ಕೇಳಿದ್ರೆ ಅನ್ನ ಕೊಡ್ತಾರಾ?"

"ಊ"

"ಅಂಗಾರೆ ಅಂಗ್ಮಾಡ್ತೀನಿ"

"ಬಿಕ್ಸೆ ಕೇಳೋದು ಎಂಗೆ ಅಂತ ಗೊತ್ತೈತಾ ನಿನಗೆ?"

"ಊ"

"ಎಂಗೆ ಕೇಳ್ತೀಯ?"

"ನಿನ್ನ ಕೇಳ್ದಾಗೇ, 'ಅವ್ವಾ ಹೊಟ್ಟೆ ಹಸೀತದೆ, ಒಂದ್ತುತ್ತು ಅನ್ನಾನೀಡ್ರವ್ವಾ'ಂತ"

"ಅಂಗೆಲ್ಲ ಕೇಳಿದ್ರೆ ಯಾರೂ ಕೊಡಾಕಿಲ್ಲ"

"ಮತ್ಹ್ಯಾಗೆ ಕೇಳ್ಬೇಕು?"

ಅವಳು ರಾಗವಾಗಿ ಕವಳಕ್ಕೆ ಕೂಗುವ ರೀತಿಯನ್ನು ಅಂದು ತೋರಿಸಿದಳು. ಅವಳು ಉಸಿರು ಬಿಗಿಹಿಡಿದು, ಎಳೆದೆಳೆದು, ಇನ್ನೊಂದು ಗಳಿಗೆಯಲ್ಲಿ ಪ್ರಾಣಹೋಗುವುದೇನೋ ಎಂಬ ರೀತಿಯಲ್ಲಿ ಕೂಗಿದುದನ್ನು ಕೇಳಿ ಅವನಿಗೆ ನಗು ಬಂತು. ಅವಳು ಆ ರೀತಿ ಕೂಗಿದುದನ್ನು ಅವನು

ಅದುವರೆಗೂ ಕೇಳಿರಲಿಲ್ಲ. ಹಾಗೇ ಆರೀತಿ ಕೂಗುವುದು ತನ್ನಿಂದ ಅಸಾಧ್ಯವೆನಿಸಿತು. ಹಾಗೇ 'ತಾಯಿ ಇಲ್ಲದ ಪಾಪಿ ಪರದೇಶಿ' ಎಂದು ತನ್ನನ್ನು ಕರೆದುಕೊಳ್ಳಲು ಅವನ ಮನಸ್ಸು ಒಪ್ಪಲಿಲ್ಲ.

"ಊಹೂ, ನಾನಂಗಂತ ಕೇಳಾಕಿಲ್ಲ"

"ಯಾಕೆ?"

"ನನ್ಗೇನು ನನ್ನವ್ವ ಇಲ್ವಾ?"

"ಎಲ್ಲಿದಾಳೆ."

"ಯಾಕೆ? ನೀನೇನು ಸತ್ತೋಗಿದೀಯ. ನೀನು ನನ್ನ ಅವ್ವ ಅಲ್ವಾ? ನೀನಿರೋಗಂಟ ನಾನು ಅಂಗೆಲ್ಲ ಕೇಳಾಕಿಲ್ಲ."

"ನಾನು ನಿನ್ನ ಅವ್ವ ಅಲ್ಲ."

"ಇನ್ನೊಂದ್ಸಲ ಅಂಗಂದ್ರೆ ನಿನ್ನ ಕೊಂದಾಕ್ಬಿಡ್ತೀನಿ. ನೀನೇ ನನ್ನ ಅವ್ವ. ಅಲ್ಲಾಂತ ಸುಳ್ಳೇಳ್ತೀಯ?"

ತಾನು ಅವನ ತಾಯಿಯಲ್ಲ ಎಂದು ಹೇಳಿದುದನ್ನು ಕೇಳಿ, ಅವನು ಪ್ರಕ್ಷುಬ್ಧನಾದುದನ್ನು ಕಂಡು, ಅವಳು ಆ ಮಾತನ್ನು ಮರೆಸಲೆತ್ನಿಸಿದಳು.

"ಹೋಗ್ಲಿ ಬಿಡು. ನಾನೇ ನಿನ್ನ ಅವ್ವ"

"ಅಂಗಾದ್ರೆ ಸುಳ್ಳೇಳು ಅಂತ ಯಾಕೆ ಏಳೋದು?"

"ನಮ್ಮಂಥೋರು ಸುಳ್ಳು ಹೇಳ್ದೆ ಈ ಪ್ರಪಂಚದಾಗೆ ಜೀವನ ಮಾಡೋಕೇ ಆಗಾಕಿಲ್ಲ, ಕಣ್ಣ. ತಿರುಪೆಯೋರಿಗೆ ಸುಳ್ಳೇ ಮನೆ ದೇವರು. ಆಟಕ್ಕೆ ತಕ್ಕ ಬೈರೂಪ ಕಟ್ದೇ ಹೋದ್ರೆ, ಸಾಯ್ತಾ ಇದ್ರೂ ಯಾರೂ ಒಂದ್ತುತ್ತು ಅನ್ನ ಕೊಡಾಕಿಲ್ಲ ಈ ಚಂಡಾಲ ಪ್ರಪಂಚದಲ್ಲಿ."

"ನಿನ್ನ ಮಾತು ನಾನು ನಂಬಾಕಿಲ್ಲ"

"ಯಾಕೆ? ನಾನ್ಯಾವತ್ತಾದ್ರೂ ನಿನಗೆ ಸುಳ್ಳು ಹೇಳಿದೇನಾ?"

"ಇಲ್ಲ, ಇವತ್ತು ಹೇಳ್ತಾ ಇದಿ."

"ಎಲ್ಲಿ?"

"ಸಾಯ್ತಾ ಇದ್ರೂ ಯಾರೂ ಅನ್ನಾ ಕೊಡಾಕಿಲ್ಲಾಂತ ಹೇಳ್ಳಿಲ್ವಾ, ಈಗ?"

"ಅದು ಸುಳ್ಳಲ್ಲ, ದಿಟ."

"ಸುಳ್ಳೆ. ನನ್ಗೆ ಹೊಟ್ಟೇಗಿಲ್ದಾಗ, ನೀನು ನನ್ಗೆ ಅನ್ನ ಇಡ್ಲಿಲ್ವ. ಇಷ್ಟು ದಿನಾನೂ ಎಡ್ಡು ಹೊತ್ತು ಅನ್ನ ಇಕ್ತಾ ಇಲ್ವೆ ನೀನು ನಂಗೆ. ನಿಂಗೇನಾರ ಮೋಸಮಾಡಿ, ಕೇಳಿದ್ನಾ ನಾನು ?"

"ಎಲ್ಲಾರೂ ನನ್ನಹಂಗೇ ಇರೊಲ್ಲ ಕಣ್ಣ. ನೀನೇನೂ ಅರೀದ ಮಳ್ಳ. ಎಲ್ಲಾರ್ಗೂ ಅವ್ರ ಹೊಟ್ಟೇನೇ ಭಾರವಾಗಿರೋವಾಗ, ನಿನ್ನ ಬಾಯಿಗೆ ಯಾರು ತಂದು ತಿನಿಸುತ್ತಾರೆ ಹೇಳು. ನಿನ್ನ ಅನ್ನ ನೀನು ದುಡುಕೋಬೇಕು."

"ಅಂಗಾದ್ರೆ ಎಲ್ಲರೂ ಸುಳ್ಳುಹೇಳೇ ಅನ್ನ ತಿನ್ತಾರಾ ?"

"ಇಲ್ಲ, ಎಲ್ಲಾದ್ರೂ ಚಾಕ್ರಿ ಮಾಡ್ತಾರೆ."

"ನಾನೂ ಚಾಕ್ರಿ ಮಾಡ್ತೀನೆ. ನಾನೇನು ಗಂಡಸು ಮಗ ಅಲ್ವಾ? ನಾನ್ಯಾಕೆ ಸುಳ್ಳು ಹೇಳ್ಲಿ. ಅವತ್ತು ನೀನೇ ಸುಳ್ಳೇಳ್ಬಾರ್ದು, ಮೋಸ ಮಾಡ್ಬಾರ್ದು ಕಣ್ಣಾಂತ ಬೊಯ್ದಿರಲಿಲ್ವಾ ?"

ಅವನ ಈ ಯುಕ್ತ ಪ್ರಶ್ನೆಗೆ ಏನು ಉತ್ತರ ಹೇಳಬೇಕೆಂದು ಅವಳಿಗೆ ತೋಚಲಿಲ್ಲ. ಅವಳ ಜೀವನದಲ್ಲಿ ಇಂಥ ವಿಚಾರಕ್ಕೆ, ತರ್ಕಕ್ಕೆ ಆಸ್ಪದ ವಿರಲಿಲ್ಲ. ಅವಳ ಜೀವನವೇ ಅವಳಿಗೆ ಕೆಲವು ಪಾಠ ಕಲಿಸಿತ್ತು. ಅದು ತೋರಿಸಿದ ದಾರಿಯಲ್ಲಿ ಬದುಕುವುದನ್ನು ಅಭ್ಯಾಸಮಾಡಿಕೊಂಡಿದ್ದಳು. ಅದಕ್ಕಿಂತ ಹೆಚ್ಚಿನದೇನೂ ಅವಳಿಗೆ ತಿಳಿಯದು. ಸುಳ್ಳು ಹೇಳುವುದು, ಮೋಸಮಾಡುವುದು ತಪ್ಪು ಎಂದು ಅವಳಿಗೆ ಗೊತ್ತು. ಹಾಗೇ ಸುಳ್ಳು ಹೇಳದೆ, ಆಟಕಟ್ಟದೆ ತನಗೆ ಯಾರೂ ಅನ್ನವಿಡುವುದಿಲ್ಲವೆಂಬುದೂ ಅವಳಿಗೆ ಗೊತ್ತು. ಆದುದರಿಂದಲೇ ತನಗೆ ತಿಳಿದ ಎರಡು ಮಾತನ್ನು ಅವಳು ಕಣ್ಣನಿಗೆ ಹೇಳಿದ್ದಳು. ತನ್ನ ಎರಡು ಮಾತಿನ ನಡುವಿನ ವಿರೋಧಾಭಾಸವಾಗಲಿ, ಅವಕ್ಕೆ ಕಾರಣವಾಗಲಿ ಅವಳಿಗೆ ತಿಳಿದಿರಲಿಲ್ಲ. ಅದರ ವಿಚಾರವಾಗಿ ಅವಳು ಎಂದೂ ಯೋಚನೆಮಾಡಿರಲಿಲ್ಲ. ಅದಕ್ಕೆ ಆಗತ್ಯವೂ ಇರಲಿಲ್ಲ. ಈದಿನ ಅವನು ಅವಳ ಮಾತುಗಳಲ್ಲಿನ ವಿರೋಧಾಭಾಸವನ್ನು ಎತ್ತಿ ತೋರಿಸಿದಾಗ, ಕೂಡಲೇ ಅದಕ್ಕೆ ಏನು ಉತ್ತರ

ಕೊಡಬೇಕೆಂದು ತಿಳಿಯಲಿಲ್ಲ. ಬುದ್ಧಿಗೆ ನಿಲುಕದ ಮಾತನ್ನು ಅನುಭವ ಆಡಿಸಿತು.

"ಚಾಕ್ರಿ ಮಾಡೋದು ನಮ್ಜಾತಿ ಜನದ ಹಣೇಲಿ ಬರೆದಿಲ್ಲ ಕಣ್ಣಾ. ನಾವು ಬೇಡಿ ತಿನ್ನಲು ಹುಟ್ಟಿದವರು."

"ಚಾಕ್ರಿಮಾಡಿದ್ರೆ ಏನಾಗ್ತದವ್ವಾ ?"

"ಮಾಡಬಾರದ್ದು ಮಾಡಿದರೆ, ಆಗಬಾರದ್ದು ಆಗುತ್ತೆ."

ಆ ಮಾತು ಆಡುತ್ತಲೇ, ತಟಕ್ಕನೆ ಅವಳ ಮನಸಿನ ಕಣ್ಣೆದಿರು, ಯಾರೂ ಅರಿಯದ ಅವಳ ಜೀವನದ ಅಧ್ಯಾಯವೊಂದು ಮಿಂಚಿತು. ಯಾವುದೋ ಶಕ್ತಿ ಅವಳಿಂದ ಮಾತಾಡಿಸಿತು.

"ಒಂದಿನ ನಿನ್ನಂಗೇ ನಾನೂ ಚಾಕ್ರಿ ಮಾಡ್ಬೇಕೂಂತ ಒಂಟಿದ್ದೆ ಕಣ್ಣಾ. ಯಾರೋ ಒಬ್ಬರು ದೊಡ್ಮನುಸ್ಯರ ಮನೇಲಿ ಕಸ ಉಡುತ ಪಾತ್ರೆ ತೊಳಿತಾ ಇದ್ದೆ. ತಿಂಗಳಿಗೆ ಎಂಟಾಣೆ, ಅಷ್ಟು ತಂಗಳನ್ನ ಕೊಡ್ತಾ ಇದ್ರು. ನಾನಾಗ ಇಂಗಿರಲಿಲ್ಲ. ಒಳ್ಳೇ ಸೀರೆ ಉಟ್ಕೋತಾ ಇದ್ದೆ; ತಲೆ ಬಾಚಿಕೊಂಡು ಊ ಮುಡ್ಕೋತಾ ಇದ್ದೆ. ನೋಡೋಕೂ ಸಂದಾಗಿದ್ದೆ. ಪ್ರಾಯನೂ ಇತ್ತು. ಒಂದಿನ ಆ ಮನೆಯಾತ, ಮನೆ ಎಂಗಸ್ರು ಇಲ್ದ ಹೊತ್ನಲ್ಲಿ ಹಿಡುಕೊಳ್ಳಾಕೆ ಬಂದ. ನಾನು ಒಪ್ಲಿಲ್ಲ. ರೂಪಾಯಿ ಕೊಡಾಕೆ ಬಂದ. ಬ್ಯಾಡಾಂದೆ........"

"ರೂಪಾಯಿ ಕೊಡಾಕೆ ಬಂದಿದ್ನಾ ? ಬ್ಯಾಡಾಂದ್ಬುಟ್ಯಾ ? ಯಾಕೆ ?"

ಕಾಸಿನ ಮುಖವನ್ನೇ ಕಾಣದೆ, ಅದರ ಬೆಲೆಯನ್ನು ಮಾತ್ರ ಅರಿತಿದ್ದ ಕಣ್ಣನಿಗೆ, ಅವಳು ರೂಪಾಯಿ ಕೊಡಬಂದಾಗ ಬೇಡವೆಂದದ್ದು ಕೇಳಿ, ಪವಾಡವನ್ನು ಕಂಡಂತೆ, ಆಶ್ಚರ್ಯವಾಗಿ ಕೇಳಿದ.

"ಯಾಕೇಂದ್ರೆ. ಮರ್ವ್ಯಾದೆಗಿಂತ ರೂಪಾಯಿ ದೊಡ್ದಾ ?"

"ಮತ್ತೆ, ರೂಪಾಯ್ಗಿಂತ ಮರ್ವ್ಯಾದೆ ದೊಡ್ದಾ ?"

"ಹೂ, ರೂಪಾಯಿಗೆ ಮರ್ವ್ಯಾದೆ ಮಾರೋದು ಪಾಪ. ದುಡ್ಡು ಸಿಗ್ತದೇಂತ ಮಾನಕೆಟ್ರೆ ದೇವ್ರು ಮೆಚ್ಚಾಕಿಲ್ಲ. ನೀತಿ ಕೆಟ್ಟಮೇಲೆ ಜೀವ ಯಾಕಿರಬೇಕು ?"

ಅವಳ ಮಾತಾವುದೂ ಅವನಿಗೆ ಅರ್ಥವಾಗಲಿಲ್ಲ. ಸುಮ್ಮನೆ ಕುಳಿತು ಕೇಳುತ್ತಿದ್ದ. ಇದೆಲ್ಲಕ್ಕಿಂತ, ಅವಳು ಹೇಳುತ್ತಿದ್ದ ಕಥೆ ಕೇಳ ಬೇಕೆನ್ನಿಸಿತು.

"ಓಗ್ಲಿ ಬಿಡು. ಆಮ್ಯಾಕೇನಾಯ್ತು."

"ಅವ್ನು ನಾನು ಬ್ಯಾಡಾಂದ್ರೆ ಕೇಳ್ಳಿಲ್ಲ. ಜೋರುಮಾಡಿ ಹಿಡು ಕೊಳ್ಳಾಕೆ ಬಂದ. ನಾನೂ ಕಸುವಾಗಿದ್ದೆ. ತೆಗೆದು ನಾಲ್ಕು ಮಡಗ್ದೆ, ಮತ್ತೆ ಮಿಸುಕಾಡದ ಹಾಗೆ."

"ತೆಪ್ಗಾದ್ನೋ ಇಲ್ವೊ?"

"ಮತ್ತೇನ್ಮಾಡ್ತಾನೆ, ಹೀನಸುಳಿ. ಆದ್ರೂ ಅದು ಹಾವಿನ ಜಾತಿ ನೋಡು. ಸಿಟ್ಟು ಮರೀಲಿಲ್ಲ. ಅವತ್ತೇನೂ ಗಲ್ಲ ಮಾಡ್ಲಿಲ್ಲ. ನಾಲ್ಕೈದು ದಿನ ಆದ ಮ್ಯಾಲೆ, ಸುಂಸುಮ್ನೆ ಅವನ ಜೇಬಿನಲ್ಲಿದ್ದ ರೂಪಾಯಿ 'ನೀನೇ ಕದ್ದೆ' ಅಂತ ಗಲ್ಲ ಮಾಡ್ದ."

"ನೀನು ತಗೊಂಡಿದ್ಯಾ?"

"ಊಹೂ. ಕದಿಯೋಕೆ ನಾನೇನು ಕೊರಮರೊಳ? ಅವನ ಮಾತು ಕೇಳ್ಲಿಲ್ಲ ಅಂತ ಆಟಕಟ್ದ. ನಾನು ತಗೊಂಡಿಲ್ಲ ಅಂತ ಹೇಳಿದೆ. ಆಣೆ ಮಾಡಿದೆ. ಬೇಕಾದ್ರೆ ಕೈಯಲ್ಲಿ ಕೆಂಡ ಹಿಡಿದು ಹೇಳ್ತೀನಿ ಅಂದೆ. ಯಾರೂ ನನ್ನ ಮಾತು ನಂಬ್ಲಿಲ್ಲ."

"ಯಾಕೆ?"

"ಯಾಕೇಂದ್ರೆ—ನಾವು ಬಡವರು. ದುಡ್ಡಿದ್ದೋರು ಹೇಳಿದ್ದೆಲ್ಲಾ ಸತ್ಯ. ನಾವು ಸತ್ಯ ಹೇಳಿದ್ರೂ ಸುಳ್ಳೇ. ಎಲ್ಲಾರೂ ಅವನೇಳಿದ್ದನ್ನೇ ನಂಬಿದರು. ಕೈಕಾಲು ಕಟ್ಟಿ 'ನಿಜ ಹೇಳು' ಅಂತ ನಾಲ್ಕಾರು ಜನ ಕೂಡಿ ಕೊಂಡು ಹೊಡೆದರು. ಬೆನ್ನ ಮೇಲೆ ಬರೆ ಹಾಕಿದರು."

"ಬರೆ ಅಂದ್ರೇನವ್ವಾ?"

ಹೊಡೆಯುವುದೂ, ಬೈಯುವುದೂ ಅವನಿಗೆ ಗೊತ್ತಿತ್ತು. ಬರೆ ಹಾಕುವುದೆನ್ನುವುದು ಅವನರಿಯದ ವಿಷಯ.

"ಕಬ್ಬಿಣದ ಸಲಾಕೀನ ಬೆಂಕೀಲಿ ಕೆಂಪಗೆ ಕಾಸಿ ಬೆನ್ಮೇಲೆ ಇಡ ಗ್ತಾರೆ."

"ಆ!"

ಅವಳು ಹೇಳಿದುದನ್ನು ಕೇಳಿ ಕಣ್ಣ ಹಾವು ಹಿಡಿದವನಂತೆ ಬೆಚ್ಚಿಬಿದ್ದ. ಅವಳು ಹೇಳಿದ ಮಾತಿನ ಮೇಲೆ, ಅವನ ಕುಬ್ಜ ಊಹೆ ಚಿತ್ರಿಸಿದ ಚಿತ್ರವನ್ನೇ ಕಂಡು ಗದಗದ ನಡುಗಿಹೋದ ಕಣ್ಣ. ಯಾರೂ ಅಂಥ ಅಮಾನುಷ ಕೃತ್ಯವನ್ನು ಮಾಡಬಹುದೆಂದು ನಂಬುವುದೂ ಅವನಿಗೆ ಅಸಾಧ್ಯವಾಯಿತು.

"ನಿಜವಾಗ್ಲೂ....?"

"ನಂಬ್ದೆ ಹೋದ್ರೆ ನೋಡು" ಎಂದು, ಅವಳು ಬೆನ್ನು ಮುಚ್ಚಿದ ಚಿಂದಿಯನ್ನು ಸರಿಸಿ ತೋರಿಸಿದಳು. ಅವಳ ಬೆನ್ನ ಮೇಲೆ ಮೂರು ಬೆರಳು ಗಾತ್ರದ ಬರೆಯ ಗುರುತು ಸ್ಪಷ್ಟವಾಗಿತ್ತು. ಅದನ್ನು ನೋಡಿ ಕಣ್ಣನ ಕಣ್ಣಲ್ಲಿ ನೀರು ತುಂಬಿತು. ಅದಿನ್ನೂ ಹಸಿ ಗಾಯವೆಂಬಂತೆ, ಆ ಬರೆಯ ಗುರುತಿನ ಮೇಲೆ ಮೃದುವಾಗಿ ಕೈಯಾಡಿಸುತ್ತ, ದುಃಖದಿಂದ ಭಾರವಾದ ಧ್ವನಿಯಲ್ಲಿ ಕೇಳಿದ—

"ಬಾಳ ನೋವಾಗಿತ್ತಾ ಅವ್ವಾ?"

"ಹೂ. ನಾಲ್ಕುದಿನ ನೋವ್ನಾಗೆ ಹುಚ್ಚಿಡದಂಗಾಗಿತ್ತು."

"ಆಮ್ಯಾಕೆ?"

"ಕಳ್ಳೀಂತ ಹೇಳಿ ಕೆಲ್ಸದಿಂದ ಬುಡ್ಸುಬಿಟ್ರು. ಬ್ಯಾರೆ ತವಾ ಕೆಲ್ಸ ಸಿಗ್ತದೇನೋಂತ ನೋಡ್ದೆ. ದಿಕ್ಕು ದಿವಾಳಿ ಇಲ್ದ ಪ್ರಾಯದ ಹೆಂಗ್ಸು ಎಲ್ಲೋದ್ರೂ ಒಂದೇ. ಎಲ್ಲಾರ ಕಣ್ಣೂ ಅವಳ ಮ್ಯಾಲೇ. ಕಡೇಗೊಂದು ದಿನ ತಿರುಕೊಂಡು ತಿಂದ್ರೂ ಪರವಾ ಇಲ್ಲ, ಯಾರತ್ರಾನೂ ಕೆಲ್ಸ ಕೇಳೋದು ಬ್ಯಾಡ ಅನ್ಸಿ, ನಾನು ಬಿಕ್ಸಾ ಎತ್ತೋಕೆ ಪ್ರಾರಂಭ ಮಾಡ್ದೆ. ಪಾಪಿ ಸಮುದ್ರ ಒಕ್ರೂ ಮೊಳ್ಕಾಲುದ್ದಾನೇ ನೀರು. ಕಣ್ಣು, ಮೂಗು ನ್ಯಾರವಾಗಿದ್ರೆ, ಗಂಟುಬೀಳೋರೆಲ್ಲಾ ಗೆಣೆಯರೇ. ಅದ್ಕೇ ಒಂದಿನ ರೋಸ್ಕೆ ಆಗ್ಹೋಗಿ, ನಾನೇ ಮುಕ ವಿಕಾರ ಮಾಡಿಕೊಂಡುಬಿಟ್ಟೆ— ಯಾರೂ ಹತ್ರ ಬರ್ದಿರ್ಲಿ ಅಂತ"

ಆ ಮಾತು ಹೇಳಿದಾಗ, ಅವಳ ಮನಸಿನ ಇದಿರು, ತನ್ನನ್ನು ರೂಪಯಜ್ಞದ ಘೋರ ಕಾರ್ಯಕ್ಕೆ ಒತ್ತಾಯಮಾಡಿದ ಘಟನಾವಳಿ ಮಿಂಚಿಹೋಯಿತು. ತನ್ನ ಮಾನಕ್ಕೆಲ್ಲಿ ಕೊರೆ ಬಂದೀತೋ ಎಂದು ಹೆದರಿ, ಎಲ್ಲೂ ನೌಕರಿಗೆ ಹೋಗಬಾರದೆಂಬ ನಿಶ್ಚಯದಿಂದ, ಅವಳು ಚಿಂದಿಯುಟ್ಟು ತಿರುಪೆಗೆ ಅಲೆದುದು; ಗಟ್ಟಿಮುಟ್ಟಾಗಿದ್ದ ತಾನು ಬಿಕ್ಷೆ ಬೇಡಲು ಹೋದಾಗ 'ನಿನಗೇನು ಕೇಡು, ಕಲ್ಲುಗುಂಡಿನಹಾಗಿದೀಯ. ಯಾರ ಮನೇಲಾದ್ರೂ ಮುಸುರೆ ತಿಕ್ಕಿದರೆ, ಹೊಟ್ಟೆಗೆ ಹಾಕೋಲ್ವೆ, ಸೋಮಾರಿ ಮುಂಡೆ. ಮೈಗಳ್ಳತನಕ್ಕೆ ತಿರುಪೆ ಬೇಕ್ತ್ತೀಯಾ?' ಎಂದು ಕೆಲವರು ಹಂಗಿಸಿದುದು; "ಹಗಲು ತಿರುಪೆ, ರಾತ್ರಿ ಹಾದರ; ನಿಮ್ಮಂಥೋರ ಚಾಳಿಯೆಲ್ಲಾ ನನಗೆ ಗೊತ್ತು. ಯಾವೋನಾದ್ರೂ ಸಿಕ್ತಾನೇನೋ ಅಂತ, ಮಿಟಕಲಾತಿಹಾಗೆ ಊರೆಲ್ಲ ಅಲಿಯೋದು, ತಿರುಪೆ ಎತ್ತೋ ನೆಪಮಾಡಿಕೊಂಡು. ನಾಚಿಕೆಯಾಗೋಲ್ವೆ ಇಂಥ ಬಾಳು ಬಾಳಲಿಕ್ಕೆ. ಉರಲು ಹಾಕಿಕೊಂಡು ಸತ್ತರೆ ಕೇಡೆ?' ಎಂದು ಒಬ್ಬಾಕೆ ಘಟ್ಟಿಸಿದ್ದು; ತಿರುಪೆಯ ಹೆಣ್ಣು ಸುಲಭಕ್ಕೆ ಸಿಗಬಹುದೆಂದು, ಕೆಲವರು, ಅವಳು ರಾತ್ರಿ ಒಂದು ಗಳಿಗೆ ನಿರ್ಭಯವಾಗಿ ಮಲಗಲು ಕೂಡಾ ಸಾಧ್ಯವಿಲ್ಲದಂತೆ ಮಾಡಿದ್ದು; ಒಂದೊಂದು ದಿನ ಈ ಬದುಕೇ ಬೇಡವೆಂದು, ಕೆರೆಯಲ್ಲಿ ಮುಳುಗಲು ಹೋಗಿ, ಜೀವಕಳೆದುಕೊಳ್ಳಲು ಹೆದರಿ ಹಿಂದಿರುಗಿದ್ದು; ಕಡೆಗೆ—ತನ್ನ ಮುಖದ ಮೇಲೆ ಕುದಿವ ಎಣ್ಣೆ ಸುರಿದುಕೊಂಡುದು; ಆ ಬಳಿಕ ಅನುಭವಿಸಿದ, ದಾರುಣವಾದ ದೈಹಿಕ, ಮಾನಸಿಕ ವ್ಯಥೆ—ಎಲ್ಲವೂ ವೇಗವಾಗಿ ಸುತ್ತುವ ಚಿತ್ರವರ್ತುಲದಂತೆ, ಸುತ್ತಿತು ಅವಳ ಮಿದುಳಿನಲ್ಲಿ. ಅದರ ನೆನಪಿಗೇ ಮತ್ತೊಮ್ಮೆ ಆ ಬಾಳು ಬದುಕಿದಂತಾಗಿ ಅವಳ ಮೈ ನಡುಗಿತು. ಚಾಲನೆ ಕೊಟ್ಟ ಯಂತ್ರದಂತೆ, ಉದ್ದಕ್ಕೂ ಎಲ್ಲವನ್ನು ಹೇಳಿದಳು. ತನ್ನ ಕಥೆಗೆ ಸಾಕ್ಷಿಯೆಂಬಂತೆ—ತನ್ನ ವಿಕಾರವಾದ ಮುಖವನ್ನವನಿಗೆ ತೋರಿಸಿ—"ಬಡವ್ರ ಹಣೇಬರ ಎಲ್ಲಾ ಇಷ್ಟೇನೆ ಕಣ್ಣಾ?" ಎಂದಳು, ವಿಷ-ಬೆಂಕಿ ಬೆರೆತ ಧ್ವನಿಯಲ್ಲಿ.

ಕಣ್ಣ ಅವಳ ಮಾತು ಕೇಳಿ, ಮರುಮಾತನಾಡದೆ ಅವಳ ವಿಕಾರ

ವಾದ ಮುಖವನ್ನೇ ನುಂಗುವನಂತೆ ನೋಡತೊಡಗಿದ. ಅವಳು ಹೇಳಿದ ಕರುಣಕಥೆಯ ನಿಜವಾದ ಅರ್ಥ ಅವನಿಗೆ ಅರಿವಾಗದಿದ್ದರೂ, ಮಾನವರ ಕಾಟಕ್ಕೇ ಬೆದರಿ, ಅವಳು ತನ್ನ ಸುಂದರವಾಗಿದ್ದ ಮುಖವನ್ನು ವಿಕಾರ ಮಾಡಿಕೊಂಡಳೆಂಬುದನ್ನು ಕೇಳಿ, ಅವನ ಹೃದಯದಲ್ಲಿ ಕ್ರೋಧ ಉಕ್ಕೇರುತ್ತಿತ್ತು. ಮುಷ್ಟಿಯನ್ನು ಬಿಗಿದು, ತುಟಿ ಕಚ್ಚಿದ. ರೋಷದ ಉದ್ವೇಗದಲ್ಲಿ ಅವನ ಮೂಗಿನ ಹೊಳ್ಳೆಗಳು ಕಂಪಿಸುತ್ತಿದ್ದವು.

"ಅವ್ವಾ, ನಾನೇನಾರ ಆಗಿದ್ದಿದ್ರೆ...." ಎಂದ, ಬಿಗಿದ ಧ್ವನಿಯಲ್ಲಿ.

"ಏನ್ಮಾಡ್ತಿದ್ದೆ ?"

"ಅವರ ರಕ್ತ ಕುಡೀತಿದ್ದೆ. ಬಿಡ್ತಿರ್ಲಿಲ್ಲ."

"ಸರದಾರ ಮಗ! ಅದು ಆಗೋಯ್ತಲ್ಲ. ಈಗಲಾರ ನಾ ಏಳಿದಂಗೆ ಕೇಳ್ತೀಯೋ ಇಲ್ವೋ?"

"ಏನವ್ವ ?"

"ಚಾಕ್ರಿ ಪಾಕ್ರಿ ಮಾತು ದೊಡ್ಡೋರ್ಗೆ. ನಮ್ಮಂಥೋರ್ಗಲ್ಲ. ದೊಡ್ಡೋರ್ಸವಾಸ ನಮಗ್ಬ್ಯಾಡ ಕಣ್ಣ. ಇರೋ ಅಷ್ಟು ದಿನ, ತಿರುಪೆ ಬೇಡ್ಕೋ, ಏನೋ ಮಾಡಿ ಹೊಟ್ಟೆ ಹೊರಕೊಂಡು, ಒಂದು ದಿನ ಪ್ರಾಣ ಬಿಟ್ಟಡೋದು."

"ಅಷ್ಟೇನಾ ?"

"ಮತ್ತಿನ್ನೇನೈತೆ ? ಈ ಜನ್ಮಕ್ಕಿಷ್ಟೇ ಋಣ."

"ಅಂಥ ಜನದ ತಾವ ಬಿಕ್ಸೆ ಬೇಡೋಕೆ ನನ್ಕೈಲಿ ಆಗೋಕಿಲ್ಲವ್ವ."

"ಮತ್ತೇನ್ಮಾಡ್ತಿ, ಉಪಾಸ ಸಾಯ್ತೀಯ ?"

"ಊಹೂ."

ಅವನ ಹಟದ ಮಾತು ಕೇಳಿ, ಅವಳಿಗೆ ಏಕೋ ಇದ್ದಕ್ಕಿದ್ದಂತೇ ಸಿಟ್ಟು ಕೆದರಿ ಬಂತು. ಬಹುದಿನ ಯಾರಿಗೂ ಹೇಳದೆ, ಹೃದಯದಲ್ಲಿ ಹುಗಿದಿಟ್ಟಿದ್ದ ಮಾತನ್ನು ಅಂದು ಆಡಿದ್ದೂ, ಅವಳ ಮನಸ್ಸನ್ನು ಪ್ರಕ್ಷುಬ್ಧಗೊಳಿಸಿತ್ತೇನೋ. ಕೆಣಕಿದ ಸರ್ಪದಂತೆ ಸಿಡಿದು ಹೇಳಿದಳು—

"ಹಂಗಾರೇನು ನಿಮ್ಮಪ್ಪನ ತಲೆ ಹಿಡೀತೀಯಾ ಹೊಟ್ಟೆ ಹೊರಿ

ಯೋಕೆ ಹಜಾಮ. ಏಳ್ದಷ್ಟು ಬೊಗ್ಳು."

ಸುಳಿವು ಕೊಡದೆ, ಆಸ್ಫೋಟನವಾದ ಜ್ವಾಲಾಮುಖಿಯಂತಿದ್ದಳು ಅವಳು. ಅವಳ ಕರಾಳ ರೂಪವನ್ನು ಕಂಡು, ಕಣ್ಣ ತತ್ತರಿಸಿದ. ಬೇರೇನೂ ಎದುರು ಮಾತಾಡಲು ಅವನಿಗೆ ಧೈರ್ಯವಾಗಲಿಲ್ಲ. ಅವಳ ನಿರ್ಧಾರದಿದಿರು ತಲೆಬಾಗಿದ.

ಅಂದಿನಿಂದ ಅವಳು ಕಣ್ಣನಿಗೆ ತಿರುಪೆ ಬೇಡುವುದರಲ್ಲಿ ತಯಾರಿ ಕೊಡತೊಡಗಿದಳು. ಸಪ್ಪೆ ಮುಖ ಹಾಕಿ, ಕೇಳಿದವರ ಕರುಳು ಕರಗುವಂತೆ ಕೂಗುವುದು, ದೂರವಿದ್ದವರ ಗಮನವನ್ನು ಸೆಳೆಯುವಂತೆ ಕರೆಯುವುದು, ರೋಗ ಬಂದಂತೆ ನಟಿಸುವುದು—ಕಸುಬಿನ ನಾನಾ ರೀತಿ ನೀತಿಗಳಲ್ಲೂ ತರಬೇತು ಕೊಟ್ಟಳು. ಹಾಗೇ ತಾನು ಕಲಿತಿದ್ದ ನಾಲ್ಕಾರು ಹಾಡುಗಳನ್ನೂ ಅವನಿಗೆ ಹೇಳಿಕೊಟ್ಟಳು.

ಅವನಿಗೆ ಅವಳು ಹಾಡು ಹೇಳಿಕೊಟ್ಟ ದಿನ, ಪ್ರಕಾಶವಾದ ಅವನ ಕಂಠಮಾಧುರಿ, ಅವಳಿಗಷ್ಟೇ ಅಲ್ಲ, ಸುತ್ತಲಿದ್ದ ತಿರುಕರ ಗುಂಪಿನವರೆಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಸಾಣೆ ಹಿಡಿಯದ ವಜ್ರದಂತಿತ್ತು ಅವನ ಕಂಠ. ಅವಳು ಕಲಿಸಿದ "ನಾನ್ಯಾಕೆ ಪರದೇಶಿ, ನಾನ್ಯಾಕೆ ಬಡವಾನಯ್ಯ" ಎಂಬ ದಾಸರ ಕೀರ್ತನೆಯನ್ನು ಹಾಡುವಾಗ ಅವನಿಗೆ ಅರಿವಾಗದಂತೆಯೇ, ಅವನ ಅವ್ಯಥ-ಗಂಭೀರವಾದ ಎಳೆ ಕಂಠದಲ್ಲಿ ಭಾವನಿರ್ಭರತೆ ಮೂಡಿ ಬಂದು, ಸುತ್ತ ಕೇಳುತ್ತಾ ಕುಳಿತವರ ಎದೆಯಲ್ಲಿ ಏನೋ ಒಂದು ಬಗೆಯ ವಿಚಿತ್ರ ಆಶಾವಾದದ ವಾತಾವರಣವನ್ನು ಕಲ್ಪಿಸಿತು. ಮಾಗಿದ ಇರುಳಿನ ಪ್ರಶಾಂತ ವಾತಾವರಣದಲ್ಲಿ ಅವನ ಹಾಡಿನ ಮಾಧುರಿ, ಏನೋ ಒಂದು ಮೋಡಿಯನ್ನು ಮೂಡಿಸಿ, ಅವನ ಹಾಡಿಗೆ ಜೋಡಿಯಾಗಿ ಏಕತಾರಿಯನ್ನು ಮಿಡಿಯುತ್ತಿದ್ದ ಜೋಗಿ, ಏಕತಾರಿಯ ಬುರುಡೆ ಕೈಯಿಂದ ಜಾರಿದುದನ್ನು ಲೆಕ್ಕಿಸದೆ, ಕಣ್ಣನನ್ನು ಬಿಗಿಯಾಗಿ ತಬ್ಬಿ, ಅವನ ನೆತ್ತಿಯ ಮೇಲೆ ಅಶ್ರುಅಕ್ಷತೆಗಳನ್ನು ಕರೆದ. ಅವಳ ಹೆಮ್ಮೆಗಂತೂ ಮಿತಿಯೇ ಇರಲಿಲ್ಲ.

"ಕಣ್ಣ, ನಿನ್ನ ಹಾಡು ಕೇಳೋರಿಗೆ ಹೃದಯವಿದ್ದರೆ ಅದಕ್ಕೆ

ಬೊಗಸೆ ಅಕ್ಕಿಯಲ್ಲ, ಉಡಿಯ ತುಂಬ ರೂಪಾಯಿ ಸುರಿಯುತ್ತಾರೆ. ಇಂಥ ಕಂಠವಿಟ್ಟುಕೊಂಡು, ಇಲ್ಲೇಕೆ ಹುಟ್ಟಿದಿಯೋ ಕಂದಾ" ಎಂದಳು ಆಕೆ.

"ಇಲ್ಲಿ ನನಗೇನು ಕಡಮೆ ಆಗಿದೆ ಅವ್ವಾ. ನೀನಿಲ್ವಾ" ಎಂದ ಕಣ್ಣ ಆಕೆಯ ಮಾತು ಕೇಳಿ. ತನ್ನ ಹಾಡಿನಲ್ಲಿ ಅವರೆಲ್ಲರನ್ನೂ ಮರುಳು ಗೊಳಿಸುವ ವೈಶಿಷ್ಟ್ಯವೇನಿತ್ತೆಂಬುದು ಅವನಿಗೆ ಅರಿವಾಗಿರಲಿಲ್ಲ. ಆಕೆಯ ಮಮತೆಯ ನೆರವು ದೊರೆತ ಮೇಲೆ ಅವನಿಗೆ ತಾನೆಂದೂ ಪರದೇಶಿ ಯೆಂದು ಎನಿಸಿರಲಿಲ್ಲ. ಆಕೆ ಇರುವವರೆಗೂ ತಾನು ಪರದೇಶಿಯಲ್ಲ, ಒಡವನಲ್ಲ ಎಂದೇ ನಂಬಿದ್ದ. ಆ ನಂಬಿಕೆಯೇ, ಅವನಿಗರಿವಾಗದಂತೆ ಹಾಡುವಾಗ ಅವನ ಕಂಠದಲ್ಲಿ ಮೂಡಿತ್ತು. ಅವನಿಗೆ, ಅವರೆಲ್ಲರೂ ತಾನು ಹಾಡುವುದನ್ನು ಕೇಳಿ ಮೆಚ್ಚಿದುದನ್ನು ಕಂಡು, ಒಂದೇ ಒಂದು ಭಾವ ಮನಸ್ಸಿನಲ್ಲಿ ಮೂಡಿ ಬಂದಿತು—"ಅವಳು ಹೇಳಿದುದು ನಿಜವಾದರೆ, ನಾಳಿನಿಂದ ತಾನೇ ಭಿಕ್ಷೆಗೆ ಹೋಗಿ ಇಬ್ಬರಿಗೂ ಸಾಕಷ್ಟನ್ನು ತರಬಹುದು" ಎಂದು. ಅದಕ್ಕಿಂತ ಹೆಚ್ಚಿಗೆ ಅವನಿಗೆ ಬೇರೇನೂ ತೋರಲಿಲ್ಲ ; ಹೆಚ್ಚಿನ ಆಶೆ ಯಾವುದೂ ಅವನ ಮನೋರಂಗದಲ್ಲಿ ಚಿಗುರಲಿಲ್ಲ.

ಎಲ್ಲರೂ ಮಲಗಿದ ಮೇಲೆ ಅವಳಿಗೆ ತನ್ನ ಹೃದಯದಲ್ಲಿ ಮೂಡಿದ ಭಾವನೆಯನ್ನು ತಿಳಿಸಿದ:

"ಅವ್ವಾ, ನಾಳ್ನಿಂದ ನಾನೇ ಬಿಕ್ಸೆ ತರ್ತೀನಿ. ನೀನೆಲ್ಲೂ ಹೋಗ್ಬ್ಯಾಡ."

"ಯಾಕೆ ?"

"ನನ್ನ ಹಾಡು ಕೇಳ್ದೋರು ಬೇಕಾದಷ್ಟು ಬಿಕ್ಸೆ ಕೊಡ್ತಾರೇಂತ ಹೇಳ್ಳಿಲ್ವೇ ನೀನು. ಅದ್ಕೆ. ಬಿಸಲ್ನಾಗೆ ಸುತ್ತೋಕೆ ನಿನ್ಕೈಲಿ ಆಗಾಕಿಲ್ಲ. ಆ ಕೆಲ್ಸ ನಾನು ಮಾಡ್ತೇನೆ."

"ನೀನ್ಯಾಕೆ ನನಗೆ ತಂದು ಹಾಕಬೇಕು ?"

"ಅಂಗಂದ್ರೆ.... ನೀನು ನನ್ನವ್ವ ಅಲ್ವಾ. ನೀನ್ಯಾಕೆ ನನಗೆ ತಂದು ಹಾಕ್ತಿದ್ದೆ ಇಷ್ಟು ದಿನ ?"

"ನೀನೊಬ್ನೆ ನಿನ್ನ ಹೊಟ್ಟೇಗೂ ಹುಟ್ಟಿಸಿಕೊಂಡು, ನನ್ನೂ ಸಾಕ್ತೀಯ?"

"ಓ! ಬಿಟ್ನೋಡು."

"ಮೂರು ಗೇಣುದ್ದ ಬೆಳೀಲಿಲ್ಲ. ಎಷ್ಟಾತ್ರತು ಕಲ್ತುಬಿಟ್ಟೆಯೋ ಕಣ್ಣಾ!" ಎಂದು, ಅವಳು, ಉಕ್ಕಿಬಂದ ಅಭಿಮಾನದಲ್ಲಿ ಹತ್ತಿರ ಮಲಗಿದ ಅವನನ್ನು ಬಿಗಿಯಾಗಿ ತಬ್ಬಿಕೊಂಡು "ಕಣ್ಣಾ, ನಿಮ್ಮಪ್ಪ ಪಾಪಿ. ಮಗನ ಬಾಯಾಗೆ ಇಂಥ ಮಾತು ಕೇಳೋ ಪುಣ್ಯ ಪಡಕೊಂಡು ಬರ್ಲಿಲ್ಲ. ದೇವ್ರಂತ ಮನಸು ನಿನ್ನದು ಕಣ್ಣಾ. ಇಂಗೇ ಮನಸ್ಸು ಮಡಗಿಕೊಂಡಿರು. ನಿನ್ನ ಅಣೇಲಿ ಏನು ಬರದೈತೋ ಯಾರು ಬಲ್ರು" ಎಂದಳು. ಅವಳ ಒಂದೊಂದು ಮಾತೂ, ಅಕ್ಕರೆ, ಅಭಿಮಾನ, ಬಯಕೆ, ಹಾರಕೆ ತುಂಬಿ, ಮಿಡಿದ ವೀಣೆಯ ಮಂಜುಳ ಗುಂಜಾರವದಂತಿತ್ತು ಆಲಿಸುತ್ತಿದ್ದ ಕಣ್ಣನ ಕಿವಿಗೆ.

"ಅಂಗಾದ್ರೆ ನಾಳ್ನಿಂದ ನಾನೇ ಓಗ್ಲಾ"

"ಊಹು. ಬ್ಯಾಡ."

"ಯಾಕವ್ವಾ?"

"ನಾಳ್ನಿಂದ ನಾನೇ ಕಳಿಸ್ಬೇಕೂಂತ ಇದ್ದೆ. ಇವತ್ತು ನಿಶ್ಚಯ ಆಗೋಯ್ತು. ನಾನಿರೋಗಂಟ ನಿನ್ನ ತಿರುಪೆ ಎತ್ತೋಕೆ ಕಳಿಸಾಕಿಲ್ಲ."

"ಯಾಕೆ? ಹುಡ್ಗಾಂತ ನನ್ಗ್ಯಾರೂ ಬಿಕ್ಸ ಕೊಡಾಕಿಲ್ಲಾಂತ್ಲಾ?"

"ಊಹು. ಅದ್ಕಲ್ಲ"

"ಮತ್ಯಾಕೆ?"

"ನಾನಿರೋಗಂಟಾ ನಿನ್ಗಾ ಕಷ್ಟಾ ವ್ಯಸನ ಬ್ಯಾಡ. ಆಯಾಗಿದ್ಬುಡು. ನಾನೋದಮ್ಯಾಕೆ ನಿನ್ನ ಹಣೇಲಿ ಬರದಿದ್ದಂಗಾಗ್ಲಿ."

"ಅಂಗಂದ್ರೆ, ನನ್ನ ಬಿಟ್ಟು ಒಂಟೋಯ್ತೀಯ ನೀನು. ಯಾಕೆ? ನಾನೇನಾರ ತೆಪ್ಮಾಡಿದ್ನಾ?"

"ನೀನೇನೂ ತಪ್ಮಾಡ್ಲಿಲ್ಲ. ಕಣ್ಣ."

"ಮತ್ಯಾಕೋಗ್ತೀಯಾ? ಇಲ್ಲೇ ಇದ್ಬಿಡು."

"ನನ್ಗೇನೋ ನಿನ್ತವಾನೇ ಇರ್ಬೇಕೂಂತ ಆಸೆ ಐತೆ ಕಣ್ಣ. ಆದ್ರೆ ಆ ಕರಕೊಂಡೋಗೋನು ಬಂದಾಗ, ಇಲ್ಲಾಂತ ಅನ್ನೋಕಾಗೋಕಿಲ್ಲ. ಕಂತೆ ಎತ್ತು ಎಂದ್ಮ್ಯಾಗ್ಲೆ ಎತ್ಬೇಕು."

"ಯಾವೋನವ್ವಾ ಅವ್ನು ?"

"ಮತ್ಯಾರು ಕಣ್ಣಾ. ಎಲ್ಲಾರ್ನೂ ಒಂದಲ್ಲ ಒಂದಿನ ಕರಕೊಂಡ್ಹೋಗೋ ಯಮಧರ್ಮರಾಯ. ಅವ್ನೇ ಕರೆಯೋಕೆ ಬಂದಾಗ ಇಲ್ಲಾಂತ ಹೇಳೋಕಾಯ್ತದ ?"

ಅವಳ ಮಾತು ಕೇಳಿದ ಕೂಡಲೇ ಅವನ ಹೃದಯದಲ್ಲಿ ಹಿಮ ಗಾಳಿ ಬೀಸಿದಂತಾಯಿತು. ಅಜ್ಞೇಯ ಭೀತಿ, ಅಲಂಘ್ಯ ಹಿಮಾಚಲ ದಂತೆ ಅವನನ್ನೆದುರಿಸಿತು. ಆ ಭೀತಿಯಲ್ಲಿ ಮಾತನಾಡದೆ, ತನ್ನನ್ನು ತಬ್ಬಿದ ಅವಳನ್ನು, ತಾನೂ ಬಿಗಿಯಾಗಿ ತಬ್ಬಿಕೊಂಡ. ಅವಳೂ ಮಾತಾಡಲಿಲ್ಲ. ಯಾವುದೋ ಭಾವನೆ ಅವರಿಬ್ಬರ ಬಾಯನ್ನೂ ಬಿಗಿದಿತ್ತು.

ಅಂದಿನಿಂದ ಅವಳು ಯಾವುದೋ ಒಂದು ಆಕಾಂಕ್ಷೆಯ ಆಳಾದಂತೆ, ಕಣ್ಣನನ್ನು ಕಾಪಾಡತೊಡಗಿದಳು. ತಿರಿದು ತಂದದ್ದರಲ್ಲಿ ಉತ್ತಮ ವಾದುದನ್ನು ಆರಿಸಿ, ಮೊದಲು ಅವನಿಗೆ ಹೊಟ್ಟೆತುಂಬ ಊಟ ಮಾಡಿಸಿ, ಮಿಕ್ಕದ್ದನ್ನು ತಾನು ಉಂಡು ಮಲಗುತ್ತಿದ್ದಳು. ಎಲ್ಲಿಂದಲೋ ಒಂದು ದಿನ, ಯಾರಿಂದಲೋ ತಿರುಪೆ ಬೇಡಿ, ಸ್ವಲ್ಪ ಗಟ್ಟಿಮುಟ್ಟಯಾದ ಅಂಗಿ ಯನ್ನು ತಂದು, ಕಣ್ಣನಿಗೆ ತೊಡಿಸಿದಳು. ಆಗಾಗ ಮಾರ್ಕೆಟ್ಟಿನ ಬಳಿ ತಿರುಗಿ, ಹಣ್ಣಿನ ಮಂಡಿಯವರು ಬಿಸುಟಿದ ಕೆಟ್ಟ ಹಣ್ಣುಗಳಲ್ಲಿ, ಸ್ವಲ್ಪ ಚೆನ್ನಾಗಿರುವುದನ್ನು ಆರಿಸಿ ತಂದು ಅವನಿಗೆ ಕೊಡುತ್ತಿದ್ದಳು. ತಾನೊಬ್ಬಳು ತಂದುಹಾಕಿದರೇ ಸಾಲದು. ನೆರೆಯ ತಿರುಪೆಯವರು ತಂದದ್ದ ರಲ್ಲೂ ಏನಾದರೂ ಒಳ್ಳೆಯದಿದ್ದರೆ, ಹೇಗಾದರೂ ಮಾಡಿ, ಅದನ್ನು ಅವರಿಂದ ತೆಗೆದುಕೊಂಡು, ಕಣ್ಣನಿಗೆ ಕೊಡುತ್ತಿದ್ದಳು. 'ಹಡ್ದೋಳ್ಗಿಂತ ಹೆಚ್ಚಾಗಿ ಒದ್ದಾಡ್ತೀಯಲ್ಲೆ. ಯಾರ ಮಗನೋ, ನಿನಗ್ಯಾಕೆ ಇಷ್ಟು ಹಂಬಲು' ಎಂದು ಜೊತೆಯ ಭಿಕ್ಷುಕರು ಹಾಸ್ಯ ಮಾಡಿದರೆ, 'ಯಾರ್ಬಲ್ರು– ಕಣ್ಣ ನನ್ನ ಹೋದ ಜನ್ಮದ ಮಗನೋ ಏನೋ. ಈ ಜಲ್ಮದಲ್ಲಿ ಸೇವೆ

ಮಾಡಿಸ್ಕೋತಾನೆ. ಅಂಥ ಮಗನ್ನ ಪಡಿಯೋಕೆ ಪುಣ್ಯ ಬ್ಯಾಕ್ಪು!" ಎಂದು ಹೆಮ್ಮೆಯಿಂದ ಉತ್ತರ ಕೊಡುತ್ತಿದ್ದಳು. ಅವಳ ಮಾತಿನಲ್ಲಿ ವ್ಯಕ್ತವಾಗುತ್ತಿದ್ದ ಭಾವದ ಉತ್ಕಟತೆಯನ್ನು ಕಂಡು, ಪ್ರಶ್ನೆ ಕೇಳಿದವರೂ ಸುಮ್ಮನಾಗುತ್ತಿದ್ದರು. ಅವಳ ಪ್ರೀತಿಯ ಆಳಕಂಡ ಅವರಾರೂ, ಕಣ್ಣ ಏನು ಮಾಡಿದರೂ ಅನ್ನುವ ಸಾಹಸ ಮಾಡುತ್ತಿರಲಿಲ್ಲ. ತಾವು ಮನುಷ್ಯ ರೆನ್ನುವುದನ್ನೇ ಮರೆತಿದ್ದ ಅವರೆಲ್ಲರಲ್ಲೂ ಅವಳ ಪ್ರೀತಿ, ಕೊಂಚ ಹೊತ್ತಾ ದರೂ ತಾವೂ ಮನುಷ್ಯರೆಂಬುದನ್ನು ಜ್ಞಾಪಿಸಿಕೊಳ್ಳುವಂತೆ ಮಾಡಿತ್ತು. ಕಣ್ಣನೂ, ಅವರೆಲ್ಲರ ಪ್ರೀತಿಯ ಬಳ್ಳಿಯಂತೆ ದಿನದಿನಕ್ಕೆ ವೃದ್ಧಿಸುತ್ತಿದ್ದ. ಒಮ್ಮೊಮ್ಮೆ ಅವಳು ತನಗೆ ಏನೋ ಹೇಳಲು ಯತ್ನಿಸಿ, ತಡೆದು, ಸುಮ್ಮ ನಾಗುತ್ತಿದ್ದಾಳೆಂದು ಕಣ್ಣನಿಗೆ ಅನಿಸುತ್ತಿತ್ತು. ಎಷ್ಟು ಸುಖವಾಗಿತ್ತು ಆಗ ಕಣ್ಣನ ಬಾಳು. ತಾನು ತಿರುಪೆಯವನು, ತಂದೆ-ತಾಯಿಗಳ ಗುರು ತರಿಯದ ಭಿಕಾರಿ ಎಂಬುದೆಲ್ಲಾ ಮರೆತುಹೋಗಿತ್ತು ಆಗವನಿಗೆ.

ಮಳೆಗಾಲದಲ್ಲಿ ಚೆನ್ನಾಗಿ ಬಿಸಿಲು ಕಾದ ದಿನ, ತಪ್ಪದೆ ಕಾರ್ಮೋಡ ಕವಿದು, ಮಳೆಗರೆಯುವಂತೆ, ಅವನ ಬಾಳಿನಲ್ಲೂ ಆಯಿತು. ಯಾರೂ ನಿರೀಕ್ಷಿಸದಿದ್ದ ಒಂದು ದಿನ, ಅವಳು ನಿರೀಕ್ಷಿಸುತ್ತಿದ್ದ ಕರೆ ಬಂತು. ಆದಿನ ವಿಪರೀತ ಮಳೆ. ಆದಿನವೇನು-ಮೂರು ದಿನದಿಂದ ಹಿಡಿದ ಮಳೆ ಬಿಟ್ಟಿರಲಿಲ್ಲ. ಯಾವಾಗಲಾದರೊಂದು ಗಳಿಗೆ, ಸ್ವಲ್ಪ ಸಣ್ಣಗಾದ ಮಳೆ, ಮರುಗಳಿಗೆಯೇ ಮರೆತುದನ್ನು ಜ್ಞಾಪಿಸಿಕೊಂಡಂತೆ ಚಚ್ಚಲಾರಂಭಿಸು ತ್ತಿತ್ತು. ಮಳೆ ಮೋಡದ ಆರ್ಭಟಕ್ಕೆ ಬೆದರಿ ತಲೆಮರೆಸಿಕೊಂಡಂತೆ, ಮೂರು ದಿನ ಸೂರ್ಯನ ಮುಖವೇ ಇಲ್ಲ. ಮೂರುಹೊತ್ತೂ ಸುರಿವ ಮಳೆಯಲ್ಲಿ, ಜಗತ್ತಿಗೇ ಬೂದಿ ಕವಿದಂತಾಗಿತ್ತು. ತಾರು ರಸ್ತೆಗಳು ಜಾರು ಬಂಡೆ ಗಳಾಗಿ, ಮಣ್ಣು ರಸ್ತೆ ಕೆಂಪು ಕೆಸರಿನ ಹೊಂಡಗಳಾಗಿದ್ದವು. ಮಳೆ ಹಿಡಿದ ಮೊದಲ ದಿನವೇ ಕಣ್ಣ ಅವಳನ್ನು ಭಿಕ್ಷೆಗೆ ಹೋಗುವಾಗ 'ಮಳೆ' ಎಂದು ತಡೆದಿದ್ದ. ಆದರೆ ಅವಳು ಕೇಳಲಿಲ್ಲ. 'ಮಳೆ ಅಂತ ಕೂತರೆ, ಮನೇಲೇ ನಮ್ಮ ಹೊಟ್ಟೆಗೆ ಇಕ್ಕೋರು ಯಾರು? ನಾವೇನು ಸಾವಕಾರ್ರಾ?' ಎಂದು, ಅವನ ಬಾಯಿ ಮುಚ್ಚಿಸಿ, ಭಿಕ್ಷೆಗೆ ಹೋದವಳು, ಹಿಂದಿರುಗು

ವಾಗ ಕೆಮ್ಮುತ್ತ ಹಿಂದಿರುಗಿದಳು. ರಾತ್ರಿಯನ್ನೆಲ್ಲ ಕೆಮ್ಮುತ್ತಲೇ ಕಳೆದಳು. ಅವಳ ಪಕ್ಕದಲ್ಲಿ ಮಲಗಿದ ಕಣ್ಣನಿಗೆ, ಅವಳ ಮೈ ಸುಡುತ್ತಿದ್ದುದು ಗೊತ್ತಾಗುತ್ತಿತ್ತು. ಆದರೆ ಏಕೆಂದು ಅವನಿಗೆ ತಿಳಿಯಲಿಲ್ಲ. ಮರುದಿನವೂ ಅದರ ಪರಿವೆಯೇ ಇಲ್ಲದವಳಂತೆ ಸುರಿವ ಮಳೆಯಲ್ಲೇ ಹೊರಹೊರಟಳು. ಹಗಲು ಅವಳ ಬತ್ತಿದ ಮುಖ, ಉರಿ ಚಿಮ್ಮುವ ಕಣ್ಣು, ಎಡಬಿಡದೆ ಕೆಮ್ಮುವ ಬಾಯನ್ನು ಕಂಡು ಬೆದರಿದ ಕಣ್ಣ.

"ಅವ್ವಾ, ನೀನೋಗ್ಬ್ಯಾಡ. ಇವತ್ತೊಂದು ದಿವ್ಸ ನಾನೇ ಓಗ್ತೀನಿ" ಎಂದ, ಅವಳನ್ನು ತಡೆದ.

"ನಾನ್ಸಾಯೋಗಂಟ ನಿನ್ನ ಕಳಿಸೋಕಿಲ್ಲ ಅಂದದ್ದು ಮರತೋಯ್ತು?" ಎಂದು ಅವನು ಬೆಚ್ಚಿಬೀಳುವಷ್ಟು ಉಗ್ರವಾಗಿ ಗದರಿಸಿ ಹೊರಟುಹೋದಳು.

ಆ ದಿನವೂ ಹಾಗೇ. ಹಿಂದಿನ ರಾತ್ರಿ ಅವಳ ಮೈ ಕುದಿಯುತ್ತಿದ್ದುದನ್ನು, ಎದೆ ಬಿರಿವಂತೆ ಅವಳು ಕೆಮ್ಮುತ್ತಿದ್ದುದನ್ನು, ಒತ್ತಿದ ತಿದಿಯಂತೆ ಸದ್ದು ಮಾಡುವ ಅವಳ ಉಸಿರೆಳೆತವನ್ನೂ ಕಂಡು ಕಂಗಾಲಾಗಿಹೋದ ಕಣ್ಣ, ಹಗಲಾತ್ತಲೇ ಅವಳು ಎಂದಿನಂತೇ ತಿರುಪೆಗೆ ಹೊರಟುದನ್ನು ಕಂಡು, ಅಳುತ್ತಲೇ ಹೇಳಿದ—

"ಅವ್ವಾ, ನೀನೋಗ್ಬ್ಯಾಡ ಈ ಮಳೇಲಿ. ನಿನ್ನ ಮೈಲಿ ಸಂದಾಕಿಲ್ಲ"

"ನನ್ಗೇನೂ ಆಗಿಲ್ಲ ಕಣ್ಣ, ಥಂಡೀಗೆ ಅಷ್ಟು ಕೆಮ್ಮಾಗಿದೆ. ಬಿಸಿಲು ಬಿದ್ರೆ ಒಂಟೊಯ್ತದೆ"

"ಬಿಸಿಲು ಬಿದ್ಮ್ಯಾಕೇ ನೀನೋಗೋವಂತೆ, ಈಗ ಬ್ಯಾಡ"

"ನಾನೋಗ್ದೇ ಓದ್ರೆ, ಬಿಟ್ಟು ಓಡಿಹೋದ ನಿಮ್ಮವ್ವ ತಂದಿಕ್ತಾಳಾ ತಿನ್ನೋಕೆ?"

"ನಮ್ಮವ್ವ ಯಾಕೆ, ನಾನೇ ತಂದಿಕ್ತೀನಿ. ನಾನಷ್ಟೂ ಮಾಡ್ಬಾರ್ದಾ?"

"ಮಾಡ್ವಂತಿ ಕಣ್ಣ. ನೀನ್ಮಾಡೋದು ಎಷ್ಟೋ ಇದೆ. ತಿರುಪೆ ಎತ್ತೋದೆಲ್ಲಾ ನಂಗಿರಲಿ"

ಎಂದು, ಯಾವುದೋ ಆಸೆ ಹೊಳೆಯುವ ಕಣ್ಣಿನಿಂದ, ಅವನ

ಮುಖವನ್ನು ದಿಟ್ಟಿಸಿ, ಸುರಿವ ಮಳೆಯಲ್ಲವಳು ಹೊರಟುಹೋದಳು. ಅವಳ ಮಾತಿನ ಅರ್ಥವರಿಯದೆ, ಅವಳನ್ನೇ ನೋಡುತ್ತಿದ್ದ ಕಣ್ಣ ಮತ್ತೊಮ್ಮೆ ತಡೆಯಲು ಅವಕಾಶವನ್ನೇ ಕೊಡಲಿಲ್ಲ.

ಕತ್ತಲಾಗಿ ಅಷ್ಟು ಹೊತ್ತಾದರೂ, ದಿನ ಬರುವ ವೇಳೆ ಮೀರಿದರೂ ಅವಳು ಹಿಂದಿರುಗಲಿಲ್ಲ. ಏಕೋ ವಿಚಿತ್ರ ಭೀತಿ, ಅವಳು ಮನೆ ಬಿಟ್ಟು ಹೋದಾಗಲಿಂದ ಕಣ್ಣನ ಹೃದಯವನ್ನು ಹಿಂಡುತ್ತಿತ್ತು. ಎಷ್ಟುಹೊತ್ತಿಗೆ ಹಿಂದಿರುಗುತ್ತಾಳೋ ಎಂದು ಮೈಯೆಲ್ಲ ಕಣ್ಣಾಗಿ ಕಾಯುತ್ತಿದ್ದ ಕಣ್ಣ. ಕಾದುಕಾದು ಅವನ ಕಣ್ಣು ಸೋಲುವ ವೇಳೆಗೆ ಅವಳು ಹಿಂದಿರುಗಿದಳು— ಆ ಜಗುಲಿಯ ಮೇಲೆ ಅವನೊಂದಿಗೆ ವಾಸ ಮಾಡುತ್ತಿದ್ದ ಜೊತೆಯ ಭಿಕ್ಷುಕರಿಬ್ಬರ ಹೆಗಲ ಮೇಲೆ. ಅವಳು ಹೀಗೆ ಹಿಂದಿರುಗಬಹುದೆಂದು ಅವನು ನಿರೀಕ್ಷಿಸಿರಲಿಲ್ಲ.

ಅದನ್ನು ಕಂಡವನೇ ಕಣ್ಣ 'ಅವ್ವಾ' ಎಂದು ಚೀರಿ ಅವಳತ್ತ ಹಾರಿದ. ಆದರೆ ಅವಳು ಅವನ ಕರೆಗೆ ಉತ್ತರ ಕೊಡುವ ಸ್ಥಿತಿ ಯಲ್ಲಿರಲಿಲ್ಲ. ಅವಳ ಮೇಲೆ ಬೀಳ ಬಂದ ಕಣ್ಣನನ್ನವರು ದೂರ ತಳ್ಳಿ— "ನೆಲದ್ಮ್ಯಾಗೆ ಗೋಣಿ ತಟ್ಟು ಹಾಸು" ಎಂದು ಹೇಳಿದರು. ಅವರ ಮಾತು ಅವನ ಕಿವಿಗೇ ಬಿದ್ದಂತಿರಲಿಲ್ಲ. "ನಮ್ಮವ್ವನಿಗೆ ಏನಾಯ್ತು ?" ಎಂದು ಕೇಳಿದ.

"ಏನೂ ಇಲ್ಲ. ಮೊದಲು ತಟ್ಟು ಹಾಸು. ಆಮ್ಯಾಕೆ ಹೇಳ್ತೀನಿ"

ಏನೂ ಆಗಿಲ್ಲವೆಂದುದನ್ನು ಕೇಳಿ, ಕುದಿಯುತ್ತಿದ್ದ ಅವನ ಹೃದಯಕ್ಕೆ ಕೊಂಚ ಶಾಂತಿಯಾಯಿತು. ಅವಸರವಸರವಾಗಿ ತಟ್ಟನ್ನು ಕೊಡವಿ ಹಾಸಿದ. ಅವರಿಬ್ಬರೂ ಅವಳನ್ನು ಅದರ ಮೇಲೆ ಮಲಗಿಸಿ, ಮಾತಾಡದೆ, ಅವಳ ಮೈ ಸುತ್ತಿದ್ದ, ನೀರಿಳಿಯುವ ಚಿಂದಿಯನ್ನು ಕಿತ್ತು ಹಾಕಿ, ಚಿಂದಿಯ ತುಂಡಿನಲ್ಲಿ ಅವಳ ಮೈಯನ್ನು ಒರಸಿ, ಮತ್ತೊಂದು ತುಂಡಿಗೆ ಕಡ್ಡಿ ಕೆರೆದು ಬೆಂಕಿಯಿಟ್ಟು, ಕರಿದಾಗಿ ಹೊಗೆಯಾಡುತ್ತಿದ್ದ ಬಟ್ಟೆಯ ಬಿಸಿ ಬೂದಿಯನ್ನು ಅವಳ ಎದೆಗೆ ಹಾಕಿ ಬಲವಾಗಿ ಉಜ್ಜಿದರು.

"ಕಣ್ಣಾ, ಒಂದೆರಡು ಚಿಂದಿ ಹಚ್ಚಿ, ಆ ಮಡ್ಕೆ ತುಂಡ್ನಾಗೆ ವಸಿ ನೀರು ಮಳ್ಳಿಸು" ಎಂದರು.

ಮಾತಾಡದೆ ಕಣ್ಣ ಅವರು ಹೇಳಿದ ಹಾಗೆ ಮಾಡಿದ. ಕೈಗೆ ಸಿಕ್ಕ ಚಿಂದಿಯನ್ನೆಲ್ಲಾ ಹಚ್ಚಿ, ದೊಡ್ಡ ಉರಿ ಮಾಡಿ, ಕಳಕಳ ಎನ್ನುವಂತೆ ನೀರನ್ನು ಕುದಿಸಿದ. ಅವರಿಬ್ಬರೂ ಕುದಿವ ನೀರು ಆರಲು ಅವಕಾಶ ಕೊಡದೆ, ಚಿಂದಿಯನ್ನು ಅದರಲ್ಲಿ ಅದ್ದಿ, ಅವಳ ಮೈಯ ಅಂಗಾಂಗಕ್ಕೆಲ್ಲಾ ಶಾಖಕೊಟ್ಟರು. ಕಣ್ಣ ನಾಲಿಗೆ ಸತ್ತವನಂತೆ, ಮೂಕನಾಗಿ, ಅವರು ಮಾಡುವುದನ್ನೂ, ಮಳೆಯಲ್ಲಿ ತೊಯ್ದು ಹೆಪ್ಪುಗಟ್ಟಿದ ಅವಳ ಮುಖ ವನ್ನೂ ನೋಡುತ್ತಿದ್ದ. ಉಸಿರೆಳೆವ ಕಷ್ಟಕ್ಕೆ ಎದೆ ಬಿರಿಯುವಂತೆ, ಗೊರ್ ಎಂದು ಸದ್ದು ಮಾಡಿ ತುಯ್ಯುತ್ತಿತ್ತು. ಸಾಕಷ್ಟು ಹೊತ್ತು ಬಿಸಿನೀರಿನ ಶಾವು ಕೊಟ್ಟಮೇಲೆ. ನಿಧಾನವಾಗಿ ಒಂದು ಸಲ ರೆಪ್ಪೆಯರಳಿಸಿ ನೋಡಿ, ಮತ್ತೆ ಕಣ್ಣು ಮುಚ್ಚಿದಳು ಅವಳು. ಅದನ್ನು ನೋಡಿ ಕಣ್ಣನಿಗೆ, ಅವಳು ಬದುಕಿದಾಳೆ ಎಂದು ನಂಬಿಕೆಯಾಯಿತು. ಅವಳ ಕಣ್ಣು ಅರಳಿದುದನ್ನು ಕಂಡು, ಅವರ ಮನಸಿಗೂ ಕೊಂಚ ನೆಮ್ಮದಿಯಾಯಿತು. ಒಬ್ಬ ಹೋಗಿ ತಾನು ಹೊದೆಯುತ್ತಿದ್ದ ಕಂಬಳಿಯ ತುಂಡನ್ನು ತಂದು ಅವಳ ಮೈಗೆ ಬಿಗಿಯಾಗಿ ಸುತ್ತಿದ.

ಕೊಂಚ ಹೊತ್ತಾಯಿತು. ಮೂವರೂ ಉಸಿರು ಬಿಗಿ ಹಿಡಿದು ಕಾದಿದ್ದರು. ಮೌನವಾಗಿ, ಅಲುಗದೆ, ಸೌದೆಯ ತುಂಡಿನಂತೆ ಒರಗಿದ ಅವಳು ಒಂದು ಬಾರಿ ಹೊರಳಿ 'ಕಣ್ಣಾ' ಎಂದಳು. ಆ ಒಂದು ಮಾತು, ಅವರ ಮನಸ್ಸನ್ನು ಮುಸುಗಿದ ಭೀತಿಯು ರುದ್ರ ಮೋಡಿಯನ್ನು ಭೇದಿಸಿತು.

"ಹೋದ ಉಸಿರು ತಿರುಗಿತು" ಎಂದ ಒಬ್ಬ.

ಅದುವರೆಗೂ ಯಾವುದೋ ಭೀತಿಯಿಂದ ತಡೆದ ಕಣ್ಣನ ದುಃಖ ಉಕ್ಕಿಬಂತು. 'ಅವ್ವಾ' ಎಂದು ಅವಳನ್ನು ತಬ್ಬಿ ಅಳಲಾರಂಭಿಸಿದ.

"ಏ ನಿನ್ನ ತುತೂರಿ ಸಾಕು ಮಾಡೋ. ಬೆಳಖರೀಲಿ, ಹೊಯ್ಕೋ ವಂತೆ" ಎಂದು ಹೇಳಿ, ಅವರಿಬ್ಬರೂ, ಜಗಲಿಯ ಮತ್ತೊಂದು ಮಗ್ಗುಲಲ್ಲಿ ಒರಗಿ ನಿದ್ರಿಸಲು ಪ್ರಯತ್ನ ಮಾಡಿದರು. ಅವನ ಕೂಗಿಗೋ, ಕಣ್ಣನ ಅಳುವಿಗೊ-ಏಕೋ ಒಮ್ಮೆ ಅವಳು ಕಣ್ಣರಳಿಸಿ ನೋಡಿ, ಪಕ್ಕದಲ್ಲಿ ಕುಳಿತ

ಕಣ್ಣನ ತಲೆಯನ್ನು ತನ್ನೆದೆಯ ಮೇಲೆ ಎಳೆದುಕೊಂಡು, ಮಾತನಾಡದೆ, ಸಿಕ್ಕುಸಿಕ್ಕಾದ ಅವನ ಕೂದಲುಗಳಲ್ಲಿ ಕೈಬೆರಳುಗಳನ್ನಾಡಿಸಿದಳು. ಕಣ್ಣನ ಅಳು ನಡದೇ ಇತ್ತು. ಅವಳು ತನ್ನ ಅಂಗೈಯ್ಯಿಂದ ಅವನ ಬಾಯನ್ನು ಮುಚ್ಚಿ, 'ಅವರೆಲ್ಲಾ ಮಲ್ಗಿದಾರೆ. ಅಳ್ಬೇಡ' ಎಂದಳು, ಮಾತನಾಡ ಲಾಗದಿದ್ದರೂ ಮಾತನಾಡಲು ಯತ್ನಿಸಿ. ಅಷ್ಟಕ್ಕೇ ಅವಳ ಎದೆ ಕತ್ತರಿಸು ವಂತೆ ಉಸಿರು ಎಳೆಯಲಾರಂಭಿಸಿತು. ಸುಮ್ಮನಾಗಿಬಿಟ್ಟಳು.

ರಾತ್ರಿಯೆಲ್ಲಾ ಹಾಗೇ ಅವಳ ಎದೆಯ ಮೇಲೇ ಮಲಗಿದ್ದ ಕಣ್ಣ. ಅವನಿಗೆ ಯಾವಾಗ ನಿದ್ದೆ ಬಂತೆಂಬುದೂ ಅವನಿಗೆ ತಿಳಿಯದು. ಅವಳು ಕೆಮ್ಮುವಾಗ, ಅದರ ವೇಗಕ್ಕೆ ಅವನ ತಲೆ ಎದ್ದು ಬೀಳುತ್ತಿದ್ದುದೂ ಅವನಿಗೆ ಗೊತ್ತಾಗಲಿಲ್ಲ. ಹಾಗೇ ಹಗಲಾಯಿತು. ಹಗಲಾಗುವ ವೇಳೆಗೆ, ಅವಳ ಸ್ಥಿತಿ ಮತ್ತಷ್ಟು ಕೆಟ್ಟಿತ್ತು. ಅವಳು ಪ್ರಯಾಸದಿಂದ ಉಸಿರೆಳೆಯುವುದು ಅಷ್ಟು ದೂರಕ್ಕೆ ಕೇಳುತ್ತಿತ್ತು. ಅವನ ಜೊತೆಯವರು, ಎದ್ದಕೂಡಲೇ ಅವಳ ಮೈ ಮುಟ್ಟಿನೋಡಿ—

"ಭಾರಿ ಜರ ಬಂದೈತೆ" ಎಂದರು.

ಕಣ್ಣನಿಗೆ ಏಕೋ ಮಾತಾಡುವ ಶಕ್ತಿಯೇ ಉಡುಗಿಹೋದಂತಾ ಗಿತ್ತು. ಆ ಇಬ್ಬರ ಪೈಕಿ ಒಬ್ಬನು 'ನಾನಂಗೆ ಪ್ಯಾಟೇಲಿ ಓಗ್ತೀನಿ. ಎಲ್ಲಾದ್ರೂ ಎಲ್ಲು ಕಾಸು ಸಿಕ್ರೆ ಓಟೆಲ್ನಾಗೆ ಅಷ್ಟು ಕಾಫಿನೀರು ಒಯ್ಸಿ ಕೊಂಡು ಬರ್ತೀನಿ' ಎಂದು ಹೋದ. ಇನ್ನೊಬ್ಬ ಕಣ್ಣನಿಗೆ—

"ಕಣ್ಣಾ. ಪ್ಯಾಟೆ ಕೊನೇಲಿ ಒಂದು ಡಾಕ್ಟ್ರು ಅಂಗ್ಡಿ ಐತೆ ನೋಡು. ಓಗಿ ಮದ್ದು ಕೊಡ್ರಿ ತತ್ತಾ. ಇಂಗಾಗೈತೇ ಅಂತ ಹೇಳು. ನಾನಿಲ್ಲೇ ನೋಡ್ಕೋತಾ ಇರ್ತೀನಿ, ನಿಮ್ಮವ್ವನ್ನ" ಎಂದು ಹೇಳಿ, ತಾನು ನೀರು ಕುಡಿಯಲು ಇಟ್ಟುಕೊಂಡಿದ್ದ ಸಿಗರೇಟಿನ ಡಬ್ಬವನ್ನು ಔಷಧವನ್ನು ತರಲು ಕಣ್ಣನ ಕೈಗೆ ಕೊಟ್ಟುಕಳಿಸಿದ.

ಕಣ್ಣ ಅವನಿಂದ ಡಾಕ್ಟರ ಅಂಗಡಿಯ ಗುರುತನ್ನು ಅರಿತುಕೊಂಡು, ಚಳಿಯನ್ನೂ, ಕೆಸರನ್ನೂ ಲೆಕ್ಕಿಸದೆ ಡಾಕ್ಟರ ಅಂಗಡಿಯತ್ತ ಓಡಿದ. ಆದರೆ ಡಾಕ್ಟರ ಅಂಗಡಿಯ ಬಾಗಿಲು ಇನ್ನೂ ತೆರೆದಿರಲಿಲ್ಲ. ಅಲ್ಲೇ

ಪಕ್ಕದಲ್ಲಿದ್ದ ಬೀಡಿ ಅಂಗಡಿಯವನನ್ನು 'ಇದೇನೇನಾ ಡಾಕ್ಟ್ರು ಅಂಗಡಿ?' ಎಂದು ವಿಚಾರಿಸಿದ. 'ಹೂ' ಎಂದು ಉತ್ತರ ಬಂತು. 'ಇನ್ನೂ ಎಷ್ಟೊತ್ತಿಗೆ ಬರ್‍ತಾರೆ ಡಾಕ್ಟ್ರು?' ಎಂದು ಕೇಳಿದ. 'ಈಗ ಬರಬಹುದು. ಇನ್ನೇನು ಬಾಗಿಲು ತೆಗೆಯುವ ಹೊತ್ತು' ಎಂದು ಹೇಳಿದ ಅಂಗಡಿಯವನು. ಕಣ್ಣ ಅವರು ಬರುವುದನ್ನೇ ಕಾದು ಕಟ್ಟೆಯ ಮೇಲೆ ಕುಳಿತ. ಡಾಕ್ಟರು ಬರುವುದು ಒಂದೊಂದು ಗಳಿಗೆ ತಡವಾದ ಹಾಗೂ ಅವನಿಗೆ ಕೆಂಡವನ್ನು ನುಂಗಿದಂತಾಗುತ್ತಿತ್ತು. ಒಂದು ಕಡೆ 'ಅವ್ವ ಹೆಂಗಿದಾಳೋ' ಎಂಬ ಚಿಂತೆ ಅವನನ್ನು ಕೂಡಲೂ ಬಿಡದೆ, ಓಡಿಹೋಗುವಂತೆ ಪ್ರೇರೇಪಿಸುತ್ತಿತ್ತು. ಮತ್ತೊಂದು—ಔಷಧ ತೆಗೆದುಕೊಳ್ಳದೇಹೋದರೆ ಏನಾಗುತ್ತದೋ ಎಂಬ ಹೆದರಿಕೆ. ಮಾತನಾಡದೆ ಮಲಗಿದ ಅವಳ ನೆನಪು ಜೇರೆ ಮುಳ್ಳಿನಂತೆ ಅವನೆದೆಯನ್ನಿರಿಯುತ್ತಿತ್ತು.

ಕಡೆಗೊಮ್ಮೆ ಕಾರಿನಲ್ಲಿ ಬಂದು ಇಳಿದರು ಡಾಕ್ಟರು. ಅವರನ್ನೆಂದೂ ನೋಡಿರಲಿಲ್ಲವಾದರೂ, ಅವನಿಗೇಕೋ ಅವರೇ ಡಾಕ್ಟರಿರಬೇಕೆಂದು ತೋರಿತು. ಅಂಗಡಿಯ ಬಾಗಿಲು ತೆರೆಯುವುದನ್ನೇ ಕಾದಿದ್ದು, ಕೂಡಲೇ ಅವರ ಬಳಿ ಸಾರಿ 'ಅಯ್ಯಾ ಔಸ್ದ ಕೊಟ್ಟೇರಾ?' ಎಂದು ಕೇಳಿದ. ಇವನನ್ನು ನೋಡಿಯೂ ನೋಡದಂತಿದ್ದ ಡಾಕ್ಟರು ಅವನು ಕೂಗಿದುದನ್ನು ಕೇಳಿ, ಅವನತ್ತ ತಿರುಗಿನೋಡಿ—

"ಯಾವೋನೋ ನೀನು?" ಎಂದು ಕೇಳಿದರು.

"ಅಯ್ಯಾ ನಮ್ಮವ್ವ ಸಾಯ್ತಾ ಅವ್ವೆ, ವಸಿ ಔಸ್ತ ಕೊಡಿ ಅಪ್ಪಾ?"

ಡಾಕ್ಟರು ಅವನ ಚಿಂದಿಯ ಬಟ್ಟೆ, ಜಡೆಗಟ್ಟಿದ ಕೆದರಿದ ಕೂದಲು, ಚಳಿಗಾಳಿಗೆ ಬೂದಿಗಟ್ಟಿದ ಮೈ, ತೊಳೆಯದ ಮುಖ ಎಲ್ಲವನ್ನೂ ನೋಡಿದರು. ಅವರ ಮುಖ ಅಸಹ್ಯದಿಂದ ಮುದುಡಿತು. ತನ್ನ ಆತುರದಲ್ಲಿ ತೀರಾ ಅವರ ಹತ್ತಿರಕ್ಕೇ ಬಂದ ಕಣ್ಣನಿಗೆ—

"ಏ, ದೂರ ನಿಂತ್ಕೊಳ್ಳೋ. ದುಡ್ಡು ತಂದಿದೀಯೇನೋ?" ಎಂದು ಕೇಳಿದರು.

ದುಡ್ಡು! ತನ್ನ ಅವ್ವನ ಖಾಯಿಲೆಗೆ ಔಷಧ ದುಡ್ಡು ಕೊಡದೆ

ಸಿಗದೆಂಬುದು ಅವನಿಗೆ ತಿಳಿದಿರಲಿಲ್ಲ. ಎಂತಲೇ ಆ ಮಾತು ಕೇಳಿ ತಬ್ಬಿಬ್ಬಲಾದ. ಅವನ ಬಳಿ ದುಡ್ಡೆಲ್ಲಿಯದು? ಎಂದೋ ಒಂದು ದಿನ, ಅಪರೂಪವಾಗಿ ಅವಳು ಕೊಟ್ಟ ಮೂರುಕಾಸಿನ ಮುಖ ನೋಡಿದ್ದನೇ ವಿನಾ, ದುಡ್ಡಿನ ವಿಷಯ ಅದಕ್ಕಿಂತ ಹೆಚ್ಚು ಅವನಿಗೆ ತಿಳಿಯದು. ರೋಗದಿಂದ ನರಳುತ್ತಿರುವವರು, ಹಣವಿಟ್ಟುಕೊಳ್ಳದೆ, ಔಷಧವನ್ನು ನಿರೀಕ್ಷಿಸಲಾಗದೆಂಬ ನಾಗರೀಕತೆ ಅವನಿಗೆ ತಿಳಿಯದು. ಪೆಚ್ಚುಮೋರೆ ಹಾಕಿಕೊಂಡು ಹೇಳಿದ—

"ನನ್ತಾಪಾ ಕಾಸಿಲ್ಲ ಬುದ್ಧಿ. ನಮ್ಮವ್ವ ಸಾಯನ್ತಾ ಅವ್ಳೆ. ನಿಮ್ಮವ ಔಸ್ತ ಸಿಕ್ತದೆ ಅಂದ್ರು ಬಂದೆ. ವಸಿ ಕೊಟ್ಬುಡಿ ಅಯ್ಯಾ. ಪುಣ್ಯಾ ಬರ್ತದೆ."

"ಪುಗಸಟ್ಟೆ ಔಷಧ ಕೊಡಲಿಕ್ಕೆ ಇದೇನು ನಿಮ್ಮಪ್ಪನ ಜಾಗೀರಿ ಅಂತ ತಿಳಿಕೊಂಡೆಯಾ, ಬೇಕೂಫ, ಬೆಳಗ್ಗೆ ಎದ್ದು ಒಳ್ಳೆ ಶಕುನದ ಪಕ್ಷಿ ಹಾಗೆ ಬಂದಿದಾನೆ ಬೇವಾರ್ಸಿ. ಹೊರಡೋ ಇಲ್ಲಿಂದ."

ತನ್ನ ಮಾತು ಕೇಳಿ ಡಾಕ್ಟರು ಸಿಟ್ಟಾದುದನ್ನು ಕಂಡು, ಕಣ್ಣ ಇದ್ದದ್ದೂ ಕಂಗಾಲಾದ. ಅವನ ಹೃದಯದಲ್ಲಿ ಅವಳ ಬಗ್ಗೆ ಕೊರಗು ಗಳಿಗೆ ಗಳಿಗೆಗೆ ಚೇಳಿನ ವಿಷದಂತೆ ಏರುತ್ತಿತ್ತು. ಔಷಧವೆಂದು ನೀರು ಕೊಟ್ಟಿದ್ದರೂ ಅವನು ಸಂತೋಷದಿಂದ ಓಡಿಹೋಗುತ್ತಿದ್ದ. ಆದರೆ ಡಾಕ್ಟರ ಹೃದಯದಲ್ಲಿ ಅಷ್ಟು ದಯೆಯೂ ಇರಲಿಲ್ಲ. ಔಷಧವಿಲ್ಲದೆ ಹೋಗಲು ಕಣ್ಣನಿಗೆ ಮನಸ್ಸಿರಲಿಲ್ಲ. ದುಡ್ಡಿಲ್ಲದ ತನಗೆ ಅವರು ಔಷಧ ಕೊಡಲಾರರೆಂದು ತಿಳಿದಕೂಡಲೇ, ಕಣ್ಣ ಕುಸಿದು, ಅವರ ಕಾಲು ಹಿಡಿದು ಬೇಡಿದ—

"ಅಯ್ಯಾ, ಒಂದೊಸಿ ಔಸ್ತ ಬುಡಿ. ನೀವೇಳಿದ ಚಾಕ್ರಿ ಮಾಡ್ತೀನಿ. ನಮ್ಮವ್ವ ಸಾಯ್ತವಳೆ" ಎಂದು ಅಂಗಲಾಚಿದ.

"ದರಿದ್ರ ಸೂ.... ಮಗನೆ, ಕಾಲು ಮುಟ್ತೀಯಾ?" ಎಂದು ಡಾಕ್ಟರು, ಕಾಲು ಹಿಡಿಯಬಂದ ಕಣ್ಣನನ್ನು ಬೂಟುಹಾಕಿದ ಕಾಲಿನಿಂದಲೇ ಝಾಡಿಸಿ, ತಮ್ಮ ಶುಚಿಯನ್ನು ಉಳಿಸಿಕೊಂಡರು. ಅವನು ಮುಟ್ಟಿದುದರಿಂದ, ತಮಗೇ ಅಲ್ಲದೆ ತಮ್ಮ ಬೂಟಿಗೂ ಮೈಲಿಗೆಯಾಯಿ

ತೆಂಬಂತೆ ಹತ್ತಿರವಿದ್ದ 'ಡಸ್ಟರಿ'ನಿಂದ, ಹೊಳೆಯುತ್ತಿದ್ದ ಬೂಟನ್ನು ಒರಸಿದರು. ಬೂಟಿನಮೇಲೆ ಗಮನವಿದ್ದ ಅವರಿಗೆ, ಆ ಬೂಟು ತಗಲಿದ ಕಣ್ಣ ಏನಾದ ಎಂಬುದೂ ಕಾಣಲಿಲ್ಲ.

ಅವರು ಕಾಲು ಝಾಡಿಸಿದ ಜೋರಿಗೆ ಕಣ್ಣ ಅಷ್ಟುದೂರ ಎಗರಿಬಿದ್ದ. ಮೆಟ್ಟಲಿನ ಮೂಲೆಗಲ್ಲಿಗೆ ಅವನ ಮೂಗು ಬಡಿದು, ಮೂಗಿನ ರಕ್ತ ಹರಿದು ಅವನ ಎದೆಯನ್ನು ತೋಯಿಸಲಾರಂಭಿಸಿತು. ಏಟು ಬಿದ್ದ ಸ್ಥಳವನ್ನು ಮುಟ್ಟಿನೋಡಿ, ಕೈ ರಕ್ತವಾದುದನ್ನು ಕಂಡು, ಕಣ್ಣ ಭೀತಿ, ನೋವಿನಿಂದ ಕಿಟಾರನೆ ಕಿರುಚಿದ. ಅವನು ಹಾರಿಬಿದ್ದುದನ್ನೂ, ಚೀರಿದುದನ್ನೂ ಕೇಳಿದ, ಪಕ್ಕದ ಬೀಡಿ ಅಂಗಡಿಯವನು, ಕೆಳಗಿಳಿದು ಬಂದು, ನೆಲದಮೇಲುರುಳಿದ ಕಣ್ಣನನ್ನು ಮೇಲೆತ್ತಿ, ನೆತ್ತಿಗೆ ವೀಳೆಯವೆಲೆಗೆ ಚಿಮುಕಿಸಲು ಇಟ್ಟ ನೀರು ತಟ್ಟಿ, ರಕ್ತ ಸೋರುತ್ತಿದ್ದ ಮೂಗನ್ನು ತೊಳೆದು, 'ಏನಾಯ್ತು ಡಾಕ್ಟ್ರೆ ?' ಎಂದು ವಿಚಾರಿಸಿದ.

"ಎಲ್ಲಿ ಶನೀನ್ರಿ, ಬೆಳಗ್ಗೆ ಎದ್ದು ಷಾಪಿನ ಬಾಗಿಲು ತೆಗೆಯೋ ಹೊತ್ತಿಗೆ, ಬಿಟ್ಟಿ ಔಷಧ ಕೊಡಿ ಅಂತ ಗಂಟು ಬಿದ್ದಿದಾನೆ ಗೂಬೆ." ಡಾಕ್ಟರು ಕಿಡಿಸೂಸುತ್ತಲೇ ಹೇಳಿದರು.

"ಯಾರಿಗಂತೆ ಸಾರ್, ಔಷಧ."

"ಅವರಮ್ಮನಿಗೇನೋ ಆಗಿದೆಯಂತೆ, ಹೊತ್ತುಕೊಂಡು ಹೋಗೋ ರೋಗ, ಸಾಯಲಿ. ಈ ಅಸಿಸ್ಟಕ್ಕೆಲ್ಲಾ ನಾನು ಗುರೀನೇ ?"

"ಅಷ್ಟುಮಾತ್ರಕ್ಕೆ ಹೀಗೆ ಹೊಡೀಬೇಕಾಗಿತ್ತೆ ಡಾಕ್ಟ್ರೆ. ಸಾವಿರ ಜನದಿಂದ ದುಡ್ಡು ದುಡಿಯೋರು, ಇವನಿಗೆ ಸ್ವಲ್ಪ ಔಷಧ ಕೊಟ್ಟಿದ್ದರೆ, ನಿಮಗೇನು ನಷ್ಟವಾಗುತ್ತಿತ್ತೆ. ಏನ್ಸಾರ್, ನಿಮ್ಮಂಥ ತಿಳಿದೋರೇ ಹೀಗೆ ಮಾಡಿದರೆ ? ಪಾಪ ! ಏನಾಗಿದೋ ಏನೋ !"

"ನಿಮ್ಮ ಧರ್ಮ ಕರ್ಮ ನನಗೆ ಕಲಿಸಬೇಡ್ರಿ. ಅಷ್ಟು ದಯೆ ನಿಮಗಿದ್ದರೆ, ಔಷಧಕ್ಕಾಗೊ ದುಡ್ಡು ನೀವು ಕೊಡಿ. ನನಗೆ ಯಾರೂ ಬಿಟ್ಟಿ ಔಷಧ ಕಳಿಸೊಲ್ಲ. ದುಡ್ಡಿಲ್ದೆ ಹೋದ್ರೆ, ಅವನಮ್ಮ ಸಾಯಲಿ. ಪೀಡೆ ಬಗೆ ಹರಿಯಿತು. ನನಗೇನು ?"

ತನ್ನ ಅವ್ವ ಸಾಯಲಿ ಎಂದು ಡಾಕ್ಟರು ಹೇಳಿದುದನ್ನು ಕೇಳಿ, ಸಾಯುತ್ತಾ ಮಲಗಿದ ಅವಳ ಮುಖ ನೆನಪಿಗೆ ಬಂದು, ಕಣ್ಣನ ಭೀತಿ ಎತ್ತಲೋ ತೊಲಗಿ, ಕ್ರೋಧ ಉಕ್ಕಿ ಅರಚಿದ—

"ನಮ್ಮವ್ವ ಸಾಯಲಿ ಅಂತೀಯ. ನಿಮ್ಮವ್ವ ಸಾಯಲಿ, ನಿನ್ನ ಮನೆ ಎಕ್ಕ ಹುಟ್ಟೋಗ್ಲಿ."

ಕಣ್ಣನಮಾತು ಕೇಳಿದ ಡಾಕ್ಟರು ಕೆರಳಿ ಮುಷ್ಟಿ ಬಿಗಿದು

"ಬೋ....ಮಗನೆ, ಬಾಯಿಗೆ ಬಂದಹಾಗೆ ಮಾತಾಡ್ತೀಯಾ" ಎಂದು ಅವನತ್ತ ಹೆಜ್ಜೆ ಹಾಕಿದರು. ಕೂಡಲೇ ಅಂಗಡಿಯವನು, ಕಣ್ಣನನ್ನು ಎಳೆದು, ತನ್ನ ಬೆನ್ನಹಿಂದೆ ನಿಲ್ಲಿಸಿಕೊಂಡು, ತಾನೂ ರೇಗಿ ಹೇಳಿ—

"ಸಾಕು ಬಿಡಿ ಡಾಕ್ಟ್ರೆ, ಮಾತುಮಾತಿಗೂ ಕೈ ಮುಂದೆ ಮಾಡಬೇಡಿ. ನಿಮಗೊಬ್ಬರಿಗೇ ದೇವರು ಪೌರುಷ ಕೊಟ್ಟಿರೋದು! ಅವ್ವ ಸಾಯ್ತಾ ಇದಾಳೆ ಅಂತ ನಿಮ್ಮ ಹತ್ತಿರ ಔಷಧಕ್ಕೆ ಬಂದರೆ, ಸಾಯಲಿ ಎಂತ ಹೇಳ್ತೀರಲ್ಲಾ, ನೀವೊಬ್ಬರೇನೇ ಮನುಷ್ಯರು? ನಿಮಗೊಬ್ಬರಿಗೇನೇ ತಾಯಿಯಮೇಲೆ ಪ್ರೀತಿ ಇರೋದು? ಭಿಕಾರಿಯಾಗಿ, ನಿರ್ಗತಿಕನಾಗಿ ಹುಟ್ಟಿದವನಿಗೆ, ಹಣವಿಲ್ಲದಿರಬಹುದು, ಆದರೆ ಹಡೆದ ತಾಯಿಯ ಮೇಲೆ ಪ್ರೀತಿಯೂ ಇರಬಾರದೆ?"

ಅಂಗಡಿಯವನ ಮಾತುಕೇಳಿ, ಡಾಕ್ಟರಿಗೆ ಏಕೋ ನಾಚಿಕೆಯಾದಂತಾಯಿತು. ಆದರೂ ಅದನ್ನು ತೋರಿಸಿಕೊಳ್ಳಲಿಚ್ಛೆ ಇಲ್ಲದೆ—

"ನಿಮ್ಮಂಥ ಧರ್ಮಾತ್ಮರಿಂದಲೇ ಇಂಥ ಕಳ್ಳಕೊರಮರು ಬಲಿತಿರೋದು" ಎಂದು ಹೇಳಿ, ಮಾತು ಬೆಳಸದೆ, ಒಳಗೆ ಹೋದರು. ಅಂಗಡಿಯವನು ಕಣ್ಣನಿಗೆ 'ಇರು' ಎಂದು ಹೇಳಿ, ಪೆಟ್ಟಿಗೆಯಲ್ಲಿದ್ದ ಚಿಲ್ಲರೆ ತೆಗೆದುಕೊಂಡು ಬಂದು, ಡಾಕ್ಟರ ಅಂಗಡಿಯೊಳಗೆ ಹೋಗಿ "ಒಂದು ದಿನದ ಔಷಧಕ್ಕೆ ಎಷ್ಟಾಗುತ್ತದೋ ಹೇಳಿ .ನಾನು ಕೊಡುತ್ತೇನೆ" ಎಂದು, ಕೈಯಲ್ಲಿದ್ದ ಚಿಲ್ಲರೆಯನ್ನು ಡಾಕ್ಟರ ಮೇಜಿನ ಮೇಲಿಟ್ಟ. ಚಿಲ್ಲರೆಯ ಸದ್ದು ಡಾಕ್ಟರ ಮುಖಕ್ಕೆ ಹೊಡೆದಂತಾಯಿತು. ತಮ್ಮೊಳಗೆ, ತಾನಾಗಿಯೇ ಮೂಡಿ ಬಂದ ಅವಮಾನದ ಭಾವನೆಯನ್ನು ಮುಚ್ಚಿಕೊಳ್ಳುತ್ತಾ:

"ಯಾವನೋ ಏನೋ. ನೀವ್ಯಾಕಿಷ್ಟು ತೊಂದರೆ ತಗೋತೀರ. ಎಷ್ಟು ಜನಾನೋ ಇಂಥವರು. ನಾಯಿಕೊಡೆ ಹುಟ್ಟಿದಹಾಗೆ, ಹುಟ್ಟಿ ಸಾಯ್ತಾರೆ. ಒಂದು ಸಲ ಸ್ವಲ್ಪ ದಾಕ್ಷಿಣ್ಯ ತೋರಿಸಿದರೆ ಸರಿ. ಆಮೇಲೆ ನಮ್ಮನ್ನೇ ನುಂಗುತ್ತಾರೆ." ಎಂದರು.

"ಏನೂ ಆಗೊಲ್ಲ ಸಾರ್. ಕಷ್ಟದಲ್ಲಿರೋರಿಗೆ, ಅಯ್ಯೋಎಂದರೆ ನಮಗೇನೂ ಕೆಡುಕಾಗೊಲ್ಲ. ಒಬ್ಬರಿಗೆ ನಾವಿವತ್ತು ಅಯ್ಯೋಎಂದರೆ, ನಾಳೆ ನಮಗೆ ಏನಾದರೂ ಕಷ್ಟ ಬಂದರೆ, ಯಾರಾದರೂ ಸಹಾಯ ವಾಗ್ತಾರೆ. ಆ ಮಾತೆಲ್ಲ ಹೋಗಲಿ ಬಿಡಿ. ಅವನಿಗೆ ಅದೇನು ಔಷಧ ಬೇಕೋ ಕೊಟ್ಟುಕಳಿಸಿ. ಯಾರಿಗೆ ಯಾವ ಗಳಿಗೆಗೆ ಏನು ಬರತ್ತದೋ?" ಎಂದ ಅಂಗಡಿಯವನು.

"ಸರಿಯೇ. ಅವನಮ್ಮನಿಗೆ ಏನಾಗಿದೆಯೋ ಕೇಳಿ?" ಡಾಕ್ಟರು ಅಂಗಡಿಯವನನ್ನು ಕೇಳಿದರು.

"ಏನಾಗಿದೆ ಎಂದು ವಿಚಾರಿಸದೆಯೇ, ದುಡ್ಡಿಗೆ ತಗಾದೆ ಮಾಡಿದಿರಾ ಡಾಕ್ಟರೇ!" ಎಂದು ಅಂಗಡಿಯವನು, ಕೈಸಾಲೆಯಲ್ಲಿ ಕಾಯುತ್ತಿದ್ದ ಕಣ್ಣನನ್ನು 'ಏನಾಗಿದೆ' ಎಂದು ಕೇಳಿದ. ಅವನು ಹೇಳಿದ ವಿವರಣೆಯಿಂದ ಅಂಗಡಿಯವನಿಗಾಗಲಿ, ಡಾಕ್ಟರಿಗಾಗಲಿ, ಅವಳಿಗಾದ ರೋಗ ಎಂಥದೆಂಬುದು ತಿಳಿಯಲಿಲ್ಲ.

"ನ್ಯುಮೋನಿಯಾನೋ, ಟೈಫಾಯಿಡ್ಡೋ, ಬ್ರಾಂಕಾಯಿಟಿಸ್ಸೋ ಯಾವುದೂ ತಿಳಿಯೋ ಹಾಗಿಲ್ಲ!" ಎಂದು ಗೊಣಗಿಕೊಳ್ಳುತ್ತಾ ಡಾಕ್ಟರು, ಒಳಗೆ ಹೋಗಿ, ಔನ್ಸ್‌ಗ್ಲಾಸ್‌ನಲ್ಲಿ ಔಷಧ ತಂದು, ಕಣ್ಣನ ಕೈಯಲ್ಲಿದ್ದ ಡಬ್ಬದಲ್ಲಿ ಸುರುವಿ, ಮೇಜಿನಮೇಲಿದ್ದ ಚಿಲ್ಲರೆಯಲ್ಲಿ ತಮಗೆ ಸಲ್ಲಬೇಕಾದಷ್ಟನ್ನು, ಡ್ರಾನಲ್ಲಿ ಎಳೆದುಕೊಂಡರು.

ಡಬ್ಬಿಯಲ್ಲಿ ಔಷಧ ಬಿದ್ದಕೂಡಲೇ ಕಣ್ಣ ಬಿಲ್ಲಿನಿಂದ ಸೆಳೆದು ಬಿಟ್ಟ ಬಾಣದಂತೆ ಚಿಮ್ಮಿ ಓಡಿದ. ಅದನ್ನು ಕಂಡು ಡಾಕ್ಟರು—

"ನೋಡಿದಿರಾ ನಿಮ್ಮ ಉಪಕಾರಕ್ಕೆ ಕೃತಜ್ಞತೆ! ಕೀಳುಜನ. ನೀವಿಷ್ಟು ತೊಂದರೆ ತೆಗೆದುಕೊಂಡದ್ದಕ್ಕೆ ನಮಸ್ಕಾರ ಕೂಡ ಹೇಳಲಿಲ್ಲ.

ಅದಕ್ಕೆ ಇಂಥವರಿಗೆ ಏನೂ ಉಪಕಾರ ಮಾಡಬಾರದು ಎನ್ನುವುದು." ಎಂದರು.

"ನಿಜ, ಸಾರ್. ಅವರಿಗೆ ಈ ಒಣ ಸಾಭ್ಯಸ್ತಿಕೆಯೆಲ್ಲಾ ಗೊತ್ತಿಲ್ಲ. ಕೀಳುಜನಕ್ಕೆ ಕೃತಜ್ಞತೆ ಹೃದಯದಲ್ಲಿರುತ್ತದೆ, ನಾಲಿಗೆಯ ಮೇಲಿರುವುದಿಲ್ಲ!" ಎಂದು, ಉಳಿದ ಚಿಲ್ಲರೆಯನ್ನು ತೆಗೆದುಕೊಂಡು, ಅಂಗಡಿಗೆ ಹಿಂದಿರುಗಿದ ಅಂಗಡಿಯವನು.

ಕಣ್ಣನಿಗೆ ಅವರಾಡಿದ ಮಾತಾವುದೂ ಕಿವಿಗೆ ಬೀಳಲಿಲ್ಲ. ನಾಗಾಲೋಟದಲ್ಲಿ ಜಗಲಿಯತ್ತ ಓಡಿದ—ದಾರಿಯುಲ್ಲಿ ಬರುವ ಗಾಡಿ, ಜನ, ಕಾರುಗಳು ಯಾವುದರ ಪರಿವೆಯೂ ಇಲ್ಲದೆ. ಓಟದ ವೇಗಕ್ಕೆ ರಸ್ತೆಯ ಕೆಸರು ಮೈಯೆಲ್ಲಾ ಹಾರಿತ್ತು. ಲಕ್ಷ್ಮಣನ ಜೀವ ಉಳಿಸಲು ಸಂಜೀವನ ಪರ್ವತವನ್ನು ತಂದ ಆಂಜನೇಯನಂತೆ ಓಡಿಬಂದ ಕಣ್ಣ.

ಅವನು ಜಗಲಿಯನ್ನು ತಲುಪಿದಾಗ, ಅಲ್ಲಿ ಯಾರೂ ಇರಲಿಲ್ಲ. ಅವಳೊಬ್ಬಳು ಮಾತ್ರ ಎಳೆಯಲಾಗದ ಉಸಿರನ್ನು ಎಳೆಯುತ್ತಾ ಮಲಗಿದ್ದಳು. ಮುಖದಮೇಲೆ ತುಟಿಯ ಸದದಿನ ಜೊಲ್ಲನ್ನು ತಿನ್ನುತ್ತಾ ನೊಣಗಳು ಕೂತಿರುವುದೂ ಅವಳಿಗೆ ಎಚ್ಚರವಿರಲಿಲ್ಲ. ಅವಳ ಕಣ್ಣು ತೆರೆಯುಲಾರದೆ, ಮುಚ್ಚಲಾರದೆ ಅರೆತೆರೆದಿತ್ತು.

"ಅವ್ವಾ ಔಸ್ತ ತಂದಿದೀನಿ" ಎಂದು ಚೀರುತ್ತಾ ಅವಳ ಬಳಿ ಸೇರಿದ ಕಣ್ಣ. ಅವನ ಕೂಗು ಕೇಳಿ, ಅವಳು ತೆರೆಯಲಾರದ ಕಣ್ಣು ತೆರೆದು, ಕಣ್ಣನನ್ನು ನೋಡಿದಳು. ಕಣ್ಣ ಅವಳ ಬಳಿ ಕುಳಿತು, ತಾನೇ, ತೆರೆಯಲಾಗದಿದ್ದ ಅವಳ ಬಾಯನ್ನು ಬಿಡಿಸಿ, ಡಬ್ಬದಲ್ಲಿದ್ದ ಔಷಧವನ್ನು ಹೊಯ್ದ. ಕಾಲುಭಾಗ ಬಾಯಲ್ಲಿ ನಿಂತು, ಮುಕ್ಕಾಲು ಭಾಗ ಹೊರಗೆ ಹರಿಯಿತು. ಅವಳು ಮೆತ್ತಗೆ ಕಣ್ಣನ ಕೈಯನ್ನು ಹಿಡಿದು ತನ್ನ ಹತ್ತಿರ ಎಳೆದುಕೊಂಡು, ರಾತ್ರಿ ಬಿಚ್ಚಿ ಒಗೆದ ಅವಳ ಚಿಂದಿಯತ್ತ ಕೈತೋರಿಸಿದಳು.

"ಏನವ್ವಾ?" ಎಂದು ಕೇಳಿದ ಕಣ್ಣ. ಕಣ್ಣನ್ನು ಮತ್ತೆ ಚಿಂದಿಯತ್ತ ಹೊರಳಿಸಿದಳು. ಅದು ಬೇಕೇನೋ ಎಂದು ಕಣ್ಣ ಅದನ್ನು ಎತ್ತಿ

ಅವಳ ಕೈಗೆ ಕೊಟ್ಟ. ಅವಳ ಕೈಗಳು ಆ ಚಿಂದಿಯಲ್ಲಿ ತಡಕಾಡಿ, ಒಂದು ಕಡೆಯಿದ್ದ ಗಂಟನ್ನು ಹುಡುಕಿ ಕಣ್ಣನ ಕೈಗಿಟ್ಟಳು. ಕಣ್ಣ ಅದನ್ನು ಬಿಚ್ಚಿ ನೋಡಿದ. ಚಿಲ್ಲರೆ ಹಣ! ರಾತ್ರಿಯ ಗದ್ದಲದಲ್ಲಿ, ಅವಳ ಬಟ್ಟೆಯಲ್ಲಿ ಹಣವಿದ್ದುದು ಅವರಾರಿಗೂ ಗೊತ್ತಾಗಿರಲಿಲ್ಲ.

"ಇದ್ಯಾಕವ್ವಾ?"

ಅವಳಿಗೆ ಉತ್ತರ ಕೊಡಲಾಗಲಿಲ್ಲ. ಅವಳ ಎದೆ ಸುಮ್ಮನೆ ಸೇದುತ್ತಿತ್ತು. ಗಂಟಲಲ್ಲಿ ಏನೋ ಸಿಕ್ಕಿಕೊಂಡಂತಿತ್ತು ಅವಳಿಗೆ. ಕಷ್ಟದಿಂದ ತುಟಿಯಾಡಿಸಿದಳು. ಆದರೆ ಅದೇನೆಂಬುದು ಕಣ್ಣನಿಗೆ ಗೊತ್ತಾಗಲಿಲ್ಲ. ಇದ್ದಕ್ಕಿದ್ದ ಹಾಗೇ ಒಂದು ಸಲ ಬಿರಿಗಣ್ಣು ಬಿಟ್ಟು ಕಣ್ಣನನ್ನು ನೋಡಿದಳು. ಆ ನೋಟವನ್ನು ಕಂಡು ಕಣ್ಣನಿಗೆ ದಿಗಿಲಾಯಿತು. ಒಂದೇ ನೋಟ. ಇದ್ದಕ್ಕಿದ್ದಂತೇ ಅವಳ ಕತ್ತು ಓರೆಯಾಗಿ, ಬಾಯಲ್ಲಿ ನಿಂತ ಔಷಧ ಕಟವಾಯಿಯಿಂದ ಕೆಳಗೆ ಹರಿಯಿತು. ಗಳಿಗೆ ಗಳಿಗೆಗೆ ಅವಳ ಮೈ ತಣ್ಣಗಾಗುತ್ತಾ, ಅವನ ಕೈ ಹಿಡಿದ ಅವಳ ಮುಷ್ಟಿ ಬಿಗಿಯುತ್ತಿತ್ತು. ಹೆದರಿ, ಕಣ್ಣ ಕೈಬಿಡಿಸಿಕೊಂಡ. ಅವಳ ಕೈ ಕತ್ತರಿಸಿದ ರೆಂಬೆಯಂತೆ ಕೆಳಗೆ ಬಿತ್ತು.

"ಅವ್ವಾ" ಎಂದು ಚೀರಿದ ಕಣ್ಣ. ಅವಳು ಉತ್ತರ ಕೊಡಲಿಲ್ಲ; ಕಣ್ಣರಳಿಸಿ ನೋಡಲಿಲ್ಲ; ಅರೆಗಣ್ಣಿನ ನೋಟ ಸ್ಥಿರವಾಗಿತ್ತು. ಉಸಿರು ಸೇದುವ ಸದ್ದು ಸತ್ತಿತ್ತು. ಅಷ್ಟು ಹೊತ್ತಿಗೆ, ಎಲ್ಲೋ ಹೋಗಿದ್ದ ಮತ್ತೊಬ್ಬ ಭಿಕ್ಷುಕನು ಅಲ್ಲಿಗೆ ಬಂದು, ಚೀರಾಡುವ ಕಣ್ಣನನ್ನು ಕಂಡು, ಅವಳ ಮೈಮುಟ್ಟಿ ನೋಡಿದ. ಹೆಪ್ಪುಗಟ್ಟುವ ಹಿಮದಂತೆ, ಗಳಿಗೆಗಳಿಗೆಗೆ ಅವಳ ಮೈ ಶೀತಲವಾಗುತ್ತಿತ್ತು. ಮೂಗಿನ ಹತ್ತಿರ ಕೈಯಿಟ್ಟುನೋಡಿ—

"ಕಣ್ಣಾ, ನಿಮ್ಮವ್ವ ಒಂಟೋದಳು." ಎಂದ.

"ಆ! ನನ್ನ ಬಿಟ್ಟುಬಿಟ್ಟು, ಒಂಟೀಹೋದ್ಲೆ?" ಅದೊಂದೇ ಮಾತು ಅವನು ಕೇಳಿದ್ದು. ಭೀತಿಗೋ ದುಃಖಕ್ಕೋ ಅವನ ಮಾತು ಸತ್ತು ಹೋಯಿತು. ಹುಚ್ಚನಂತೆ ಕೂಗಲು ಪರಚಿಕೊಂಡ ಕಣ್ಣ. ಹೊರಗೆ ಮಳೆ ಧೋ ಎಂದು ಸುರಿಯುತ್ತಿತ್ತು.

ಬಿರಿಗಣ್ಣು ಬಿಟ್ಟು ಕಣ್ಣ, ನೆಲದಲ್ಲೊರಗಿದ ಅವಳ ಮುಖವನ್ನೇ ನೋಡಿದ. ಮೊದಲೇ ವಿಕಾರವಾದ ಮುಖ, ಯಾತನಾಮಯವಾದ ಸಾವಿನಲ್ಲಿ ಮತ್ತಷ್ಟು ವಿಕಾರವಾಗಿತ್ತು. ಅವಳು ಜೀವಂತಳಾಗಿದ್ದಾಗ, ಪ್ರೀತಿಯ ಆಕರ್ಷಣೆಯನ್ನು ಸೂಸುತ್ತಿದ್ದ ಕಣ್ಣುಗಳು, ಅರೆ ಮುಚ್ಚಿ, ಕಳೆ ಸತ್ತು, ರೆಪ್ಪೆಗಳ ನಡುವೆ ಸಿಕ್ಕಿಕೊಂಡ ಕಣ್ಣುಗುಡ್ಡೆ ಭಯಂಕರ ವಾಗಿತ್ತು. ಗಾಳಿಗೆ ಆಡುವ ಧೂಳು ತುಂಬಿದ ಬಿರಿಗೂದಲೂ, ಮೃತ ಮುಖದ ಘೋರತೆಯನ್ನು ಬಲಿಸಿ ಎದೆಗೆಡಿಸುತ್ತಿತ್ತು. ಕಟಬಾಯಿಯಿಂದ ಹರಿದ ಔಷಧ ಬಾಯಿಯಿಂದ ಬಂದ ನೊರೆಯೊಂದಿಗೆ ಬೆರೆತು, ನಿಧಾನ ವಾಗಿ ಒಣಗುತ್ತಿತ್ತು. ಗಳಿಗೆ ಕಳೆದಂತೆ, ಕಪ್ಪಾದ ಅವಳ ಮುಖದ ಬಣ್ಣ, ಅಸಹ್ಯ ಹಳದಿಯ ಛಾಯೆಯನ್ನು ತಳೆಯುತ್ತಿತ್ತು. ಮುಖದ ತುಂಬಾ ನೊಣಗಳು. ಹಿಂದೆಂದೂ ಸಾವನ್ನು ಕಾಣದ ಕಣ್ಣ, ಅದನ್ನು ಕಂಡು, ಅನಿರೀಕ್ಷಿತ ಭೂತದರ್ಶನವಾದವನಂತೆ, ಕಾಣದೆ ಹಾವು ಹಿಡಿ ದವನಂತೆ, ಭಯಗ್ರಸ್ತನಾಗಿ ಕಂಗಾಲಾಗಿ ಹೋದ. ಹೊರಗೆ ಸುರಿವ ಮಳೆಯ ಸದ್ದಿನಲ್ಲೂ ಎಂಥದೋ ಒಂದು ಬಗೆಯ ಕರಾಳ ಮೌನ ಕಟ್ಟೆ ಯನ್ನು ಆವರಿಸಿ, ಕಣ್ಣನ ಕಣ್ಣಲ್ಲಿ ಕತ್ತಲೆಯನ್ನು ತುಂಬಿತು. ಎಂಥದೋ ಭಯಂಕರ ಪಶು ಅವನನ್ನು ನುಂಗಬಂದಂತೆ ತೋರಿತು. ಅವನ ಮೈ ಗಡಗಡ ನಡುಗಿ, ಕಿಟಾರನೆ ಕಿರುಚಿ, ಮೈ ಕೊಡವಿ, ಕುರುಡಾದವನಂತೆ, ಅಲ್ಲಿಂದ ಓಡಿದ—ಅವಳನ್ನು ನುಂಗಿದ ಸಾವು, ತನ್ನನ್ನು ನುಂಗಲೆಳಸಿ, ಬೆನ್ನಟ್ಟಿದವನಂತೆ. ಮಳೆಯಲ್ಲೇ ಎತ್ತಲೋ ದಿಕ್ಕುತೋಚದೇ ಓಡಿದ ಕಣ್ಣ. ಅಂದಿಗೆ ಆ ಜಗಲಿಯೊಂದಿಗೆ ಅವನ ಸಂಬಂಧ ಕತ್ತರಿಸಿಹೋಯಿತು.

## ೭

ತಾಯಿ ಎಂದು ಪ್ರೀತಿಸಿದ ವಸ್ತುವನ್ನು ಕಳೆದುಕೊಂಡು, ಜಗಲಿಯ ಮನೆಯಿಂದ ಹುಚ್ಚನಂತೆ ಹೊರಬಿದ್ದ ಕಣ್ಣ ಮನ ಬಂದತ್ತ ಅಲೆಯ ಲಾರಂಭಿಸಿದ. ಯಾವುದೋ ದುಃಖ ಆರದ ಕಿಚ್ಚಿನಂತೆ ಅವನನ್ನು ಸುಡು ತ್ತಿತ್ತು. ಆಗಾಗ ಆ ಡಾಕ್ಟರು ತಾನು ಕೇಳಿದ ಕೂಡಲೇ ಔಷಧ ಕೊಟ್ಟೆ

ದ್ದರೆ, ತಮ್ಮವ್ವ ಬದುಕುತ್ತಿದ್ದಳೇನೋ, ತಾನು ಬರಿಗೈಯಲ್ಲಿ ಹೋದುದ ರಿಂದ, ಔಷಧ ಸಿಗುವುದು ತಡವಾಗಿ, ಸತ್ತಳೇನೋ ಎಂದು ಅವನ ಹೃದಯ ಹಲಬುತ್ತಿತ್ತು. ಅಂಥ ಹೊತ್ತಿನಲ್ಲಿ ದುಡ್ಡಿಲ್ಲದೆ ಔಷಧ ಕೊಡಲು ನಿರಾಕರಿಸಿದ ಡಾಕ್ಟರ ಮೇಲೆ, ಅಂದಿನ ಗದ್ದಲಕ್ಕೆ ಕಾರಣವಾದ ಹಣದ ಮೇಲೇ ಅವನಿಗೆ ಸಿಟ್ಟು ಕೆರಳುತ್ತಿತ್ತು. ಅವನ ಸಿಟ್ಟಿಗೆ ಶಕ್ತಿ ಇದ್ದಿದ್ದರೆ, ಆ ಹೊತ್ತಿನಲ್ಲಿ ಡಾಕ್ಟರು, ಇವನ ಧನದಾಹ, ಹಣ—ಎಲ್ಲವೂ ಸುಟ್ಟುರಿದು ಬೂದಿಯಾಗುತ್ತಿದ್ದವು. ಆದರೆ ಅವನಿಗಾಗಲಿ, ಅವನ ಕ್ರೋಧಕ್ಕಾಗಲಿ—ಯಾವುದಕ್ಕೂ ಶಕ್ತಿ ಇರಲಿಲ್ಲ, ಬೆಲೆಯಿರಲಿಲ್ಲ. ಎದೆ ಸುಡುವ ದುಃಖದ ಬೆಂಕಿಯೊಂದಿಗೆ, ಕ್ರೋಧದ ಕೆಂಡವನ್ನೂ ಹೊತ್ತು ಹುಚ್ಚನಂತೆ ಬೆಂಗಳೂರಿನಲ್ಲೆಲ್ಲಾ ಸುತ್ತಲಾರಂಭಿಸಿದ. ಅನ್ನ-ನಿದ್ದೆ ಯಾವುದೂ ಅವನಿಗೆ ಬೇಕಿರಲಿಲ್ಲ. ಜನಭರಿತವಾಗಿ ಗದ್ದಲ ತುಂಬಿದ ನಗರವೂ ಅವನ ಪಾಲಿಗೆ ನಿರ್ಜನಾರಣ್ಯದಂತಿತ್ತು. ಈ ಕಾಡಿನಲ್ಲಿ ಎಲ್ಲಿದ್ದರೆ ತಾನೇ ಅವನನ್ನು ಕೇಳುವವರು ಯಾರು? ಅವನ ನೆನಪಾದರೂ ಯಾರಿಗೆ?

ಯಾರಿಗೂ ಅವನು ಬೇಕಾಗಿರಲಿಲ್ಲ, ಅವನಿಗೂ ಯಾರೂ ಬೇಕಾಗಿ ರಲಿಲ್ಲ. ನೆಲದಿಂದ ಎದ್ದ ಸುಂಟರಗಾಳಿಯಲ್ಲಿ ತೊಟ್ಟು ಕಳಚಿದ ಎಲೆ ಹಾರುವಂತೆ ಸುತ್ತುತ್ತಿದ್ದ ಅವನು. ಕೆಲವೇ ಘಂಟೆಗಳ ಅವಧಿಯಲ್ಲಿ, ತುಂಬಿದ ಅವನ ಬಾಳು ಬರಿದಾಗಿಹೋಯಿತು. ಹಗಲೆಲ್ಲಾ ಅನಿರೀಕ್ಷಿತ ಆಘಾತದಿಂದ ಹೃದಯದಲ್ಲಿ ಹೆಪ್ಪುಗಟ್ಟಿದ ದುಃಖ, ಆ ರಾತ್ರಿ, ಇದ್ದಕ್ಕಿ ದ್ದಂತೆಯೇ ಕರಗಿಹೋಗಿ, ಅವನ ಒಳಹೊರಗೆ ಬೆರೆದ, ಶೂನ್ಯದ ಅರಿವು ಅವನಿಗುಂಟಾಯಿತು. ರಾತ್ರಿ ಹತ್ತು-ಹನ್ನೊಂದುಗಂಟೆಯುವರೆಗೆ ಗುರಿ ಯಿಲ್ಲದೆ ಅಲೆದ ಕಣ್ಣ, ಬಳಲಿ ಯಾವುದೋ ಒಂದು ಗಲ್ಲಿಯಲ್ಲಿ, ಯಾರದೋ ಮನೆಯ ಕಟ್ಟೆಯ ಮೇಲೆ ಉರುಳಿಕೊಂಡ. ಅವನ ಮೈ ಮುಚ್ಚಲು ಹಾಕಿಕೊಂಡ ಚಿಂದಿಯ ಹೊರತು, ಬೇರೇನೂ ಇರಲಿಲ್ಲ. ಹಾಗೆಯೇ ಮುದುರಿಕೊಂಡ. ಬಳಲಿದ ಮೈ ನಿದ್ರೆಗೆ ವಶವಾಯಿತು. ಒಂದು ಹೊತ್ತಿನಲ್ಲಿ ಚಳಿ ತುಂಬಾ ಹೆಚ್ಚಾಗಿ, ಅಭ್ಯಾಸಬಲದಿಂದ ಕಣ್ಣ, ಚಳಿಯನ್ನು ನಿವಾರಿಸಲು, ದಿನವೂ ಮಾಡುತ್ತಿದ್ದಂತೆ, ತನ್ನ ಅವ್ವನನ್ನು

ತಬ್ಬಿಕೊಳ್ಳಲು ತೋಳು ಚಾಚಿದ. ಆದರೆ ತೋಳು, ಶೂನ್ಯವನ್ನಪ್ಪಿ ಕಲ್ಲಿನ ಮೇಲೆ ಬಿದ್ದಿತು. ತಟಕ್ಕನೆ ಎಚ್ಚರವಾಯಿತು. ಹೆದರಿ, ಕಣ್ಣರಳಿಸಿ ನೋಡಿದ. ತನ್ನ ಬಿಸಿಯುಪ್ಪುಗೆಯಿಂದ, ಅವನ ಮೈಗೆ ನಿದ್ರೆಯ ಮಾದಕತೆಯನ್ನೊದಗಿಸುವ ಅವ್ವ–ಇಲ್ಲ! ಹೊರಗೆ ಹರಡಿದ ಕತ್ತಲು ಅವನ ಹೃದಯವನ್ನೇ ತುಂಬಿ ಬಂತು. ಅದುವರೆಗೂ ಸುಪ್ತವಾಗಿದ್ದ ಅಳು, ಇದ್ದಕ್ಕಿದ್ದಂತೆಯೇ ಜಾಗ್ರತವಾಗಿ, ಮೈಯ ನರನರವನ್ನೂ ಹರಿದು ಬಂತು. ಅವಳನ್ನು ನೆನೆಸಿ "ಅವ್ವಾ, ಅವ್ವಾ" ಎಂದು ಅಳಲಾರಂಭಿಸಿದ. ಆ ದುಃಖದ ತೀವ್ರತೆಯನ್ನು ತಡೆಯಲಾರದೆ, ಮೆಟ್ಟಿಲಿಗೆ ಹಣೆ ಚಚ್ಚಿದ. ಎದೆಯ ಮೇಲೆ ತಾನೆ ಹೊಡೆದುಕೊಂಡ. ಏನೆಂದರೂ ಸಮಾಧಾನವಾಗುವುದಿಲ್ಲವೆಂದಿತು, ಉಕ್ಕಿಬಂದ ದುಃಖ. ಸುತ್ತಲ ಜಗತ್ತನ್ನು ಮರೆಸಿ, ಕಣ್ಣನನ್ನು ತನ್ನ ಆಳಾಗಿ ಮಾಡಿಕೊಂಡಿತ್ತು ಅದು. ನಿಶ್ಶಬ್ದವಾಗಿ, ಬರಿದಾಗಿದ್ದ ಇರುಳ ಬಟ್ಟಲನ್ನು ತುಂಬಿತು, ಅವನ ದುಃಖದ ಹೃದಯ ವಿದಾರಕವಾದ ಧ್ವನಿ.

ಅವನು ಎಷ್ಟುಹೊತ್ತು ಹಾಗೆ ಅಳುತ್ತಿದ್ದನೋ ಅವನಿಗೆ ತಿಳಿಯದು. ಇದ್ದಕ್ಕಿದ್ದಂತೆಯೇ ಅವನು ಮಲಗಿದ ಮನೆಯ ಬಾಗಿಲು ತೆರೆದು, ಹೆಣ್ಣು ಕಂಠ "ಯಾರದು ?" ಎಂದು ಕೇಳಿತು. ಆ ಮಾತು ಕೇಳಿದ ಗಳಿಗೆಯ ಆಶ್ಚರ್ಯದಲ್ಲಿ ಕಣ್ಣನ ಅಳು ಮರೆತುಹೋಯಿತು. ಮಾತನಾಡಲು ತೋಚದೆ, ಧ್ವನಿ ಬಂದ ಕಡೆ ನೋಡಿದ. ಮತ್ತೊಮ್ಮೆ ಕೇಳಿತು ಆ ಕಂಠ—

"ಯಾರೋ ಅದು ?"

ಧ್ವನಿ ಹತ್ತಿರ ಬಂದಿತು. ಬಾಗಿಲಿಗೆ ಅಡ್ಡವಾಗಿದ್ದ ಆಕಾರ ದಾರಿ ಬಿಟ್ಟುದುದರಿಂದ, ಮನೆಯೊಳಗಿನ ಬೆಳಕು ಕಣ್ಣನ ಮೇಲೆ ಬಿತ್ತು. ಕಣ್ಣನಿಗೂ ಅದು ಯಾರೆಂಬುದು ಕಂಡಿತು. ಅರೆಬೆಳಕಿನಲ್ಲಿ ಕಣ್ಣೀರು ಧಾರೆಯಾಗಿ ಹರಿಯುತ್ತಿರುವ ಕಣ್ಣನ ಮುಖ ಆಕೆಗೂ ಕಾಣಿಸಿತು. ಅವನ ಚಿಕ್ಕ ವಯಸ್ಸನ್ನು ಕಂಡು, ಆಕೆಯ ಹೃದಯದಲ್ಲಿ ಕರುಣೆ ಮೂಡಿರಬೇಕು. ಮತ್ತೆ ಮಾತನಾಡಿದಾಗ, ಆಕೆಯ ಧ್ವನಿ ಮೊದಲಿಗಿಂತಲೂ ಮೃದುವಾಗಿತ್ತು.

ಆಕೆಯ ಮಾತಿನ ಮೃದುತೆ ಕಣ್ಣನ ಉರಿಯುತ್ತಿದ್ದ ಹೃದಯಕ್ಕೆ ಏಕೋ ಶಾಂತಿಯನ್ನು ನೀಡಿತು. ಅಪ್ರಯತ್ನವಾಗಿ ಅವನ ಹೃದಯವೇ ಉತ್ತರ ಕೊಟ್ಟಿತು—

"ಅವ್ವಾ, .... ನಮ್ಮವ್ವ .... ಓಗ್ಬಿಟ್ಲು."

ಅಷ್ಟು ಹೇಳಿ ಮತ್ತೆ ಬಿಕ್ಕಲಾರಂಭಿಸಿದ ಕಣ್ಣ. ಬಳ್ಳಿಯಲ್ಲರಳಿದ ಹೂವಿನಂತೆ ಸಹಜವಾಗಿ ಬಂದ ಮಾತು, ಕೇಳಿದಾಕೆಯ ಹೃದಯದಲ್ಲಿ ಬೇರಾವ ಭಾವನೆಗೂ ಎಡೆಯಿರದಂತೆ, ನಂಬಿಕೆಯನ್ನು ಮೂಡಿಸಿತು. ಏನು ಮಾಡಬೇಕೆಂದು, ಏನು ಹೇಳಬೇಕೆಂದು ತೋಚದೆ ಆಕೆ, ಕಡೆದ ವಿಗ್ರಹದಂತೆ ನಿಂತುಬಿಟ್ಟಳು. ಚಲಿಸದೆ ನಿಂತ ಆಕೆ, ಕಣ್ಣನ ಕಣ್ಣಿಗೆ ದೇವತೆಯಂತೆ ಕಂಡಳು. ಆಕೆ ಮಾತಾಡದಿದ್ದರೂ, ತನ್ನ ಹೃದಯದಲ್ಲಿ ಮೂಡಿದ ಅನುಕಂಪವನ್ನು ಯಾವ ರೀತಿಯಲ್ಲೂ ವ್ಯಕ್ತಪಡಿಸದಿದ್ದರೂ, ತನ್ನ ವಿಚಾರದಲ್ಲಾಕೆಯ ಎದೆಯಲ್ಲಿ ಸಹಾನುಭೂತಿ ಮೂಡಿದೆಯೆಂಬುದು ಕಣ್ಣನ ಹೃದಯಕ್ಕೆ ಹೇಗೋ ಅರಿವಾಯಿತು. ಮಾತಾಡದೆ ಆಕೆಯನ್ನೇ ನೋಡಿದ.

ಅವನು ತನ್ನ ಜೀವನದಲ್ಲಿ ಅಂಥ ಸುಂದರಿಯನ್ನು ಎಂದೂ ಕಂಡುದಿಲ್ಲ. ಅರಬೆಳಕಿನಲ್ಲಿ ಮೃದುವಾಗಿ ಹೊಳೆವ ಕಪ್ಪು ಬಣ್ಣದ ರೇಶಿಮೆಯ ಸೀರೆ, ಮೈಗೆ ಒತ್ತುವಂತೆ ಬಿಗಿಯಾಗಿ ತೊಟ್ಟ ಕುಬುಸ, ಜಾರಿದ ಸೆರಗಿನಿಂದ, ಎದೆಯಮೇಲೆ ಇಳಿದು ಕಾಣುವ ಮುತ್ತಿನ ಸರ, ಮೂಗಿನಲ್ಲಿ ಥಳಥಳಿಸುವ ಮೂಗುಬಟ್ಟು, ಹಣೆಯ ಮೇಲೆ ಎಲ್ಲ ಆಭರಣಕ್ಕಿಂತ ಮಿಗಿಲಾಗಿ ಹೊಳೆವ ಅಗಲವಾದ ಕುಂಕುಮ—ರೆಪ್ಪೆ ಹೊಯ್ಯದೆ ಕಣ್ಣ ಆಕೆಯನ್ನು ನೋಡಿದ. ಅವನ ಅವ್ವ, ಯಾವಾಗಲಾದರೊಮ್ಮೆ ಹೇಳುತ್ತಿದ್ದ ಕಥೆಗಳಲ್ಲಿ ಕೇಳಿದ, ಮನುಷ್ಯರ ದುಃಖ ನಿವಾರಣೆಗಾಗಿ, ಭೂಮಿಗೆ ಇಳಿದು ಬರುವ ಸ್ವರ್ಗದ ದೇವತೆಯಂತೇ ಕಂಡಳಾಕೆ. ಯಾವುದೋ ಮೋಡಿಗೊಳಗಾದವರಂತೆ, ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತಾ ಇದ್ದರು.

"ಲೇ .... ಸಾವಿತ್ರೀ .... ಒಳಗವನು ಬಡುಕೊತಾ ಇದಾನೆ.

ಏನ್ಮಾಡ್ತಿದೀಯೆ? ಮಗ್ಗಲಾಗಿದ್ದೋನ ಬಿಟ್ಟು ಏನು ನೋಡ್ತಾ ನಿಂತ್ಕೊಂಡೆ?" ಪಕ್ಕದಾಗಿದ್ದೋಳು ಎದ್ದೋದ್ರೆ ಸುಮ್ನಿರಾಕೆ ಅವನೇನು ಕೈಹಿಡಿದ ಗಂಡ್ನಾ? ಒಳೀಕೆ ಬಾ" ಎಂದು ಕೂಗಿದ ಕರ್ಕಶ ಸ್ವರ, ಆ ಮೋಡಿಯ ವಾತಾವರಣವನ್ನು ಸಿಡಿದೊಡೆದುಬಿಟ್ಟಿತು. ಆ ಧ್ವನಿ ಕೇಳಿದ ಆಕೆ ಅಪ್ರಯತ್ನವಾಗಿ ನಡುಗಿದಳು. ಏಕೆಂದು ತಿಳಿಯದೆ ಕಣ್ಣನಿಗೂ ಹಾಗೇ ಆಯಿತು.

"ಬಂದೆ ಅವ್ವಾ ...." ಎಂದು ಕೂಗಿ ಹೇಳಿ, ಆಕೆ ಕಣ್ಣನಿಗೆ "ಊಟ ಮಾಡ್ತೀಯಾ?" ಎಂದು ಕೇಳಿದಳು, ಅವಸರವಸರವಾಗಿ. ಕಣ್ಣ ಸಮ್ಮತಿ ಸೂಚಿಸಿ ತಲೆಹಾಕಿದ. ಆಕೆ ಮಿಂಚಿನಂತೆ ಒಳಗೆ ಹೋದಳು. ಕಣ್ಣ ಆಕೆ ಒಳಸರಿದ, ಅರೆತೆರೆದ, ಬೆಳಕು ಹೊರಹೊಮ್ಮುತ್ತಿರುವ ಬಾಗಿಲನ್ನೆ ನೋಡುತ್ತಿದ್ದ.

ಸ್ವಲ್ಪ ಹೊತ್ತಿನಲ್ಲೇ ಆಕೆ ಒಂದು ಎಲೆಯಲ್ಲಿ ಅಷ್ಟು ಕಲಸಿದ ಅನ್ನವನ್ನು ತಂದುಕೊಟ್ಟಳು. ರಸಕವಳ ಕಂಡ ಹಸಿದ ನಾಯಂತೆ ಕಣ್ಣ ಅನ್ನಕ್ಕೆ ಕೈಹಾಕಿದ. ಅವನು ತಿನ್ನುವುದರಲ್ಲಿ ಯಾವ ಆಕರ್ಷಣೆ ಯಿತ್ತೋ, ಒಂದು ಗಳಿಗೆ ಆಕೆ ಅವನನ್ನು ಮಾತನಾಡಿಸದೆ, ಅವನು ತಿನ್ನುವುದನ್ನೇ ನೋಡುತ್ತಾ ನಿಂತಿದ್ದಳು.

"ಲೇ — ಸಾಯಿತ್ರೀೀೀ ...."

ಮತ್ತೊಮ್ಮೆ, ಆ ಮನೆಯೊಳಗೆ ಎಲ್ಲಿಂದಲೋ ಕರ್ಕಶವಾದ ಕೂಗು ಕೇಳಿಬಂತು. ಅದರ ಜೊತೆಗೆ ಇನ್ನೂ ಯಾರೋ ಗಂಡಸು 'ಎಲ್ಲಿ ಹೋದ್ಲು ಅವಳು?' ಎಂದು ಕೇಳುತ್ತಿರುವುದೂ, ಮೊದಲು ಕೂಗಿದ ಹೆಣ್ಣಿನ ಧ್ವನಿ 'ಈಗ ಬರ್ತಾಳೆ.' ಎಂದು ಹೇಳಿದುದೂ ಕೇಳಿಸಿತು. ಅದನ್ನು ಕೇಳಿದ ಈಕೆಯ ಮೃದುವಾದ ಮುಖ ಬಿರುಸಾಯಿತು. ನಿಂತಲ್ಲಿಂದಲೇ ಕ್ರೂರವಾದ ಧ್ವನಿಯಲ್ಲಿ ಕೂಗಿದಳು—

"ಯಾಕಂಗೆ ಬಡ್ಕೋತಾನೆ. ಸುಮ್ನಿರೂಂತ ಹೇಳು." ಎಂದು ಉತ್ತರ ಕೊಟ್ಟು, 'ಇಲ್ಲೇ ಮಲಗ್ತೀಯೇನು?' ಎಂದು ಕಣ್ಣನನ್ನು ಕೇಳಿದಳು. ಕಣ್ಣ 'ಹೂ' ಎಂದು ತಲೆಹಾಕಿದ.

"ನಿನ್ನ ಹತ್ರ ಬಟ್ಟೆ ಇದ್ಯಾ?"

"ಇಲ್ಲ"

"ಹೊದ್ಕೊಳ್ಳೋಕೆ ಏನಾರ ಕೊಡ್ತೀನಿ ತಾಳು" ಎಂದಾಕೆ, ಮತ್ತೊಮ್ಮೆ ಒಳಗೆ ಹೋಗಿ, ಒಂದು ಹರಕು ಕಂಬಳಿಯ ತುಂಡು, ಒಂದು ಗೋಣಿಪಟ್ಟೆಯನ್ನು ತಂದು ಕಣ್ಣನಿಗೆ ಕೊಟ್ಟು "ಅಳ್ಬ್ಯಾಡ. ಸುಮ್ನೆ ಮಲಕ್ಕೊ. ಹೊಟ್ಟೆ ತುಂಬಿತಾ?" ಎಂದು ಕೇಳಿದಳು. 'ಆಗ್ಲಿ' ಎಂದು ಕಣ್ಣ ತಲೆಹಾಕಿದ.

ಅಷ್ಟರಲ್ಲಿ ಅರೆಮುಚ್ಚಿದ ಬಾಗಿಲು, ಪಟಾರನೆ ತೆರೆದು, ಒಳಗಿನ ಬೆಳಕು ಪೂರಾ ಅವಳ ಮೇಲೆ ಬಿತ್ತು. ಒಳಗಿನಿಂದ ಒಬ್ಬನು, ತೂರಾಡುತ್ತಾ ಹೊರಗೆ ಬಂದು—

"ಯಾವೊನ್ತಾವ ಸಸ್ನ ಮಾಡ್ತಿದೀಯೆ? ದುಡ್ಡು ತಕ್ಕೊಳ್ಳಿಲ್ವಾ. ಬಾ" ಎಂದು, ಅವಳ ಹೆಗಲ ಮೇಲೆ ಕೈಹಾಕಿ, ಎಳೆದ.

"ಏ. ಬರ್ತೀನಿ, ತಡಿ" ಎಂದಳು ಅವಳು.

"ಅದ್ಯಾಕೆ ತಡೀಬೇಕು? ರೂಪಾಯಿ ಎಣಿಸಿ ತಗೊಳ್ಳಿಲ್ವಾ?" ಎಂದು ತೊದತೊದಲುತ್ತಾ ಮಾತಾಡಿ, ಒಳಗಿನಿಂದ ಬಂದವನು, ಅದು ಬೀದಿ ಎಂಬುದನ್ನೂ ಲೆಕ್ಕಿಸದೆ, ಅವಳ ಎದೆಯನ್ನು ತಬ್ಬಿಕೊಂಡು, ಅವಳ ಕೆನ್ನೆಯನ್ನು ಕಚ್ಚಿ, ಅವಳನ್ನು ಒಳಗೆ ಎಳೆದ. ನೋವಿಗೆ ಅವಳು 'ಹಾ' ಎಂದು ಕೂಗಿ, ಬಿಡಿಸಿಕೊಳ್ಳಲು ಕೊಸರಿದಳು. ಆದರೆ ಅವನು ಅವಳನ್ನು ಬಲವಾಗಿ ಹಿಡಿದಿದ್ದ.

"ತಪ್ಪಿಸ್ಕೊಂಡೋಗ್ತೀಯಾ? ಅದ್ಯಂಗೋಗ್ತೀಯೊ ನೋಡ್ತೀನೀ" ಎಂದು, ಅವಳುಟ್ಟ ಸೀರೆಯನ್ನು ಕಿತ್ತು, 'ಈಗ್ಹೋಗು ನೋಡೋಣ' ಎಂದು ಗಹಗಹಿಸಿ ನಗುತ್ತಾ, ಅವಳು ಮಾತಾಡಲೂ ಅವಕಾಶ ಕೊಡದೆ, ಒಳಗೆ ಎಳೆದುಕೊಂಡುಹೋಗಿ, ಬಾಗಿಲು ಹಾಕಿದ. ಬೀದಿಯಲ್ಲಿ ಬಿದ್ದ ಬೆಳಕಿನ ಕೋಲು ಮರೆಯಾಗಿ ಮತ್ತೆ ಕತ್ತಲಾವರಿಸಿತು. ಒಳಗೆ ಅವನು ವಿಕಟವಾಗಿ ನಗುವುದು, ಅವಳೊಂದು ಬಾರಿ 'ಅಯ್ಯೋ' ಎಂದು ಚೀರಿದುದು ಕೇಳಿಸಿತು.

ಗರಬಡಿದವನಂತೆ, ತಿನ್ನುವುದನ್ನು ನಿಲ್ಲಿಸಿ, ಅದನ್ನು ನೋಡುತ್ತಿದ್ದ ಕಣ್ಣ. ಅವನಿಗಾವುದೂ ಅರ್ಥವಾಗಲಿಲ್ಲ. ಮುಚ್ಚಿದ ಬಾಗಿಲನ್ನೇ ರೆಪ್ಪೆ ಹೊಯ್ಯದೆ ನೋಡುತ್ತಿದ್ದ. ಹೀಗೇಕೆ? ಹೀಗೇಕಾಯಿತು? ಅವಳನ್ನು ಅವನು ಹಾಗೇಕೆ ಎಳೆದುಕೊಂಡುಹೋದ? ಒಳಗಡೆ ಅವಳೇಕೆ ಚೀರಿದಳು ?—ನೂರಾರು ಪ್ರಶ್ನೆ ಅವನ ಮಿದುಳನ್ನು ಬಳಲಿಸುತ್ತಿದ್ದವು. ಕಡಿತ ತಡೆಯಲಾರದ ನಾಯಂತೆ ತಲೆಕೊಡವಿದ.

"ಅವ್ವಾ, ನನ್ಕೊಲ್ತಾನೇ ಇವ್ನು" ಎಂದು ಆಕೆ ಒಳಗಿನಿಂದ ಕೂಗಿದುದು, ಅವನ ವಿಕಟವಾದ ನಗುವಿನೊಂದಿಗೆ ಬೆರೆತುಬಂದು, ಕತ್ತಲಲ್ಲಿ ಕರಗಿಹೋಯಿತು. ಅಪ್ರಯತ್ನವಾಗಿ ಅವನ ಮೈ ನಡುಗಿತು. ನಗುವವನ ಮೇಲೆ ಸಿಟ್ಟು ಉಕ್ಕಿಬಂತು. ಅಂಗೈಯಮೇಲೆ ಮುಷ್ಟಿಯನ್ನು ಮರ್ದಿಸಿದ. ಆದರವನ ಸಮಸ್ಯೆ ಬಗೆಹರಿಯಲಿಲ್ಲ.

ಅವಳು ಕೊಟ್ಟ ಗೋಣಿಪಟ್ಟಿಯನ್ನು ಹಾಸಿ, ಕಂಬಳಿಯನ್ನು ಹೊದ್ದು ಮಲಗಿದ. ಚಳಿ ಕೊರೆಯುತ್ತಿದ್ದರೂ ನಿದ್ರೆ ಬರಲಿಲ್ಲ.

ಆ ಮನೆಯೊಳಗೆ ಯಾವುದೋ ನರಕವಿದೆ ಎನಿಸಿತು ಅವನಿಗೆ. ಏಕೋ ಅಲ್ಲಿರಲು ಹೆದರಿಕೆಯಾಯಿತು. ಗೋಣಿಪಟ್ಟಿ, ಕಂಬಳಿಯ ತುಂಡನ್ನು ತೆಗೆದುಕೊಂಡು ಅಲ್ಲಿಂದ ಹೊರಟುಹೋದ.

## ೮

ಕಣ್ಣ ನೆಲೆತಪ್ಪಿ ಅಲೆಯಲಾರಂಭಿಸಿದ. ಎರಡು ದಿನದಿಂದ ಅವನು ಊಟ ಮಾಡಿರಲಿಲ್ಲ. ಹಸಿವು ಹೊಟ್ಟೆಯೊಳಗೆ ತೋಳದಂತೆ ಸೀಳುತ್ತಿತ್ತು. ಹಿಂದಿನ ರಾತ್ರಿಯಿಂದ, ಹಸಿವಿನ ಧಾಳಿಯಲ್ಲಿ ಉಳಿದುದೆಲ್ಲವೂ ಮರೆಯಾಗಿಹೋಗಿತ್ತು. ಉಟ್ಟ ಚಿಂದಿಯನ್ನು ಜಗಿದು ತಿನ್ನಬೇಕೆನಿಸುತ್ತಿತ್ತು. ಆಕೆ ಕೊಟ್ಟ ಗೋಣಿತಟ್ಟು ಕಂಬಳಿಯ ತುಂಡನ್ನು ಸುತ್ತಿ, ಬಗಲೊಳಗೆ ಇಟ್ಟುಕೊಂಡು ಅನ್ನದ ಬೇಟೆಗೆ ಹೊರಟಿದ್ದ. ಅದಕ್ಕಾಗಿ ಅವನ ಅವ್ವ ಕಲಿಸಿದ ವಿದ್ಯವನ್ನು ನಾಲ್ಕಾರು ಮನೆಯ ಮುಂದೆ ಪ್ರಯೋಗಿಸಿದ. ಫಲ—ಬಿಸಿಲಿನಲ್ಲಿ ಗಂಟಲು ಒಣಗಿದ್ದೇ ಆಗಲಿ, ಎಲ್ಲೂ ಒಂದು ತುತ್ತೂ

ಅನ್ನ ಹುಟ್ಟಲಿಲ್ಲ. ಮೇಲೆಮೇಲೆ, ತನ್ನ ಪ್ರಯತ್ನ ವಿಫಲವಾದಹಾಗೆ, ತನ್ನ ಅವ್ವ, ತನಗೆ, ಅವಳಿಗೆ ಅನ್ನ ತರಲು ಎಷ್ಟು ಸುತ್ತಬೇಕಾಗು ತ್ತಿತ್ತೆಂಬುದು ಅವನಿಗೆ ಅರಿವಾಯಿತು. ಅವಳೊಬ್ಬಳಿದ್ದಿದ್ದರೆ ತಾನಿಷ್ಟು ಕಷ್ಟ ಪಡಬೇಕಾಗಿತ್ತೆ? ಕೈಬಿಟ್ಟು, ಕಣ್ಣುಮರೆಯಾಗಿಹೋದವಳ ನೆನಪು ಅವನ ಹಸಿವು ದಾಹದೊಂದಿಗೆ, ಕೊರಗಿನ ಉರಿಯನ್ನೂ ಬೆರೆಸಿತು. ತನ್ನ ಪಾಲಿಗೆ ಎಲ್ಲಿಯೂ ಅನ್ನವೇ ಇಲ್ಲವೇ, ತನಗೆ ಅನ್ನವಿಡುವವರು ಯಾರೂ ಇಲ್ಲವೇ ಇಲ್ಲಿ ಎಂದು ಹಂಬಲಿಸಿದ. ಅವೆಲ್ಲಾ ಹೃದಯದಲ್ಲಿ, ಮನಸ್ಸಿನಲ್ಲಿ. ಕಾಲು ಮಾತ್ರ ಕಂಡ ಕಂಡ ಮನೆಯ ಮುಂದೆ ನಿಲ್ಲು ತ್ತಿತ್ತು; ಬಾಯಿ ಬೇಡುತ್ತಿತ್ತು; ನೀಡುವ ಕೈ — ಅದೇ ಕಣ್ಣುಮರೆ.

ಕೆಲವರು ಇಲ್ಲ ಎಂದರು; 'ಹನ್ನೊಂದು ಗಂಟೆಗೇ ಮಾಡಿಟ್ಟು ಕೊಂಡು ಕಾದಿರಲು, ನಾವೇನು ನಿನ್ನ ಪರಿಚಾರಕರೇ' ಎಂದು ಗದರಿಸಿ ದರು ಕೆಲವರು; 'ಕಡಿದರೆ ನಾಕಾಳಾಗುವ ಹಾಗಿದ್ದಿ. ನಾಚಿಕೆ ಇಲ್ಲದೆ ತಿರುಪೆ ಬೇಡ್ತೀಯಾ?' ಎಂದು ಕೆಲವರು ಹಂಗಿಸಿದರು; 'ಮುಂದ್ಹೋ ಗ್ತೀಯೋ, ನಾಲ್ಕೇಟು ಬೇಕೋ' ಎಂದು ಬೆದರಿಸಿದರು ಕೆಲವರು; ಮತ್ತೆ ಕೆಲವರು 'ತಿರುಪೆ ನೆಪದಲ್ಲಿ ಕಳ್ಳತನಕ್ಕೆ ಬಂದಿದೀಯಾ, ಭಡವಾ. ಹೋಗ್ತೀಯೋ ಪೋಲೀಸನನ್ನ ಕರೆಯೋಣವೋ' ಎಂದು ಹೆದರಿಸಿದರು; ಹಲವರ ಮನೆ ಬಾಗಿಲಂತೂ, ಎಷ್ಟು ಕೂಗಿದರೂ ಕದಲಲೇ ಇಲ್ಲ— ಒಳಗಿದ್ದವರ ಹೃದಯದಂತೆ.

ಬೇಡಿ, ಬೇಡಿ ನಿರಾಶನಾದ ಅವನಿಗೆ ಇನ್ನು ಬೇಡಬಾರದು ಎನಿಸಿತು. ಹಸಿದ ಹೊಟ್ಟೆ, ಸುಡುವ ಬಿಸಿಲು ಎರಡೂ ಬೆರೆತು, ತಲೆ ಸುತ್ತಲಾರಂಭಿಸಿತು ಕಣ್ಣನಿಗೆ. ಆದರೂ ಹಸಿವು ಅಟ್ಟಿದ ಪಶುವಿನಂತೆ ಮುಂದೆ ನಡೆದ. ಕಣ್ಣಮುಂದೆ ದೊಡ್ಡ ಮನೆಯೊಂದು ಕಾಣಿಸಿತು. ಬೀದಿಗೂ, ಮನೆ ಬಾಗಿಲಿಗೂ ನಡುವೆ ದೊಡ್ಡ ತೋಟ. ಹೊರಬಾಗಿಲಿನ ಬಳಿಯೇ ನಿಂತು ನೋಡಿದ ಕಣ್ಣ. ಮನೆಯ ಕೈಸಾಲೆಯಲ್ಲಿ ಆಳು ದೊಡ್ಡ ನಾಯೊಂದಕ್ಕೆ ಅಗಲವಾದ ತಟ್ಟೆಯಲ್ಲಿ ತುಂಬ ಮಾಂಸಬೆರೆತ ಅನ್ನ ವನ್ನಿಟ್ಟು ತಿನ್ನಿಸುತ್ತಿದ್ದ. ಅದನ್ನು ಕಂಡು ಅವನ ಹಸಿದ ಹೊಟ್ಟೆಯಲ್ಲಿ

ಆಸೆಯ ಕುಡಿ ಮೊಳೆಯಿತು. ನಾಯಿಗೆ ತಟ್ಟೆಯ ತುಂಬ ಅನ್ನವಿಡುವ ಉದಾರಿಗಳು, ನನಗೆ ಒಂದು ಹಿಡಿ ಅನ್ನ ಕೊಡಲಾರರೇ? ಕೊಡುವ ರೆಂದೇ ತೋರಿತು ಹಸಿದ ಅವನಿಗೆ. ಆ ಆಸೆಯ ಕುಡಿಯ ಆಧಾರದ ಮೇಲೇ—

"ಅವ್ವಾ ಒಂದ್ಮುತ್ತು ಕವ್ಳಾ ನೀಡ್ರಿ ತಾಯೀ" ಎಂದು ಕೂಗಿದ.

ಅವನ ಕೂಗನ್ನು ಕೇಳಿ, ನಾಯಿ ತಿನ್ನುತ್ತಿದ್ದ ಅನ್ನವನ್ನು ಬಿಟ್ಟು, ಅವನ ಕಡೆ ನೋಡಿ, ಕತ್ತಿನ ಸರಪಳಿಯನ್ನು ಎಳೆದು ಸದ್ದು ಮಾಡಿ ಗರ್ರೆಂದು ಬೊಗಳಿತು. ಆಳು ಅವನತ್ತ ನೋಡಿ—

"ಮುಂದಕ್ಕೆ ಹೋಗೋ" ಎಂದ.

"ಎಲ್ಡು ದಿನದಿಂದ ಊಟಾ ಇಲ್ಲ. ಅಯ್ಯ, ಒಂದ್ಮುತ್ತು ನೀಡ್ರಿ" ಕಣ್ಣು ಅಂಗಲಾಚಿದ.

"ಹೋಗೋ ಅಂದ್ರೆ, ಮತ್ತ್ಯಾತಾಡ್ತೀಯ?" ಆಳು ಗದರಿಸಿದ.

"ಸಿಟ್ಟಾಗಬ್ಯಾಡ್ರಿ, ಸತ್ಯವಾಗೂ ಎಲ್ಡು ದಿನದಿಂದ ಉಂಡಿಲ್ಲ. ನಿಮ್ಮ ಧರ್ಮ ಒಂದ್ಮುತ್ತು ಅನ್ನ ಕೊಡಿ ಅಯ್ಯ"

"ಎರಡು ದಿನದಿಂದ ಊಟ ಮಾಡ್ದಿದ್ರೆ ಯಾರಿಗ್ಗೇಳ್ತಿ. ರಾಜ ಕುಮಾರ — ಹಸಿದು ಬರ್‍ತಾನೇಂತ ಮಾಡಿಟ್ಕೊಂಡು ಕಾದಿರ್‍ಬೇಕಾಗಿತ್ತೇನೊ— ಹೋಗೋ"

ಆ ವೇಳೆಗೆ ಅವರಿಬ್ಬರ ವಾಗ್ವಾದವನ್ನೂ ಒಳಗಿನಿಂದಲೇ ಕೇಳಿದ ಮನೆಯಾತ ಹೊರಬಂದು ನೋಡಿದ. ಬರುತ್ತಲೇ ಸಿಟ್ಟಾಗಿ ಬಂದಿದ್ದ ಅವನು—

"ಅವನ ಕೈಲೇನು ಚರ್ಚೆ ಮಾಡ್ತಿದೀಯೋ. ನಾಲ್ಕೇಟುಕೊಟ್ಟು ಓಡ್ಸೋ. ಬೆಳಗಿನಿಂದ ಇವರ ಹಾವಳೀನೇ ಆಗಿಹೋಯ್ತು. ಊಟ ಮಾಡಿ ಒಂದು ಗಳಿಗೆ ಮಲಗಲಿಕ್ಕೂ ಬಿಡೊಲ್ಲ ಹಾಳು ಸೂ....ಮಕ್ಕಳು."

"ಓಗ್ತಾನೆ ಬಿಡಿ ಬುದ್ಧಿ." ಆಳು ತನ್ನ ಯಜಮಾನನಿಗೆ ಹೇಳಿದ.

"ಮಾತ್ನಲ್ಲಿ ಹೇಳಿದರೆ ಅವನೆಲ್ಲಿ ಹೋಗ್ತಾನೆ. ಒಂದ್ಸಲ ಸರಿಯಾಗಿ ಬುದ್ಧಿ ಕಲಿಸಿದರೇ, ಇವರಿಗೆ ಅರ್ಥವಾಗೋದು. ನೀನು ಶುದ್ಧ

ನಾಲಾಯಕ್ಕು. ಯಾರಾದ್ರೂ ಮಾತಿಗೆ ಬಂದರೆ ಸರಿ ಅಂತ, ಅದನ್ನೇ ನೆಪ ಮಾಡ್ಕೊಂಡು ಪಾತಿಗೆ ನಿಲ್ತೀಯ. ಕತ್ತೆ" ಯಜಮಾನ ಆಳಿನ ಮೇಲೇ ರೇಗಿದ.

"ಏ ಓಗ್ತಿಯೋ ಇಲ್ವೋ?" ಆಳು ಕಣ್ಣನನ್ನು ಗಟ್ಟಿಯಾಗಿ ಗದರಿಸಿದ.

"ಅಯ್ಯಾ, ನಾಯಿಗಿಕ್ಕೋ ಅನ್ನಾಗೇ ಒಂದ್ತುತ್ತು ನನ್ಗೂ ಇಕ್ಬುಡಿ, ನನ್ನೊಡ್ಯಾ, ಒಂಟೋಯ್ತೀನಿ"

"ಸೊಕ್ಕು ಇವನಿಗೆ. ಆ ಮಾಂಸದ ಅನ್ನವೇ ಬೇಕೇನೋ ಇವನಿಗೆ ಕೊಬ್ಬು ಬೆಳಸೋಕ್ಕೆ! ಕೊಡ್ತೀನಿ ತಾಳು" ಎಂದವನೇ ಯಜಮಾನ ನಾಯಿಯ ಸರಪಳಿಯನ್ನು ಬಿಚ್ಚಿ 'ಛೂ, ರೋಸಿ' ಎಂದ.

ಕಣ್ಣನನ್ನು ನೋಡಿದ ಕೂಡಲೇ ಗರ್ರೆಂದು ಗದರಿಸಿದ ನಾಯಿ, ಯಜಮಾನ ಬೆನ್ನು ಚಪ್ಪರಿಸಿ, 'ಛೂ' ಎಂದ ಕೂಡಲೇ ಕಣ್ಣನತ್ತ ಲಂಘಿಸಿತು. ಅದು ಹಾರಿದ ರೀತಿ, ಅದರ ವಿಕಾರವಾದ ಆಕಾರ, ಬೆದರಿಸುವ ಸದ್ದು, ಜೋಲುವ ನಾಲಿಗೆಯನ್ನು ಕಂಡು ಬೆದರಿದ ಕಣ್ಣ, ಜೀವಭೀತಿಯಲ್ಲಿ, ಅನ್ನದ ಆಸೆಯನ್ನೂ ಮರೆತು ಓಡತೊಡಗಿದ. ನಾಯಿ ಅವನನ್ನು ಅಟ್ಟಿಸಿಕೊಂಡು ಓಡಿತು. ಹಸಿದು ಬಳಲಿದ ಕಣ್ಣ ಹತ್ತು ಹೆಜ್ಜೆ ಹೋಗುವುದರೊಳಗಾಗಿ, ಚೆನ್ನಾಗಿ ತಿಂದು ಕೊಬ್ಬಿದ ನಾಯಿ, ಅವನಿಗಿಂತ ವೇಗವಾಗಿ ಬಂದು, ಅಡ್ಡಗಟ್ಟಿ, ಹಿಂಗಾಲುಗಳ ಮೇಲೆ ಅವನುದ್ದಕ್ಕೂ ನಿಂತು, ಅವನ ಮುಖದತ್ತ ಮೂತಿ ಚಾಚಿತು. ಮೃತ್ಯುಮುಖದಂತೆ ಕಂಡಿತು ಕಣ್ಣನಿಗೆ ಅದರ ಬಾಯಿ. ಹೆದರಿ, ಹಿಂದಕ್ಕೆ ತಿರುಗಿ ಓಡಲೆತ್ನಿಸಿದ. ರೇಗಿದ ನಾಯಿ ಅವನ ಕಾಲ ಮೀನುಖಂಡಕ್ಕೆ ಬಾಯಿ ಹಾಕಿತು. ಕಿಟಾರನೆ ಕಿರುಚಿ, ನೆಲಕ್ಕುರುಳಿದ ಕಣ್ಣ. ಆ ವೇಳೆಗೆ ನಾಯಿಯ ಹಿಂದೇ ಓಡಿಬಂದ ಆಳು 'ಛಾ .... ಛಾ.... ರೋಸಿ' ಎಂದು, ಅದನ್ನು ಹಿಡಿದು ಎಳೆದುಕೊಂಡ. ನೆಲದಿಂದ ಎದ್ದವನೇ ಕಣ್ಣ, ಬೆಕ್ಕು ಬೆನ್ನಟ್ಟಿದ ಇಲಿಯಂತೆ ಅಲ್ಲಿಂದ ಓಡಿದ. ನಾಯಿ ಹಿಡಿದ ಕಡೆ ಅವನ ಕಾಲಿನಿಂದ ರಕ್ತ ಸೋರುತ್ತಿತ್ತು. ಬಿದ್ದ ಜೋರಿಗೆ ಮೈ ಪೆಟ್ಟಾಗಿತ್ತು. ಅವನದಣಿದ ಎದೆ

ತೇಕುತ್ತಿತ್ತು. ಆದರೆ ಆದಾವುದರ ಪರಿವೆಯೂ ಇಲ್ಲದವನಂತೆ ಓಡಿದ ಕಣ್ಣ, ಜೀವಭೀತಿಯಿಂದ ಪಾರಾದೆನೆಂದು ಮನಸ್ಸಿಗೆ ನಂಬಿಕೆಯಾಗುವವರೆಗೂ ಓಡುವುದನ್ನು ನಿಲ್ಲಿಸಲಿಲ್ಲ. ಅವನ ಮಿದುಳು ಅವನನ್ನು ಒಂದೇ ಸಮನೆ ಕೇಳುತ್ತಿತ್ತು; "ನಾನವರಿಗೆ ಏನು ಅನ್ಯಾಯ ಮಾಡಿದೆ? ಅನ್ನವನ್ನು ಬೇಡಿದುದೇ ತಪ್ಪೇ? ಅಷ್ಟಕ್ಕೇ ನನ್ನ ಮೇಲೆ ದೆವ್ವದಂಥ ನಾಯನ್ನು ಛೂ ಬಿಡಬೇಕೇ?" ತನ್ನ ಮೇಲೆ ನಾಯಿಯನ್ನು ಅಟ್ಟಿದವರ ಬಗೆ ಕಣ್ಣನ ಹೃದಯದಲ್ಲಿ ಕ್ರೋಧ ಹೊಗೆಯಾಡುತ್ತಿತ್ತು. ಹಸಿವಿನ ಜೊತೆಗೆ ನೋವನ್ನೂ ಕಟ್ಟಿಕೊಂಡು, ಕುಂಟುತ್ತಾ ನಡೆದ.

ಇನ್ನಾರನ್ನೂ ಬೇಡಬಾರದೆನಿಸಿತು ಅವನಿಗೆ? ಹಾಗಾದರೆ ಹಸಿದ ಹೊಟ್ಟೆಗೇನು ಮಾಡಬೇಕು? ಬೇಡದೆಯೆ ತನಗೆ ನೀಡುವವರು ಯಾರು? ಹಿಂದೊಂದು ದಿನ ರಾತ್ರಿ. ಅಯಾಚಿತವಾಗಿ ತನಗೆ ಅನ್ನ ನೀಡಿದವಳ ನೆನಪು ಬಂದು ಅಲ್ಲಿಗೆ ಹೋಗಬೇಕೆನಿಸಿತು. ಆದರೆ ಮರುಗಳಿಗೆಯೇ ಮುಂದೆ ನಡೆದುದು ನೆನಪಾಗಿ, ಅಲ್ಲಿಗೆ ಹೋಗಲೂ ಹೆದರಿದ. ಅವಳಿರುವಷ್ಟು ದಿನ ಒಂದು ದಿನವಾದರೂ ಕಣ್ಣ ಅನ್ನ ಹೇಗೆ ಸಿಗುವುದೆಂದು ಯೋಚಿಸಿರಲಿಲ್ಲ. ಅವಳು ಸತ್ತ ಬಳಿಕ ಅವನನ್ನು ಕೇಳುವವರೇ ಇದ್ದಂತಿರಲಿಲ್ಲ. ಅವಳು ಸತ್ತದ್ದಕ್ಕೇ ತನಗಿಷ್ಟು ಗೋಳಾಯಿತು ಎನಿಸಿತು. ಸತ್ತವಳ ಮೇಲೂ ಅವನಿಗೆ ಸಿಟ್ಟುಬಂತು. "ಹಾಳ್ಮುಂಡೆ, ನಾನಿಂಗ್ಸಾಯ್ಲೀ ಅಂತಾನೇ ಸತ್ಲು" ಎಂದು ಶಪಿಸಿದ. ಆದರೆ ಮರುಗಳಿಗೆಯೇ ತಾನಾಡಿದುದು ತಪ್ಪು ಎನಿಸಿ, ಅವಳನ್ನು ಕಳೆದುಕೊಂಡ ದುಃಖ ಮರುಕಳಿಸಿತು. ಮುಂದೇನು ಮಾಡಬೇಕೆಂದು ತೋಚಲಿಲ್ಲ. ಸುತ್ತಿದುದು, ಓಡಿದುದು, ಹೆದರಿಕೆ ಎಲ್ಲವೂ ಬೆರೆತು ಹಸಿವಿಗಿಂತ ದಣಿವು ಹೆಚ್ಚಾಗಿತ್ತು. ದಣಿವಾರಿಸಿಕೊಳ್ಳಲೆಂದು, ರಸ್ತೆಯ ಪಕ್ಕದಲ್ಲಿದ್ದ ಮರದ ನೆರಳಲ್ಲಿ ಕುಳಿತುಕೊಂಡ. ಪ್ರಜ್ಞೆ ತಪ್ಪಿದಂತೆ ನಿದ್ರೆ ಬಂದಿತು. ನಿದ್ರೆಯೊಂದಕ್ಕೆ ಮಾತ್ರ ಅವನ ಮೇಲೆ ದ್ವೇಷವಿದ್ದಂತಿರಲಿಲ್ಲ. ಎಲ್ಲವನ್ನೂ ಮರೆತು ನಿದ್ರೆ ಮಾಡಿದ.

ಅವನಿಗೆ ನಿದ್ರೆ ತಿಳಿದು ಎಚ್ಚರವಾದಾಗ, ಬೀದಿಯ ಸಾಲು ವಿದ್ಯುದ್ದೀಪಗಳು, ಇರುಳಿಗೆ ಕಣ್ಣರಳಿಸಿ ಹೊಳೆಯುತ್ತಿದ್ದವು. ಕಣ್ಣುಜ್ಜಿಕೊಂಡು,

ಎದ್ದು ಕುಳಿತು ಕಣ್ಣ, ರಸ್ತೆಯಲ್ಲಿ ಓಡುವ ಕಾರುಗಳು, ಗಾಡಿಗಳು, ಕೆಂಪು ಬಣ್ಣದ ಮೋಟಾರುಗಳು, ಗಡಿಬಿಡಿಯಿಂದ ಓಡಾಡುವ ಜನಗಳನ್ನು ನೋಡುತ್ತಾ, ನಗರದ ನಾನಾ ಸದ್ದುಗಳನ್ನಾಲಿಸುತ್ತಾ ಕುಳಿತ. ನಿದ್ರೆಯಲ್ಲಿ ಕಣ್ಣುಮರೆಯಾದ ಹಸಿವು, ಮತ್ತೆ ಮರಳಿ ಅವನನ್ನು ಕಾಡತೊಡಗಿತು. ಹಸಿವಿನ ಜೊತೆಗೆ ಬಾಯಾರಿಕೆಯೂ ಬಲಿತಿತ್ತು. ಅನ್ನ ಸಿಗುವ ಆಸೆಯನ್ನು ತೊರೆದ ಕಣ್ಣ, ಎಲ್ಲಾದರೂ ಕುಡಿಯಲು ಎಷ್ಟು ನೀರಾದರೂ ಸಿಗುವುದೇನೋ ಎಂದು ಹುಡುಕಿಕೊಂಡು ಹೊರಟ

ನಾಯಿ ಕಡಿದ ಕಾಲು ಎಳೆಯಲಾರದೆ, ಕುಂಟುತ್ತಿತ್ತು. ಬಳಲಿದ ಮೈ, ನಿದ್ರೆಯಲ್ಲೂ ಹೊಸತನವನ್ನು ಗಳಿಸಿಕೊಳ್ಳದೆ, ಒತ್ತಾಯಕ್ಕೆ ಚಲಿಸುವ ಹಳೆಯ ಯಂತ್ರದಂತೆ ನಡೆಯುತ್ತಿತ್ತು. ಕಣ್ಣುಗಳೆರಡೂ ಭಗ ಭಗ ಉರಿಯುತ್ತಿದ್ದವು. ಸುತ್ತ ವೇಗವಾಗಿ ಸಾಗುವ ಜೀವನದ ಅರಿವಿಲ್ಲದವನಂತೆ ಕಣ್ಣ ಮುಂದೆ ನಡೆದ. ಬಣ್ಣಬಣ್ಣದ ಹೊಳಪಿನ ಬೆಳಕನ್ನು ಕರಿಯ ತಾರು ರಸ್ತೆಯಲ್ಲಿ ಬಿಂಬಿಸುವ ವಿದ್ಯುದ್ದೀಪಾಕ್ಷರಗಳು, ಬಿಡುವಿಲ್ಲದೆ, ಒಂದೊಂದು ಕಡೆ, ಒಂದೊಂದು ಮಟ್ಟದಲ್ಲಿ ಹಾಡುವ ರೇಡಿಯೋ, ಗ್ರಾಮಾಫೋನುಗಳು, ಹಸಿದ ಹೊಟ್ಟೆಯಲ್ಲಿಯ ಉರಿಗೆ ಗಾಳಿ ಬೀಸುವ ಮಿಠಾಯಿ ಅಂಗಡಿಗಳು, ಸಾವಿರ ಬಗೆಯ ಸಾಮಾನುಗಳನ್ನು ಕಣ್ಣನ್ನು ಸೆಳೆಯುವುದಕ್ಕಾಗಿಯೇ ಜೋಡಿಸಿದ ಅಂಗಡಿಗಳು, ವಿದ್ಯುದ್ದೀಪದ ಬೆಳಕಿನಲ್ಲಿ ಕೋರೈಸುವ ಬೆಳ್ಳಿ ಬಂಗಾರದ ಸಾಮಾನುಗಳ ಅಂಗಡಿಗಳು, ಚಿತ್ತರದ ವಿಗ್ರಹಗಳಿಗೆ, ಮೋಹಕವಾದ ಉಡುಪುಗಳನ್ನು ಳವಡಿಸಿ, ಒಳಗೆ ಕರೆಯುವ ಬಟ್ಟೆ ಅಂಗಡಿಗಳು— ಭೂಮಿಯ ಸೌಭಾಗ್ಯ ಸರ್ವಸ್ವವೂ ಬೀದಿಯಲ್ಲಿ ಸಾಲು ಸೂರೆಯಾಗಿತ್ತು.

ಅಂಥ ಬೀದಿಗಳಲ್ಲಿ ಅಲೆದು ಅಭ್ಯಾಸವಿರದ ಕಣ್ಣನ ಕಣ್ಣಿಗೆ ಅದೆಲ್ಲವೂ ಯಾವುದೋ ಅದ್ಭುತ ಕನಸಿನಂತಿತ್ತು. ಅಲ್ಲಿ ಎಲ್ಲವೂ ಇತ್ತು—ಆದರೆ ಅಲ್ಲೆಲ್ಲಿಯೂ ಕಣ್ಣನಪಾಲಿಗೆ, ಒಂದು ತುತ್ತು ಅನ್ನ ಕಾಣಲಿಲ್ಲ. ಎಲ್ಲಾದರೂ ಸಿಗುವುದೇನೋ ಎಂದು ಕೇಳಲು ಅವನಿಗೆ ಧೈರ್ಯವೂ ಇರಲಿಲ್ಲ. ಸಂಪತ್ಸೌಭಾಗ್ಯದ ನಂದನದಲ್ಲಿ ಹೊಟ್ಟೆಗಿಲ್ಲದ

ಭಿಕಾರಿಯೊಬ್ಬನು ಹಿಡಿತುತ್ತನ್ನು ಅರಸಿ ಅಲೆಯುತ್ತಿರಬಹುದೆಂದು ಊಹಿಸುವ ಹೃದಯ ಅಲ್ಲಾರಿಗೂ ಇರಲಿಲ್ಲ. ನಡೆಯಲಾಗದೆ ತೂಗಿ ತೂಗಿ ನಡೆಯುವ ಅವನು, ಕಾಲಿಗೆ ಅಡ್ಡವಾದರೆ 'ಕತ್ತೆ, ಕಣ್ಣು ಬಿಟ್ಟುಕೊಂಡು ನಡಿಯೋಕೆ ಗೊತ್ತಿಲ್ವೆ' ಎಂದು ಗದರಿಸುತ್ತಿದ್ದರೇ ವಿನಾ, 'ಹೀಗೇಕೆ, ನಡೆಯುತ್ತಿದೀಯ? ಕುಂಟುತ್ತಿದೀಯಲ್ಲಾ—ಏನಾಗಿದೆ?' ಎಂದು ಅವನನ್ನು ಕೇಳುವ ಸಹನೆ ಯಾರಿಗೂ ಇರಲಿಲ್ಲ. ಯಾರಿಗಾದರೂ ಹೇಳಿದರೆ, ತನ್ನ ದುಃಖ ತೀರಬಹುದೆಂಬ ನಂಬಿಕೆಯೂ, ಕಣ್ಣನಲ್ಲಿ ಸತ್ತುಹೋಗಿತ್ತು. ಎಲ್ಲಾದರೂ ಅಷ್ಟು ನೀರು ಸಿಕ್ಕಿದರೆ—

ಭೋಗೋಪಭೋಗದ ಸಹಸ್ರ ಸಾಮಗ್ರಿಗಳಿಂದ ತುಂಬಿದ ನೆಲ ಕಣ್ಣನ ಪಾಲಿಗೆ ಮರಳುಗಾಡಿನಂತಿತ್ತು. ಹಸಿದ ಕಣ್ಣುಗಳಿಂದ ಯಾಂತ್ರಿಕ ವಾಗಿ, ಕಾಣುವುದನ್ನೆಲ್ಲಾ ನೋಡುತ್ತಾ ನಡೆದ. ನಡೆದಷ್ಟೂ ಬಾಯಾರಿಕೆ ಬಲವಾಗುತ್ತಿತ್ತು. ತಲೆ ಸುತ್ತುತ್ತಿತ್ತು. ಬೀದಿಯಲ್ಲಿ ಓಡುವ ಗಾಡಿಗಳ ಚಕ್ರಗಳು, ಅವನ ಕಣ್ಣಲ್ಲಿ, ಹೊಟ್ಟೆಯಲ್ಲಿ ಸುತ್ತಲಾರಂಭಿಸಿದವು. ಒಂದು ಗಳಿಗೆ—ಹೊಳಿಹೊಳೆದು ಕಾಣುತ್ತಿದ್ದ ಎಲ್ಲದರ ಮೇಲೂ ಏನೋ ಮಂಜಿನ ತೆರೆ ಎಳೆದಂತಾಯಿತು. ಹೊಟ್ಟೆಯೊಳಗಿನ ದೆವ್ವ, ಕಣ್ಣ ಬೆಳಕಿನ ಕತ್ತನ್ನೇ ಹಿಸುಕಿಬಿಟ್ಟಿತೇನೋ ಎಂದು ಗಾಬರಿಯಾಯಿತು ಕಣ್ಣನಿಗೆ. ಹಾಗೇ ನಿಂತು, ಬೀದಿಯ ಬದಿಯ ದೀಪದ ಕಂಭಕ್ಕೆ ಮೈಯಾನಿಸಿ, ಕಣ್ಣುಜ್ಜಿಕೊಂಡ. ಕಣ್ಣು ಸ್ವಲ್ಪ ಕಾಣುವಂತಾಯಿತು. ಆದರೆ ಕಿವಿಯಲ್ಲೇನೋ ಮೊರೆಯುತ್ತಿತ್ತು. ಬೀದಿಯ ಹಲವು ಸದ್ದುಗಳು ಅವನೊಳಗೆ ಏನನ್ನೋ ಕಲಕುತ್ತಿದ್ದಂತಿತ್ತು. ನಿಲ್ಲಲು ಹೆದರಿಕೆಯಾ ಯಿತು.

ಮುಂದೆ ಹೆಜ್ಜೆ ಹಾಕಿದ. ಮತ್ತೆ ಹತ್ತು ಹೆಜ್ಜೆ ಹಾಕುವುದರೊಳ ಗಾಗಿ, ಮತ್ತೆ ಕಣ್ಣು ಮಂಜಾಯಿತು. ಕಿವಿಯೊಳಗಿನ ಮೊರೆತ, ಹೊಟ್ಟೆ ಯೊಳಗಿನ ಕಲೆತ ಹೆಚ್ಚಾಗಿ, ಮೈ ತೂಗಿ ಬಿಟ್ಟ ರೆಂಬೆಯಂತೆ ಝೋಂಪಿ ಸಿತು. ನೆಮ್ಮಿ, ನಿಲ್ಲಲು ಏನಾದರೂ ಆಶ್ರಯ ಸಿಗುವುದೇನೋ ಎಂದು ಕೈಯಾಡಿಸಿದ. ಯಾವುದೂ ಒರಗಲು ಸಿಗಲಿಲ್ಲ. ಏಕೋ ಇದ್ದಕ್ಕಿದ್ದ ಹಾಗೇ

ಬೀದಿಯ ಇಬ್ಬದಿಯ ಮನೆಗಳು ವಾಲಿ, ಅವನ ಮೇಲೇ ಕವಿಯಲು ಜೋಲಿದಂತೆ ತೋರಿತು. ಹೆದರಿಕೆ ಉಕ್ಕಿ ಬಂತು. ಕಿವಿಯೊಳಗೆ ಸದ್ದು ಭೋರ್ಗರೆಯಿತು. ಅದು ಅವನಿಗೆ ಹಿಂದೆಂದೂ ಆಗದ ಅನುಭವ. ಯಾವುದೋ ಬುಸುಗುಟ್ಟುವ ಹೊಳೆ ತನ್ನನ್ನು ನುಂಗುತ್ತಿದೆ ಎನಿಸಿತು ಕಣ್ಣನಿಗೆ. ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟ. ಸಾಧ್ಯವಾಗ ಲಿಲ್ಲ. ರಸ್ತೆಯೇ ನೀರಾಗಿ ಅವನ ಕಾಲನ್ನು ನುಂಗುತ್ತಿತ್ತು. ಬೀದಿಯ ದೀಪಗಳು, ಅಂಗಡಿ ಮುಂಗಟ್ಟುಗಳು, ಜನ, ಸದ್ದು ಎಲ್ಲವೂ ಸೇರಿಸ ಸುಳಿಯಂತೆ, ತಿರುತಿರುಗಿ, ಅವನ ಮೇಲೆ ಕವಿದವು. ಕಣ್ಣೊಳಗೆ ಕತ್ತಲು ವರಿಸಿತು. ಹೊಟ್ಟೆಗಿಲ್ಲದಿದ್ದರೆ ಸಾಯುತ್ತಾರೆಂದು ಕಣ್ಣನಿಗೆ ತಿಳಿದಿತ್ತು. ತನಗೂ ಹೊಟ್ಟೆಗಿರಲಿಲ್ಲ. ಹಾಗಾದರೆ, ತನಗೀಗ ಆಗುತ್ತಿರುವುದು ಸಾವಿನ ಸೂಚನೆಯೇ? ಸತ್ತು ಹೋಗುತ್ತೇನೆಯೇ ನಾನು?........

ಕಿಟಾರನೆ ಕಿರುಚಿ ಉರುಳಿದ ಕಣ್ಣ. ಅವನ ಪಾಲಿಗೆ ಜಗತ್ತು ಸತ್ತು ಹೋಯಿತು.

ಅವನಿಗೇನಾಯಿತೋ, ಎಷ್ಟು ಹೊತ್ತು ಜಗದ ಅರಿವನ್ನು ಮರೆತು ಒರಗಿದ್ದನೋ, ಅವನಿಗೊಂದೂ ತಿಳಿಯದು. ಮುಖದ ಮೇಲೆ ನೀರು ಬಿದ್ದು ತಣ್ಣಗಾಗಿ, ಎಚ್ಚರ ಮರಳಿತು. ಕಣ್ಣು ಬಿಟ್ಟು ನೋಡಿದ. ಸುತ್ತ ಎಂಟು ಹತ್ತು ಜನರ ಗುಂಪು ಕಲೆತಿತ್ತು. ಒಬ್ಬಾತ ಅವನ ಪಕ್ಕದಲ್ಲಿ ಮಂಡಿಯೂರಿ ಕುಳಿತು, ಅವನ ಮುಖಕ್ಕೆ ನೀರು ಸಿಂಪಡಿಸುತ್ತಿದ್ದ. ಚೆನ್ನಾಗಿ ಎಚ್ಚರವಾದಾಗ, ತಲೆ ಮುಖದ ತುಂಬ ನೀರಾಗಿದ್ದುದು ಗೊತ್ತಾಯಿತು. ಕುಡಿಯಲು ನೀರು ಬೇಕೆಂದು ಸನ್ನೆ ಮಾಡಿದ. ಪಕ್ಕದಲ್ಲಿ ಕುಳಿತಾತ, ಬೊಗಸೆಯಲ್ಲಿ ನೀರು ತುಂಬಿಕೊಂಡು ಕುಡಿಸಿದ. ಹೊಟ್ಟೆಯೊಳಗೆ ನೀರು ಹೋದ ಮೇಲೆ ಕಣ್ಣನಿಗೆ ಕೊಂಚ ಶಕ್ತಿ ಬಂದಂತಾಗಿ, ಎದ್ದು ಕುಳಿತ. ಬೆನ್ನೆಲ್ಲಾ ಕೆಸರಾಗಿತ್ತು. ಮುಚ್ಚಿಹೋದ ಕಿವಿಗಳಿಗೆ ಸುತ್ತಲಿದ್ದವರು ಆಡುತ್ತಿದ್ದ ಮಾತು ಕೇಳಿಸಿತು. ಕಣ್ಣನ್ನು ಕವಿದ ಮಂಜು ನಿಧಾನವಾಗಿ ಕರಗಿ, ಕುಡಿದವರಂತೆ ಜೋಲಿದ್ದ ಅಂಗಡಿ-ಮುಂಗಟ್ಟು, ದೀಪದ ಕಂಭಗಳು, ಹಾಗಿರದೆ, ನೇರವಾಗಿ ನಿಂತಿರುವುದು ಕಾಣಿಸಿತು. ಸುತ್ತ ನಿಂತವರು ಮಾತಾಡುತ್ತಿದ್ದರು—

"ಎಲ್ಲಿ ಶನಿಗಳೋ ಇವು. ಅದೇನು ರೋಗಾನೋ ಇವರಿಗೆ. ಇಲ್ಲಿ ಬೀದೀ ಮೇಲೆ ಬಿದ್ದು ಪ್ರಾಣ ಕೊಡಲಿಕ್ಕೆ ಬರ್ತಾರೆ." ಒಬ್ಬ ಅಸಹ್ಯ ಪಟ್ಟುಕೊಂಡು ಹೇಳಿದ.

"ಭಂಗಿ ಗಿಂಗಿ ಎಳೆದಿದ್ದಾಂತ ಕಾಣ್ತದೆ." ಇನ್ನೊಬ್ಬ ಹೇಳಿದ.

"ಗೇಣುದ್ದ ಇದಾನೆ, ಆಗ್ಲೇ ಭಂಗಿ, ಗಾಂಜಾನೇ?" ಮೂರನೆ ಯಾತ ಕೇಳಿದ.

"ಇಂಥವರ ಹಣೇಬರಹ ನಿಮಗೆ ಗೊತ್ತಿಲ್ಲ. ಊಟಕ್ಕಿಲ್ಲದೆ ಹೋಗರೂ, ಕಾಸು ಸಿಕ್ಕಿದರೆ, ಬೀಡಿ, ಹೆಂಡ, ಗಾಂಜಾ—ಬೇಕಾದ್ದು ಲಾಕ್-ಲೀಕ್ ಮಾಡ್ತಾರೆ. ಎಲ್ಲೋ ಎರಡಾಣೆ ಕೂಲಿ ಸಿಕ್ಕಿತ್ತೂಂತ ಕಾಣುತ್ತೆ. ಎಳೆದ."

"ಛಿ! ಅವನ ಮುಖ ನೋಡಿ—ಊಟ ಮಾಡಿ ಎಷ್ಟು ದಿನವಾಗಿ ದೆಯೋ ಪ್ರಾಣಿ."

"ಎಲ್ಲೋ ಹೋಗಿ ನಾಯಿ ಕೈಲಿ ಬೇರೆ ಕಡಿಸಿಕೊಂಡು ಬಂದಿರೋ ಹಾಗಿದೆ. ಕಾಲು ನೋಡಿ. ಇಂಥ ಮಕ್ಕಳನ್ನು ಹಡೆದು ಬೀದಿಗೆ ಬಿಡೋ ತಾಯಂದಿರು, ಹುಟ್ಟಿದಾಗಲೇ ಕತ್ತು ಹಿಸುಕಿ ಕೊಂದು ಹಾಕಿದ್ದರೆ, ಪ್ರಪಂಚಕ್ಕೆಷ್ಟೋ ಕ್ಷೇಮವಾಗ್ತಾ ಇತ್ತು."

"ಸರಿ. ಅವಳೇನು ಬೇಕೂಂತ ಹಡೆದಳೆ. ಏನೋ ತೆವಲಿಗೆ ಹುಟ್ಟಿದ. ಬೀದೀಗೆ ಬಿಟ್ಟು ಹೋದ್ಲು. ಅಷ್ಟೆ."

ಒಬ್ಬೊಬ್ಬರು ಒಂದೊಂದು ಮಾತಾಡುತ್ತಿದ್ದರು. ಏನೂ ಅರ್ಥ ವಾಗದವನಂತೆ, ಕಣ್ಣ ಒಬ್ಬೊಬ್ಬರ ಮುಖವನ್ನೂ ನೋಡಿದ. ಅವರಿಗೆ ತಮ್ಮ ಮಾತಿನ ಕಡೆ ಗಮನವಿತ್ತೇ ಹೊರತು, ಯಾರಿಗೂ ಅವನಿಗೇನಾ ಗುತ್ತಿದೆ, ಏನು ಬೇಕು ಎಂದು ವಿಚಾರಿಸುವ ಆತುರ ಇದ್ದಂತಿರಲಿಲ್ಲ. ತನ್ನ ಸುತ್ತ ಅಷ್ಟು ಜನ ಕಲೆತದ್ದನ್ನು ಕಂಡು, ಕಣ್ಣನಿಗೇ ಸ್ವಲ್ಪ ಧೈರ್ಯ ಬಂತು.

"ಅಯ್ಯಾ, ಅಸಿವಾಗ್ತದೆ" ಎಂದು ಕೇಳಿದ.

"ಯಾಕೋ ಬಿದ್ದೆ ? ಸೆಟಿರೋಗ ಬರ್‍ತದೇನೋ ?" ಒಬ್ಬಾತ ಕಣ್ಣನನ್ನು ಕೇಳಿದ. ಆ ಮಾತಿನ ಅರ್ಥ ಕಣ್ಣನಿಗಾಗಲಿಲ್ಲ.

"ಒಟ್ಟೆ ಅಸೀತದೆ ಅಯ್ಯಾ, ಎಲ್ಡು ದಿನದಿಂದ ಊಟ ಇಲ್ಲ ಅಪ್ಪ"?

"ಮನೆ ಮಠ ಇಲ್ಲೇನೋ ನಿನಗೆ? ನಿಮ್ಮವ್ವ ಇಲ್ಲ."

"ಅವ್ವ ಸತ್ತೋದ್ಲು, ಒಟ್ಟೇಗಾನಾರ ಕೊಡಿ ಅಯ್ಯಾ. ಪ್ರಾಣ ಓಗ್ತದೆ."

"ಅವನ ಮಾತು ಕೇಳಿ. ಅವ್ವ ಸತ್ತೋದ್ಲಂತೆ. ಸೂಳೇಮಗನಿಗೆ ಆ ದುಃಖವೇ ಇಲ್ಲ! ಹೊಟ್ಟೆ ಆತುರವೇ! ಏನು ಕರ್ಮಾನೋ. ಕಾಲ ಕೆಟ್ಟುಹೋಯ್ತು.

"ಬರೀ ಬುರುಡೆ. ಏನಾದರೂ ಗಿಟ್ಟಿಸಬೇಕೂಂತ ಆಟ ಕಟ್ತಿದಾನೆ."

"ಹೋಗಲಿ ಬಿಡಿ. ಮಾಡಿದೋರ ಪಾಪ, ಆಡಿದೋರ ಬಾಯಲ್ಲಿ, ನಮಗ್ಯಾಕೆ ?" ಎಂದು ಒಬ್ಬಾತ, ಒಂದಾಣೆಯನ್ನು ತೆಗೆದು ಕಣ್ಣನ ಕೈಯಲ್ಲಿಡಹೋದ. ಕಣ್ಣ ಆಣೆಯನ್ನು ತೆಗೆದುಕೊಳ್ಳಲಿಲ್ಲ. ಬೇಡವೆಂದ.

"ಸೊಕ್ಕು ಇವನಿಗೆ, ಒಂದಾಣೆ ಕೊಟ್ರೆ ಸಾಲ್ದೇನೋ."

"ದುಡ್ಡು ಬ್ಯಾಡ ಅಯ್ಯ. ಒಟ್ಟೆಗೇನಾದ್ರೂ ಕೊಡಿ"

ಇವನಿಗೆ ಸೊಕ್ಕು ಎಂದಾತ, ಕಣ್ಣನಮಾತು ಕೇಳಿ ಆಶ್ಚರ್ಯಪಟ್ಟು ಕಣ್ಣನ ಮುಖವನ್ನೇ ನೋಡಿದ. ಕಣ್ಣನ ಮಾತಿನಲ್ಲಿಯ ಸತ್ಯ ಆತನ ಹೃದಯವನ್ನು ಸೋಕಿತು. ಒಬ್ಬನು ಆಣೆ ತೆಗೆದುಕೊಡ ಹೊರಟದ್ದನ್ನು ಕಂಡು, ಇನ್ನು ತಾವೆಲ್ಲಿ ಕೊಡಬೇಕಾಗುವುದೋ ಎಂದು, ನೆರೆದವರು ಒಬ್ಬೊಬ್ಬರಾಗಿ, ಸ್ಥಳಬಿಟ್ಟು ಜಾರತೊಡಗಿದರು. ಆಣೆಯನ್ನು ಕೊಡ ಬಂದವರಿಗೆ ಏನು ತೋರಿತೋ ಏನೋ. ಜೇಬಿನಿಂದ ಬೆಳ್ಳಿಯ ನಾಲ್ಕಾಣೆಯೊಂದನ್ನು ತೆಗೆದು, ಕಣ್ಣನಿಗೆ ಕೊಡಹೋದರು.

ಹಣವೇ ಅನ್ನವೆಂಬುದನ್ನರಿಯದ ಕಣ್ಣನಿಗೆ, ಅದೂ ಬೇಕಾಗಲಿಲ್ಲ. ತಲೆಯಲ್ಲಾಡಿಸಿ ಹೇಳಿದ—

"ಒಂದ್ಮುತ್ತು ಅನ್ನ ಕೊಡ್ಸಿಬುಡಿ ಬುದ್ಧಿ, ಒಂಟೋಯ್ತೀನಿ ?"

"ದುಡ್ಡು ಕೊಟ್ಟರೆ ಅನ್ನ ಸಿಗೊಲ್ಲವೇನೋ ?"

"ಏನೋ ನಂಗೊತ್ತಿಲ್ಲ ಬುದ್ಧಿ"

ಕಣ್ಣನಮಾತು ಕೇಳುತ್ತಾ ಕೇಳುತ್ತಾ ಅವರಿಗೆ ಕಣ್ಣನಲ್ಲಿ ಆಸಕ್ತಿ ಹೆಚ್ಚಿದಂತೆ ತೋರಿತು. ಹಣದ ಬೆಲೆ ತಿಳಿಯದವರೂ ಇದಾರೆಯೇ ಎಂದು ಆಶ್ಚರ್ಯವಾಯಿತು. ಅವನ ವಿಷಯ ಹೆಚ್ಚು ತಿಳಿದುಕೊಳ್ಳ ಬೇಕೆಂಬ ಕುತೂಹಲ ಮೂಡಿತು.

"ನನ್ನ ಜೊತೇಲಿ ಬರ್ತೀಯಾ ಅನ್ನ ಹಾಕಿಸುತ್ತೀನಿ"

"ಹೂ, ಬುದ್ಧಿ"

"ಅನ್ನ ಹಾಕಿಸುತ್ತೀನಿ" ಎಂಬ ಮಾತು ಕೇಳಿದ ಕೂಡಲೇ ಕಣ್ಣ ಹೊಸಜೀವ ಬಂದವನಂತೆ ಮೇಲೆದ್ದು ನಡೆಯಲು ಯತ್ನಿಸಿದ. ನಾಯಿ ಕಡಿದ ಕಾಲು ತುಂಬಾ ನೋವಾಗಿ ಕಾಲು ಊರಲು ಕೂಡಾ ಆಗ ದಂತಿತ್ತು. ಹಾಗೇ ಮುಗ್ಗರಿಸಿದ. ಆತ ಕೈಹಿಡಿದು ನಡೆಸಿದರು.

"ಕಾಲೇನಾಗಿದೆಯೋ ?"

"ಹಾಳ್ನಾಯಿ, ಕಡ್ದುಬಿಡ್ತು ಬುದ್ಧಿ."

"ಎಲ್ಲಿ ?"

"ಎಲ್ಲೊಂತಾವ ಬಿಕ್ಸ ಕೇಳಿದ್ರೆ, ಶ್ವಾಳದಂತ ನಾಯಿ ಚೂ ಬಿಟ್ರು. ಅದು ಕಾಲಿಡ್ಡುಬುಟ್ತು."

"ಯಾವಾಗ ?"

"ಇವತ್ತು ಬೆಳಿಗ್ಗೆನಾಗ"

"ಔಷಧ ಹಾಕಿಸಲಿಲ್ಲವೇನೋ ?"

"ಇಲ್ಲಾ ಬುದ್ಧಿ"

"ಯಾಕೋ ?"

"ಔಸ್ತ ಕೇಳಿದ್ರೆ ದುಡ್ಕೇಳ್ತಾರೆ ಬುದ್ದಿ"

"ಹಾಗಾದ್ರೆ, ದುಡ್ಡು ಕೊಡಲಿಕ್ಕೆ ಬಂದಾಗ ಬ್ಯಾಡಾಂದ್ಯಲ್ಲೋ ?"

"ನಂಗೌಸ್ತ ಬ್ಯಾಡ, ಅನ್ನ ಬೇಕು ಬುದ್ಧಿ"

"ಔಷಧ ಬ್ಯಾಡಾಂದರೆ, ನಾಯಿ ಕಡಿದರೆ ಏನಾಗುತ್ತೆ ಗೊತ್ತೆ ನಿನಗೆ ?"

"ಇಲ್ಲ ಬುದ್ಧಿ"

"ನೀನೂ ನಾಯಿಯ ಹಾಗೇ ಆಗ್ತೀಯ. ಬಗುಳ್ತೀಯ"

"ಆ! ನಿಜ್ವಾಗ್ಲೂ ?"

"ಹೂ"

"ಒಳ್ಳೇದಾಯ್ತಲ್ಲ ಬುದ್ಧಿ"

"ಯಾಕೋ"

"ಬಿಕ್ಸಾಬೇಡೋ ಪಜೀತೀನೇ ತಪ್ಪೊಯ್ತದೆ. ಯಾರಾದ್ರೂ ಪುಣ್ಯಾತ್ಮರು ಮನೆ ಬಾಕಲ್ನಾಗೆ ಕಟ್ಕೊಂಡು ಅನ್ನ ಇಕ್ತಾರೆ. ಅನ್ನ ಕೇಳೋಕೋಗಿ ನಾಯಿ ಕೈಲಿ ಕಚ್ಸಿಕೊಳ್ಳಾಕಿಂತ, ನಾಯಾಗಿರೋದೆ ಒಳ್ಳೇದಲ್ವಾ ಬುದ್ಧಿ?"

ಕಣ್ಣನಮಾತು ಕೇಳಿ ಆತ ಮುಳ್ಳು ತುಳಿದವನಂತೆ, ನಡೆಯುತ್ತಿದ್ದವನು ನಿಂತು ಕಣ್ಣನನ್ನು ನೋಡಿದ. ಅವನ ಮುಖದಲ್ಲಾವ ವ್ಯಂಗ್ಯವೂ ಇರಲಿಲ್ಲ. ಬೆಳಗಿನಿಂದ ಅನುಭವಿಸಿದ ಕಷ್ಟ, ಮಾತಾಗಿ ಒಡಮೂಡಿತ್ತು. ಏಕೋ ಆತನ ಬಾಯಿಕಟ್ಟಿದಂತಾಯಿತು. ಅಷ್ಟು ದೂರ ಇಬ್ಬರೂ ಮಾತನಾಡದೆ ನಡೆದರು. ಹೋಟೆಲೊಂದರ ಮುಂದೆ ನಿಂತು, ಆತ ಕಣ್ಣನಿಗೆ ಹೇಳಿದ—

"ನೀನಿಲ್ಲೇ ಇರು. ತಿಂಡಿತಂದು ಕೊಡ್ತೇನೆ"

ಕಣ್ಣ ಆತ ಬರುವುದನ್ನೇ ಕಾದು ನಿಂತಿದ್ದ. ಸ್ವಲ್ಪ ಹೊತ್ತಿನಲ್ಲೇ ಆತ ಹೋಟೆಲೊಳಗಿನಿಂದ ತಿಂಡಿಯ ಪೊಟ್ಟಣ ಕಟ್ಟಿಸಿಕೊಂಡು ಬಂದು, ಕಣ್ಣನ ಕೈಗೆ ಕೊಟ್ಟ. ಕುರಿಯಮರಿಯನ್ನು ಕಂಡ ಹಸಿದ ತೋಳದಂತೆ, ಕಣ್ಣ, ದಾರ ಬಿಚ್ಚುವುದಕ್ಕೂ ಹೊತ್ತಿಲ್ಲದವನಂತೆ ಕಾಗದವನ್ನು ಹರಿದು, ಒಳಗಿದ್ದ ತಿಂಡಿಗೆ ಬಾಯಿ ಹಾಕಿದ. ಅವನ ಆತುರವನ್ನು ಕಂಡು ಆತನಿಗೆ ವ್ಯಥೆ ತುಂಬಿದ ನಗು ಬಂತು.

"ಎಲ್ಲಾದರೂ ಕೂತುಕೊಂಡು ತಿನ್ನೋದಕ್ಕೂ ಅವಸರವೇನೋ ?"

"ಬಾಳ ಅಸ್ವಾಗದೆ ಬುದ್ಧಿ" ತಿಂಡಿಯನ್ನು ಮುಕ್ಕುತ್ತಲೇ ಹೇಳಿದ ಕಣ್ಣ.

ಕಣ್ಣ ತಿಂಡಿಯನ್ನು ತಿಂದು ಮುಗಿಸುವವರೆಗೂ ಆತ, ಅವನನ್ನು ಮತ್ತೆ ಮಾತನಾಡಿಸಲಿಲ್ಲ. ತಿಂಡಿ ಮುಗಿಸಿದಮೇಲೆ ಕುಡಿಯಲು ನೀರು ತಂದುಕೊಟ್ಟ. ನೀರು ಕುಡಿಯುತ್ತಾ ಕಣ್ಣ, ಹೋಟಲು ದೀಪದ ಬೆಳಕಿನಲ್ಲಿ ತನ್ನ ಅನ್ನದಾತನ ಮುಖ ನೋಡಿದ. ಎತ್ತರವಾದ ಆಳು. ತೆಳ್ಳನೆಯ ಮೈ, ಗಂಭೀರವಾದ ಮುಖ, ಉದ್ದವಾಗಿ, ತುದಿಯಲ್ಲಿ ಮೊನಚಾಗಿ ಬಾಗಿದ ಮೂಗು, ಹೊರವಾಗಿ ಬೆಳೆದ ಹುಬ್ಬುಗಳ ತಳದಲ್ಲಿ ಶಾಂತವಾಗಿ ಹೊಳೆಯುವ ಕಣ್ಣುಗಳು, ಅಗಲವಾದ ಹಣೆ; ತೆಳ್ಳನೆಯ ಪಂಚೆಯುಟ್ಟು, ಮೇಲೊಂದು ಬಿಳಿಯ ಜುಬ್ಬಾ ಹಾಕಿ, ಅದರಮೇಲೆ ಬಿಳಿಯ ವಸ್ತ್ರವನ್ನು ಹೊದ್ದಿದ್ದ ಆತ. ಈತನನ್ನೆಂದೂ ಮರೆಯಬಾರದೆಂಬಂತೆ, ಕೃತಜ್ಞತೆ ತುಂಬಿದ ಕಣ್ಣುಗಳಿಂದ, ಕಣ್ಣ ಆತನನ್ನು ನೋಡಿದ.

"ಹೊಟ್ಟೆ ತುಂಬಿತೇನೋ ?"

"ಹೂ ಬುದ್ಧಿ"

"ಚೆನ್ನಾಗಿತ್ತೇ ?"

"ಪಸಂದಾಗಿತ್ತು. ಎಂದೆಂದೂ ಇಂತಾ ತಿಂಡಿ ತಿಂದಿರ್ಲಿಲ್ಲ ನನ್ನೊಡ್ಯ. ನಿಮ್ಹೊಟ್ಟೆ ತಣ್ಗಿರಲಿ. ನಾನೋಗ್ಲಾ ಬುದ್ಧಿ?"

"ಎಲ್ಲಿಗೆ ಹೋಗ್ತಿಯೋ ?"

"ಮುಲ್ಲಾಕೆ"

"ಎಲ್ಲಿ ?"

"ಎಲ್ಲಾದ್ರೂ ಸರೀನೇ"

"ನಿನಗ್ಯಾರೂ ಇಲ್ಲವೇನೋ ?"

"ಯಾರೂ ಇಲ್ಲ ಬುದ್ಧಿ. ಅವ್ವ ಒಬ್ಳಿದ್ಲು. ಅವಳೂ ಸತ್ತೋದ್ಲು"

"ಇನ್ಯಾರೂ ಇಲ್ಲವೇ ?"

"ಇಲ್ಲ"

"ನಿನ್ನ ಹೆಸರೇನು ?"

"ಕಣ್ಣಾಂತಾರೆ ಬುದ್ಧಿ"

"ನನ್ಜೊತೇಲಿ ಬರ್ತಿಯಾ ಕಣ್ಣ ?"

"ಎಲ್ಗೆ ಬುದ್ಧಿ ?"

"ಹೇಳ್ತೀನಿ ಬಾ." ಆತ ನಡೆಯಲಾರದೆ, ಅವಸ್ಥೆ ಪಡುತ್ತಿದ್ದ ಕಣ್ಣನನ್ನು ಕೈಹಿಡಿದು, ನಡೆಸಿಕೊಂಡು ಹೊರಟ. ಬಗಲೊಳಗೆ ಗೋಣಿಯ ಪಟ್ಟೆ, ಕಂಬಳಿಯ ತುಂಡನ್ನು ಹಿಡಿದುಕೊಂಡು, ಚಿಂದಿಯುಟ್ಟ ಹುಡುಗನ ಕೈಹಿಡಿದು, ಲಕ್ಷಣವಾಗಿ ಬಟ್ಟೆ ಧರಿಸಿದ ಆತ ನಡೆಯುತ್ತಿರುವುದನ್ನು ಕಂಡು ಬೀದಿಯ ಜನ, ಅವರಿಬ್ಬರನ್ನೂ, ವಿಚಿತ್ರ ಮೃಗಗಳನ್ನು ನೋಡುವಂತೆ ನೋಡುತ್ತಿದ್ದರು. ಆದರೆ ಅವರಿಬ್ಬರಿಗೂ ಅದರ ಪರಿವೆಯೇ ಇರಲಿಲ್ಲ. ಹಾಗೇ ನಡೆದು, ಮೈಸೂರು ಬ್ಯಾಂಕಿನ ಬಳಿ ಬಂದು, ಅಲ್ಲಿದ್ದ ಕಲ್ಲುಬೆಂಚಿನ ಮೇಲೆ ಕೂತರು. ಆತ ತಾನು ಕೂತು ಕಣ್ಣನನ್ನು ಕುಳಿತುಕೊಳ್ಳಲು ಕರೆದ. ಕಣ್ಣ ಆತನ ಜೊತೆಗೆ ಕೂಡದೆ, ಕಾಲುದಾರಿಯ ಮೇಲೆ ಕೂತ.

"ನಾಳೆ ಊಟಕ್ಕೇನು ಮಾಡ್ತೀಯ ಕಣ್ಣ ?"

ಕುಳಿತ ಬಳಿಕ, ಒಂದೆರಡು ನಿಮಿಷ ಸುಮ್ಮನಿದ್ದು, ಕೇಳಿದ ಆತ. ಹೊಟ್ಟೆ ತುಂಬಿದ ಕಣ್ಣನ ತಲೆಯಲ್ಲಿ ನಾಳಿನ ಯೋಚನೆಯೇ ಬಂದಿರಲಿಲ್ಲ. ಆತನ ಮಾತು, ಮರೆತುದನ್ನು ನೆನಪಿಸಿತು. ಇಂದಾದ್ದನ್ನು ನೆನಸಿಕೊಂಡು ಗಾಬರಿಯಾದ. ಬೆದರಿಸಿ ಕಣ್ಮರೆಯಾದ ಭೂತ, ಹೋಯಿತು ಎಂದು ಮರೆಯುವಷ್ಟರಲ್ಲಿ 'ಧುತ್' ಎಂದು ಎದುರಿಗೆ ಬಂದಂತಾಯಿತು ಕಣ್ಣನಿಗೆ, ಅವರ ಮಾತು ಕೇಳಿ. ಆ ಗಾಬರಿಯಲ್ಲಿ ಏನು ಉತ್ತರ ಕೊಡಬೇಕೆಂಬುದೂ ತೋಚಲಿಲ್ಲ. ಪಿಳಿಪಿಳಿ ಕಣ್ಣು ಬಿಟ್ಟು ಅವರ ಮುಖ ನೋಡಿದ. ಅವರೇ ಮಾತು ಮುಂದುವರಿಸಿದರು–

"ಎಲ್ಲಾದರೂ ಚಾಕರಿ ಮಾಡುತ್ತೀಯಾ ಕಣ್ಣ ?"

ತಟಕ್ಕನೆ ಕಣ್ಣನಿಗೆ ಅವನ ತಾಯಿ ಹೇಳಿದ ಮಾತು ನೆನಪಿಗೆ ಬಂತು. ಕೂಡಲೇ, ಏನೂ ಯೋಚನೆ ಮಾಡದೆ ಉತ್ತರ ಕೊಟ್ಟ :

"ಇಲ್ಲಾ ಬುದ್ಧಿ."

"ಯಾಕೋ ?"

"ನನ್ನವ್ವ 'ತಿರುಪೆಯೋರು ಚಾಕ್ರಿ ಮಾಡ್ಬಾರ್ದು' ಅಂತ ಹೇಳವ್ಳೆ"

"ಏಕೆ ?"

ಕಣ್ಣ ತನ್ನ ಅವ್ವ ತನಗೆ ಹೇಳಿದ ಅವಳ ಜೀವನದ ಕಥೆ, ತನಗೆ ಹೇಳಿದ ಬುದ್ಧಿವಾದ ಎಲ್ಲವನ್ನೂ ಹೇಳಿ—

"ಅದ್ಕೇ ಬುದ್ಧಿ, ನಾನು ಚಾಕ್ರಿ ಮಾಡಾಕಿಲ್ಲ. ದೊಡ್ಡೋರ್ಸವಾಸಾನೇ ನಂಗ್ಬ್ಯಾಡ. ನಮ್ಮವ್ವ ಏಳ್ದಂಗೆ ತಿರ್ಪೆ ಬೇಡ್ತೀನಿ. ಯಾರಾದ್ರೂ ಇಟ್ರೆ ತಿಂತೀನಿ. ಇಲ್ದೋದ್ರೆ ಸತ್ತೋಯ್ತೀನಿ. ಅಷ್ಟೇ ನಾನು ಮಾಡಾದು."

ಅವನು ಹೇಳಿದ ಕಥೆ ಕೇಳಿ, ಕತ್ತಲಲ್ಲಿ ಅವರ ಮೈ ನಡುಗಿದುದು ಕಣ್ಣನಿಗೆ ಕಾಣಲಿಲ್ಲ. ಭಾರವಾಗಿ ನಿಟ್ಟುಸಿರಿಟ್ಟು ಹೇಳಿದರು ಅವರು—

"ನಿನ್ನ ತಾಯಿ ಹೇಳಿದ ಮಾತು, ಅವಳ ಮಟ್ಟಿಗೆ ಸರಿಯಾಯಿತು ಕಣ್ಣ. ನಾನು ಹೇಳೋದು ಒಂದು ಮಾತು ಕೇಳ್ತೀಯಾ ?"

"ಏನೇಳಿ ಬುದ್ಧಿ."

"ಕೈಕಾಲು ಗಟ್ಟಿಯಾಗಿ, ಕೆಲಸಮಾಡಲು ಶಕ್ತಿ ಇರುವ ಮನುಷ್ಯ ಬಿಕ್ಷೆ ಬೇಡಬಾರದು. ಅದು ಅವಮಾನ."

"ಅವಮಾನ ಅಂದ್ರೆ ?"

ಅವಮಾನ ಎನ್ನುವ ಮಾತಿನ ಅರ್ಥವನ್ನು ಅವನಿಗೆ ತಿಳಿಯುವ ಹಾಗೆ ಹೇಗೆ ವಿವರಿಸಬೇಕೆಂದು ಯೋಚಿಸಿ, ನಂತರ ಹೇಳಿದರು—

"ಅದು ಪಾಪ."

"ಬಿಕ್ಸೆ ಬೇಡೋದು ಪಾಪಾನ!" ದಿಙ್ಮೂಢನಾಗಿ ಕೇಳಿದ ಕಣ್ಣ.

"ಹೌದು. ಕೆಲಸ ಮಾಡಲು ಶಕ್ತಿ ಇರುವವರು ಬಿಕ್ಷೆ ಬೇಡುವುದು ಪಾಪ. ಅದಕ್ಕಿಂತ ದೊಡ್ಡ ಪಾಪ ಬೇರೆಯಿಲ್ಲ. ಕೆಲಸ ಮಾಡಿದರೆ ಸಂಬಳ ಕೊಡುತ್ತಾರೆ."

"ಸಂಬಳ ಅಂದ್ರೆ ?"

"ಸಂಬಳ ಅಂದ್ರೆ ದುಡ್ಡು. ತಿಂಗಳಿಗೊಂದು ಬಾರಿ ದುಡ್ಡು ಕೊಡುತ್ತಾರೆ. ಯಾರ ಕೈಲೂ ಅನ್ನಿಸಿಕೊಳ್ಳದೆ, ಇವತ್ತಿನ ಹಾಗೆ ನಾಯಿಯ ಕೈಲಿ ಕಚ್ಚಿಸಿಕೊಳ್ಳದೆ, ರಸ್ತೆಯಲ್ಲಿ ಸಾಯದೆ, ಹಾಯಾಗಿ ಜೀವನ ಮಾಡಬಹುದು. ಹಾಗಿರೋದು ಒಳ್ಳೆಯದಲ್ಲವೇ ?"

ಅಂದಿನ ಅನುಭವದಿಂದ ಕಣ್ಣನಿಗೆ ಅವರ ಮಾತು ಸರಿ ಎನಿಸಿತು. "ಓದು ಬುದ್ಧಿ" ಅಂದ. ಆದರೆ ಅವ್ವ ಹೇಳಿದ ಮಾತು?

"ದೊಡ್ಮನುಸರ ತಾವ ಓಗ್ಬ್ಯಾಡ, ಅವ್ರೆಲ್ಲಾ ಹಾವಿನ್ಜಾತಿ ಅಂತ ನಮ್ಮವ್ವ ಏಳಿದಾಳಲ್ಲಾ?"

"ಅವಳ ಮಾತು ನಿಜ ಕಣ್ಣ. ಬಹಳ ಮಂದಿ ಕೆಟ್ಟವರಿರುತ್ತಾರೆ, ಆದರೆ ಒಳ್ಳೆಯವರೂ ಇರುತ್ತಾರೆ. ಅಲ್ಲವೇ? ನಾನು ಕೆಟ್ಟವನೇ?"

"ಏ! ಎಲ್ಲಾರಾ ಉಂಟಾ ಬುದ್ಧಿ. ದೇವ್ರಂತೋರು ನೀವು."

"ಅದೇ ನಿನ್ನ ತಪ್ಪು. ದೇವರಂಥ ಮನುಷ್ಯ ಇರುವುದಿಲ್ಲ. ದೇವರು ದೇವರೇ, ಮನುಷ್ಯ ಮನುಷ್ಯನೇ. ನಾವೇ ಮನುಷ್ಯರಲ್ಲಿ ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂದು ತಿಳಿದುಕೊಳ್ಳಬೇಕು."

"ಅದೆಂಗೆ ತಿಳ್ಕಳ್ಳಾದು?"

"ಇವತ್ತು ನಾನು ಒಳ್ಳೆಯವನು ಅಂತ ನಿನಗೆ ಹೇಗೆ ತಿಳಿಯಿತು?"

"ಸಾಯ್ತಿದ್ದೋನಿಗೆ ಅನ್ನಾ ಇಕ್ಲಿಲ್ಲಾ? ಎಷ್ಟೋ ಜನ ಹೇಳಿದ್ರೂ ಕೊಡ್ಲಿಲ್ಲ. ನಿವ್ತಾವ ನಾನು ಕೇಳ್ದೆ ಓದ್ರೂ ತಿನ್ನಾಕೆ ಕೊಡ್ಲಿಲ್ಲಾ? ಅದ್ಕೆ ನೀವು ಒಳ್ಳೇರು."

"ಹಾಗೇ—ಅನುಭವವಾಗುತ್ತಾ ಆಗುತ್ತಾ, ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂಬುದು ನಿನಗೇ ಅರ್ಥವಾಗುತ್ತದೆ. ಹೋಗಲಿ— ಈಗ ಹೇಳು. ನಿನಗೆಲ್ಲಾದರೂ ಕೆಲಸ ಕೊಡಿಸಿದರೆ ಮಾಡ್ತೀಯಾ?"

ಕಣ್ಣನ ಮಿದುಳಿಗೆ ಅವರಾಡುವ ಮಾತಿನ ಪೂರ್ಣ ಅರ್ಥವಾಗದಿದ್ದರೂ, ಅವನ ಹೃದಯ ಅವರು ಹೇಳುವುದು ಸರಿ ಎಂದು ನಂಬಿತು. ಆದರೂ ಅವ್ವ ಹೇಳಿದ ಮಾತು, ಅವನ ನಂಬಿಕೆಯನ್ನು ಅಲ್ಲಾಡಿಸುತ್ತಿತ್ತು.

"ನೀವೇಳೋದು ಸರಿ ಬುದ್ಧಿ. ಆದ್ರೂ...."

"ಅವನ ಮನಸ್ಸಿನೊಳಗಿನ ತಾಕಲಾಟ ಅವರಿಗೆ ಅರ್ಥವಾಯಿತು. ಅದನ್ನು ನಿವಾರಿಸಲು ತಮಗಿದ್ದ ಒಂದೇ ದಾರಿಯನ್ನು ಉಪಯೋಗಿಸಿ ಹೇಳಿದರು—

"ನನ್ನ ಮನೆಯಲ್ಲಿದ್ದು ಕೆಲಸ ಮಾಡುತ್ತೀಯಾ? ನಿನಗೆ ಅನ್ನ ಬಟ್ಟೆ ಕೊಡುತ್ತೇನೆ."

ಹಿಂದು ಮುಂದು ಯೋಚಿಸದೆ, ಒಂದೇ ಮನಸ್ಸಿನಿಂದ ಕಣ್ಣ ಉತ್ತರಕೊಟ್ಟ—

"ನಿಮ್ಮನ್ಯಾಗಾ? ಓ ಆಗ್ಬೈದು."

"ಹಾಗಾದರೆ, ಈಗ ನನ್ನ ಜೊತೇಲಿ ಬರ್‍ತೀಯಾ?"

"ಹೂ."

"ಸರಿ. ಇವತ್ತು ನಾನೊಂದು ಮಾತು ಹೇಳ್ತೀನಿ. ಅದನ್ನು ನೀನು ಎಂದೆಂದೂ ಮರೆಯಬಾರದು ಕಣ್ಣ."

"ಏನ್ಬುದ್ಧಿ?"

"ನೀನು ಗಂಡು ಮಗ. ಅಲ್ಲವೇ?"

"ಅಲ್ವಾ ಮತ್ತೆ! ಸರದಾರ ಅಂತ ನನ್ನವ್ವ ಹೆಸರಿಕ್ಕಿದ್ಲು."

"ಹೌದು. ನೀನು ಸರದಾರ, ಗಂಡಸು ಮಗ. ನೋಡು—ಗಂಡಸಾಗಿ ಹುಟ್ಟಿದವನು, ತಾನು ದುಡಿಯದೆ, ಇತರರು ದುಡಿದುದನ್ನು ತಿನ್ನಲು ಅಪೇಕ್ಷಿಸುವುದು, ತನ್ನದಲ್ಲದ್ದಕ್ಕೆ ಆಸೆಪಡುವುದು, ಸೋಮಾರಿಯಾಗಿ ತಿರುಗುವುದು ಪಾಪ. ಗಂಡಸಿಗೆ ಅದಕ್ಕಿಂತ ದೊಡ್ಡ ಪಾಪ ಇನ್ನೊಂದಿಲ್ಲ. ಆ ಪಾಪಕ್ಕೆ ಎಂದೂ ಆಸೆಪಡಬೇಡ. ಜ್ಞಾಪಕ ಇಟ್ಟುಕೊಳ್ಳುತ್ತೀಯಾ ಈ ಮಾತನ್ನು?"

ಕಣ್ಣ ಮೈಯೆಲ್ಲ ಕಿವಿಯಾಗಿ, ಅವರು ಹೇಳಿದ ಮಾತನ್ನು ಮಿದುಳಿನಲ್ಲಿ ಬರೆದುಕೊಳ್ಳುವಂತೆ ಕೇಳಿ, ಬಳಿಕ ಹೇಳಿದ:

"ಹಂಗೇ ಆಗ್ಲಿ".

"ನಡಿ. ಹಾಗಾದರೆ, ನಮ್ಮ ಮನೆಗೆ ಹೋಗೋಣ."

ಇಬ್ಬರೂ ಅಲ್ಲಿಂದ ಎದ್ದು ಹೊರಟರು. ಕಣ್ಣ ಆತನ ಕೈಯನ್ನು ಹಿಡಿದು ಅವರನ್ನು ಹಿಂಬಾಲಿಸಿದ.

## ೯

ಕಣ್ಣ ಆತನೊಂದಿಗೆ ಪ್ರವೇಶಿಸಿದ ಮನೆಯ ಮಾಟವನ್ನೇ ಕಂಡು ಬೆರಗಾದ. ಅನ್ನಕ್ಕಾಗಿ ಅಲೆಯುವ ಕೆಲದಿನಗಳಲ್ಲಿ ಅವನು ದೂರದಿಂದ

ನಿಂತು, ಅಂಥ ಮನೆಗಳನ್ನು ನೋಡಿದ್ದ. ಆದರೆ ಅಂಥ ಮನೆಯೊಂದನ್ನು ಪ್ರವೇಶಮಾಡುವ ಭಾಗ್ಯ ತನಗೊದಗಬಹುದೆಂದು ಕನಸು ಮನಸಿನಲ್ಲೂ ಊಹಿಸಿರಲಿಲ್ಲ.

ಅದು ದೇವಹರ್ಮ್ಯವೂ ಅಲ್ಲ, ಅರಮನೆಯೂ ಅಲ್ಲ, ಭವ್ಯ ಸೌಧವೂ ಅಲ್ಲ, ಮಹಲೂ ಅಲ್ಲ—ಅದೊಂದು ಹೊಸ ನಮೂನೆಯ ಸರಳ ಶಿಲ್ಪದ ಸೀಮೆಂಟು ಮನೆ. ಮುಂದಿನ ಕೈದೋಟ, ಮನೆಯ ಸೌಂದರ್ಯದ ಸಾರ ಸರ್ವಸ್ವ. ಬಗೆಬಗೆಯ ಹೂಕುಂಡಗಳನ್ನು ಮನೆಯ ಮೆಟ್ಟಲುಗಳ ಮೇಲೆ ಅಚ್ಚುಕಟ್ಟಾಗಿ ಜೋಡಿಸಿದ್ದರು. ಮೆಟ್ಟಲು ದಾಟಿದ ಕೂಡಲೇ ಸಣ್ಣ ಕೈಸಾಲೆ. ಕೈಸಾಲೆಯಿಂದ ಹಜಾರಕ್ಕೆ ಹೋಗುವ ಬಾಗಿಲನ್ನು ತೆಳುವಾದ ತೆರೆ ಮುಚ್ಚಿತ್ತು. ಜಾಳಿಗೆಯ ಬಾಗಿಲು ತೆರೆಯನ್ನು ತೂರಿಕೊಂಡು, ಒಳಗಿನ ದೀಪದ ಬೆಳಕು, ರೇಡಿಯೋದ ಹಾಡಿನ ಧ್ವನಿ, ಒಂದೆರಡು ಮಕ್ಕಳ ಮಾತಿನ ಸದ್ದು ಕೇಳುತ್ತಿತ್ತು. ಕಣ್ಣನ ಕಣ್ಣಿಗೆ, ಆ ತೆರೆಯಾಚೆಗೆ ಯಾವುದೋ ನಂದನವಿರಬೇಕೆಂದೆನಿಸಿತು.

ಆತ ಕೈಸಾಲೆಯ ದೀಪ ಹಾಕಿ, ಕಣ್ಣನಿಗೆ ಅಲ್ಲಿ ಕೂಡಲು ಹೇಳಿ, ಒಳಗೆ ಹೋದ. ತೆರೆಯಮರೆಯಿಂದ 'ಅಪ್ಪಾ ಬಂದ' ಎಂದು ಮಕ್ಕಳು ಕೂಗಿದ ಸದ್ದು ಕೇಳಿಸಿತು ಕಣ್ಣನಿಗೆ.

"ಇಂದೂ, ಅಮ್ಮನಿಗೆ ಹೇಳಿ ಒಂದು ಬೇಸಿನ್‌ನಲ್ಲಿ ಅಷ್ಟು ಬಿಸಿನೀರು ತರ್ತೀಯಾ ?" ಆತ ಹೇಳಿದುದು ಕೇಳಿಸಿತು.

"ಕುಡೀಲಿಕ್ಕೇನಪ್ಪಾ ?" ಹೆಣ್ಣು ಮಗುವೊಂದು ಮಾತಾಡಿತು.

"ಅಲ್ಲ. ಗಾಯ ತೊಳಿಯಲಿಕ್ಕೆ ?"

"ನಿನಗೆ ಗಾಯ ಆಯಿತೇನಪ್ಪಾ ?" ಗಂಡುಮಗು ಕೇಳಿತು.

"ಊಹೂ, ಇವತ್ತು ನಿಮಗೊಬ್ಬ ಅಣ್ಣನನ್ನು ತಂದೀದೇನೆ, ಅವನಿಗೆ."

"ಎಲ್ಲಿ ? ಬರೀ ಸುಳ್ಳು" ಎರಡೂ ಮಕ್ಕಳು ಬಟ್ಟೆಗೆ ಹೇಳಿದವು.

"ಬೇಗ ಹೋಗಿ ಬಿಸಿನೀರು ತಗೊಂಬಾ ತೋರಿಸ್ತೀನಿ"

"ಅಮ್ಮಾ! ಅಪ್ಪ ಇನ್ನೊಬ್ಬ ಅಣ್ಣನನ್ನು ತಂದಿದಾನೆ ಕಣೇ ನಮಗೇ" ಎಂದು ಹೆಣ್ಣು ಮಗು ಕೂಗುತಾ ಓಡಿತು. ಐದಾರು

ನಿಮಿಷಗಳ ಕಾಲ ಮತ್ತೇನು ಸದ್ದೂ ಕೇಳಲಿಲ್ಲ. ರೇಡಿಯೋ ಮಾತ್ರ ಸಣ್ಣಗೆ ಹಾಡುತ್ತಿತ್ತು.

ಸ್ವಲ್ಪ ಹೊತ್ತಿನಲ್ಲೆ ಆತ ಕೈಯಲ್ಲಿ, ಲೈಸಾಲ್, ಟಿಂಕ್ಚರ್ ಐಯಡೀನ್ ಸೀಸೆಗಳನ್ನು, ಅಷ್ಟು ಹತ್ತಿಯನ್ನು ಹಿಡಿದುಕೊಂಡು ಹೊರ ಬಂದ. ಆತನ ಹಿಂದೇ ಮಕ್ಕಳೆರಡೂ ಬಂದು ನಿಂತವು. ಮಕ್ಕಳು ಕಣ್ಣನನ್ನು ನೋಡಿದವು, ಕಣ್ಣ ಮಕ್ಕಳನ್ನು ನೋಡಿದ. ಮೊದಲ ನೋಟಕ್ಕೇ ಆ ಮಕ್ಕಳಿಗೆ ಮಾರುಹೋಯಿತು ಅವನ ಮನಸ್ಸು. ಎಷ್ಟು ಸುಂದರವಾದ ಮಕ್ಕಳು—ಥಳಥಳ ಜೋಡಿ ನಕ್ಷತ್ರದಂತೆ ಹೊಳೆಯುವ, ಬಟ್ಟಲು ಕಣ್ಣುಗಳು, ಹೂವಿನ ಎಸಳಿನಂತೆ ಬಿರಿದ ಗುಲಾಬಿಯ ತೆಳುವಾದ ತುಂಬುತುಟಿ, ರಿಬ್ಬನ್ ಹಾಕಿದ ಕತ್ರಗೆ ತಲೆತುಂಬಿದ ಗುಂಗುರು ಕೂದಲು, ಗೌರವರ್ಣದ ಕೋಮಲವಾದ ಕೋಲುಮುಖ, ಜರತಾರಿಯ ಅಂಚು ಕಸೂತಿ ಹಾಕಿದ ಲಂಗ—ದೇವಲೋಕದ ಅಪ್ಸರ ಶಿಶುವಿನಂತೆ ಕಂಡಿತು, ಕಣ್ಣನ ಕಣ್ಣುಗಳಿಗೆ ಆ ಹೆಣ್ಣು ಮಗು. ಗಂಡು ಮಗುವೂ ಅಷ್ಟೇ ಮುದ್ದಾಗಿತ್ತು. ಆದರೆ ಹೆಣ್ಣು ಮಗುವಿನ ಮುಖದಲ್ಲಿದ್ದ ಕೋಮಲತೆಯಿರಲಿಲ್ಲ.

"ಅಣ್ಣನನ್ನು ನೋಡಿದಿಯಾ ಇಂದು? ಮೋಹನ್ ಅವನನ್ನು ಮಾತಾಡಿಸುವುದಿಲ್ಲವೇ? ಅವನ ಹೆಸರು ಎಷ್ಟು ಚೆನ್ನಾಗಿದೇಂತೀಯ— ಕಣ್ಣ"

"ಕಣ್ಣ, ನಿಂಗೆ ಗಾಯ ಆಗಿದೆಯಾ?" ಇಂದು ಕಣ್ಣನನ್ನು ಮಾತಾಡಿಸಿದಳು.

"ಹೂ" ಕಣ್ಣ ತಲೆಹಾಕಿದ.

"ಅಪ್ಪ! ಅವನು ತಲೇನೇ ಬಾಚಿಕೊಂಡಿಲ್ಲ. ಎಷ್ಟು ಕೊಳಕು ಬಟ್ಟೆ ಹಾಕಿಕೊಂಡಿದಾನೆ ನೋಡು." ಮೋಹನ ಕಣ್ಣನನ್ನು ತೋರಿಸಿ ತಂದೆಗೆ ಕೇಳಿದ.

"ಹೂನಪ್ಪಾ, ಅವನಿಗೆ ತಾಯಿಯಿಲ್ಲ, ತಲೆಬಾಚಿ, ಒಳ್ಳೆ ಬಟ್ಟೆ ಹಾಕಲು. ಅಣ್ಣನಿಗೆ ನೀನು ಒಳ್ಳೆ ಬಟ್ಟೆ ಕೊಡುತ್ತೀಯಲ್ಲ?"

ಊಹೂ....ನಂದು ನಾನು ಯಾರಿಗೂ ಕೊಡೋಲ್ಲ"

ಮೋಹನನ ಮಾತು ಕೇಳಿ ಆತನ ಮುಖ ಬಿರುಸಾಯಿತು. ಇಂದು ಹೇಳಿದಳು—

"ಬೇಡೇಬೇಡ. ನನ್ದೇ ಹೊಸಾ ಫ್ರಾಕ್ ಕೊಡ್ತೀನಿ ಅವನಿಗೆ. ಹಾಕ್ಕೋತೀಯಾ ಕಣ್ಣ ?"

ಆತ ಇಂದುವನ್ನು ತಬ್ಬಿ ಮುತ್ತಿಟ್ಟು 'ಜಾಣ ಹುಡುಗಿ' ಹೋಗು ಅಮ್ಮ ನೀರು ತಂದಳೇನೋ ನೋಡು' ಎಂದ. ಇಂದು ಕುಣಿಯುತ್ತಾ ಒಳಗೆ ಓಡಿದಳು.

"ಕಣ್ಣ ನಿನ್ನ ಗಾಯ ಎಲ್ಲಿ?" ಎಂದು ಕೇಳಿದ ಆತ. ಕಣ್ಣ ಕಾಲನ್ನು ಚಾಚಿ, ನಾಯಿಯ ಹಲ್ಲು ಊರಿದ ಭಾಗವನ್ನು ತೋರಿಸಿದ. ಆತ ದೀಪದ ಬೆಳಕಿನಲ್ಲಿ ಗಾಯವನ್ನು ಪರೀಕ್ಷಿಸುತ್ತಿದ್ದ. ಅಷ್ಟರಲ್ಲೇ ಯಾರೋ ಹೇಳಿದರು—

"ಬಿಸಿನೀರು ತಂದಿದೀನಿ ನೋಡಿ"

ಆಕೆಯ ಧ್ವನಿಯನ್ನು ಕೇಳಿ ಕಣ್ಣ ತಲೆಯೆತ್ತಿ ಹೊಸಬರಾರೆಂದು ನೋಡಿದ. ಆಕೆಯೂ ಅವನನ್ನು ನೋಡಿದಳು. ಆ ನೋಟದಲ್ಲಿ, ಅವನನ್ನು ನೋಡಿದ ಕೂಡಲೇ ಮೂಡಿದ ತೀಕ್ಷ್ಣತೆ, ಅವನು ತಲೆ ತಗ್ಗಿಸು ವಂತೆ ಮಾಡಿತು.

"ಅಮ್ಮಾ ಅಣ್ಣನ್ನ ನೋಡಿದೆಯಾ ?" ತಾಯ ಹಿಂದೆ ಬಂದು ನಿಂತು ಇಂದು ಕೇಳಿದಳು.

"ಅವನು ನಿನ್ನ ಅಣ್ಣ ಅಲ್ಲ. ಒಳಕ್ಕೆ ಹೋಗಿ ಮಲಗಿಕೋ."

"ಅಪ್ಪ ಅಣ್ಣಾಂತ ಹೇಳಿದ......."

"ಒಂದು ಸಲ ಹೇಳಿದ್ದು ಕೇಳಿಸಲಿಲ್ಲ ಇಂದು. ಹೋಗು, ಮೋಹನ್—ನೀನೂ. ಗಂಟೆ ಒಂಭತ್ತಾಯಿತು."

ಆ ಮಾತಾಡಿದಾಗ ಎಷ್ಟು ಕರ್ಕಶವಾಗಿತ್ತು ಆಕೆಯ ಧ್ವನಿ. ಕಣ್ಣ ಮಕ್ಕಳತ್ತ ನೋಡಿದ. ಮಕ್ಕಳೆರಡೂ ತಾಯ ಮಾತಿಗೆ ಹೆದರಿ ಒಳಗೆ ಸರಿದವು. ಆತ ಆಕೆಯನ್ನು ವ್ಯಥೆ ತುಂಬಿದ ಧ್ವನಿಯಲ್ಲಿ ಕೇಳಿದ :

"ಮಕ್ಕಳನ್ನು ಹಾಗೇಕೆ ಗದರಿಸಿಕೊಂಡೆ ಕುಸುಮಾ?"

"ಗದರಿಸಿಕೊಳ್ಳದೆ ಮತ್ತೇನು ಮಾಡಬೇಕು? ಇಲ್ಲೇ ಇದ್ದು ನಿಮ್ಮ ವಿದ್ಯವನ್ನು ಅವೂ ಕಲಿಯಬೇಕಾಗಿತ್ತೇನು? ಮಕ್ಕಳಿಗೆಂದು, ಬೆಂಗಳೂರನ್ನೆಲ್ಲಾ ಹುಡುಕಿ, ಆರಿಸಿ ತಂದಿರೇನು ಈ ಮುತ್ತನ್ನು?"

ಆಕೆಯ ಮಾತೇ ಹಸಿಹುಲ್ಲಿನಲ್ಲಿಯ ಬೆಂಕಿಯಂತೆ ಹೊಗೆಯಾಡುತ್ತಿರುವುದೇನೋ ಎನ್ನಿಸಿತು ಕಣ್ಣನಿಗೆ. ಆತ ಕಣ್ಣನ ಗಾಯವನ್ನು ಲೈಸಾಲ್ ಹಾಕಿದ ಬಿಸಿನೀರಿನಲ್ಲಿ ಅದ್ದಿದ ಹತ್ತಿಯಿಂದ ತೊಳೆಯುತ್ತಾ ಹೇಳಿದ:

"ತರಬಾರದ ವಸ್ತುವೇ ಇದು?"

"ಉಂಟೇ? ಆರಿಸಿ ತರಬೇಕಾದದ್ದು! ಬಿಟ್ಟರೆ ಇನ್ನೆಲ್ಲಾದರೂ ಸಿಗುತ್ತದೆಯೋ ಇಂಥ ಅಪರೂಪ ವಸ್ತು! ನಿಮ್ಮೊಬ್ಬರ ಕಣ್ಣಿಗೇ ಕಂಡಿತೇನೋ!?"

ವ್ಯಂಗ್ಯಪೂರ್ಣವಾದ ಆಕೆಯ ಮಾತಿಗೆ, ಆತ ಏನೂ ಉತ್ತರ ಕೊಡಲಿಲ್ಲ. ಆಕೆಯೇ ಮುಂದುವರಿಸಿ ಹೇಳಿದಳು:

"ಇದಕ್ಕಿಂತ ಒಂದು ನಾಯಿಯನ್ನು ತಂದಿದ್ದರಾದರೂ ಮೇಲಾಗುತ್ತಿತ್ತು. ಮಕ್ಕಳಿಗೆ ಆಟಕ್ಕೆ, ಮನೆ ಕಾವಲಿಗೆ ಎರಡಕ್ಕೂ ಆಗುತ್ತಿತ್ತು. ಇದನ್ನು ತೆಗೆದುಕೊಂಡೇನು ಮಾಡಬೇಕು—ಭೂಮಿಗೆ ಭಾರ, ಕೂಳಿಗೆ ದಂಡ."

"ಈ ಮಗುವಿಗಿಂತಲೂ ನಾಯಿಯೇ ಮೇಲೆ?"

"ಸಾವಿರ ಪಾಲು!"

ಮುಳ್ಳಿನಂತೆ ಇರಿಯಿತು ಆ ಮಾತು. ರಕ್ತವನ್ನು ಹೆಪ್ಪುಗಟ್ಟಿಸುವ ಕಠೋರ ತಾತ್ಸಾರ ತುಂಬಿತ್ತು ಆ ಎರಡು ಮಾತಿನಲ್ಲಿ.

"ನಿನಗಿವನ ಕಥೆ ತಿಳಿಯದು ಕುಸುಮಾ, ಅದಕ್ಕೇ ಹೀಗೆ ಮಾತಾಡುತ್ತಿ. ತಿಳಿದರೆ, ನಿನಗೂ ನನ್ನಂತೆಯೇ ಕನಿಕರವಾಗುತ್ತದೆ."

"ನೀವೇನೂ ನನಗೆ ಅವನ ಕಥೆ ಹೇಳಬೇಕಾಗಿಲ್ಲ."

"ಈ ಹುಡುಗನಲ್ಲಿ ಉತ್ತಮ ಗುಣವಿದೆ ಕುಸುಮಾ. ಯಾರಲ್ಲೋ

ಅನ್ನ ಬೇಡಲು ಹೋಗಿ, ಅನ್ನ ಸಿಗದೆ ಹಸಿದು ಅಲೆದಲೆದು, ಬೀದಿಯಲ್ಲಿ ಮೂರ್ಛೆಬಂದು ಬಿದ್ದಿದ್ದ........"

"ಅಲ್ಲೇ ಬಿಟ್ಟು ಬರಬೇಕಾಗಿತ್ತು........"

"ತಾಯಿ ಇಲ್ಲದ ತಬ್ಬಲಿ ಇವನು ಕುಸುಮ"

"ತಬ್ಬಲಿಯಾದರೆ—ಅವನೂ ಸಾಯಲಿ, ನನಗೇನು? ನೋಡಿ— ನನಗೆ ಅದೆಲ್ಲಾ ಬೇಕಾಗಿಲ್ಲ. ನನಗೀಗಾಗಲೇ ನೋಡಿಕೊಳ್ಳಲು ಎರಡು ಮಕ್ಕಳಿವೆ ಸಾಕು. ಈ ಶನಿಯನ್ನು ಬೇರೆ ಯಾರ ಕತ್ತಿಗಾದರೂ ಜೋಮಾಲೆ ಹಾಕಿ. ನನಗೆ ಬೇಡ. ನನ್ನ ಮನೆ ಅನಾಥಾಲಯವಲ್ಲ."

"ತಾಯಿಯಾದ ನಿನಗೆ ಕರಳು ಕರಗುವುದಿಲ್ಲವೇ ಕುಸುಮಾ, ಹೆಚ್ಚೇನೂ ಕೇಳುವುದಿಲ್ಲ ಇವನು. ಎರಡು ಹೊತ್ತು ಅನ್ನ ಹಾಕು. ಅದಷ್ಟು ಕೆಲಸಮಾಡಿಕೊಂಡಿರುತ್ತಾನೆ. ಅಷ್ಟೂ ಆಗುವುದಿಲ್ಲವೇ?"

"ಅವನು ಕೆಲಸಮಾಡುವುದೂ ಬೇಡ, ಅವನಿಲ್ಲಿ ಇರುವುದೂ ಬೇಡ— ಅವನಿಗೆ ನಾನು ಅನ್ನ ಹಾಕೋದು ಇಲ್ಲ. ಕರೆದುಕೊಂಡುಬಂದ ತಪ್ಪಿಗೆ ಇವತ್ತೊಂದು ರಾತ್ರಿ ಅನ್ನ ಹಾಕುತ್ತೇನೆ. ಬೆಳಿಗ್ಗೆ ಎಲ್ಲಿಂದ ಕರೆದುಕೊಂಡು ಬಂದಿರೋ ಅಲ್ಲಿಗೇ ಕಳಿಸಿಬಿಡಿ"

"ಹೋಗಲಿ ಬಿಡು. ಆಮೇಲೆ ಮಾತಾಡೋಣ" ಆತ ಮಾತನ್ನು ಮುಗಿಸಲು ಬೇಸರದ ಧ್ವನಿಯಿಂದ ಹೇಳಿದ.

"ನಾನೇನೋ ಆಡುವುದನ್ನು ಮುಗಿಸಿಯೇ ಬಿಟ್ಟಿದೇನೆ. ನೀವೇ ಕಳಿಸಿಬಿಟ್ಟರೆ ಸರಿ. ಇಲ್ಲವಾದರೆ ನಾನೇ ಬೆಳಗ್ಗೆ— ಪೊರಕೆಯಿಂದ ನಾಲ್ಕೇಟು ಬಿಗಿದು ಓಡಿಸುತ್ತೇನೆ."

"ತಾಯಾದವಳು ಈ ಮಾತಾಡಬಾರದು ಕುಸುಮಾ."

"ತಾಯಿಯಾದ್ದಕ್ಕೇ ಆ ಮಾತಾಡಿದ್ದು. ಬೆಳೆಯುವ ಮಕ್ಕಳನ್ನು ಮನೆಯಲ್ಲಿಟ್ಟುಕೊಂಡು, ಇಂಥ ಶ್ವಪಚರನ್ನು ಮನೆ ಸೇರಿಸಬಾರದೆಂಬ ಬುದ್ಧಿ ತಂದೆಯಾದವರಿಗಿರದಿದ್ದರೆ, ತಾಯಿಯಾದವಳಿಗೂ ಇರಬಾರದೇ. ಇಂಥವರ ಗಾಳಿ ಸೋಕಿದರೇ ಮಕ್ಕಳು ಕೆಡುತ್ತಾರೆ. ನೀವೇನಾದರೂ ಮಾಡಿಕೊಳ್ಳಿ. ನಾನಂತೂ ಹೇಳುವುದನ್ನು ಹೇಳಿಯಾಯಿತು. ನಿಮ್ಮ

ರಾಜಕುಮಾರನ ಶುಶ್ರೂಷೆ ಬೇಗ ಮುಗಿಸಿ ಬನ್ನಿ. ಅಡಿಗೆ ತಣ್ಣಗಾಗು ತ್ತಿದೆ" ಎಂದವಳೇ, ಉತ್ತರಕ್ಕೆ ಕಾಯದೆ, ಕಣ್ಣನನ್ನು ಒಂದು ಬಾರಿ ಕಣ್ಣೆತ್ತಿ ಕೂಡಾ ನೋಡದೆ, ಆಕೆ ಬಿರುಗಾಳಿಯಂತೆ ಒಳಗೆ ಹೋದಳು.

ರಪರಪ ಮಳೆ ಹೊಯ್ದು ಬಿಟ್ಟಂತಾಯಿತು. ಕಣ್ಣ ಒದೆ ತಿಂದ ನಾಯಂತೆ ತಲೆ ಬಗ್ಗಿಸಿದ್ದ. ಆಕೆಯ ಮಾತು ಅವನಿಗೆ ಪೂರಾ ಅರ್ಥ ವಾಗದಿದ್ದರೂ, ಆಕೆಗೆ ತಾನ್ನಿಲ್ಲಿ ಬಂದುದು ಒಪ್ಪಿಗೆಯಾಗಲಿಲ್ಲವೆಂದೂ, ತನ್ನನ್ನಿಲ್ಲಿಗೆ ಕರೆತಂದುದಕ್ಕಾಗಿ ಆತನಮೇಲೆ ಸಿಟ್ಟಾದಳೆಂದೂ, ತನ್ನನ್ನು ಆಕೆ ಅಲ್ಲಿಂದ ಓಡಿಸುವುದು ಖಂಡಿತವೆಂದೂ—ಅಷ್ಟು ಅವನಿಗೆ ಅರ್ಥ ವಾಗಿತ್ತು. ಆತ ಮಾತನಾಡದೆ, ತಲೆ ಎತ್ತಿ ಕಣ್ಣನ ಮುಖವನ್ನು ನೋಡದೆ, ಗಾಯವನ್ನು ತೊಳೆದು, ಔಷಧ ಹಾಕಿದ. ಅಪ್ರಯತ್ನವಾಗಿ ಆತನ ಬಾಯಿಂದ ಬಂತು ಮಾತು—

"ಕಣ್ಣ, ಈ ಪ್ರಪಂಚದಲ್ಲಿ ಎಷ್ಟೋ ಜನಕ್ಕೆ ತಾವು ಮನುಷ್ಯ ರೆಂಬುದೇ ಮರೆತು ಹೋಗಿರುತ್ತದೆ."

ಆತನ ಕಣ್ಣಿನಿಂದ ಜಾರಿದ ಕಂಬನಿಯೊಂದು ಕಣ್ಣನ ಕಾಲ ಮೇಲೆ ಬಿತ್ತು. ಕಣ್ಣನ್ನ ಬಿಗಿದು ಕಟ್ಟಿದ ಕಂಬನಿಗೂ ಅದು ಕೀಲಿಯಾಯಿತು. ಅವನ ಬಾಯಿಂದ ಸದ್ದು ಬರದಿದ್ದರೂ ಕಣ್ಣಿನಿಂದ ನೀರು ಹರಿಯುತ್ತಿತ್ತು. ಆತ ಅದನ್ನು ಕಂಡೂ ಕಾಣದವನಂತೆ, ಔಷಧದ ಸೀಸೆಗಳು, ನೀರಿನ ಪಾತ್ರೆಯನ್ನು ತೆಗೆದುಕೊಂಡು—

"ಈಗ, ನಿನಗಷ್ಟು ಅನ್ನ ತರ್ತೇನೆ. ಇರು ಕಣ್ಣ" ಎಂದು ಒಳಗೆ ಹೋದ. ಕಂಬನಿ ತುಂಬಿದ ಕಣ್ಣಿನಿಂದ, ಆತ ಒಳಗೆ ಹೋದ ಬಾಗಿಲನ್ನೇ ನೋಡುತ್ತಾ ಕುಳಿತಿದ್ದ ಕಣ್ಣ. ಅವನೆದೆಯೊಳಗೆ, ಅವನ ಅರಿವಿಗೆ ನಿಲುಕದ ಯಾವುದೋ ವ್ಯಥೆ ಗರಗಸದಂತೆ ಕುಯ್ಯುತ್ತಿತ್ತು. ನನ್ನ ಮೇಲೆ ಆಕೆಗೆ ಏಕಿಷ್ಟು ಸಿಟ್ಟು? ಆಕೆಗೆ ನಾನೇನು ತಪ್ಪು ಮಾಡಿದೆ? ಎಂದು ಅವನ ಹೃದಯ, ಅವನ ಮಿದುಳನ್ನು ಪ್ರಶ್ನಿಸುತ್ತಿತ್ತು.

ಕಣ್ಣನ ಮಿದುಳು ಉತ್ತರ ಸಿಗದ ಆ ಪ್ರಶ್ನೆಯನ್ನು ಹಿಂಜುತ್ತಿರು ವಾಗಲೇ, ಆತ ತನ್ನ ಊಟಮುಗಿಸಿ, ದೊಡ್ಡ ಎಲೆಯ ತುಂಬಾ ಕಲಸಿದ ಅನ್ನವನ್ನು ತಂದಿಟ್ಟು "ತಿನ್ನು ಕಣ್ಣ" ಎಂದ.

"ಯಾಕೋ ಒಟ್ಟಿ ಅಸಿಯಾಕಿಲ್ಲ ಬುದ್ದಿ"

"ಚಿಂತೆಯಿಲ್ಲ, ಸೇರಿದಷ್ಟನ್ನು ತಿನ್ನು. ಉಳಿದದ್ದನ್ನು ನಾಳೆಗಿಟ್ಟುಕೊ. ಈ ಮನೆಯಲ್ಲಿ ನಿನ್ನನ್ನು ಇಟ್ಟುಕೊಳ್ಳುವ ಪುಣ್ಯ ನನಗಿಲ್ಲ. ಒಪ್ಪೊತ್ತಾದರೂ ನೀನು ಹೊಟ್ಟೆತುಂಬ ಊಟ ಮಾಡಿದ್ದನ್ನು ನೋಡುತ್ತೇನೆ." ಎಂದ ಆತ.

ಕಣ್ಣನ ಹೊಟ್ಟೆ ಆತನ ಪ್ರೀತಿಯಿಂದಲೇ ತುಂಬಿತ್ತು. ಆದರೂ ಆತನ ಬಲವಂತಕ್ಕಾಗಿ ಎರಡು ತುತ್ತು ಊಟ ಮಾಡಿದ. ಬಲವಂತವಾಗಿ ತುರುಕಿದ ಅನ್ನದಿಂದ, ಹೊರಹೊರಡಿಸಲ್ಪಟ್ಟಂತೆ, ಕಣ್ಣನ ಕಣ್ಣುಗಳಿಂದ ನೀರು ಹರಿದು, ಅವನು ತಿನ್ನುತ್ತಿದ್ದ ಅನ್ನದೊಂದಿಗೆ ಹನಿಹನಿಯಾಗಿ ಬೆರೆಯತೊಡಗಿತು. ಆತ, ಅದನ್ನು ಕಂಡು ತನ್ನ ಕಣ್ಣಲ್ಲಿ ಮೂಡಿದ ತೇವವನ್ನು ಅವನಿಗೆ ಕಾಣದಂತೆ ಒರಸಿಕೊಂಡು ಹೇಳಿದ—

"ಕಣ್ಣಾ, ನೀನು ಗಂಡಸು ಮಗ ಅಲ್ವಾ?"

"ಹೂ"

"ನೋಡು—ಗಂಡಸರು ಅಳಬಾರದು. ಏತಕ್ಕೂ ಅಳಬಾರದು. ಬಂದದ್ದನ್ನೆಲ್ಲಾ ನಗನಗುತ್ತಾ ಸಹಿಸಬೇಕು. ಗೊತ್ತಾಯಿತೆ?"

"ಒಟ್ಯಾಗ್ಯಾಕೋ ಸಂಕಟ ಆಯ್ತದೆ ಬುದ್ಧಿ"

"ಏಕೆ?"

"ನಂಗೊತ್ತಿಲ್ಲ ಬುದ್ಧಿ. ಅದ್ಕೆ ಅಳುಬರ್ತದೆ."

"ನನಗೆ ಗೊತ್ತಾಯಿತು ಕಣ್ಣ. ಆದರೆ ಅಳಬಾರದು. ಅಳುವವರು ಗಂಡಸರಲ್ಲ. ಇನ್ನುಮೇಲೆ ಅಳಬೇಡ."

"ಅಂಗೇ ಆಗ್ಲಿ"

"ನಾಳೆನಿಂದ ಏನು ಮಾಡುತ್ತಿ? ಇಲ್ಲಿಇಟ್ಟುಕೊಂಡು ನಿನಗೇನಾದರೂ ವಿದ್ಯೆ ಹೇಳಿಕೊಡಬೇಕೆಂದಿದ್ದೆ. ಆಗಲಿಲ್ಲ. ನಿನ್ನವ್ವ ನಿನಗೇನಾದರೂ ವಿದ್ಯೆ ಕಲಿಸಿದಾಳೇನು?"

"ಹೂ"

"ಏನು ಕಲಿಸಿದಾಳೆ?"

"ಬಿಕ್ಸೆ ಬೇಡೋದು."

"ಅಷ್ಟೇನೇ ?"

"ಊಹೂ— ಹಾಡು ಹೇಳೋದೂ ಕಲ್ಸಿದಾಳೆ."

"ನಿನಗೆ ಹಾಡು ಹೇಳಲಿಕ್ಕೆ ಬರುತ್ತದೆಯೋ ಕಣ್ಣ ?" ಆಶ್ಚರ್ಯದಿಂದ ಆತ ಕೇಳಿದ.

"ಹೂ."

"ಹಾಗಾದರೆ ಒಂದು ಹಾಡು ಹೇಳ್ತೀಯಾ, ಕೇಳೋಣ"

"ಹೇಳ್ತೀನಿ"

ಆತ ಅವನು ಹಾಡುವುದನ್ನು ಆರಂಭಿಸಲು ನಿರೀಕ್ಷಿಸಿ ಕುಳಿತ. ಕಣ್ಣನ ಹೃದಯದೊಳಗೆದ್ದ ಮೂಕ ವ್ಯಥೆಯ ಉರಿಯನ್ನ ಮರೆಸಲು ಆತ ಈ ಪ್ರಶ್ನೆಯನ್ನು ಕೇಳಿದ್ದ. ಕಣ್ಣ ತಲೆಕೆರೆದುಕೊಂಡು, ಅವನ ಅವ್ವ ಕಲಿಸಿದ ಹಾಡುಗಳನ್ನೆಲ್ಲಾ ಜ್ಞಾಪಿಸಿಕೊಂಡು ಮೊದಲು ನೆನಪಿಗೆ ಬಂದುದನ್ನು ಹಾಡತೊಡಗಿದ—

"ನಾನೊಂದ ಬಗೆದರೆ, ದೈವ ತಾನೊಂದ ಬಗೆಯಿತಲ್ಲಾ |
ನೆರಳೆಂದು ಹೋದರೆ, ಮರವೇ ತಾನುರುಳಿತಲ್ಲಾ || "

ಕಣ್ಣನಿಗೆ ತಾನು ಹೇಳಲಾರಂಭಿಸಿದ ಹಾಡಿನ ಅರ್ಥವರಿವಾಗದೆ, ಇಂದಿನ ಪರಿಸ್ಥಿತಿಯಲ್ಲಿ ತನ್ನ ಹಾಡುಕೇಳುವವರ ಮೇಲೆ ಅದೆಂಥ ಗಂಭೀರ ಪರಿಣಾಮವನ್ನುಂಟುಮಾಡಬಹುದೆಂದು ತಿಳಿಯದೆ ಹಾಡತೊಡಗಿದ. ಹತ್ತಿಕ್ಕಿದ ದುಃಖದ ಉದ್ವೇಗಕ್ಕೆ ಅವನ ಧೃಢವಾದ ಕಂಠ ನಸುಕಂಪಿಸುತ್ತಿತ್ತು. ತನ್ನೆದೆಯೊಳಗಿನ ದುಃಖವನ್ನೇ ಹಾಡಾಗಿ ತೋಡಿಕೊಂಡಂತೆ, ಹಾಡು ಹೊರಹೊಮ್ಮುತ್ತಿತ್ತು. ಹಾಡಲಾರಂಭಿಸಿದ ಕೂಡಲೇ ಅವನಿಗೆ, ಅದನ್ನು ತನಗೆ ಕಲಿಸಿ ಕಣ್ಣು ಮರೆಯಾದ ಅವ್ವನ ನೆನಪುಕ್ಕಿ, ಅನಂತ ಯಾತನೆಗೇ ಸ್ವರ ಮೂಡಿದಂತಾಗಿತ್ತು—ಅವನು ಹಾಡುವುದು. ಅವನೊಳಗಿನ ದುಃಖದ ಕಡೆತದ ತೀವ್ರತೆ ಹೆಚ್ಚಿದಂತೆ, ಅವನ ಹಾಡು ಏಕೆಯೂ ನೆರೆಯಂತೆ ಏರುತ್ತಾ ಹೋಯಿತು.

"ಊರ ಮಂದಿಯ ನೆಚ್ಚಿ, ಹರಿ ನಿನಗೆ ದೂರಾದೆ |
ಬಾರೆಂದು ಕರೆದಾಗ, ಕಾರುಣ್ಯನಿಧಿ ಕೈಬಿಟ್ಟೆಯಲ್ಲೋ ||"

"ಕಣ್ಣಾ, ಸಾಕುಮಾಡು" ನಿನ್ನ ಹಾಡು. ಇದ್ದಕ್ಕಿದ್ದಂತೇ ಆತ ಗಟ್ಟಿಯಾಗಿ ಹೇಳಿದ. ತನ್ನ ಹಾಡಿನಲ್ಲೇ ವೈಮರೆತ ಕಣ್ಣ, ಆತನ ಕರ್ಕಶವಾದ ಧ್ವನಿಯನ್ನು ಕೇಳಿ, ಬೆಚ್ಚಿಬಿದ್ದು ಹಾಡುವುದನ್ನು ನಿಲ್ಲಿಸಿದ.

"ಯಾಕೆ ಸಂದಾಕಿಲ್ವಾ ಅಯ್ಯಾ?" ಕಾತರನಾಗಿ ಕೇಳಿದ ಕಣ್ಣ. ತನ್ನ ಕೆಟ್ಟ ಹಾಡುಗಾರಿಕೆ ಆತನ ಮನಸ್ಸನ್ನು ಅಪ್ರಸನ್ನಗೊಳಿಸಿತೇನೋ ಎಂದು ಅವನಿಗೆ ದಿಗಿಲಾಯಿತು. ಹಾಗೇ ನಾಚಿಕೆಯೂ ಆಯಿತು.

"ಚೆನ್ನಾಗಿದೆ ಕಣ್ಣಾ. ಇಂಥ ಕಂಠವನ್ನು ಉಳಿಸಿಕೊಳ್ಳುವ ಶಕ್ತಿಯನ್ನು ನನಗೆ ದೇವರು ಕೊಡಲಿಲ್ಲ. ನಿನ್ನಲ್ಲಿ ದೇವರು ಅದ್ಭುತ ಶಕ್ತಿಯನ್ನು ತುಂಬಿದಾನೆ ಕಣ್ಣ. ಆದರೆ ನಾವು—ದೇವರನ್ನೇ ಕೊಂದ ಜನ. ಕೊಲ್ಲುವುದೊಂದೇ ನಾವು ತಿಳಿದ ಕಸಬು. ಎಲ್ಲಾದರೂ ಹಾಯಾಗಿ ಬಾಳು ಮಗು. ನಾನೊಂದೇ ಬಯಸುವುದು— ನಿನ್ನೊಳಗಿನ ಶಕ್ತಿ ಜಗತ್ತಿಗೆ ಬೆಳಕಾಗಲಿ."

ಭಾವ ನಿರ್ಭರತೆಯಿಂದ, ಆತ ಆ ಮಾತನ್ನು ಹೇಳಿದ. ಆತ ಆ ಮಾತನ್ನಾಡಿದ ರೀತಿಯಲ್ಲಿ, ಅದನ್ನು ಕಣ್ಣನಿಗೆ ಹೇಳುವುದಕ್ಕಿಂತ ಹೆಚ್ಚಾಗಿ, ಬೇರಾವುದೋ ಅದೃಶ್ಯ ವ್ಯಕ್ತಿಯೊಂದಕ್ಕೆ ಹೇಳುತ್ತಿರುವಂತಿತ್ತು. ಯಾರಿಗಿರಬಹುದೆಂದು ಕಣ್ಣ ಕತ್ತೆತ್ತಿ ನೋಡಿದ. ಆಕೆ ಬಾಗಿಲಿನಲ್ಲಿ ನಿಂತಿದ್ದಳು. ಅನಿರೀಕ್ಷಿತವಾಗಿ ಆಕೆಯನ್ನು ಕಂಡು ಕಣ್ಣ ಬೆಚ್ಚಿಬಿದ್ದ. ಕಣ್ಣ ನೋಡಿ, ಬೆಚ್ಚಿಬಿದ್ದುದನ್ನು ಕಂಡು, ಅವನೂ ಬಾಗಿಲತ್ತ ನೋಡಿ, ತನ್ನ ಹೆಂಡತಿಯನ್ನು ಕಂಡು ಅಭಿಮಾನ ತುಂಬಿ ತುಳುಕುವ ಧ್ವನಿಯಲ್ಲೇ ಆಕೆಯನ್ನು ಕೇಳಿದ—

"ಇವನು ಹಾಡುವುದನ್ನು ಕೇಳಿದೆಯಾ ಕುಸುಮ. ಎಂಥ ದಿವ್ಯ ಕಂಠ."

ಆಕೆ ಆ ಹಾಡು ತನ್ನ ಹೃದಯದ ಮೇಲೆ ಮಾಡಿದ ಪರಿಣಾಮವನ್ನು ಮರೆಮಾಚುತ್ತಾ ಹೇಳಿದಳು:

"ಹೂ. ನಿಮಗೊಬ್ಬರಿಗೇ ಪ್ರೀತಿಯಾಗಬೇಕು!"

"ಕಾಳಿದಾಸ ಹೇಳಿದುದು ನಿನ್ನೊಬ್ಬಳ ವಿಷಯದಲ್ಲಿ ಸುಳ್ಳಾಯಿತು. ನೋಡು."

"ಆಕೆಯ ಕರಗದ ಹೃದಯವನ್ನು ಕಂಡು ಕಹಿಯಾಗಿ ಹೇಳಿದ.

"ಏನು ಹೇಳಿದಾನೋ ನಿಮ್ಮ ಕಾಳಿದಾಸ?"

"ಹಾಡು—ಪಶುವನ್ನೂ, ಶಿಶುವನ್ನೂ, ಕಡೆಗೆ ಸರ್ಪವನ್ನೂ ಆಕರ್ಷಿಸುತ್ತದೆ ಎಂತ."

"ನಿಜವೇ. ನಾನು ಆ ಮೂರೂ ಅಲ್ಲ. ಅದಕ್ಕೇ ನನ್ನನ್ನು ಆಕರ್ಷಿಸಲಿಲ್ಲ. ಸಾಕು, ಸುಮ್ಮನಿರಿ. ಅದನ್ನೇನು ಮೆಚ್ಚಿಕೊಳ್ಳುತ್ತೀರ?"

"ಚೆನ್ನಾಗಿರುವುದನ್ನು ಮೆಚ್ಚಬಾರದೆ?"

"ಚೆನ್ನಾಗಿರುವುದನ್ನು ಮೆಚ್ಚಬಾರದೆಂದು ಯಾರು ಹೇಳುತ್ತಾರೆ. ಆದರೆ ತಿಪ್ಪೆಯ ಮೇಲೆ ಬೆಳೆದ ಹೂವು ಎಷ್ಟೇ ಚೆನ್ನಾಗಿದ್ದರೂ ಪೂಜೆಗೆ ಬರೋಲ್ಲ. ತಿಪ್ಪೆ ಹೂವು ತಿಪ್ಪೆಗೇ ಸರಿ."

"ನಿಜ, ನಿಜ. ನಿನ್ನ ಹಾಗೇ ಅಂದುಕೊಂಡು ಸಮಾಜ, ಎಷ್ಟೋ ಸುಂದರವಸ್ತುಗಳ ಕೊಲೆ ಮಾಡುತ್ತಿದೆ. ನಿನ್ನದೇನು ತಪ್ಪು, ಲೋಕವೇ ಹಾಗಿರುವಾಗ."

"ನೀವೊಬ್ಬರು ಅತಿವಸ್ತುವಾದರೆ ಅದು ಲೋಕದ ತಪ್ಪೆ. ಏನಾದರೂ ಅಂದುಕೊಳ್ಳಿ. ಇವತ್ತೊಂದು ರಾತ್ರಿ–ಎಷ್ಟಾದರೂ ಮೆಚ್ಚಿಕೊಳ್ಳಿ, ಎಷ್ಟಾದರೂ ಹೊಗಳಿ. ಬೆಳಗ್ಗೆ ಮಾತ್ರ ಇದು ಇಲ್ಲಿರದಿದ್ದರೆ ಸರಿ" ಎಂದಾಕೆ, ಬಂದ ಹಾಗೆ ಒಳಗೆ ಹೋದಳು.

"ಸಮಾಜ ಹುಟ್ಟನ್ನು ಮನ್ನಿಸುವುದನ್ನು ಕಲಿತಿದೆಯೇ ವಿನಾ, ಯೋಗ್ಯತೆಯನ್ನು ಮನ್ನಿಸುವುದನ್ನು ಕಲಿತಿಲ್ಲ. ಕಣ್ಣಾ, ನಿನಗೆ ಸಹಾಯ ಮಾಡುವುದು ನನ್ನಿಂದಂತಲೂ ಆಗಲಿಲ್ಲ. ಅವಳಿಗೆ ಬೇಕಿಲ್ಲದಾಗ, ನಿನ್ನನ್ನು ಇಲ್ಲಿಟ್ಟುಕೊಂಡರೆ, ನಿನಗೆ ಸುಖಕ್ಕಿಂತ ಹೆಚ್ಚಾಗಿ ನಾನು ಕಷ್ಟವನ್ನೇ ಕೊಟ್ಟಂತಾಗುತ್ತದೆ. ಹೋಗು ಕಣ್ಣಾ. ದೇವರು ತೋರಿಸಿದ ದಾರಿಯಲ್ಲಿ ಹೋಗು. ನನಗಿಂತ ಒಳ್ಳೆಯವರು, ಯಾರಾದರೂ ಪುಣ್ಯಾತ್ಮರು, ನಿನಗೆ ಆಶ್ರಯವಾಗಿ, ನಿನ್ನೊಳಗಿರುವ ಶಕ್ತಿಯನ್ನು ಬೆಳಕಿಗೆ ತರಲಿ. ಅಷ್ಟೇ ನಾನು ಮಾಡಬಹುದಾದುದು. ಹೋಗು. ಈಗ ಹೊತ್ತಾಯಿತು, ಮಲಗಿಕೋ. ಬೆಳಿಗ್ಗೆ ನೀನು ಹೋಗುವ ಮೊದಲು, ನನ್ನಿಂದಾದಷ್ಟನ್ನು ಮಾಡುತ್ತೇನೆ"

ಎಂದು ಹೇಳಿ, ಕೈಸಾಲೆಯ ದೀಪ ಆರಿಸಿ, ಭಾರವಾದ ಹೆಜ್ಜೆ ಹಾಕುತ್ತಾ ಹೋಗಿ ಬಾಗಿಲು ಹಾಕಿಕೊಂಡ. ಬೆಳಕು ಮಾಯವಾಗಿ ಮತ್ತೆ ಕತ್ತಲಾವರಿಸಿತು. ಕಣ್ಣನ ಬಾಳಿನಲ್ಲೂ ಬೆಳಕು ಬೀರಬಂದ ಬಿಸಿಲು, ಒಂದು ಗಳಿಗೆ ಯಾವುದೋ ಸುಂದರವಾದ ದೃಶ್ಯವನ್ನು ತೋರಿ ಮತ್ತೆ ಮಾಯವಾದಂತಾಯಿತು. ಹಾಕಿದ ಬಾಗಿಲಿನೊಂದಿಗೆ, ಅವನ ಬಾಳಿನಲ್ಲಿ ತೆರೆದ ಒಂದೇ ಒಂದು ಬಾಗಿಲೂ ಮುಚ್ಚಿದಂತಾಯಿತು.

ಆತನ ಮಾತಿನಿಂದ, ಬೆಳಗ್ಗೆ ತಾನು ಅಲ್ಲಿಂದ ಹೋಗಬೇಕೆಂಬುದು ನಿಶ್ಚಯವಾಗಿತ್ತು. ಆತ ಬೆಳಿಗ್ಗೆ ತನ್ನಿಂದ ಆದದ್ದನ್ನು ಮಾಡುವುದಾಗಿ ಹೇಳಿದ್ದ. ಆದರೆ ಕಣ್ಣನಿಗೆ ಅದಾವುದೂ ಅರ್ಥವಾಗಲಿಲ್ಲ. ಅವನಿಗೆ ಅರ್ಥವಾದುದಿಷ್ಟೆ—ಆಕೆಗೆ ತಾನು ಬಂದಿರುವುದು ಬೇಕಿಲ್ಲ. ಅದರಿಂದಾಗಿ ಅವನಿಗೆ ದುಃಖವಾಗಿದೆ; ಇನ್ನೂ ತಾನಲ್ಲಿದ್ದು ಆತನಿಗೆ ಹೆಚ್ಚಿನ ದುಃಖಕ್ಕೆ ಕಾರಣವಾಗಬಾರದು ; ತಾನಲ್ಲಿರಬಾರದು.

ಇರಬಾರದು–ಆಗಲೇ ಎಲ್ಲಾದರೂ ಹೊರಟುಬಿಡುವುದೆಂದು ಕಣ್ಣ ಯೋಚಿಸಿದ. ಆದರೆ ಏಕೋ ಕತ್ತಲು ಹೆದರಿಸಿತು. ಬೆಳಿಗ್ಗೆ ಅಷ್ಟು ಹೊತ್ತಿಗೇ, ಯಾರೂ ಏಳುವ ಮೊದಲೇ ಎದ್ದು ಹೊರಟುಬಿಡುವುದು ಎಂದು ನಿರ್ಧರಿಸಿ, ತನ್ನೊಂದಿಗೆ ತಂದಿದ್ದ, ಗೋಣಿಯ ತುಂಡನ್ನು ಹಾಸಿ ಮಲಗಿಕೊಂಡು, ಕಂಬಳಿಯನ್ನು ಎಳೆದುಕೊಂಡ.

ಎರಡು ದಿನಗಳ ನಂತರ ಹೊಟ್ಟೆತುಂಬ ಅನ್ನ ಬಿದ್ದು ಹೊಟ್ಟೆ ಭಾರವಾಗಿ ನಿದ್ದೆ ಕಣ್ಣನ್ನು ಎಳೆಯುತ್ತಿತ್ತು. ಆದರೆ ಮನಸ್ಸು ಎಚ್ಚರವಾಗಿತ್ತು. ಮಲಗಿ ನಿದ್ದೆ ಹೋದವನು, ಒಂದೆರಡು ಬಾರಿ, ಏನೋ ಕೆಟ್ಟ ಕನಸು ಕಂಡು, ಹೆದರಿ ಮೇಲೆದ್ದು, ಮತ್ತೆ ನಿದ್ದೆ ಮಾಡಿದ.

ಅವನಿಗೆ ಮೂರನೆಯ ಬಾರಿ ಎಚ್ಚರವಾದಾಗ, ಕತ್ತಲು ಕರಗಿ, ಮುಂಜಾವಿನ ಮೃದುವಾದ ನೀಲಿ ಬೆರೆತ ಕೆಂಬೆಳಕು ನೆಲವನ್ನು ಮುತ್ತಿಟ್ಟಿತ್ತು. ಹೊತ್ತಾಗಿಹೋಯಿತೇನೋ ಎಂದು ಗಾಬರಿಯಾಗಿ ಎದ್ದು, ಯಾರಾದರೂ ಎದ್ದಿದ್ದಾರೇನೋ ಎಂದು ಸದ್ದಾಲಿಸಿದ. ಯಾರೂ ಎದ್ದಂತಿರಲಿಲ್ಲ. ಕಂಬಳಿ, ಗೋಣಿಪಟ್ಟೆಯಲ್ಲಿ, ರಾತ್ರಿ ತಿಂದು ಮಿಕ್ಕ ಅನ್ನವನ್ನು

ಸುತ್ತಿಕೊಂಡು ಹೋಗಲಾರದೆ ತುಯ್ಯುತ್ತಿದ್ದ ಎದೆಯನ್ನು ಮುಂದೆ ದೂಡಿ, ಹೊರಬಿದ್ದ.

ಮೆಟ್ಟಲು ಬಳಿಯ ಹೂಕುಂಡದಲ್ಲಿ, ಗುಲಾಬಿಯ ಮೊಗ್ಗೊಂದು ಅರೆಯರಳಿ, ಕಣ್ಣನ ಕಣ್ಣನ್ನು ಸೆಳೆಯಿತು. ಏಕೋ ದಿಟ್ಟಿಸಿ ನೋಡಿದ. ಅದನ್ನು ನೋಡನೋಡುತ್ತ ಅವನಿಗೆ ಹಿಂದಿನ ರಾತ್ರಿ ತನ್ನನ್ನು "ಅಣ್ಣಾ" ಎಂದು ಕರೆದ ಹೆಣ್ಣುಮಗುವಿನ ಮುದ್ದಾದ ಮುಖದ ನೆನಪಾಯಿತು. ಅವನ ಕರುಳಲ್ಲಿ ಕತ್ತರಿಯಾಡಿಸಿತು, ಆ ನೆನಪು. ಕಣ್ಣಲ್ಲಿ ನೀರು ತುಂಬಿತು. ಮತ್ತೊಮ್ಮೆ ಆ ಮುಖವನ್ನು ಅವನು ನೋಡಲೂ ಸಾಧ್ಯ ವಿಲ್ಲ.

ಅರೆಬಿರಿದ ಹೂವಿನ ಮೊಗ್ಗನ್ನು ಎಳೆದುಕೊಂಡು, ತನ್ನ ಅವ್ವ ತಾನು ಮಗುವಾಗಿದ್ದಾಗ ಮುತ್ತುಕೊಡುವಂತೆ, ಹೂವಿಗೆ ತುಟಿ ಒತ್ತಿ ಮುತ್ತಿಟ್ಟು, ಧಗ್ಗೆಂದು ಎದೆಯಲ್ಲಿ ಹೊತ್ತಿದ ವ್ಯಥೆಯ ಉರಿಯನ್ನು ತಡೆಯಲಾರದೆ ಅಲ್ಲಿಂದ ಓಡಿದ ಕಣ್ಣ.

## ೧೦

ಎಂದೂ, ಯಾವ ಸಮಸ್ಯೆಯ ವಿಚಾರವಾಗಿಯೂ ಆಳವಾಗಿ ಚಿಂತಿಸಿ, ಅಭ್ಯಾಸವಿರದ ಕಣ್ಣನ ಮಿದುಳಿನಲ್ಲಿ ಸಮಸ್ಯೆಯೊಂದು ಕುಣಿಯ ಲಾರಂಭಿಸಿತ್ತು—

ತನ್ನ ಬಗ್ಗೆ ಕೆಲವರು ವಿಶ್ವಾಸ ವ್ಯಕ್ತಪಡಿಸಿವರೆ, ಮತ್ತೆ ಬಹು ಮಂದಿ ಹಗೆತನವನ್ನೇ ತೋರುತ್ತಾರೆ. ಅವರ ಪ್ರೀತಿಯನ್ನಾಗಲಿ, ಇವರ ದ್ವೇಷವನ್ನಾಗಲಿ ಗಳಿಸಲು ತಾನೇನೂ ಪ್ರಯತ್ನಪಡುವುದಿಲ್ಲ. ಆದರೂ ಹಾಗೇಕೆ? ತನಗೆ ಒಳ್ಳೆಯದನ್ನು ಮಾಡುವವರಿಗಿಂತ, ಕ್ರೂರವಾಗಿರುವ ವರು ಬಲಶಾಲಿಗಳು. ಇವರು ಹೇಳಿದಂತೆ ಅವರು ಕೇಳಬೇಕು, ಇಲ್ಲವಾ ದರೆ ತನ್ನಂತೇ ಅವರನ್ನೂ ಹಿಂಸಿಸುತ್ತಾರೆ. ಬಹುದಿನಗಳ ಹಿಂದೆಂಬಂತೆ, ಒಂದು ರಾತ್ರಿ ಇವನು ಅಳುತ್ತಿದ್ದಾಗ, ಆಕೆ ಅನ್ನ ಬಟ್ಟಿಯನ್ನು ತಂದು ಕೊಟ್ಟಿದ್ದು, ಅವಳನ್ನು ಯಾವನೋ ರಾಕ್ಷಸ ಬೆತ್ತಲೆ ಮಾಡಿ, ಒಳಗೆಳೆದು

ಕೊಂಡು ಹೋದುದು, ಅವಳು ಅಯ್ಯೋ ಎಂದು ಚೀರಿದುದು—ಇಂದು ಅವನಿಗೆ ಮತ್ತೆ ನೆನಪು ಬಂದಿತು. ಈಗ ಈತನಿಗೂ ಹಾಗೇ ಆಗಿತ್ತು. ಆತ ಕಣ್ಣನನ್ನು ಮೆಚ್ಚಿಕೊಂಡು ಮನೆಗೆ ಕರೆತಂದಿದ್ದ. ಆದರೆ ಆಕೆ, ಅವನೇ ಹೋಗದಿದ್ದರೆ ಪೊರಕೆಯಿಂದ ಹೊಡೆದು ಓಡಿಸುವುದಾಗಿ ಹೇಳಿದ್ದಳು. ಆತ ಕಣ್ಣನನ್ನು ಹೊಗಳಿದ್ದ. ಆಕೆ 'ನಾಯಿಗಿಂತ ಕೀಳು, ತಿಪ್ಪೆಯ ಹೂವು' ಎಂದು ಕರೆದು ಹೀಯಾಳಿಸಿದ್ದಳು. ಯಾವುದು ನಿಜ ?

ತಾನು ನಾಯಿಗಿಂತ ಕೀಳೇ ? ಬೀದಿಯ ನಾಯಿಗಳನ್ನೆಷ್ಟನ್ನೋ ಕಣ್ಣ ಕಂಡಿದ್ದ. ತನ್ನನ್ನೂ ನೋಡಿಕೊಂಡ. ಏಕೋ ನಾಯಿಗಿಂತ ಕೀಳು ತಾನು ಎಂದುಕೊಳ್ಳಲು ಅವನ ಮನಸ್ಸು ಒಪ್ಪಲಿಲ್ಲ. ಏಕೆಂದು ಕೇಳಿದರೆ, ವಿವರಿಸಲು ಅವನಿಗೆ ತಿಳಿದಿರಲಿಲ್ಲ. ಆದರೂ ಅವನ ಮನಸ್ಸು ಒಪ್ಪಲಿಲ್ಲ. ಆದರೆ ಆಕೆ ತನ್ನನ್ನು ಹಾಗೆ ಕರೆದುದೇಕೆ ?

ಯೋಚನೆ ಹೆಚ್ಚಿದಷ್ಟೂ, ಎಂದೂ ಯೋಚಿಸಿ ಅಭ್ಯಾಸವಿರದ ಅವನ ಮಿದುಳು ಕುದಿರುಬಿಸಿಯಾಯಿತು. ಹಾಳಾಗಲಿ ಎಂದು ತಲೆ ಕೊಡವಿ ಹೊರಟ.

ಬಗಲಲ್ಲಿದ್ದ ಗೋಣಿಯಪಟ್ಟೆಯಲ್ಲಿ ರಾತ್ರಿ ತಿಂದು ಉಳಿದ ಅನ್ನ ವಿತ್ತು. ಮುಂದಿನ ಯೋಚನೆ ಅವನಿಗಿರಲಿಲ್ಲ. ಹೊಟ್ಟೆ ಹಸಿದು ಕಾಡುವ ವರೆಗೂ ಎಲ್ಲೆಲ್ಲೋ ಸುತ್ತಾಡಿದ. ಒಂದುಕಡೆ ಮೈದಾನದಲ್ಲಿ ಹಾವಾಡಿಸುವವನೊಬ್ಬ ಡೋಲು ಬಾರಿಸಿಕೊಂಡು 'ತಾಲಿ ಬಜಾವ್, ತಾಲಿ ಬಜಾವ್' ಎಂದು ಕೂಗುತ್ತಾ, ಇವನ ಬೆಳೆಯದ ಮಿದುಳನ್ನು ದಿಗ್ಭ್ರಮೆಗೊಳಿಸುವ ಹಲವಾರು ಹಸ್ತಚಮತ್ಕಾರಗಳನ್ನು ಪ್ರದರ್ಶಿಸಿದ. ಖಾಲಿ ಅಲ್ಯುಮಿನಿಯಂ ಬಟ್ಟಲನ್ನು ಬಾರಲು ಹಾಕಿ, ಮಾವಿನ ಗಿಡ ಬೆಳೆಸಿ ತೋರಿಸಿದ; ಬೇವಿನ ಎಲೆಯುಜ್ಜಿ ಚೇಳುಗಳನ್ನು ತೋರಿಸಿದ; ಒಂದು ರೂಪಾಯನ್ನು ಎರಡು ರೂಪಾಯಿ ಮಾಡಿದ; ನೋಡುತ್ತಾ ನಿಂತವರ ಜೇಬಿನಿಂದ ಹಾವೊಂದನ್ನು ತೆಗೆದು, ಆತ ಗಾಬರಿಯಿಂದ ಓಡುವಂತೆ ಮಾಡಿದ. ಅದನ್ನು ನೋಡುತ್ತಾ, ನೋಡುತ್ತಾ, ಆ ನೋಟದಲ್ಲಿ ಮರುಳಾದ ಕಣ್ಣ, ತನ್ನ ಮಿದುಳನ್ನು ಬಳಲಿಸುತ್ತಿದ್ದ ಸಮಸ್ಯೆಯನ್ನು ಮರೆತುಬಿಟ್ಟ.

ಹಾವಾಡಿಗನ ಆಟ ಮುಗಿದು, ಜನ ಚದುರಿದ ಮೇಲೆ, ಕಣ್ಣನೂ ಅಲ್ಲಿಂದ ಹೊರಟ. ದೇವಸ್ಥಾನವೊಂದರ ಮುಂದೆ, ದನಗಳು ನೀರು ಕುಡಿಯಲೆಂದು ಇಟ್ಟ ಕಲ್ಲಿನ ತೊಟ್ಟಿಯಲ್ಲಿ ನೀರು ಕಾಣಿಸಿತು. ನೀರಿನೊಂದಿಗೆ ಊಟದ ನೆನಪೂ ಆಯಿತು. ತೊಟ್ಟಿಯ ಪಕ್ಕದಲ್ಲಿದ್ದ ಅರಳಿಯ ಕಟ್ಟೆಯ ಮೇಲೆ ಕುಳಿತು, ಗೋಣಿತಟ್ಟಿನಲ್ಲಿದ್ದ ಊಟವನ್ನು ಮುಗಿಸಿ, ನೀರು ಕುಡಿದ. ಬಲಿಯುವ ಬಿಸಿಲು, ಮರದ ತಣ್ಣನೆ ನೆರಳು, ತುಂಬಿದ ಹೊಟ್ಟೆ, ದಣಿದ ಮಿದುಳು–ಎಲ್ಲವೂ ಸೇರಿ, ಕಣ್ಣು ಕವಿದು ನಿದ್ದೆ ಬಂತು. ಅಲ್ಲೇ ಮಲಗಿ ನಿದ್ದೆಹೋದ.

ನಿದ್ರೆ ಮುಗಿದು ಮೇಲೆದ್ದವನೇ ಕಣ್ಣ ತನ್ನ ಬಿಡಾರವನ್ನು ಬಗಲಿಗೇರಿಸಿ, ಅಲ್ಲಿಂದ ಮುಂದೆ ಹೂರಟ—ಮಧ್ಯಾಹ್ನದ ಇಳಿಬಿಸಿಲಿನಲ್ಲಿ. ನಾಯಿ ಕಡಿದ ಕಾಲು ಇನ್ನೂ ಕೊಂಚ ನೋಯುತ್ತಿದ್ದರೂ, ಅವನ ಮನಸ್ಸೇಕೋ ಹರ್ಷವಾಗಿತ್ತು. ಸಿನಿಮಾದ ಜಾಹಿರಾತಿನ ಗಾಡಿಯೊಂದು ಬ್ಯಾಂಡು ಬಾರಿಸಿಕೊಂಡು, ಅವನ ಮುಂದೆ ಹೋಗುತ್ತಿತ್ತು. ಗೆಲುವಾದ ಅವನ ಮನಸ್ಸಿಗೆ ಬ್ಯಾಂಡುವಾದನ ಇಂಪಾಗಿ ಕೇಳಿಸಿತು. ಅದನ್ನೇ ಹಿಂಬಾಲಿಸಿ ಮುಂದುವರಿದ. ಮಧ್ಯಾಹ್ನ ಸಂಜೆಯಾಗಿ, ಸಂಜೆ ಮಬ್ಬುಗತ್ತಲಾಗಿ, ರಾತ್ರಿಯಾಯಿತು. ಬ್ಯಾಂಡಿನ ಗಾಡಿ ಹೋದತ್ತ, ಅದರ ವಾದನವನ್ನೇ ಬಾಯಲ್ಲಿ ಅನುಕರಣ ಮಾಡುತ್ತಾ ಹಿಂಬಾಲಿಸಿದ ಕಣ್ಣ, ಅದು ತನ್ನ ನಿತ್ಯಯಾತ್ರೆಯನ್ನು ಮುಗಿಸಿ, ಸಿನಿಮಾಮಂದಿರದ ಮುಂದೆ ನಿಂತ ಕೂಡಲೇ ತಾನೂ ನಿಂತ. ಬ್ಯಾಂಡಿನ ಗಾಡಿಗೆ ಒಂದು ನೆಲೆಯಿತ್ತು, ಗುರಿಯಿತ್ತು, ನಿಲುವಿತ್ತು. ಆದರೆ ಕಣ್ಣನಿಗೆ? ಅದು ಮತ್ತೆ ಮುಂದೆಲ್ಲಾದರೂ ಹೋಗುವುದೇನೋ ಎಂದು ನಿರೀಕ್ಷಿಸಿದ. ಆದರೆ, ಅದು ಅಲ್ಲಿಂದ ಮುಂದೆ ಹೊರಡುವುದಿಲ್ಲವೆಂದು ಅವನ ಮನಸ್ಸಿಗೆ ನೆಮ್ಮದಿಯಾದಾಗ, ತನ್ನ ಅನಿಶ್ಚಿತಯಾತ್ರೆಯನ್ನು ಮುಂದುವರಿಸಿದ.

ಹಾಗೇ ಬರುತ್ತಿರುವಾಗ, ಒಂದು ಕಡೆ, ದೊಡ್ಡ ಬೀದಿಯ ಹಿಂದಿನ ಗಲ್ಲಿಯಲ್ಲಿ, ಹತ್ತಾರು ಜನ ಹುಡುಗರು ಗದ್ದಲ ಮಾಡುತ್ತಿದ್ದುದು ಕೇಳಿಸಿತು. ಬಾಲಸಹಜವಾದ ಕುತೂಹಲದಿಂದ, ಅದೇನೋ ಎಂದು ನೋಡ

ಹೋದ. ತೊಟ್ಟಿಯಲ್ಲಿ ಬಿದ್ದಿದ್ದ ಎಲೆಗಳಿಂದ, ಆ ಹುಡುಗರು ಅನ್ನವನ್ನು ಆಯುತ್ತಿದ್ದರು. ಎಷ್ಟೊಂದು ಅನ್ನ ! ಅಷ್ಟೊಂದು ಆಹಾರವನ್ನು ಒಂದೇ ಕಡೆ ಕಣ್ಣ ಎಂದೂ ನೋಡಿರಲಿಲ್ಲ. ಕೆಲವರು ತೊಟ್ಟಿಯಿಂದ ತಿನ್ನುತ್ತಿದ್ದರು. ಮತ್ತೆ ಕೆಲವರು ತೊಟ್ಟಿಯಲ್ಲಿ ಬಿದ್ದ ಎಲೆಯನ್ನು ಎತ್ತಿಕೊಂಡು ಹೋಗಿ, ರಸ್ತೆಯ ಮೇಲೆ ಕುಳಿತು ತಿನ್ನುತ್ತಿದ್ದರು.

ತಿನ್ನುತ್ತಿದ್ದವರನ್ನು ನೋಡಿದ ಕಣ್ಣ. ಎಲ್ಲರೂ ತನ್ನಂಥವರೇ. ಎಲ್ಲರ ಬಟ್ಟೆಯೂ ಅವನುಟ್ಟ ಬಟ್ಟೆಯಂತೆಯೇ—ಚಿಂದಿ. ಎಲ್ಲರ ತಲೆಯೂ ಅವನ ಹಾಗೆ ಕೆದರಿದ ತಲೆಗಳೇ. ತನ್ನಂಥವರೇ ಅಷ್ಟೊಂದು ಜನ ಇರಬಹುದೆಂದು, ಕಣ್ಣ ಕನಸು ಮನಸಿನಲ್ಲಿಯೂ ಊಹಿಸಿರಲಿಲ್ಲ. ಒಂದೇ ಬಾರಿಗೆ ಅಷ್ಟು ಜನರನ್ನು ಕಂಡು ಆಶ್ಚರ್ಯವಾಯಿತು. ಕಣ್ಣ ಅವರನ್ನು ನೋಡಿ ಆಶ್ಚರ್ಯಪಟ್ಟಂತೆ, ಅವರೂ ಕಣ್ಣನನ್ನು ನೋಡುತ್ತಿದ್ದರು—ನಾಯಿಗಳ ಗುಂಪು, ಹೊಸದಾಗಿ ಬಂದ ನಾಯನ್ನು ನೋಡುವಂತೆ; ಕುತೂಹಲದಿಂದ, ಸಂಶಯದಿಂದ, ಅಕಾರಣ ಸಿಟ್ಟಿನಿಂದ ನೋಡಿದರು. ಕಣ್ಣನೂ, ಅವರ ನೋಟದಿಂದ ಆಕರ್ಷಿತವಾದವನಂತೆ ಅವರನ್ನೇ ನೋಡಿದ. ಅವರು ಒಬ್ಬರೊಬ್ಬರನ್ನು ನೋಡುತ್ತಿರುವಾಗಲೇ, ತೊಟ್ಟಿಯ ಬಳಿಯ ಬಾಗಿಲು ತೆರೆದು, ಹುಡುಗನೊಬ್ಬ ಮತ್ತಷ್ಟು ಎಲೆಗಳನ್ನು ತೊಟ್ಟಿಯೊಳಗೆ ಹಾಕಿದ. ಮತ್ತಷ್ಟು ಅನ್ನ ! ತಾನು ಮೂರುಮೂರು ದಿನ ಹುಡುಕಿ ಅಲೆದರೂ ಸಿಗದ ಅನ್ನ, ಇಲ್ಲಿ ಅಖಂಡವಾಗಿ, ಬೇಡದೆಯೇ ಸಿಗುತ್ತಿರುವಂತೆ ಕಾಣಿಸಿತು. ಹೋಟಲ ಹಿಂದಿನ ಎಂಜಲೆಲೆಗಳ ತೊಟ್ಟಿ, ಕಣ್ಣನ ಕಣ್ಣಿಗೆ ಅನ್ನಪೂರ್ಣೆಯ ಅಕ್ಷಯಪಾತ್ರೆಯಂತೆ ತೋರಿತು.

ಅನ್ನದ ಆಗಮನ, ಇವರನ್ನು ಬಂಧಿಸಿದ ದೃಷ್ಟಿಶೃಂಖಲೆಯನ್ನು ಹರಿದು, ತನ್ನತ್ತ ಅವರ ಗಮನವನ್ನು ಸೆಳೆಯಿತು. ಅವರಂತೆಯೇ ಹಸಿದಿದ್ದ ಕಣ್ಣ, ಬಗಲೊಳಗಿದ್ದ ಗಂಟನ್ನು ನೆಲದ ಮೇಲೊಗೆದು, ತಾನೂ ತೊಟ್ಟಿಗೆ ಕೈ ಹಾಕಿದ. ಕೂಡಲೇ ಅಲ್ಲಿದ್ದ ಹುಡುಗರು, ತನ್ನ ಎಲೆಗೆ ಬಾಯಿ ಹಾಕಿದ ನಾಯಿಯನ್ನು ಬೆದರಿಸಿ ಓಡಿಸುವ ನಾಯಂತೆ, ತೊಟ್ಟಿಯನ್ನು ಬಿಟ್ಟು ಕಣ್ಣನ ಮೇಲೆ ಕವಿದರು.

ಒಂದಿಬ್ಬರು ಕಣ್ಣನ ಹೆಗಲು ಹಿಡಿದು, ತೊಟ್ಟಿಯಿಂದಾಚೆಗೆ ತಳ್ಳಿ ದರು. ಅನಿರೀಕ್ಷಿತವಾದ ಧಾಳಿಯಿಂದ ಕಣ್ಣ ಒಂದು ಗಳಿಗೆ ಅಪ್ರತಿಭ ನಾದ. ಒಂದು ಗಳಿಗೆ ತನ್ನ ಅನ್ನಕ್ಕೆ ಅಡ್ಡವಾದ ಅವರ ಮೇಲೆ ಸಿಟ್ಟು ಬಂತು. ಮುಷ್ಟಿಯನ್ನು ಬಿಗಿದು, ದುರುಗುಟ್ಟಿ ನೋಡಿದ. ಅವರೂ ಅದಕ್ಕೆ ಸಿದ್ಧವಾಗಿಯೇ ಇದ್ದರು. ಅವರ ಗುಂಪಿನಲ್ಲಿಯವನೊಬ್ಬನು—

"ಮೂಂಜಿ ಎನ್ನಾ ಪಾಕ್ರೆ, ಅಡೀಡಾ ತಿರುಡ ತಾಯವಳೀ" ಎಂದು ಅರಚಿದ.

ಕಣ್ಣನಿಗೆ ಆ ಮಾತು ಅರ್ಥವಾಗಲಿಲ್ಲವಾದರೂ, ಅದು ತನ್ನ ಮೇಲೆ ಮತ್ತೊಂದು ದಾಳಿಗೆ ಸೂಚನೆ ಎಂಬುದು ಮಾತಿನ ಧ್ವನಿಯಿಂದ ಅವನ ಹೃದಯಕ್ಕೆ ಅರಿವಾಯಿತು. ಆದರೆ ಏಕೋ ಬೇರೆಯವರನ್ನು ಕಂಡಾಗ ಆಗುತ್ತಿದ್ದಂತೆ ಆ ಗುಂಪನ್ನು ಕಂಡು ಅವನಿಗೆ ಭೀತಿಯಾಗಲಿಲ್ಲ. ಅವನ ನರನರವೂ ಬಿಗಿದು, ಪ್ರತಿಧಾಳಿಗೆ ಸಿದ್ಧವಾಯಿತು. ಅಟ್ಟಿಬಂದ ಬೇಟೆ ನಾಯಿಗಳ ಮೇಲೆ, ತಿರುಗಿ ಬೀಳಲು ಸಿದ್ಧವಾದ ಕಾಡುಹಂದಿ ಯಂತೆ, ಕಣ್ಣ, ನೆಲದ ಮೇಲೆ ಹೆಜ್ಜೆಗಳನ್ನು ಬಲವಾಗಿ ಊರಿ, ಮೊಳಕಾಲುಗಳನ್ನು ಕೊಂಚ ಬಾಗಿಸಿ, ಬೆನ್ನನ್ನು ಹುರಿಮಾಡಿ, ಕತ್ತನ್ನು ನಿಗುರಿಸಿ, ಸಿಟ್ಟು ತುಂಬಿದ ಕಣ್ಣುಗಳಿಂದ ಅವರನ್ನು ದುರುಗುಟ್ಟಿ ನೋಡಿದ. ಯಾರೂ ಹೇಳಿಕೊಡದೆಯೇ ಬರುವ ಎಚ್ಚರಿಕೆ, ಅವನಲ್ಲಿ ಜಾಗ್ರತವಾಯಿತು.

ಒಬ್ಬ ಹುಡುಗ, "ಇಂಗೆ ಪಾರ್, ಅಂಗೆ ಪಾರ್, ಇವನ ಮೂಂಜಿ ಪಾರ್" ಎಂದು ಕೇಕೆ ಹಾಕಿದ. ಅತ್ತಕಡೆಯಿಂದ ಹುಡುಗರು ತನ್ನ ಮೇಲೆ ಬೀಳಬಹುದೆಂದು, ಕಣ್ಣ ಅತ್ತಕಡೆ ಲಕ್ಷ್ಯಕೊಟ್ಟಾಗ, ಮತ್ತೊಬ್ಬ ಹುಡುಗ ಬೇರೆ ಕಡೆಯಿಂದ ಕಣ್ಣನ ಮೇಲೆ ಹಾರಿ, ಬೆನ್ನಿನ ಮೇಲೆ ಗುದ್ದಿದ. ಬಲವಾಗಿ ಬಿತ್ತು ಪೆಟ್ಟು. ಒಂದು ಗಳಿಗೆ ಬೀಳುವಂತೆ ಜೋಲಿದ ಕಣ್ಣ. ಕುರುಡು ಕ್ರೋಧ ಕಡೆಕಡೆದು ಉಕ್ಕಿತು ಅವನ ಎದೆಯಲ್ಲಿ. ಏನು ಮಾಡುತ್ತಿರುವೆನೆಂದು ಅರಿಯದೆಯೇ, ಹತ್ತಿರವಿದ್ದವನ ಮೇಲೆ ಕುರುಡಾಗಿ ಬಿದ್ದ. ಇವನು ಹಾರಿದ ವೇಗಕ್ಕೆ, ಆ ಹುಡುಗ ನೆಲದ ಮೇಲೆ ಬಿದ್ದ.

ಸಣ್ಣ ಹುಡುಗನೊಬ್ಬ, ನಾಯಿ ಕಡಿದು ಗ್ಗಾಯವಾದ ಕಣ್ಣನ ಕಾಲನ್ನು ಹಿಡಿದು ಎಳೆದ. ಹಸಿಗಾಯದ ಚರ್ಮವನ್ನು ಎಳೆದಂತೆ ನೋವಾಯಿತು. ನೋವು-ಸಿಟ್ಟು ಬೆರೆತು, ಕಣ್ಣನಿಗೆ ಮೈಮೇಲೆ ಎಚ್ಚರ ತಪ್ಪಿದಂತಾಯಿತು. ಒಂದು ಕಾಲು ಹಿಡಿದ ಹುಡುಗನನ್ನು, ಬಿಡಿಯಾಗಿದ್ದ ಕಾಲಿನಿಂದ ಝಾಡಿಸಿದ. ಏಟು ಬಿದ್ದು ನೆಲದ ಮೇಲೊರಗಿದ ಹುಡುಗನನ್ನು ಮೇಲೆತ್ತಿ, ತನ್ನ ಮೇಲೆ ಬೀಳಬಂದ ಮತ್ತೊಬ್ಬನ ಮೇಲೆ ಅಪ್ಪಳಿಸಿದ. ಕಣ್ಣನ ಮೈಯೊಳಗೆ ಭೀಮಶಕ್ತಿ ಸಂಚರಿಸಿದಂತಾಗಿತ್ತು.

ಅವರೂ, ಅವಕಾಶ ಸಿಕ್ಕಕಡೆ, ಬೆನ್ನು, ಪಕ್ಕೆ, ಎದೆ, ಮುಖ, ಮೂಗು, ಕಣ್ಣುಗಳನ್ನು ನೋಡದೆ, ಕಣ್ಣನನ್ನು ಹೊಡೆಯುತ್ತಿದ್ದರು. ನಾಲ್ಕಾರು ಜನ ಹುಡುಗರು, ಗದ್ದಲದಲ್ಲಿ ಬೆರೆಯದೆ, ಸ್ವಲ್ಪ ದೂರ ನಿಂತು ಕೇಕೆ ಹಾಕುತ್ತಾ, ವಿಕಾರವಾಗಿ ಕೂಗುತ್ತಾ, ಚಪ್ಪಾಳೆ ತಟ್ಟುತ್ತಾ, ಕುಣಿಯುತ್ತಿದ್ದರು. ಏಟು ಬೀಳುವುದು ಹೆಚ್ಚಾದಂತೆ, ಕಣ್ಣನ ಕ್ರೋಧ ಏರುತ್ತಾ ಹೋಯಿತು. ಎದುರಿಗೆ ಸಿಕ್ಕ ಹುಡುಗನೊಬ್ಬನ ಮೂಗಿನ ಮೇಲೆ ಬಲವಾಗಿ ಮುಷ್ಟಿಯಿಂದ ಅಪ್ಪಳಿಸಿದ. ಅವನ ಮೂಗು ಬಿರಿದು, ರಕ್ತ ಹಾರಿತು. ಕೈಯ ರಕ್ತವನ್ನು ನೋಡಿಕೊಂಡ ಕಣ್ಣ. ರಕ್ತ ಅವನಿಗೆ ಹುಚ್ಚು ಹಿಡಿಸಿತು. ಅವನೊಳಗಿದ್ದ ಪಶುಶಕ್ತಿಗೆ ಕಳ್ಳು ಕುಡಿಸಿತು. ತೋಳು ಹಿಡಿದ ಮತ್ತೊಬ್ಬನ ಕೈಯನ್ನು ಬಲವಾಗಿ ಕಚ್ಚಿದ. ಅವನ ಕೈ, ಕಾಲು, ಚಕ್ರದಂತೆ ಸುತ್ತುತ್ತಿತ್ತು. ಅದರ ಇದಿರು ಸಿಕ್ಕವರಾರೂ ಉಳಿಯುವಂತಿರಲಿಲ್ಲ. ಸ್ವಲ್ಪ ಹೊತ್ತು ಉತ್ಸಾಹದ ಕೂಗುಗಳಿಂದ ತುಂಬಿದ ಗುಂಪು, ಆರ್ತಧ್ವನಿಯಿಂದ, ಬೈಗಳ ಕೆಟ್ಟಧ್ವನಿಯಿಂದ ತುಂಬಿ ಹೋಯಿತು.

ಇದನ್ನು ಕಂಡು, ಅದುವರೆಗೂ ಜಗಳದಲ್ಲಿ ಬೆರೆಯದೆ ದೂರದಲ್ಲಿ ನಿಂತು ನೋಡುತ್ತಿದ್ದ, ಬಲವಾದ ಹುಡುಗನೊಬ್ಬ, ಮೊದಲು "ಅಡೀಡಾ" ಎಂದು ಕೂಗಿದವನು, ಕಣ್ಣನ ಮೇಲೆ, ನಾಯಿಯಂತೆ ಹಾರಿದ. ಉಳಿದವರನ್ನು ಬಿಟ್ಟು ಕಣ್ಣನೂ ಅವನ ಮೇಲೆ ಹಾರಿ, ಕೈಗೆ ಸಿಕ್ಕ ಅವನ ಕೂದಲನ್ನು ಹಿಡಿದು, ಅವನ ಕತ್ತು ಮುರಿಯುವಂತೆ ಅಲ್ಲಾಡಿಸಿ, ಅವನ

ತಲೆಯನ್ನು ಹತ್ತಿರದ ಗೋಡೆಗೆ ಘಟ್ಟಿಸಿದ. ಅವನು 'ಅವ್ವಾ' ಎಂದು ಚೀರಿ, ಮಲಗಿದ. ಅವನು ಚೀರುತ್ತಲೇ ಇದ್ದ. ಕಣ್ಣ ಅವನು ಮತ್ತೆ ಮೇಲೇಳದಂತೆ, ಅವನ ಎದೆಯ ಮೇಲೆ ಕಾಲೊತ್ತಿ, ದೂರ ಸರಿದು ನಿಂತವರನ್ನು ನೋಡಿದ. ನೆತ್ತರಿಡುವ ಅವನ ಮುಖ, ಬಿಗಿದ ಮುಷ್ಟಿ, ಕ್ರೋಧದಿಂದ ಗಾಳಿಯಾಡಿದ ಕೆಂಡದಂತೆ ಹೊಳೆಯುವ ಅವನ ಕಣ್ಣುಗಳನ್ನು ಕಂಡು, ಉಳಿದ ಹುಡುಗರಾರಿಗೂ, ಅವನ ಮೇಲೆ ಬೀಳಲು ಧೈರ್ಯವಾಗಲಿಲ್ಲ.

"ಸೂಳೆಮಕ್ಳ. ಯಾರಾದ್ರೂ ಮುಟ್ಟಾಕೆ ಬಂದ್ರೆ ಕೊಂದಾಕ್ಬಿಡ್ತೀನಿ" ಎಂದು ಏದುತ್ತಾ ಅಬ್ಬರಿಸಿದ ಕಣ್ಣ.

ಆ ಗುಂಪಿನವರಾರಿಗೂ ಅವನ ಸವಾಲನ್ನು ಎದುರಿಸುವ ಧೈರ್ಯವಾಗಲಿಲ್ಲ. ಸುತ್ತಲಿದ್ದವರು ದೂರ ಸರಿದುದನ್ನು ಕಂಡು, ಕಣ್ಣ ಕೆಳಗೆ ಬಿದ್ದವನನ್ನು ಜುಟ್ಟು ಹಿಡಿದು ಮೇಲೆತ್ತಿ ನಿಲ್ಲಿಸಿ, ಕೆನ್ನೆಯ ಮೇಲೆ ನೆತ್ತಿ ಅದಿರುವಂತೆ ಹೊಡೆದು—

"ಇನ್ನೊಂದ್ಸಲಾ ಮ್ಯಾಲೆ ಬೀಳ್ತೀಯಾ?" ಎಂದು ಘರ್ಜಿಸಿದ.

ಕೊಡವಿದ ಬಟ್ಟೆಯಂತೆ ಮೆತ್ತಗಾಗಿಹೋಗಿದ್ದ ಅವನು—

"ನಿನ್ದಮ್ಮಯ್ಯಾ, ನಿನ್ನ ಮುಟ್ಟಾಕಿಲ್ಲ, ಸಾಯ್ಸಬೇಡ" ಎಂದ ಅಂಗಲಾಚಿದ ಮೊದಲು ಮೇಲೆ ಬೀಳಬಂದವನು.

"ಅನ್ನ ತಿನ್ನಾಕೆ ಅಡ್ಡ ಬರ್ತೀಯಾ?"

"ಊಹೂ. ನಿನ್ನವಾಸಕ್ಕಿನ್ನು ಬರಾಕಿಲ್ಲ. ಇನತ್ತು ಬುಟ್ಬುಡು."

"ಇನ್ನೊಂದ್ಸಲ ಬೊಯ್ತೀಯಾ?"

"ನಮ್ಮವ್ವನ ಆಣೆ ಬೈಯಾಕಿಲ್ಲ."

"ಜೋಳಿಮಗ ಒಳ್ಳೆ ಕಸುವಾಗವ್ನೆ. ನೋಡೋಕೆ ಕಡ್ಡಿ ಅಂಗವ್ನೆ ಅಂತಿದ್ದೆ" ಎಂದ ಗುಂಪಿನಲ್ಲಿದ್ದ ಹುಡುಗನೊಬ್ಬ ಕಣ್ಣನತ್ತ ನೋಡುತ್ತಾ.

"ಯಾವೋನೋ ಬೊಯ್ಯೋನು?" ಕಣ್ಣ ಕೆರಳಿ ಸುತ್ತಲೂ ಈಕ್ಷಿಸಿದ. ಬೈಯುವುದು ಅವರ ನಿಘಂಟಿನಲ್ಲಿ ಪರಮಾವಧಿ ಮೆಚ್ಚಿಗೆಯ ಶಬ್ದ ಎನ್ನುವುದು, ಅಂದಿನ್ನೂ ಕಣ್ಣನಿಗೆ ತಿಳಿದಿರಲಿಲ್ಲ. ಅವನ .ಉರಿಯುವ

ಕಣ್ಣು ನೋಕಿದ ಕೂಡಲೇ, ಮಾತಾಡಿದ ಹುಡುಗ, ಬೆಕ್ಕನ್ನು ಕಂಡ ಇಲಿಯಂತೆ ಸರಕ್ಕನೆ ಹಿಂದೆ ಸರಿದ.

"ಏ, ಬೊಯ್ನಿಲ್ಲ ಬಿಡು. ಒಳ್ಳೆ ಬಲವಾಗಿದೀಯ ಅಂತಂದ." ಮತ್ತೊಬ್ಬ ಹುಡುಗ ಸಮಾಧಾನ ಮಾಡಿದ.

"ಮತ್ತೆ ಬೋಳಿಮಗ ಅಂದ"

"ಮತ್ತಿನ್ನೆಂಗೆ ಹೇಳ್ಬೇಕಾಗಿತ್ತು? ಇಷ್ಟಕ್ಕೆಲ್ಲಾ ಸಿಟ್ಟಾಗ್ತೀಯಾ. ವಾ ಮೇರೆ ಬೇಟಾ!"

ಆ ಮಾತು ಕೇಳಿ ಕಣ್ಣನಿಗೂ ಸಮಾಧಾನವಾಯಿತು. ಅವನ ಹೊಟ್ಟೆ ಹಸಿದು ಕಾತರಿಸಿತ್ತು. ಮಾತು ಬೆಳೆಸದೆ, ತೊಟ್ಟೆಯಲ್ಲಿದ್ದ ಅನ್ನದ ಎಲೆಯೊಂದನ್ನೆಳೆದುಕೊಂಡು ತಿನ್ನಲಾರಂಭಿಸಿದ. ಅವರಾರಿಗೂ ಅವನೊಂದಿಗೆ ತೊಟ್ಟೆಗೆ ಕೈಹಾಕಲು ಧೈರ್ಯವಾಗಲಿಲ್ಲ. ಹೊಟ್ಟೆಗೆ ಅನ್ನ ಬಿದ್ದ ಕೂಡಲೇ, ಅವನೊಳಗೆ ಕೆದರಿದ್ದ ದ್ವೇಷ ಶಾಂತವಾಯಿತು. ಅವರಾರೂ ತಿನ್ನದೆ, ದೂರ ನಿಂತುದನ್ನು ಕಂಡು, ಆಶ್ಚರ್ಯವಾಗಿ ಕೇಳಿದ—

"ಯಾಕ್ರೋ, ನೀವಾರೂ ತಿನ್ನಾಕಿಲ್ವಾ? ಹಸಿವಾಗಕಿಲ್ವಾ?"

"ಮತ್ತೆ ನೀನು ಹೊಡದ್ರೆ....?" ಮೂಗಿನಲ್ಲಿ ರಕ್ತ ಹರಿಯುತ್ತಿದ್ದ ಹುಡುಗನೊಬ್ಬ ಹೇಳಿದ.

"ಊಹೂ. ಒದಿಯಾಕಿಲ್ಲ. ನನ್ಮ್ಯಾಲೆ ಬಿದ್ರೆ ಒದಿತೀನಿ. ಸುಂಸುಮ್ನೆ ಒದ್ಯಾಕೆ ನನ್ಗೇನು ಉಚ್ಚಾ. ತಿನ್ನುಬಾ. ನಮ್ಮಪ್ಪಂದೇನು ಹೋಗ್ತದೆ"

ಅವನ ಮಾತು ಕೇಳಿ, ಉಳಿದವರಿಗೂ ತೆರಳಿದ ಧೈರ್ಯ ಮರಳಿ ಬಂತು. ಅವನೊಂದಿಗೆ ಬೆರೆತು ತಿನ್ನಲಾರಂಭಿಸಿದರು. ಒಬ್ಬ ಅನ್ನವನ್ನು ತಿನ್ನುತ್ತಾ, ಮೆಚ್ಚಿಗೆ ತುಂಬಿದ ಕಣ್ಣುಗಳಿಂದ ಕಣ್ಣನನ್ನು ನೋಡುತ್ತಾ ಹೇಳಿದ; "ಒಳ್ಳೆ ಹುಚ್ಚಾಯಿ ಅಂಗೆ ಮಾಡ್ದಲ್ಲೋ!"

ಅವನ ಮಾತು ಕೇಳಿ ಉಳಿದ ಹುಡುಗರೂ ನಕ್ಕರು. ಕಣ್ಣನೂ ನಕ್ಕ. ಆದರೆ, ಕಣ್ಣ, ತಲೆಯನ್ನು ಗೋಡೆಗೆ ಘಟ್ಟಿಸಿದ ಹುಡುಗ, ಮೇಲೇಳದಂತೆ ಮಲಗಿದ್ದ. ಅವನನ್ನು ನೋಡಿ ಕಣ್ಣನ ನಗು ಮಾಸಿ ಹೋಯಿತು. ಅವನೆದೆಯಲ್ಲಿ ಏಕೋ ವ್ಯಥೆ ಕುದಿದುಬಂತು. ಕೈಯಲ್ಲಿದ್ದ

ಅನ್ನವನ್ನು ತೆಗೆದುಕೊಂಡು, ಅವನ ಬಳಿ ಹೋಗಿ—

"ಬಾಳ ಪೆಟ್ಟಾಯ್ತಾ?" ಎಂದ.

"ಹೂ" ಎಂದು ಹುಡುಗ, ತನ್ನ ತಲೆಯನ್ನು ತೋರಿಸಿದ. ಕಣ್ಣ ಅವನ ತಲೆಯನ್ನು ತಡವಿ ನೋಡಿದ. ಪೆಟ್ಟುಬಿದ್ದ ಕಡೆ ದಪ್ಪನಾಗಿ ಬುಗುಟಿ ಎದ್ದಿತ್ತು. ನೋವಿನಿಂದ ಹುಡುಗನ ಕಣ್ಣಲ್ಲಿ ನೀರು ತುಂಬಿತ್ತು.

"ಇನ್ನೊಂಪ್ಸಲಾ ನಿನ್ನ ಹೊಡಿಯಾಕಿಲ್ಲ" ಎಂದು ಅವನ ಮೈಯನ್ನು ನೇವರಿಸಿ, ಅವನನ್ನು ತೊಡೆಯಮೇಲೆ ಎಳೆದುಕೊಂಡು, ಕೈಯ್ಯಲ್ಲಿದ್ದ ಅನ್ನವನ್ನು ಅವನ ಬಾಯಿನೊಳಗಿಟ್ಟ. ಹುಡುಗ ಅನ್ನವನ್ನು ನುಂಗಿ, ಪ್ರೀತಿತುಂಬಿದ ಧ್ವನಿಯಲ್ಲಿ ಹೇಳಿದ—

"ನೀನು ಬಾಳ ಒಳ್ಳೇವ್ನು"

"ಊಹೂ. ನಾನು ಪಿಶಾಚಿ. ನಿಂಗೆ ಹಂಗೊಡಿಬಾರ್ದಾಗಿತ್ತು. ಸಿಟ್ನಾಗೆ ನಂಗೆ ಎಚ್ರ ಹಾರೋಗಿತ್ತು. ಇನ್ಮ್ಯಾಕೆ ನಾವಿಬ್ರೂ ಜೊತೆಯಾಗಿ ಉಣ್ಣೋಣ. ಆ...."

ಹುಡುಗ ಸಮ್ಮತಿ ಸೂಚಿಸಿ ತಲೆಹಾಕಿದ.

"ನಮ್ಜೊತೇಲೇ ಇದ್ಬುಡು. ನಾವೆಲ್ಲಾ ಇಲ್ಲೇ ಇರಾವಾ" ಎಂದ ಮತ್ತೊಬ್ಬ.

"ಇಲ್ಲಿದ್ರೆ ಹೊಟ್ಟೆ ತುಂಬೋದು ಎಂಗೆ. ಅನ್ನ ಯಾರಾಕ್ತಾರೆ.?"

"ಇಲ್ಲಿ ದಿನಾ ಅನ್ನಾ ಸಿಗ್ತದೆ."

"ದಿನಾಗ್ಲೂ"

"ಊ"

"ಯಾರೂ ಬೈಯಕಿಲ್ವಾ?" ಆಶ್ಚರ್ಯದಿಂದ ಕಣ್ಣ ಕೇಳಿದ.

"ಇಲ್ಲ. ಎಲ್ಡೊತ್ತೂ ಅನ್ನ ಸಿಗ್ತದೆ."

"ಅಂಗ್ರಾದ್ರಿದ್ಬಿಡ್ತೀನಿ."

"ನಿನ್ನ ಹೆಸರೇನೋ?" ಮತ್ತೊಬ್ಬ ಹುಡುಗ ಕೇಳಿದ.

"ಕಣ್ಣ"

"ಕಣ್ಣ ನಾವು ಒಂದು, ಬಾಜಿಮೇಲೆ ಬಂದು, ಆಡಿದವಮಾತು ಸಿಂಧು" ಹೆಸರು ಕೇಳಿದ ಹುಡುಗ ರಾಗವಾಗಿ ಹೇಳಿದ. ಕಣ್ಣನಿಗೆ ಆ ಮಾತು ಅರ್ಥವಾಗಲಿಲ್ಲ. ಕೇಳಿದ :

"ಅಂಗಂದ್ರೆ ಏನು ?"

"ಅಂಗಂದ್ರೆ, ಸಿಂಗೊತ್ತಿಲ್ವಾ ?"

"ಇಲ್ಲ"

"ಅಂಗಂದ್ರೆ, ನಾವೆಲ್ಲಾ ಸಾಯೋವರ್ಗೂ ಸ್ನೇಹಿತ್ರೂಂತ"

"ಅಂಗಾ! ಇನ್ನೊಂದ್ಸಲ ಹೇಳು, ಕೇಳಾಣ"

"ಕಣ್ಣ ನಾವು ಒಂದು, ಬಾಜಿಮೇಲೆ ಬಂದು, ಆಡಿದವಮಾತು ಸಿಂಧು" ಮತ್ತೊಮ್ಮೆ ಹುಡುಗ ರಾಗವಾಗಿ ಹೇಳಿ ನಕ್ಕ. ಅವನು ತಲೆಯಲ್ಲಾಡಿಸುತ್ತಾ, ರಾಗವಾಗಿ ಹೇಳಿದ ರೀತಿಯನ್ನು ಕಂಡು, ಎಲ್ಲರೂ ನಕ್ಕರು.

"ಈ ಲೌಡಿಮಗ ಜೋಯ್ಸಪ್ಪ ಕಣ್ರೋ. ಲಗ್ನಾ ಕಟ್ಟೆಸ್ತಾನೆ" ಎಂದ ಒಬ್ಬ. ಮತ್ತೊಮ್ಮೆ ಎಲ್ಲರೂ ನಕ್ಕರು. ಯಾವ ಕೃತ್ರಿಮ ಪ್ರಯತ್ನವೂ ಇಲ್ಲದೆ ಮೂಡಿ ಬಂದ ನಗುವಿನ ಮಧುರ ಕಾವಿನಲ್ಲಿ, ಅವರೆಲ್ಲರ ಎದೆಗಳೂ ಒಂದಾಗಿ ಬೆಸೆದುಕೊಂಡವು.

ಅಂದಿನಿಂದ ಕಣ್ಣ ಆ ಗುಂಪಿನಲ್ಲಿ ಒಬ್ಬನಾಗಿ ಹೋದ.

ಹೋಟಲ ಹಿಂದಿನ ಎಂಜಲೆಲೆಯ ತೊಟ್ಟಿ ಅವನ ಅನ್ನ ಸಮಸ್ಯೆ ಯನ್ನು ನಿವಾರಿಸಿತು. ಪೋಲೀಸಿನವನು ಬಂದು, ಒಂದು ದಿನ ಓಡಿಸು ವವರೆಗೂ, ಆ ಆಸ್ಪತ್ರೆಯ ಕಟ್ಟೆ ಅವರಿಗೆ ಆಶ್ರಯವಾಗಿತ್ತು.

ಆಸ್ಪತ್ರೆಯ ಕೆಂಪು ಸೀಮೆಂಟು ಹಾಕಿದ, ತಣ್ಣನೆಯ ನುಣುಪಾದ ಕಟ್ಟೆ ಕಣ್ಣನ ಜೀವನದ ಪಾಲಿಗೆ ವಿಶ್ವವಿದ್ಯಾನಿಲಯವಾಯಿತು.

ಆ ದಿನ ಅವನು ಅನ್ನಕ್ಕಾಗಿ ಮಾಡಿದ ಹೋರಾಟ, ಅವನಿಗೆ, ಅವನಂಥವರ ಜೀವನದ ಬಹುದೊಡ್ಡ ಸತ್ಯವನ್ನು ಮನವರಿಕೆ ಮಾಡಿ ಕೊಟ್ಟಿತು : ಹಿಡಿ ಅನ್ನಕ್ಕೆ ಹತ್ತು ಬಾಯಿ ತೆರೆದಾಗ, ಮುಷ್ಟಿ ಬಲವಾಗಿ ದ್ದವನ ಹೊಟ್ಟೆತುಂಬುವುದು ಎಂಬುವುದನ್ನು ಅವನೊಳಗಿದ್ದು, ಅವನಿಗೆ

ಮಾತ್ರ ಅರಿವಾಗದಿದ್ದ ಶಕ್ತಿಯನ್ನು ಅಂದವನು ಕಂಡುಕೊಂಡಿದ್ದ. ಅವನ ಮುಷ್ಟಿಯನ್ನು ಕಂಡು ಅವನಿಗೇ ಹೆಮ್ಮೆಯಾಯಿತು—ಕುಶಲ ಕೆಲಸಗಾರನಿಗೆ, ತನ್ನ ಕಸಬಿಗೆ ಉಪಯುಕ್ತವಾದ ಸೂಕ್ಷ್ಮ ಉಪಕರಣದ ಬಗ್ಗೆ ಆಗುವಂತೆ.

ಅದರೊಂದಿಗೆ ಅವನು, ಆ ಗೆಳೆಯರೊಂದಿಗೆ ಜೀವನ ಮಾಡುತ್ತಾ, ಅವರೆಲ್ಲರೂ ತನ್ನಂತೆಯೇ ಕುಲಗೋತ್ರವಿಲ್ಲದೆ, ತನ್ನಹಾಗೇ ಎಲ್ಲೆಲ್ಲಿಂದಲೋ ಬಂದು ಕಲೆತವರೆಂಬುದನ್ನು ಅರಿತು, ಅವರನ್ನು ಪ್ರೀತಿಸುವುದನ್ನು ಕಲಿತ. ಅವನೊಂದಿಗೆ ಅವರಾಡುತ್ತಿದ್ದ ಹಲವು ಭಾಷೆಗಳನ್ನೂ ಕಲಿತ. ಲಕ್ಕೀಮುಷ್ಟಿ, ಚೌಕಾಬಾರ, ಹುಲಿಕಟ್ಟುವ ಆಟಗಳನ್ನು ಆಡುವುದು, ಹೋಟೆಲುಗಳ ಮುಂದೆ ಅಡ್ಡಾಡುತ್ತಾ, ಮುಖಲಕ್ಷಣದಿಂದ ಯಾರು ಕೇಳಿದ ಕೂಡಲೇ ಕಾಸು ಕೊಡುವರೆಂಬುದನ್ನರಿತು ಬೇಡುವುದು ಹೋಟಲ ಆಳಿನ ಕಣ್ಣುತಪ್ಪಿಸಿ, ಹೊರಗಡೆ ತೋಟದಲ್ಲಿ ಕಾಫಿ ಕುಡಿಯುತ್ತಾ ಕುಳಿತ ಗಿರಾಕಿಯಿಂದ ಕಾಫಿ ಬೇಡಿ ತರುವುದು, ರಸ್ತೆಯಲ್ಲಿ ಅರೆಸೇದಿ ಒಗೆದ ಸಿಗರೇಟನ್ನು, ಹದ್ದಿನಂತೆ ಎತ್ತಿ ಸೇದುವುದು, ಪೌರಸಭೆಯವರು ಸಾರ್ವಜನಿಕರಿಗಾಗಿ ಕಟ್ಟಿಸಿದ ಕಕ್ಕಸುಗಳನ್ನು ಬೇಕೆನಿಸಿದಾಗ ಸ್ನಾನಗೃಹವಾಗಿ ಉಪಯೋಗಿಸುವುದು, ಬೀದಿಯ ಮೂಲೆಯಲ್ಲಿ ಸಂಜೆಯ ಹೊತ್ತು ಉರಿಯುವ ಒಲೆಯಮೇಲೆ ಬಾಣಲೆ ಇಟ್ಟುಕೊಂಡು, ವಡೆ, ನಿಪ್ಪಟ್ಟಲು ಮಾಡಿ ಮಾರುವ ಮುದುಕಿಯಿಂದ, ಅದನ್ನು ಜಾರಿಸಿ ತಂದು ತಿನ್ನುವುದು, ಮದುವೆಯ ಮೆರವಣಿಗೆಗಳನ್ನು ಹಿಂಬಾಲಿಸಿ ಹೋಗಿ, ರಸಕವಳದ ಉಚ್ಚಿಷ್ಟವನ್ನು ಸಂಪಾದಿಸುವುದು, ನಾಯಿಗಳೊಂದಿಗೆ ಹೋರಾಡುವುದು, ಗುರಿಯಿಟ್ಟು ಕಲ್ಲೆಸೆಯುವುದು, ಮಿಂಚಿನಂತೆ ನುಸುಳಿ ಓಡುವುದು, ಅವಾಚ್ಯ ಶಬ್ದಗಳನ್ನು ಹಲವಾರು ಭಾಷೆಗಳಲ್ಲಿ ಲೀಲಾಜಾಲವಾಗಿ ಪ್ರಯೋಗಿಸುವುದು—ಆ ಬಗೆಯ ಜೀವನ ಕಲಿಸಬಹುದಾದ ಸಕಲ ವಿದ್ಯೆಗಳಲ್ಲೂ ಕಣ್ಣ ಪಾರಂಗತನಾದ. ರಸ್ತೆಯ ಹೆಸರು ತಿಳಿಯದೆಯೇ ಇಡೀ ಬೆಂಗಳೂರನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸೋಸಬಲ್ಲ ಶಕ್ತಿ ಅವನಿಗೆ ಸಾಧಿಸಿತು.

ಈ ಬಗೆಯ ಜೀವನದಿಂದಾಚೆಗೆ ಬೇರೊಂದು ಬಗೆಯ ಜೀವನ ತನಗಿರಬಹುದೆಂಬುದನ್ನರಿಯದೆಯೇ, ಕಣ್ಣ, ಅರಿವಾಗದಂತೆ, ದಿನಗಳನ್ನೂ, ತಿಂಗಳುಗಳನ್ನೂ, ವರ್ಷಗಳನ್ನೂ ಕಳೆದ—ಆ ಗುಂಪಿಗೆ ಹೆಗ್ಗಡೆಯಾಗಿ. ಹೀಗೆ ಜೀವಿಸುತ್ತಿರುವಾಗಲೇ ಕಣ್ಣ, ಒಂದು ದಿನ, ತನ್ನ ಗುಂಪನ್ನು, ಸಮಯ ಬಂದಾಗ ಪ್ರತೀಕಾರಾಸ್ತ್ರವಾಗಿ ಉಪಯೋಗಿಸುವುದನ್ನೂ ಕಲಿತ.

ಒಂದು ದಿನ ಮಧ್ಯಾಹ್ನ ಕಣ್ಣ, ಜೊತೆಯವರೊಂದಿಗೆ ಚೌಕಾಬಾರ ಆಡುತ್ತಾ ಕುಳಿತಿದ್ದ. ಆ ಗುಂಪಿನಲ್ಲಿದ್ದು, ಮೊದಲ ದಿನದಿಂದಲೇ ಕಣ್ಣನಿಗೆ ಆಪ್ತ ಸ್ನೇಹಿತನಾಗಿದ್ದ ಮುನಿಸ್ವಾಮಿ, ಜೋಲು ಮೋರೆ ಹಾಕಿಕೊಂಡು ಬಂದು ಕುಳಿತ. ಕಣ್ಣ ಅವನನ್ನು ನೋಡಿದ. ಮುನಿಸಾಮಿಯ ಕಪ್ಪು ಕೆನ್ನೆಯ ಮೇಲೆ ಕೈಬೆರಳಿನ ಬಾಸುಂಡೆ, ಐದೂ, ಕೆಂಪಗೆ ಎದ್ದು ಕಾಣುತ್ತಿದ್ದವು. ತುಟಿಯೊಂದುಕಡೆ ಒಡೆದು, ರಕ್ತ ಹರಿದು ಗದ್ದದ ಮೇಲೆ ಒಣಗಿತ್ತು. ಅದನ್ನು ನೋಡಿ ಕಣ್ಣನ ಹೃದಯ ಚುರುಕ್ಕೆಂದಿತು.

"ಏನಾಯ್ತೋ ಮುನ್ಯಾ?" ಕಣ್ಣ ಚುರುಕಾಗಿ ಕೇಳಿದ.

"ಯಾರ್‍ತಾವ ಒದೆತಿಂದು ಬಂದ್ಯೋ? ಏನ್ಮಾಡಾಕೋಗಿದ್ದಿ?" ಪಳನಿಯೂ ಪ್ರಶ್ನೆ ಮಾಡಿದ.

"ಹಣ್ಣಂಗ್ಡೀಲಿ ಹಣ್ಣು ಎತ್ತ್ಕೊಳ್ಳೋಗಿ ಸಿಕ್ಬಿದ್ದ್ಯೇನೋ?" ಆರ್ಮುಗಂ ಕೇಳಿದ.

ಮುನಿಸಾಮಿ ಉತ್ತರ ಕೊಡಲು ಯತ್ನಿಸಿದ. ಆದರೆ ಅವನ ಬಾಯಿಂದ ಉತ್ತರ ಬರಲಿಲ್ಲ. ಅಳುಬಂದಿತು.

"ಏನಾಯ್ತು ಬೊಗ್ಳೋಲೇ ಕುನ್ನಿ. ಇಲ್ದೇದ್ರೆ ಬುಲ್ಡೇಮ್ಯಾಲೆಲ್ಡು ಮಡಗ್ತೀನಿ ನೋಡು." ಕಣ್ಣ ದುಃಖದಲ್ಲಿ ಸಿಟ್ಟಾಗಿ ಕೇಳಿದ.

ಮಾತಾಡದಿದ್ದರೆ ಇನ್ನು ಏಟು ಬೀಳಬಹುದೆಂದು ಹೆದರಿ ಮುನಿಸಾಮಿ ಹೇಳಿದ:

"ಇವತ್ತೊಂದ್ರುಪಾಯ್ ಎಲ್ಡಾಣೆ ಸಿಕ್ಕಿತ್ತು ಕಣಣ್ಣ. ಮೋಸವಾಗಿ ತಕೋಂಬಿಟ್ರು."

"ಎಲ್ಡಾಣೆ ಎಲ್ಸಿಕ್ತು ನಿಂಗೆ?"

"ಬೆಳಿಗ್ಗೆ ಮಾರ್ಕೆಟ್ತವ ನಿಂತಿದ್ದೆ. ಯಾರೋ ಒಬ್ರು ಬಂದು ಬೋಲ್ಡೆತ್ಕೊಂಡ್ಬರ್ತಿಯಾ, ಎಲ್ಡಾಣಿ ಕೊಡ್ತಿವೀಂದ್ರು...."

"ಎಂತ ಬೋಲ್ಡು?"

"ಸಿನಿಮಾದ್ದು ಕಣಣ್ಣ. ನನ್ನಂಗೇ ಎಷ್ಟೋ ಹುಡುಗ್ರಿದ್ರು. ನಾವೆಲ್ಲಾ ಬೋಲ್ಡೆತ್ಕೊಂಡು ಓಗಿದ್ವಿ ಗಾಡಿಯಿಂದೆ. ಮಜ್ಜಾನ್ದಾಗೆ ಶಿವಾಜಿ ಟಾಕೀಸ್ತಾವ ಎಲ್ಡಾಣೆ ಕೊಟ್ರು. ತಗೊಂಬರ್ತಾ ಇದ್ದೆ. ಅಲ್ಲೊಂದೊಡ್ಡ ಮೋರಿ ಇಲ್ವಾ, ಕಸಾಯಿಖಾನೆ ತವ"

"ಹೂ"

"ಅಲ್ಲಿ ಇಬ್ರು ಕೂತ್ಕೊಂಡು ಲಾಡಿ ಆಟ ಆಡ್ತಾ ಇದ್ರು"

"ಅಂಗಂದ್ರೇನೋ?"

"ದೀಪದ ಬತ್ತಿ ಇರಾಕಿಲ್ವಾ...."

"ಹೂ"

"ಅದ್ನ ಸಿಂಬೆ ಸುತ್ತಿ ಮಡಗ್ತಾರೆ. ಅದ್ರಾಗೆ ಕಡ್ಡಿ ಸಿಕ್ಕಿಸ್ಬೇಕು. ಎಳ್ದಾಗ ಬತ್ತಿ ಸಿಕ್ಕಂದ್ರೆ, ಆಣೀಗಾಣೆ ಕೊಡ್ತಾನೆ. ಇಲ್ದೆ ಓದ್ರೆ ಕೊಟ್ಬಾಣಿ ಅವನ್ಗೆ"

"ಅಂಗಾ....ನೀನಾಡ್ದೇನು ಆ ಆಟಾನ?"

"ಹೂ. ಅದೆಲ್ಲಾ ಮೋಸ ಕಣಣ್ಣ. ಮೂರುಮೂರು ಕಾಸು ಕಟ್ಟಿ ಎಂಟ್ಸಲ ಆಡ್ದೆ. ಮೊದಲ್ಸಲ ಬಂತು. ಆಮ್ಯಾಕೆ ಬರ್ಲಿಲ್ಲ. ಎಲ್ಡಾಣೇನೂ ಒಂಟೋಯ್ತು. ಮೋಸ ಮಾಡ್ತೀಯ, ನನ್ನೆಲ್ಡಾಣೆ ಕೊಟ್ಬುಡು ಅಂದದಕ್ಕೆ ಅವ್ನೂ, ಅವನ್ಜೊತೇಲಿದ್ದೊಬ್ಬ ದಡಿಯ ಸಾಬಿನೂ ಇಬ್ರೂ ಸೇರ್ಕೊಂಡು ಒದ್ರು ಕಣಣ್ಣ" ಒದೆಸಿಕೊಂಡ ನೋವು ನೆನಪಾಗಿ ಮತ್ತೆ ಮುನಿಸಾಮಿ ಅಳಲಾರಂಭಿಸಿದ.

"ನೀನ್ಯಾಕೆ ಆಡೋಕೆ ಓದೋ, ತಿಂದ್ದೆಚ್ಚಾಗಿತ್ತಾ?"

"ದುಡ್ಡೋಗಾಕಿಲ್ಲ, ಬರ್‍ತದೆ ಅಂತ ನಂಬ್ಸಿದ್ರು ಕಣಣ್ಣ. ಅದ್ಕೆ."

"ಬಾಳ ಒಡದ್ರೇನೋ?" ಕಣ್ಣು ಬಿಗಿದ ಧ್ವನಿಯಲ್ಲಿ ಕೇಳಿದ. ಮುನಿಸಾಮಿ ಹೇಗೆ ಹೊಡೆದರೆಂದು ವರ್ಣಿಸದೆ, ಚಿಂದಿ ಮುಚ್ಚಿದ ತನ್ನ

ಬೆನ್ನನ್ನು ತೋರಿಸಿದ. ಬೆನ್ನೆಲ್ಲಾ ಹೊಡೆತದ ಪೆಟ್ಟಿಗೆ ಹಸಿರುಗಟ್ಟಿತ್ತು. ಕಣ್ಣ ಅದನ್ನು ಮುಟ್ಟಹೋದ. ಮುನಿಸಾಮಿ ಚಂಗನೆ ಎಗರಿ "ಮುಟ್ಟಾಕಾಗಾಕಿಲ್ಲ ಕಣಣ್ಣ. ಬಾಳನೋಯ್ತದೆ" ಎಂದ.

ಮೈಯ ರಕ್ತ ಮುಖಕ್ಕೇರಿ, ಕಣ್ಣನ ಬಿಗಿದ ಕಪ್ಪು ಮೋರೆ ಕೆಂಪ ಗಾಯಿತು. ಸುತ್ತ ಕುಳಿತ ಹುಡುಗರೂ ಮಾತಾಡಲಿಲ್ಲ. ಕಣ್ಣ ಮಾತ ನಾಡದೆ, ಕಿವಿಯ ಸಂದಿಯಲ್ಲಿ ಸಿಕ್ಕಿಸಿಕೊಂಡ ಬೀಡಿಯನ್ನು ತೆಗೆದು, ಹಚ್ಚಿ, ಮೂಗಿನಿಂದ ಹೊಗೆ ಬಿಡುತ್ತಾ, ತನ್ನ ಸಂಗಾತಿಗಳ ಒಬ್ಬೊಬ್ಬರ ಮುಖವನ್ನೂ ನೋಡಿ ಮುನಿಸಾಮಿಯನ್ನು ಕೇಳಿದ—

"ಎಷ್ಟುಜನ ಅವ್ರೊ ಅವ್ರು, ಮುನ್ಯಾ!"

"ಇಬ್ರು"

"ಎಂಗವ್ರೆ ? ಬಲ್ವಾಗವ್ರಾ"

"ಊ, ಒಬ್ಬ ಥಡಿಯ. ಕಟ್ಟಮಸ್ತಾಗವ್ನೆ, ಇನ್ನೊಬ್ಬ ಅಂಗಂಗೆ."

"ದಿನಾಗ್ಲೂ ಅಲ್ಲೇ ಇರ್ತಾರಾ."

"ಊ"

"ಎಷ್ಟೊತ್ನಾಗಿರ್ತಾರೆ ?"

"ಅಲ್ಲೇ ಇರ್ತಾರೆ ಕಣಣ್ಣ. ಪೋಲೀಸ್ನೋರು ಬಂದ್ರೆ ಮಾತ್ರ, ಆತೋಟ್ದಾಗೋಡೋಗ್ತಾರೆ. ನಾನೂ ಎಲ್ಡು ಮೂರು ದಿನ ನೋಡಿದೀನಿ ಅವರಾಟಾನಾ" ಅದುವರೆಗೂ ಸುಮ್ಮನೆ ಅವರ ಮಾತನ್ನು ಕೇಳುತ್ತಾ ಕುಳಿತಿದ್ದ ಕಂದಸ್ವಾಮಿ ಹೇಳಿದ.

"ಈಗೋದ್ರಿರ್ತಾರಾ ?"

"ಇರಬೈದು"

"ನನ್ಜೊತೇಲಿ ಯಾರ್ಯಾರು ಬರ್ತೀರಿ ?"

ಅವನು ಆ ಪ್ರಶ್ನೆಯನ್ನು ಕೇಳಿದ ರೀತಿಯನ್ನು ಕೇಳಿ, ಅವ ರೆಲ್ಲರಿಗೂ ಹೆದರಿಕೆಯಾಯಿತು. ಒಬ್ಬರ ಮುಖವನ್ನೊಬ್ಬರು ನೋಡ ತೊಡಗಿದರು. ಹಿಂದೆಂದೂ ಕಣ್ಣ ಅವರನ್ನು ಈ ಪ್ರಶ್ನೆಯನ್ನು ಕೇಳಿರ ಲಿಲ್ಲ. ಅವರು ತನ್ನ ಪ್ರಶ್ನೆಗೆ ಕೂಡಲೇ ಉತ್ತರಕೊಡಲು ಹಿಂಜರಿ

ದುದನ್ನು ಕಂಡು, ಕಣ್ಣನ ಕ್ರೋಧ ಹೆಚ್ಚಾಯಿತು. ಕಚ್ಚಿದ ಅವನ ತುಟಿ ಕಂಪಿಸುತ್ತಿದ್ದವು. ಕ್ರೋಧ ಕರ್ಕಶವಾದ ಸ್ವರದಲ್ಲಿ ಕೇಳಿದ:

"ಸಿವಸ್ವಾಮ್ಯೋರ್ಗೆ ಬರಾಕೆ ದಂ ಇಲ್ದೆ ಓದ್ರೆ ಅಂಗಂತ ಏಳ್ರಿ. ಮುಕ ಏನ್ನೋಡ್ತೀರ? ಮುಕದ್ಮೇಲೇನಾರ ಬರದೈತ?"

"ನಡಿ ಓಗೋಣ" ಅಲ್ಲಿದ್ದ ಆರು ಜನವೂ ಎದ್ದು ನಿಂತರು. ಮುನಿಸ್ವಾಮಿಯೂ ಅವರೊಂದಿಗೆ ಸೇರಿದ.

ಹುಡುಗರ ಗುಂಪು ಕಣ್ಣನ ನಾಯಕತ್ವದಲ್ಲಿ ಬಂಬೂ ಬಜಾರಿನ ಕಡೆ ನಡೆಯಿತು. ದಾರಿಯಲ್ಲಿ ಯಾರೂ ಮಾತಾಡಲಿಲ್ಲ. ಬಂಬೂ ಬಜಾರಿನಲ್ಲಿ ಹೋಗುವಾಗ ಕಣ್ಣ ದಾರಿಯಲ್ಲಿ ಬಿದ್ದಿದ್ದ ಗಟ್ಟಿ ಬಿದರಿನ ತುಂಡುಗಳನ್ನು ಜೋಡಿಸಿಕೊಂಡು, ಜೋಬಿನಲ್ಲಿ ನಾಲ್ಕಾರು ಕಲ್ಲು ತುಂಬಿಕೊಂಡ.

"ಕಂದಾ, ನೀನು ಅವರಿಬ್ರನ್ನು ನೋಡಿದೀಯಾ ಅಲ್ವೆ?" ಕಣ್ಣ ಕೇಳಿದ.

"ಹೂ"

"ನೀನೊಬ್ನೆ ಮುಂದೋಗು. ಅವರಲ್ಲಿದ್ರೆ, ಮಾತಾಡ್ಸಿ ಆಟಾ ಆಡ್ತಾ ಕೂತ್ಕೊ. ನಿನ್ನವ ಕಾಸ್ಬೈತಾ?"

"ಇಲ್ಲ"

"ಯಾರತ್ರೈತ್ರೊ?"

ಎಲ್ಲರೂ ಜೇಬುಗಳನ್ನು ತಡಕಿಕೊಂಡರು. ಒಂದಾಣೆ ಸೇರಿತು. ಕಣ್ಣ ಅದನ್ನು ತೆಗೆದುಕೊಂಡು, ಕಂದಸ್ವಾಮಿಯ ಕೈಗೆ ಕೊಟ್ಟು—

"ನೀನಾಡ್ತಾ ಕುಂತಿರು. ನಾವಿಂದೇ ಬರ್ತೀವಿ." ಎಂದ.

"ಇದ್ನೂ ಕಸ್ಕೊಂಡ್ರೆ?"

"ಅದ್ರಜ್ಜನ್ನೂ ಕಕ್ಕಸ್ತೀನಿ. ಸುಮ್ಕೆ ನಾನೇಳ್ದಾಕ್ಕೇಳು. ಊ, ನೀನೋಗು. ನಾನಲ್ಲಿ ಬಂದಾಗ ಸಿಳ್ಳಾಕ್ತೀನಿ. ನೀನು ಗದ್ಲಾಮಾಡು"

ದುಡ್ಡು ತೆಗೆದುಕೊಂಡು ಕಂದಸಾಮಿ ಮುಂದೆ ಹೊರಟ. ಅವನ ಅಷ್ಟು ದೂರ ಹೋಗುವವರೆಗೂ ಸುಮ್ಮನಿದ್ದ ಕಣ್ಣ, "ಬನ್ರೋ ನಾವೂ

ಓಗಾಣ. ಲೇ ಮುನ್ಯಾ ಅವ್ರೆಲ್ಲೋ ಕುಂತ್ಕೊಳ್ಳಾದು?" ಎಂದು ಕೇಳಿದ.

"ಮೋರಿ ಪಕ್ಕಾಗೆ. ತಗಡಿನ್ಮುಂಡಿನ ರಾಸಿ ಆಕಿಲ್ವಾ. ಅಲ್ಲೊಂದು ದೊಡ್ಡಮರ ಐತೆ ನೋಡು. ಅದ್ರ ಕೆಳಗೆ."

"ಓಗಾಣ, ನಡೀರಿ" ಎಂದು ಕಣ್ಣ, ಅಲ್ಲೇ ಮೋರಿಯಲ್ಲಿ ಇಳಿದ. ಉಳಿದ ಹುಡುಗರೂ ಅವನನ್ನು ಹಿಂಬಾಲಿಸಿದರು. ಆಳೆತ್ತರದ ಮೋರಿಯಲ್ಲಿ ಇಳಿದು, ಮೇಲೆ ನಡೆಯುವವರಿಗೆ ತಟಕ್ಕನೆ ಕಾಣಿಸದಂತೆ, ಗೋಡೆಗೆ ಹತ್ತಿಕೊಂಡು ನಡೆಯುತ್ತಾ "ಯಾರಾದ್ರೂ ಸದ್ಮಾಡಿದ್ರೆ ಸಿಗ್ಹಾಕ್ಬಿಡ್ತೀನಿ" ಎಂದು ಅಪ್ಪಣೆಮಾಡಿದ ಕಣ್ಣ. ಸದ್ದುಮಾಡದೆ ಎಲ್ಲರೂ ಅವನನ್ನು ಹಿಂಬಾಲಿಸಿದರು. ಮೋರಿಯಲ್ಲಿ ಹರಿಯುತ್ತಿದ್ದ ಕೊಳಚೆ ನೀರು, ಬದಿಯಲ್ಲಿಯ ಹೇಸಿಗೆ ಯಾವುದೂ ಅವರಿಗೆ ಲೆಕ್ಕವಿರಲಿಲ್ಲ.

ಚರಂಡಿಯ ಬದಿಯಲ್ಲಿದ್ದ ಜೋಪಡಿಗಳನ್ನು ದಾಟಿ, ತೆಂಗಿನ ತೋಟ ಕಾಣುವವರೆಗೂ ಬಂದರು. ಅಲ್ಲಿ ಕಣ್ಣನ ಹಿಂದೇ ಬರುತ್ತಿದ್ದ ಮುನಿಸಾಮಿ, ಚರಂಡಿಯ ಇನ್ನೊಂದು ಬದಿಗೆ ಸರಿದು, ಮೇಲೆ ಹತ್ತಿ ನೋಡಿ, ಹಿಂದಿರುಗಿ ಬಂದು—

"ಅಲ್ಲೆ ಇದಾರೆ ಕಣಣ್ಣ" ಎಂದ ಪಿಸುಮಾತಿನಲ್ಲಿ.

"ಯಾರ್ಯಾರಿದ್ದಾರೆ"

"ಅವ್ರೆ—ಮೂರು ಜನ"

"ಇಬ್ರು ಅಂದೆ"

"ಕಂದಾನೂ ಓಗವ್ನಲ್ಲ"

"ಮತ್ಯಾರೂ ಇಲ್ವಾ"

"ಇಲ್ಲ ಕಣಣ್ಣ"

"ಇನ್ನೊಂದ್ಸಲ ನೋಡು"

ಅಷ್ಟು ದೂರ ನಡೆದು, ಸಮೀಪಕ್ಕೆ ಬಂದಮೇಲೆ ಮುನಿಸಾಮಿ, ಮತ್ತೊಂದು ಬಾರಿ ಹೋಗಿ ನೋಡಿಬಂದು—

"ಅವ್ರೆ ಮೂರ್ಜನಾನೇ ಇರೋದು" ಎಂದು ಹೇಳಿದ.

ಮೂವರೂ ಆಟ ಆಡುತ್ತಾ ಕುಳಿತಿದ್ದ ಸ್ಥಳಕ್ಕೆ ಅವರು ಬಂದುದು,

ಗಟ್ಟಿಯಾಗಿ ಮಾತಾಡುತ್ತಿದ್ದ ಕಂದಸಾಮಿಯ ಮಾತಿನ ಸದ್ದಿನಿಂದ ಗೊತ್ತಾಯಿತು. ಕಣ್ಣ ಕೆಳದುಟಿಯನ್ನು ಎರಡು ಬೆರಳುಗಳ ನಡುವೆ ಮಡಿಚಿ, ಮೆತ್ತಗೆ ಸಿಳ್ಳುಹಾಕಿ ಉಸಿರು ಬಿಗಿ ಹಿಡಿದು ನಿಂತ. ಸ್ವಲ್ಪ ಹೊತ್ತಿನಲ್ಲೆ ಕಂದಸಾಮಿ ಗಟ್ಟಿಯಾಗಿ ಹೇಳಿದುದು ಕೇಳಿತು—

"ನಿನ್ನಾಟಾ ನಂಗ್ಬೇಕಾಗಿಲ್ಲ. ಬರೀ ಮೋಸಮಾಡ್ತೀಯ. ನನ್ಕಾಸು ಕೊಟ್ಬುಡು."

"ಸೋತುಬಿಟ್ಟು ಕಾಸ್ಕೇಳ್ತೀಯಾ ಭಾಂಚೋದ್" ಒಡೆದ ಗೊಗ್ಗರು ಧ್ವನಿಯಲ್ಲಿ ಒಬ್ಬ ಮಾತಾಡಿದುದು ಕೇಳಿತು.

"ಯಾರ್ನೋ ಸಾಬಿ. ಬಾಂಚೋದ್ ಅನ್ತೀಯಾ? ನಿಮ್ಮಪ್ಪ ಭಾಂಚೋದ್" ಕಂದಸಾಮಿ ಗಂಟಲು ಎತ್ತರಿಸಿದ.

"ನಮ್ಮಪ್ಪನ ಹೆಸರೆತ್ತುತ್ತೀಯ ಲೌಡೀಕೇ, ನಿಮ್ಮಪ್ಪನ್ಹೋರ ಸ್ತೀನಿ ತಾಳು" ಎಂದ ಮೊದಲು ಮಾತಾಡಿದವನು.

"ಅವ್ವಾ.. ಒದೀತಾನೇ ಈ ಸೂ....ಮಗ" ಎಂದು ಕಿರುಚುತ್ತಾ ಕಂದ, ಮೋರಿಯೊಳಗೆ ಧುಮುಕಿದ. ಎಲ್ಲರಿಗೂ ಗೋಡೆಗೆ ಹತ್ತಿಕೊಂಡು ನಿಲ್ಲಲು ಸನ್ನೆಮಾಡಿದ ಕಣ್ಣ.

ತನ್ನನ್ನು ಸೂ....ಮಗ ಎಂದದ್ದು ಕೇಳಿ ರೇಗಿದ ಧಡಿಯ, ಕಂದ ಸಾಮಿಯನ್ನು ಹಿಡಿಯಲು, ಅವನ ಹಿಂದೆಯೇ ತಾನೂ ಮೋರಿಗೆ ಹಾರಿದ. ಅವನು ಧುಮುಕುತ್ತಿದ್ದ ಹಾಗೇ, ಎರಡೂ ಕೈಯಲ್ಲಿ ಗಳವನ್ನು ಬಲವಾಗಿಹಿಡಿದು, ಕಣ್ಣ ತನ್ನ ಶಕ್ತಿಯೆಲ್ಲವನ್ನು ಬಿಟ್ಟು ಅವನ ಬೆನ್ನಿನ ಮೇಲೆ ಬಾರಿಸಿದ. ಬೀಸಿದ ಗಳ ರೊಯ್ಯೆಂದು ಗಾಳಿಯಲ್ಲಿ ಸದ್ದುಮಾಡಿ, ಸೆಳೆದುಬಿಟ್ಟ ಸಿಡಿಲಿನಂತೆ ಅವನ ಬೆನ್ನಮೇಲೆ ಎರಗಿತು. ಅನಿರೀಕ್ಷಿತ ವಾದ ಆ ಪ್ರಬಲ ಪ್ರಹಾರಕ್ಕೆ ಆ ಧಡಿಯನೂ ತತ್ತರಿಸಿದ. ಅವನು ಉಸಿರು ತಿರುಗಿಸಿಕೊಳ್ಳಲು ಅವಕಾಶ ಕೊಡದಂತೆ, ಎತ್ತಿ ಎತ್ತಿ ಹೊಡೆಯ ಲಾರಂಭಿಸಿದ ಕಣ್ಣ. ಉಳಿದವರೂ ಅವನ ಜೊತೆ ಸೇರಿದರು. ಧಡಿಯನ ಹಣೆ, ಮೂಗುಗಳಿಂದ ರಕ್ತ ಬಿಚ್ಚಿ, ಮೋರಿಯಲ್ಲಿ ಹೊರಳಿದ. ಕೂಡಲೇ ಕಣ್ಣ ಗೋಡೆಯನ್ನು ಹಿಡಿದು ಚರಂಡಿಯಮೇಲೆ ಹಾರಿದ. ಇನ್ನಿಬ್ಬರು ಅವನನ್ನು ಹಿಂಬಾಲಿಸಿದರು.

ಈ ಗುಂಪನ್ನು ಕಂಡ ಕೂಡಲೇ ಮೋರಿಯ ದಂಡೆಯ ಮೇಲಿದ್ದವನು ಹೆದರಿ ಓಡಲಾರಂಭಿಸಿದ.

"ಓಡೋಗ್ತೀಯಾ, ನಿನ್ನ ...." ಎಂದು, ಜೇಬಿನಲ್ಲಿ ಕಲ್ಲನ್ನು ತೆಗೆದು, ಗುರಿಇಟ್ಟು ಬೀಸಿದ ಕಣ್ಣ. ಓಡುತ್ತಿದ್ದ ಅವನ ಬೆನ್ನಿಗೆ ಕಲ್ಲು ಬಿದ್ದು ಮುಗ್ಗುರಿಸಿದ "ಅಮ್ಮಾಗೇ" ಎಂದು ಅರಚಿದ. ಮಿಂಚಿನ ವೇಗದಿಂದ ಕಣ್ಣ ಅವನ ಬಳಿ ಸಾರಿ, ಅರಚುತ್ತಿದ್ದ ಅವನ ಬಾಯನ್ನು ಒತ್ತಿಹಿಡಿದು, ಅವನೊಂದಿಗೇ ಚರಂಡಿಗೆ ಹಾರಿದ. ಉಳಿದಿಬ್ಬರು ಕಣ್ಣನಿಗೆ ನೆರವಾದರು. ಕಣ್ಣನ ಕೈಯಲ್ಲಿ ಸಿಕ್ಕ ಸಾಬಿ ಕೊಸರಲು ನೋಡಿದ. ಹತ್ತಿರದಲ್ಲಿದ್ದ ಪಳನಿ ಗಳುವಿನಿಂದ ಒಂದು ಬಾರಿಸಿದ.

"ನಿನ್ನಿತಿ ಮಾಡ್ಬುಡ್ತಿನಿ. ನಮ್ಮುಡುಗನನ್ನ ಒದೀತೀರಾ ಲೌಡಿ ಮಗನೆ?" ಎಂದು ಕಣ್ಣ ಎಡಗೈ ಬಲಗೈ ಎರಡನ್ನೂ ಒಂದು ಗಳಿಗೆಯೂ ಬಿಡುವಿಲ್ಲದಂತೆ, ಅವನ ಕೆನ್ನೆಗಳ ಮೇಲೆ ಪ್ರಯೋಗಿಸಿದ. ಸಾಬಿ ಮೆತ್ತಗಾಗಿ ಥರಥರ ನಡುಗಲಾರಂಭಿಸಿದ.

"ಇವನ ಕೈ ಇಡುಕೊಳ್ರೊ" ಎಂದ ಕಣ್ಣ. ಪಳನಿ, ಕಂದಸ್ವಾಮಿ ಇಬ್ಬರು ಅವನ ಕೈಹಿಡಿದುಕೊಂಡರು. ಸಾಬಿ ಕಾಲಲ್ಲಿ ಝಾಡಿಸಲು ಯತ್ನಿಸಿದ. ಗಳದಿಂದ ಅವನ ಮೊಳಕಾಲಿನ ಗಂಟಿನ ಮೇಲೆ ಬಿಗಿದ ಕಣ್ಣ. ಏಟಿನ ಜೋರಿಗೆ ನಿಂತ ಕಾಲು ಮುಡಚಿಕೊಂಡಿತು.

"ಕಾಲ್ತೊರಸ್ತೀಯಾ ಮಗ್ನೆ?" ಎಂದು ತುಟಿಕಚ್ಚಿ ಹೇಳಿದ ಕಣ್ಣ, ಅಸಹಾಯನಾಗಿ ನಿಂತ ಅವನ ಜೇಬುಗಳನ್ನು ಹುಡುಕಿದ. ದುಡ್ಡಿನ ಜೊತೆಗೆ, ಆಟಕ್ಕೆ ಉಪಯೋಗಿಸುತ್ತಿದ್ದ ಲಾಂದರದ ಬತ್ತಿ, ಕಬ್ಬಿಣದ ಕಡ್ಡಿ ಎರಡೂ ಸಿಕ್ಕವು. ದುಡ್ಡನ್ನು ತನ್ನ ಜೇಬಿನಲ್ಲಿ ಹಾಕಿಕೊಂಡು, ಉದ್ದವಾದ ಲಾಂದರದ ಬತ್ತಿಯಿಂದ ಅವನ ಕಾಲುಗಳನ್ನು ಕಟ್ಟಿದ. ಅವನ ಜೇಬಿನಲ್ಲಿದ್ದ ವಾಸನೆ ನಾರುವ ಗುಲಾಬಿ ಬಣ್ಣದ ಕರವಸ್ತ್ರದಿಂದ ಅವನ ಕೈಗಳನ್ನು ಬಿಗಿದು, ಅವನು ಕಿರುಚದಂತೆ, ಬಾಯಲ್ಲಿ ಹತ್ತಿರವಿದ್ದ ಗಿಡದ ಸೊಪ್ಪು ತರಿದು ತುರುಕಿ—

"ಸಾಯಿ ಬಡ್ಡಿಮಗ್ನೆ" ಎಂದು ಹೇಳಿ, ಅವನನ್ನು ಅಲ್ಲಿ ಕೆಡವಿದ. ಮೂವರೂ, ಉಳಿದವರಿದ್ದ ಹತ್ತಿರಕ್ಕೆ ಹೋದರು. ಕಣ್ಣ ಬಿಗಿದ ಏಟಿಗೆ

ಮಲಗಿದ ಆ ಧಡಿಯ ಇನ್ನೂ ಎದ್ದಿರಲಿಲ್ಲ. ಇಬ್ಬರು ಅವನು ಎದ್ದರೂ ಮಿಸುಗದಂತೆ ಬೆನ್ನುಹತ್ತಿ ಕುಳಿತಿದ್ದರು. ಮೂರನೆಯವನು ಎದ್ದರೆ ಇರಲೆಂದು, ಗಳು ಹಿಡಿದು ಸಿದ್ಧನಾಗಿದ್ದ.

"ನಡೀರೊ ಹೋಗೋಣ" ಎಂದ ಕಣ್ಣ.

"ಹಂಗೆ ಹೋಗೋದ್ಯಾಕ್ಡ ತಡಿ. ಈ ಸಾಬಿ ಎದ್ರೆ ಅಟ್ಟಸ್ಕೊಂಡು ಬರ್‍ತಾನೆ. ಬರದಂಗ್ಮಾಡಬೇಕು" ಎಂದ ಮುನಿಸ್ವಾಮಿ. ಧಡಿಯನ ಪೈಮಲ್ಲಿ ಏಟುತಿಂದ ಅವನಿಗೆ, ಅವನ ಮೇಲೆ ರಚ್ಚೆತ್ತು.

"ಏನ್ಮಾಡ್ತಿ ?"

"ಒಂದು ತಮಾಷೆ ತೋರಸ್ತೀನಿ ತಡಿ." ಎಂದವನೇ ಮುನಿಸಾಮಿ "ಇವರ್ನೆಲ್ಲಾ ಕಳಿಸ್ಬುಡು ಕಣ್ಣ" ಎಂದ.

"ಏನ್ಮಾಡ್ತಿ? ನಾವೂ ನೋಡ್ತೀವಿ" ಉಳಿದವರು ಹೇಳಿದರು.

ಕೂಡಲೇ ಮುನಿಸ್ವಾಮಿ ಮಲಗಿದ ಸಾಬಿಯ ಪೈಜಾಮುವನ್ನು ಬಿಚ್ಚಿ, ಪಳನಿಯ ಕೈಗೆ ಕೊಟ್ಟು, ಮೋರಿಯಲ್ಲಿ ಹರಿಯುತ್ತಿದ್ದ ನೀರನ್ನು ಅವನ ಮುಖದ ಮೇಲೆ ಚೆಲ್ಲಿ, ದೂರ ಸರಿದು ದಂಡೆ ಹತ್ತಿ ನಿಂತ. ಉಳಿದವರೂ ದಂಡೆಹತ್ತಿ ನಗುತ್ತಾ ನಿಂತರು. ಸ್ವಲ್ಪ ಹೊತ್ತಿನಲ್ಲಿ ಅವನಿಗೆ ಎಚ್ಚರವಾಯಿತು. ಅವನು ಏಳುತ್ತಿದ್ದ ಹಾಗೇ "ಇನ್ನೊಂದ್ಸಲಾ ನನ್ತಂಟೀಗೆ ಬರ್ತೀಯಾ?" ಎಂದು ಕಿರುಚಿದ ಮುನಿಸಾಮಿ. ಅವನ ಮುಖ ನೋಡಿದ ಕೂಡಲೇ, ಧಡಿಯ ಎದ್ದು ಅವನನ್ನು ಹಿಡಿಯ ಬೇಕೆಂದುಕೊಂಡವನು, ತನ್ನ ಬರಿ ತೊಡೆಯನ್ನೇ ನೋಡಿ ಕೆಟ್ಟ ಮಾತು ಗಳನ್ನು ಬೈಯುತ್ತಾ ನಿಂತ.

"ಬಾರೋ ಸಾಬಿ, ಒಬ್ನೇ ಸಿಕ್ಕೇಂತ ಒದೀತೀಯ"ಎಂದು ಕೂಗಿದ ಮುನಿಸಾಮಿ. ಅವನು ಬೇರೇನೂ ಮಾಡಬೇಕೆಂದು ತಿಳಿಯದೆ, ಊರೆಲ್ಲಾ ಕೇಳುವಂತೆ ಕೆಟ್ಟಧ್ವನಿಯಲ್ಲಿ ಅರಚಿದ.

ಇನ್ನಲ್ಲಿದ್ದರೆ ಯಾರಾದರೂ ಬರಬಹುದೆಂದು, ಆರುಜನವೂ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಚೆದುರಿ ಓಡಿದರು.

ಮತ್ತೆ ಅವರೆಲ್ಲಾ ಆಸ್ಪತ್ರೆಯ ಕಟ್ಟೆಯ ಮೇಲೆ ಸೇರುವಾಗ ಸಂಜೆ ಏಳುಗಂಟೆಯ ಮೇಲಾಗಿತ್ತು.

"ಭಾರಿ ಮಜಾ ಆಯ್ತು" ಎಂದ ಕಂದಸಾಮಿ. ಕಣ್ಣ ತನ್ನ ಜೇಬಿನಲ್ಲಿಟ್ಟುಕೊಂಡ, ಲಾಂದರದ ಬತ್ತಿ ಆಟದವರ ದುಡ್ಡನ್ನು ಎಲ್ಲರಿಗೂ ಹಂಚಿದ.

"ಬೇಷ್ ಯೋಚ್ನೆ ಮಾಡ್ದೆ ಕಣ್ಣಾ" ಎಂದ ಆರ್ಮುಗಂ.

"ಮತ್ತೆ ನಾವೆಲ್ಲಾ ಒಂದಾಗಿದ್ರೆ, ಫಲಾತನ್ ಬಂದ್ರೂ ಹೆದ್ರೋಕಾಗಿಲ್ಲ'' ಎಂದ ಕಣ್ಣ. ಎಲ್ಲರೂ ತಲೆಹಾಕಿ ಅವನ ಮಾತಿಗೆ ಸಮ್ಮತಿ ಸೂಚಿಸಿದರು.

ಅಂದಿನಿಂದ ಕಣ್ಣ ಆ ಗುಂಪಿನ ದಳಪತಿಯಾದ. ಅನ್ನಕ್ಕೆ ಎಂಜಲು ತೊಟ್ಟಿ, ಮಲಗಲು ಆಸ್ಪತ್ರೆಯ ಕಟ್ಟೆ, ಆಟಕ್ಕೆ ಈ ಸ್ನೇಹಿತರು—ಕಣ್ಣನಿಗೆ ತನ್ನ ಜೀವನದಲ್ಲಿ ಏನೂ ಕೊರತೆ ಇದ್ದಂತೆ ತೋರಲಿಲ್ಲ. ಅವನ ಬಾಳಿನಲ್ಲಿ ಹಗಲಿರುಳೂ ಹೊಳೆವ ಬಿಸಿಲು ತುಂಬಿದಂತಿತ್ತು.

## ೧೨

ಪೋಲೀಸರು ಆ ಗುಂಪನ್ನು ಆಸ್ಪತ್ರೆಯ ಕಟ್ಟೆಯಿಂದ ಕವಲಿಸಿದ ಮೇಲೆ ಅಲ್ಲಿಂದ ತೆರಳಿದ ಅವರು ದೇವ್ವದಮನೆಯ ಜಗುಲಿಯವಾಸಿಗಳಾಗಿ ಜೇರೂರಿದಮೇಲೆ, ಒಂದು ದಿನ ಮಧ್ಯಾಹ್ನ, ಗುಂಪು ದಿನದಂತೆಯೇ ಅನ್ನಕ್ಕಾಗಿ ಎಂಜಲು ತೊಟ್ಟಿಯ ಬಳಿ ಕಲೆತಿದ್ದಾಗ, ಅಪರಿಚಿತವಾದ ಎಳೆಯ ಕಂಠದ ಅಳುವಿನ ಧ್ವನಿ ಕೇಳಿ, ಕಣ್ಣ ಚಟಕ್ಕನೆ ತಲೆ ಎತ್ತಿ ಧ್ವನಿ ಬಂದ ಕಡೆ ತಿರುಗಿ ನೋಡಿದ—

ಸೊಂಟಕ್ಕೆ ಹರಿವ ಚಿಂದಿಯೊಂದನ್ನು ಕಟ್ಟಿದ ಹುಡುಗಿ, ಕಣ್ಣಲ್ಲಿ ನೀರು ಸುರಿಸುತ್ತಾ, ಮೂಗಿನಿಂದಿಳಿವ ಸಿಂಬಳವನ್ನು ಮುಂಗೈಯಲ್ಲಿ ತಿಕ್ಕಿಕೊಳ್ಳುತ್ತಾ, ಅಳುತ್ತಾ ನಿಂತಿತ್ತು. ಬಿಸಿಲಿನಲ್ಲಿ ಅಲೆದಲೆದು ಅದರ ಮುಖ ಕಪ್ಪಾಗಿದ್ದರೂ, ನೋಡಲು ಮುದ್ದಾಗಿತ್ತು. ಧೂಳುತುಂಬಿದ ಗುಂಗುರು ಕೂದಲು ಗಾಳಿಯಲ್ಲಿ ಆಟವಾಡುತ್ತಿದ್ದವು. ಬಳೆಗೆ ಬಿದ್ದ ಮರಿದುಂಬಿಗಳಂತೆ ಕಪ್ಪು ಕಣ್ಣುಗಳು ಹೊಳೆಯುತ್ತಾ, ಕಣ್ಣನ್ನು ತುಂಬಿದ ನೀರಿನಲ್ಲಿ ತೇಲುತ್ತಿದ್ದವು. ಅವಳ ಹೊಟ್ಟೆ ಬೆನ್ನಿಗೆ ಹತ್ತಿ, ಎದೆಯ ಎಲುಬು

ಗಳು ಎಣಿಸಬಹುದಾದಂತೆ ಎದ್ದು ಕಾಣುತ್ತಿದ್ದವು. ಕೈಯಲ್ಲೊಂದು ತೆಂಗಿನ ಕರಟ. ಎಂಟು ಹತ್ತು ವರ್ಷ ವಯಸ್ಸಿರಬೇಕು ಅವಳಿಗೆ.

ಆ ಹುಡುಗಿಯ ಕೊಳೆ ತುಂಬಿಯೂ ಕೋಮಲವಾದ ಕೋಲು ಮುಖವನ್ನು ನೋಡಿದ ಕೂಡಲೇ ಕಣ್ಣನಿಗೇನೋ ಮೋಡಿಮಾಡಿದ ಹಾಗಾಯಿತು. ಸುಮ್ಮನೆ ನೋಡುತ್ತಾ ನಿಂತ. ಅವಳನ್ನು ಮಾತನಾಡಿಸಬೇಕೆಂದು ಕೂಡಾ ಅವನಿಗೆ ತೋಚಲಿಲ್ಲ. ಯಾವುದೋ ಮಸುಕಾದ ನೆನಪು ಅವನ ಮಿದುಳನ್ನು ಹಿಂಡತೊಡಗಿತು. ಎಲ್ಲಿ ನೋಡಿದ್ದೆ ನಾನು ಈ ಹುಡುಗಿಯನ್ನು ? ಯಾರು ಇವಳು ? ಅವಳನ್ನು ನೋಡಿದ ಕೂಡಲೇ ಅವನ ಹೃದಯದಲ್ಲಿ ಮೂಡಿ ಬಂದ ಅಕ್ಕರೆ, ಮಿದುಳಿನಲ್ಲಿ ಮಲಗಿ ಮುಬ್ಬಾದ ನೆನಪನ್ನು ಎಚ್ಚರಿಸತೊಡಗಿತು.

ಹಿಂದೆ ನಡೆದುದಾವುದನ್ನೂ ಮತ್ತೆ ನೆನಸಿಕೊಳ್ಳದೆ ನೆನೆಸಿಕೊಳ್ಳುವ ಯಾವ ಅಗತ್ಯವೂ ಇಲ್ಲದೆ, ಬದುಕುವುದು ಅಭ್ಯಾಸವಾಗಿದ್ದ ಅವನಿಗೆ, ತನ್ನನ್ನೇ ನೋಡುತ್ತಾ ನಿಂತ ಅವಳ ಮುಖ, ಮರೆತು ಹೋದುದನ್ನು ಒತ್ತಾಯವಾಗಿ ಕೆರಳಿಸುತ್ತಿದ್ದುದು, ಒಣಗಬಂದ ಗಾಯದ ಮೇಲಿನ ಸಿಪ್ಪೆಯನ್ನಾರೋ ಬಲವಂತವಾಗಿ ಕಿತ್ತಂತಾಯಿತು. ಹೃದಯದ ಬೇರನ್ನೇ ಹಿಡಿದು ಅಲ್ಲಾಡಿಸಿದಂತಾಗಿ ಉಸಿರುಕಟ್ಟಿದಂತಾಯಿತು.

"ಯಾಕೊ ಆಂಗ್ನೋಡ್ತಿ ಕಣ್ಣ?"

ಕಣ್ಣ ಬಿರಿಗಣ್ಣು ಬಿಟ್ಟು ಆ ಹುಡುಗಿಯನ್ನು ನೋಡುತ್ತಾ ನಿಂತ ರೀತಿಯನ್ನು ಕಂಡು, ಆಶ್ಚರ್ಯವಾಗಿ ಕೇಳಿದ ಪಳನಿ ಅವನು ಮಾತಾಡಿದ ಕೂಡಲೇ, ಯಾವುದೋ ಕೈಗೆ ಸಿಗುವುದರಲ್ಲಿದ್ದ ಜಾರಿಕೆಯಾದ ವಸ್ತು ನುಣುಚಿಕೊಂಡು ಹೋದಂತಾಯಿತು. ಕೊಸಕ್ಕನೆ ಸಿಟ್ಟು ಬಂತು. ಕ್ಷುಬ್ಧನಾಗಿ, ಒಪ್ಪೆಂದು ಪಳನಿಯ ಬಾಯಮೇಲೆ ಹೊಡೆದ. ಅನಿರೀಕ್ಷಿತವಾಗಿ ಏಟುತಿಂದ ಪಳನಿ, ತುಟಿಯನ್ನು ತಿಕ್ಕಿಕೊಳ್ಳುತ್ತಾ ಹೆದರಿ ಹಿಂದೆ ಸರಿದ.

"ಅಣ್ಣಾ, ......."

ತನ್ನನ್ನೇ ನೋಡುತ್ತಾ ಮರವಟ್ಟಂತೆ ನಿಂತ ಕಣ್ಣನ ಕಣ್ಣುಗಳ ಮೋಡಿಗೆ ಸೆರೆಯಾದಂತೆ, ಅವನನ್ನೇ ನೋಡುತ್ತಾ ನಿಂತ ಹುಡುಗಿ ಹೇಳಿದಳು.

ಅಣ್ಣಾ !

ಕಣ್ಣಿನ ಮಿದುಳಿನಲ್ಲಿ ಕಟ್ಟೆಯ ಹಿಂದೆ ನಿಂತ ನೀರನ್ನು, ಕಟ್ಟೆ ಕಡಿದು ಬಿಟ್ಟಂತಾಯಿತು. ಒಂದು ಗಳಿಗೆ ಏನೂ ಅರ್ಥವಾಗದ ಭೋರ್ಗರೆವ ಸದ್ದು ಕೇಳಿಬಂದು, ಮರುಗಳಿಗೆಯೇ ನೆನಪು ನಿಚ್ಚಳ ವಾಯಿತು.

ಆ ರಾತ್ರಿ ಆತನ ಮನೆಯಲ್ಲಿ ತನ್ನನ್ನು 'ಅಣ್ಣಾ' ಎಂದು ಕರೆದ ಇಂದು, ಅವಳಮ್ಮ ಅವಳನ್ನು ಗದರಿಸಿ ಒಳಕ್ಕೆ ಕಳುಸಿದುದು, ಮತ್ತೊಮ್ಮೆ ನೋಡಬೇಕೆಂದರೂ ಆ ಮುದ್ದಾದ ಮುಖ ಕಾಣಸಿಗದೆ, ಹೇಳದೆ ಕೇಳದೆ ಆ ಮನೆಯಿಂದ ಪಲಾಯನಮಾಡಿ ಬರುವಾಗ, ಅರೆಯರಳಿದ ಗುಲಾಬಿಯಲ್ಲಿ ಇಂದುವಿನಮುಖವನ್ನು ಕಂಡು ಮುತ್ತಿಟ್ಟು, ಎದೆಯಲ್ಲಿ ಕಲಕಿದ ಉರಿನೋವನ್ನು ತಡೆಯಲಾರದೆ ಓಡಿಬಂದುದು....

ಕವಿದ ಕತ್ತಲಿನಲ್ಲಿ ಮೇಲಿಂದಮೇಲೆ ಸಾಲುಮಿಂಚು ಸೆಳೆದಂತಾಯಿತು, ನೆನಪು ನುಗ್ಗಿದ ಕಣ್ಣಿನ ಮಿದುಳಿನಲ್ಲಿ. ಈ ರೂಪಿನಲ್ಲಿ ತನ್ನ ಬಳಿಗೆ ಬಂದಳೇ ತನ್ನ ಇಂದು !

ವಿಹ್ವಲನಾಗಿ, ಆ ಹುಡುಗಿಯ ಮೇಲೆ ಕವಿದು, ಅವಳನ್ನು ಬಿಗಿಯಾಗಿ ತಬ್ಬಿ ಮುತ್ತಿಟ್ಟ. ಬಹುಕಾಲದ ಮೇಲೆ ಒಡೆಯನನ್ನು ಕಂಡ ನಾಯಿಯಂತೆ, ಅವಳ ಕಣ್ಣು, ಮೂಗು, ನೆತ್ತಿಯನ್ನು ಮೂಸಿನೋಡಿ, ಅವಳ ತಲೆಯನ್ನು ಬೊಗಸೆಯಲ್ಲಿ ಹಿಡಿದು ಒತ್ತಿ, ಎದೆಗೆ ಒತ್ತಿಕೊಂಡು—

"ಇಂದೂ... ಇಂದೂ ...... ಇಂದೂ" ಹತ್ತಾರು ಬಾರಿ ನುಡಿದ. ಕಂಬನಿ ಸುರಿವ ಅವಳ ಕಣ್ಣುಗಳನ್ನು ನೋಡಿ—

"ಯಾಕಳ್ತೀಯಾ ? ಯಾರಾದ್ರೂ ಒದ್ರಾ ?" ಎಂದು ಕೇಳಿದ.

"ಅಣ್ಣಾ, ಅಸ್ವಾಗ್ತದೆ."

"ಆ ? ಅಸ್ವಾಗ್ತದಾ.... ಉಣ್ಣಿಲ್ವಾ ?"

ಹುಡುಗಿ ಮೂಕಳಂತೆ ತಲೆಯಲ್ಲಾಡಿಸಿದಳು. ಅವಳ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದ. ಅವಳ ಕೈಯ ಕರಟ ಕಾಣಿಸಿತು. ಅವನ ಹೃದಯದಲ್ಲೇಕೋ ದುಃಖ ಉಕ್ಕಿಬಂತು. ಇವಳೂ ತನ್ನಂತೆಯೇ—ಕಂಗಾಲರ ಇಂದು !

"ಇಲ್ಲಾ, ಅದ್ನ"

ಅವಳ ಕೈಯ ಕರಟವನ್ನು ತೆಗೆದುಕೊಂಡು ಕಣ್ಣ ತೊಟ್ಟಿಯ ಬಳಿ ಹೋಗಿ, ಅಲ್ಲಿ ತಿನ್ನುತ್ತಿದ್ದ ಒಂದಿಬ್ಬರನ್ನು ಸರಿಸಿ, ಕರಟವ ತುಂಬಾ ಅನ್ನ ವನ್ನು ತುಂಬಿಕೊಂಡುಬಂದು, ಅವಳಿಗೆ ಕೊಟ್ಟ. ಹುಡುಗಿ ಮರು ಮಾತಾಡದೆ, ನೆಲದಮೇಲೆ ಕೂತು ತಿನ್ನಲಾರಂಭಿಸಿದಳು. ತಲೆಯ ಮೇಲೆ ಬಿಸಿಲು ಹೊಯ್ಯುತ್ತಿದ್ದುದೂ ಅವಳಿಗೆ ಹಸಿವಿನಲ್ಲಿ ಎಚ್ಚರ ವಿರಲಿಲ್ಲ.

ತಾನೇ ಅವಳನ್ನು ಎತ್ತಿ ಸ್ವಲ್ಪ ನೆರಳಿದ್ದ ಗೋಡೆಯ ಪಕ್ಕದಲ್ಲಿ ಕೂಡಿಸಿ, ತಾನೂ ಒಂದು ಎಂಜಲೆಲೆಯಲ್ಲಿದ್ದ ಅನ್ನವನ್ನು ತೆಗೆದುಕೊಂಡು ಬಂದು, ಅವಳ ಪಕ್ಕದಲ್ಲಿ ತಿನ್ನುತ್ತಾ ಕುಳಿತ ಕಣ್ಣ. ಅವನ ಕಣ್ಣು, ತಿನ್ನಲು ಬಾಗಿಸಿದ ತಲೆಯನ್ನು ಮೇಲೆತ್ತದೆ, ತಿನ್ನುತ್ತಿದ್ದ ಅವಳನ್ನೇ ನೋಡುತ್ತಿತ್ತು. ಅವಳು ಊಟ ಮಾಡುವುದನ್ನು ನೋಡುತ್ತಿದ್ದ ಅವನಿಗೆ, ತಾನೇ ಊಟ ಮಾಡುತ್ತಿದ್ದಂತಿತ್ತು. ಹಿಂದೆಂದೂ ಅವನಿಗೆ ಹಾಗನಿಸಿ ರಲಿಲ್ಲ. ಅವನಿಗೆ ಅರ್ಥವಾಗದ ಅಲೌಕಿಕ ಆನಂದ, ಅವನ ಮೈಯಲ್ಲಿ ತೆರೆತೆರೆಯಾಗಿ, ಆ ಹರ್ಷ ನಿರ್ಭರತೆಯಲ್ಲಿ ಅವನ ನೆತ್ತಿ ಹಗುರಾಗಿ, ಎಲ್ಲೋ ಬೆಳಕು ತುಂಬಿದ ಗಾಳಿಯಲ್ಲಿ ತೇಲುತ್ತಿರುವಂತಿತ್ತು. ಎಂದಿನಂತೆಯೇ ಎಲೆಯಲ್ಲಿದ್ದುದನ್ನೆಲ್ಲಾ ಕಲಸಿ, ತಿನ್ನಹೋದ. ಏಕೋ ಬೇಕಾಗಲಿಲ್ಲ. ತಾನು ತಿನ್ನುವುದನ್ನೂ ಬಿಟ್ಟು, ಅರ್ಧ ಬರಿದಾದ ಅವಳ ಕರಟಕ್ಕೆ ತುಂಬಿ "ತಿನ್ನು ಇಂದೂ" ಎಂದು ಹೇಳಿ, ಅವಳನ್ನು ನೋಡುತ್ತಾ ಕುಳಿತ. ಮತ್ತೆ ತನ್ನ ಕರಟಕ್ಕೆ ಅನ್ನವನ್ನು ತುಂಬಿದ ಅವನನ್ನು, ಅವಳು ಕೃತಜ್ಞತೆ ತುಂಬಿದ ಕಣ್ಣುಗಳಿಂದ ನೋಡಿ, ಮತ್ತೆ ತಿನ್ನುವುದನ್ನು ಮುಂದುವರಿಸಿದಳು.

"ಲೋ ಮುನ್ಯಾ, ವಸಿ ನೀರ್ತಂದ್ಕೊಡೋ" ಅವಸರವಸರವಾಗಿ ತಿನ್ನುತ್ತಿದ್ದ ಅವಳಿಗೆ, ಗಂಟಲಾರಿ ಬಿಕ್ಕು ಬರುತ್ತಿದ್ದುದನ್ನು ಕಂಡು ಕಣ್ಣ ಕೂಗಿ ಹೇಳಿದ.

ಅವರಾರಿಗೂ ಅವನ ಅಂದಿನ ನಡತೆ ಅರ್ಥವಾಗಲಿಲ್ಲ. "ಮತ್ತೆ ಯಾವುದೋ ಶನಿ ಬಂದಿತಲ್ಲಾ" ಎಂಬ ದೃಷ್ಟಿಯಿಂದ ಅವರು ಆ ಹುಡುಗಿ ಯತ್ತ ನೋಡುತ್ತಿದ್ದರು. ಮೊದಲು ಅವಳು ಕಣ್ಣನ ಕಣ್ಣಿಗೆ ಬೀಳದೆ, ಅವರ ಕಣ್ಣಿಗೆ ಬಿದ್ದಿದ್ದರೆ, ಗದ್ದಲವೆಬ್ಬಿಸಿ, ಅವಳನ್ನು ಅಲ್ಲಿಂದ ಓಡಿಸು ತ್ತಿದ್ದರು. ಆದರೆ ತಮ್ಮೆಲ್ಲರಿಗೂ ನಾಯಕನಾದ ಕಣ್ಣ, ಅವಳಿಗೆ ಆಶ್ರಯವಿತ್ತಮೇಲೆ ಅವರಾರಿಗೂ ಎದುರು ಮಾತಾಡುವ ಧೈರ್ಯ ವಾಗಲಿಲ್ಲ. "ಹಾಳಾಗಿಹೋಗಲಿ" ಎಂದು ಸುಮ್ಮನಾಗಿದ್ದರು. ಎಲ್ಲಿಂದಲೋ ಬಂದ ಅವಳಿಗೆ, ಅವನು ಮುಚ್ಚಟೆ ಮಾಡುವುದು, ಊಟಮಾಡಿಸುವುದು, ಅವರಿಗೆ ಅರ್ಥವಾಗಿರಲಿಲ್ಲ. ಈಗ ಅವನು ತಾವೂ ಅವಳ ಸೇವೆ ಮಾಡಬೇಕೆಂದುದನ್ನು ಕೇಳಿ ಮುನಿಸಾಮಿಗೆ ಸಿಟ್ಟೇ ಬಂದಿತು. ಹಾಗೇ ಹೇಳಿದ :

"ಅವಳೇನು ಮಾರಾಣಿನಾ. ಎದ್ಹೋಗಿ ಕುಡಿ ಅಂತ ಏಳು. ಕತ್ತೇಮುಂಡೆ. ಅವಳಿಗೆ ನಾನ್ಯಾಕೆ ಚಾಕ್ರಿ ಮಾಡ್ಲಿ"

ಕಣ್ಣ ಆ ಮಾತನಾಡಿದ ಮುನಿಸ್ವಾಮಿಯನ್ನು, ಎಳೆದುಕೊಂಡು ಬೆನ್ನಮೇಲೆ ಗುದ್ದಿ ಅಬ್ಬರಿಸಿದ—

"ಏಳ್ದಷ್ಟು ಬಾಯ್ಮುಚ್ಕೊಂಡು ಮಾಡಾಕಾಗಾಕಿಲ್ವ"

ಆ ಕಾರಣವಾಗಿ ಕಣ್ಣ ತನ್ನ ಮೇಲೆ ಕೈ ಮಾಡಿದುದನ್ನು ಕಂಡು ಮುನಿಸಾಮಿಗೂ ರೇಗಿತು. ನೀರಿನ ತೊಟ್ಟಿ ಹತ್ತಿರವೂ ಇರಲಿಲ್ಲ. ದಿನವೂ ಎಂಜಲು ತೊಟ್ಟಿಯ ಊಟ ಹೊಟ್ಟೆತುಂಬಿಸಿದ ಮೇಲೆ, ಎಲ್ಲರೂ ಜೊತೆಯಾಗಿ ಹೋಗಿ ದೇವಸ್ಥಾನದ ಬಳಿ ದನಗಳು ನೀರು ಕುಡಿಯು ಲೆಂದಿಟ್ಟ ನೀರಿನ ಕಲ್ಲು ಬಾನಿಯಲ್ಲಿ ನೀರು ಕುಡಿಯುತ್ತಿದ್ದರು. ಯಾರು ಯಾರಿಗೂ ನೀರು ತಂದುಕೊಡುತ್ತಿರಲಿಲ್ಲ. ಹೀಗಿರುವಾಗ ಗುರುತೇ ತಿಳಿಯದ ಈ ಹುಡುಗಿಗೆ ತಾನೇಕೆ ನೀರು ತಂದುಕೊಡಬೇಕು? ಅವಳಿಗೇನು ಕಾಲುಬಿದ್ದುಹೋಗಿದೆಯೆ? ಬೇಕಾದರೆ ಹೋಗಿ ನೀರು ಕುಡಿಯಲಿ ಎನಿಸಿತು ಅವನಿಗೆ. ಅದೇ ಮಾತನ್ನೇ ಬಾಯಿಬಿಟ್ಟು ಆಡಿ, ಕಣ್ಣನ ಕೈಗೆ ಸಿಗದಂತೆ ದೂರ ಕುಳಿತ.

"ನಿನ್ಗೇನೋ ಇವತ್ತು ಗಾಸಾರ ಆಡಸ್ತೈತೆ. ಒಳ್ಳೆ ಮಾತ್ನಾಗೆ ತಂದ್ಕೊಡ್ತಿಯೋ ಇಲ್ವೋ. ಇಲ್ಲಾಂದ್ರೆ ಬಲಿ ಹಾಕ್ಬಿಡ್ತೀನಿ ಬಡ್ಡಿಮಗ್ನೆ" ಕಣ್ಣ ಕೆರಳಿದ ನಾಯಿಯಂತೆ ಗುರುಗುಟ್ಟಿ ಮೇಲಕ್ಕೆದ್ದ.

"ಅದ್ಯಾಕಂಗ್ರೇಗ್ತಿ ಕಣ್ಣ. ನಾನು ತಂದ್ಕೊಡ್ತೀನಿ." ಎಂದು ಕಂದಸ್ವಾಮಿ ಅವಳ ಬರಿದಾದ ಕರಟವನ್ನು ತೆಗೆದುಕೊಂಡು ನೀರು ತರಲು ಹೋದ. ಕಣ್ಣ ರೇಗಿದರೆ ಯಾರಾರ ಎಲುಬು ಮೆತ್ತಗಾಗುವುದೋ ಎಂದು ಅವನಿಗೆ ಹೆದರಿಕೆ ಇತ್ತು. ಅಲ್ಲದೆ ಅವನು ಎಂದೂ—"ಹಿಂಗಾಡಿರ್ನಿಲ್ಲ. !"

"ಕಂದ ನಿನ್ನುಳಿಸ್ದ, ಬಡ್ಡಿಮಗ್ನೆ ಇಲ್ದೊಗಿದ್ರೆ ಸೌದೆ ಸೀಳ್ದಂಗೆ ಸೀಳ್ಬಿಡ್ತಿದ್ದೆ." ಎಂದ ಕಣ್ಣ ದೂರ ಕುಳಿತ ಮುನಿಸಾಮಿಯನ್ನು ನೋಡಿ.

"ಯಾಕೆ, ಅವಳೇನು ನಿನ್ನೆಡ್ತಿನಾ, ನಾವೆಲ್ಲಾ ಗುಲಾಮ್ಗಿರಿ ಮಾಡೋಕೆ?"

ಮುನಿಸಾಮಿಯ ಮಾತು ಕೇಳಿ, ಕಣ್ಣ ಅವಳ ಮುಖವನ್ನೊಮ್ಮೆ ನೋಡಿದ. ಅವರ ಮಾತಾವುದೂ ಅರ್ಥವಾಗದಂತೆ, ಅರಳಿದ ಕಣ್ಣಲ್ಲಿ ತೃಪ್ತಿ ಸೂಸುತ್ತಾ ಕುಳಿತಿದ್ದಳವಳು. ಮತ್ತೆ ಅವನೆದೆಯಲ್ಲಿ ಪ್ರೀತಿ ತೂಗಿತು. ಮುನಿಸಾಮಿಯ ಮಾತು ಕೇಳಿ ನಗುಬಂತು. ಗಟ್ಟಿಯಾಗಿ ನೆಲದಮೇಲೆ ಹೊರಳಿ ನಗಲಾರಂಭಿಸಿದ. ಎರಡೂ ಕೈಯ್ಯಲ್ಲಿ ಮಣ್ಣನ್ನು ತೆಗೆದುಕೊಂಡು ಮುನಿಸಾಮಿಯಮೇಲೆ ತೂರಿದ.

"ಥೂ, ಅಲ್ಕಾ ಬಡ್ಡಿಮಗ್ನೆ....ನಿನ್ಗೇನೇನೂ ತಿಳಿಯಾಕಿಲ್ಲ. ಎಡ್ತಿ ಅಂತೆ..." ಎಂದು ಬಿದ್ದುಬಿದ್ದು ನಗಲಾರಂಭಿಸಿದ ಕಣ್ಣ. ಅದನ್ನು ಕಂಡು ಮುನಿಸಾಮಿಗೆ ದಿಗ್ಭ್ರಮೆಯಾದಂತಾಯಿತು.

"ಇಲ್ಲಾಂದ್ರೆ ಮತ್ಯಾಕಿಂಗ್ಮಾಡ್ತಿ?"

ಅವನ ಪ್ರಶ್ನೆಯನ್ನು ಕೇಳಿ ಕಣ್ಣನ ನಗು ಮತ್ತಷ್ಟು ಹೆಚ್ಚಾಯಿತು ಹತ್ತಿರವಿದ್ದ ಪಳನಿಯನ್ನು ತೋಳಲ್ಲಿ ತಬ್ಬಿಕೊಂಡು,—

"ಪಳ್ನಿ, ಕೇಳ್ದ್ಯಾ ಅವನ ಮಾತ್ನ. ಇವ್ಳು ನನ್ನೆಂಡ್ತಿ ಅಂತೆ.." ಎಂದು ಗಹಗಹಿಸಿದ. ಪಳನಿಗೂ ಅವನ ರೀತಿ ಅರ್ಥವಾಗಲಿಲ್ಲ. ಅವನು ಅಷ್ಟು ನಕ್ಕಿದನ್ನೇ ಅವರಾರೂ ನೋಡಿರಲಿಲ್ಲ.

"ಅಂಗಾರೆ ...ಇವಳೇನಾಗಬೇಕು ನಿನಗೆ?" ಪಳನಿಯೂ ಪ್ರಶ್ನೆ ಮಾಡಿದ.

"ನಿಂಗೂ ತಿಳೀನಿಲ್ವಾ ಮುಂಕು ನನ್ನ ಮಗನೆ. ನನ್ನ ತಂಗೆವ್ವ ಕಣ್ಲಾ ಇವ್ಳು, ತಂಗೆವ್ವ" ಎಂದು ಹತ್ತಿರದಲ್ಲಿದ್ದ ಹುಡುಗಿಯನ್ನು ತಬ್ಬಿ ಮುತ್ತಿಟ್ಟು "ಇವತ್ತೆಲ್ಲೋ ಹುಡುಕ್ಕೊಂಡು ಬಂದ್ಬುಟ್ಲು ಅಣ್ಣನ್ತಾವ." ಎಲ್ಹೋಗಿದ್ಯೇ ಇಷ್ಟು ದಿನಾ?" ಎಂದು ನಗುತ್ತಾ ಅವಳ ಕೆನ್ನೆಯನ್ನು ಹಿಂಡಿ ಕೇಳಿದ ಕಣ್ಣ. ಹುಡುಗಿಗೂ ನಗುಬಂತು. ನಕ್ಕುಬಿಟ್ಟಳು. ಕೋಟಿ ವೀಣಾರವಕ್ಕಿಂತ ಮಂಜುಳವಾಗಿತ್ತು ಕಣ್ಣನ ಕಿವಿಗೆ ಅವಳ ನಗುವಿನ ಕುಲುಕುಸದ್ದು. ಅಭಿಮಾನ ತುಂಬಿದ ಹೃದಯದಿಂದ ಅವಳನ್ನು ಅಪ್ಪಿ ಕೇಳಿದ—

"ಸಂದಾಕಿಲ್ವೇನ್ಲಾ ಪಳ್ನಿ ನನ್ತಂಗೆವ್ವ?"

ಕಣ್ಣ ಅವಳನ್ನು ತನ್ನ ತಂಗಿ ಎಂಮುದು ಅವರೆಲ್ಲರಿಗೂ ಆಶ್ಚರ್ಯ ವನ್ನುಂಟುಮಾಡಿತು. ಬೇಕೆಂದೇ ಸುಳ್ಳು ಹೇಳುತ್ತಿದಾನೆಂದು ಎನಿಸಿ, ಅವರು ನಗಲು ಆರಂಭಿಸಿದರು. ಆ ವೇಳೆಗೆ ನೀರು ತೆಗೆದುಕೊಂಡು ಬಂದ ಕಂದಸಾಮಿ ಎಲ್ಲರೂ ಹುಚ್ಚುಚ್ಚಾಗಿ ನಗುವುದನ್ನು ಕಂಡು, ಏನೂ ತಿಳಿಯದೆ—

"ಯಾಕ್ಲಾ, ಏನಾಯ್ತು ಇಷ್ಟು ನಗಾಕೆ?" ಎಂದು ಕೇಳಿದ.

"ಕಂದ....ಈ ಲೌಡಿ ಕಣ್ಣನ ತಂಗೆವ್ವ ಅಂತೆ ಕಣ್ಲಾ" ಎಂದು ಆರ್ಮುಗಂ ನಗುತ್ತಾ.

"ವಾ ಮೇರೆ ಬೇಟಾ,! ಇಷ್ಟು ದಿನಾ ಎಲ್ಲಿದ್ಲೋ ಕಣ್ಲಾ ನಿನ್ನ ತಂಗಿ? ಇಲ್ಗೆಂಗೆ ಬಂದ್ಲು?" ಕಂದಸಾಮಿಯೂ ಪ್ರಶ್ನೆಯನ್ನೂ ತೋರಿಸಿದ.

"ಎಲ್ಲಾ ಮಂಕ್ದಿಣ್ಣೇಗ್ಳೇ, ಒಬ್ಬರ್ಗಾರಾ ಅರ್ಥಾ ಆಗಾಕಿಲ್ಲ" ಎಂದು ಕಣ್ಣ, ಆ ಹುಡುಗಿ ತನಗೆ ಹೇಗೆ ತಂಗಿಯಾದಳೆಂದು ಹೇಳಲು, ಅದುವರೆಗೂ ಅವರಿಗೆ ಹೇಳದ ತನ್ನ ಜೀವನದಲ್ಲಿ ಇಂದುವನ್ನು ಕಂಡ ಘಟನೆಯುನ್ನು ವಿವರಿಸಿದ. ಅವರೂ ಮೂಕರಂತೆ ಕೇಳಿದರು. ತನ್ನ ಕಥೆಯನ್ನು ಮುಗಿಸಿ ಕಣ್ಣ ಹೇಳಿದ—

"ಇವ್ಳೂ ಅವಳಂಗೆ ಅವ್ಳೆ. ಅಲ್ವಾ?"

ಇಂದುವನ್ನು ನೋಡದ ಹುಡುಗರು ಕಣ್ಣನ ಮಾತನ್ನು ನಂಬಿ 'ಔದೋದು' ಎಂದರು. ಆ ಹುಡುಗಿ ಏನೂ ಮಾತಾಡದೆ, ಇವರ ಮಾತನ್ನೆಲ್ಲಾ ಕಣ್ಣರಳಿಸಿ ಕೇಳುತ್ತಿತ್ತು. ಕಥೆ ಹೇಳಿ ಮುಗಿಸುವ ವೇಳೆಗೆ, ಕಣ್ಣಲ್ಲಿ ಚಿಮ್ಮಿದ ನಗು ಮಾಯವಾಗಿ, ಮಾರ್ದವ ವ್ಯೆದೋರಿತ್ತು. ಹೃದಯದಲ್ಲಿ ತಲೆದೂಗುತ್ತಿದ್ದ ದುಃಖಮಿಶ್ರಿತ ಕೋಮಲತೆ, ಅವನ ಕಣ್ಣಲ್ಲೂ ಹೊಳೆಯುತ್ತಿತ್ತು. ಅದುವರೆಗೂ ಮಾತನಾಡಿಸದ ಹುಡುಗಿಯನ್ನು ಮೃದುವಾದ ಧ್ವನಿಯಲ್ಲಿ ಕೇಳಿದ—

ಒಟ್ಟೆ ತುಂಬ್ತಾ?"

ಹುಡುಗಿ ತೃಪ್ತಿಸೂಚಕವಾಗಿ ತಲೆಯಲ್ಲಾಡಿಸಿದಳು. ಅವಳನ್ನೇ ನೋಡುತ್ತಾ ಇದ್ದ ಕಣ್ಣನಲ್ಲೇಕೋ ಸಂಶಯ ಹೊಗೆಯಾಡಿತು. ಕೇಳಿದ–

"ನನ್ಜೊತೇಲೆ ಇರ್ತೀಯಾ ನೀನು?"

ಹುಡುಗಿ ಅದಕ್ಕೂ ಸಮ್ಮತಿ ಸೂಚಿಸಿ ತಲೆಹಾಕಿದಳು.

"ನಿಮ್ಮಪ್ಪ ಅವ್ವ ಬೊಯ್ಯಾಕಿಲ್ವಾ?"

ಆ ಮಾತು ಕೇಳಿ, ಅರ್ಥವಾಗದವಳಂತೆ ಹುಡುಗಿ, ಪ್ರಶ್ನೆ ಕೇಳಿದ ಕಣ್ಣನ ಮುಖವನ್ನೇ ನೋಡಿದಳು. ಅವಳ ಸಂದಿಗ್ಧತೆ ಕಣ್ಣನಿಗೆ ಅರಿವಾದಂತಾಯಿತು. ಅದೇ ಮಾತನ್ನೇ ಬೇರೆ ರೀತಿಯಲ್ಲಿ ಕೇಳಿದ—

"ನಿನಗನ್ನ ಹಾಕೋರು ಯಾರೂ ಇಲ್ವಾ?"

"ಇಲ್ಲ"

"ಅಂಗಾರೆ ನನ್ಜೊತೇಲೇ ಇದ್ಬುಡು." ಎಂದ ಕಣ್ಣ ನಿರ್ಧಾರವಾಗಿ.

"ದಿನಾಗ್ಲೂ ಅನ್ನ ಆಕ್ತೀಯಾ?" ಹುಡುಗಿ ಸಂಶಯತೂಗುವ ಧ್ವನಿಯಲ್ಲಿ ಕೇಳಿದಳು.

"ತೊಟ್ಟಲಿರೋದ್ನ ತಿನ್ನೋಕೆ ಅನ್ನೆ ಆಕ್ಬೇಕಾ?" ಕಂದಸಾಮಿ ನಗುತ್ತಾ ಕೇಳಿದ.

"ಅಂಗಂತ ಅಂದು ತೊಟ್ಟೇಲಿ ಕೈ ಇಕ್ಕೋ ಗಂಡಸ್ನಾಗ ಯಾವೋನೋ ನೋಡ್ತೀನಿ." ಕಣ್ಣ ಹೆದರಿಸಿದ.

"ಏನ್ಮಾಡ್ತಿ ?"

"ನಿನ್ನೆಲುಬ್ನೆ ಕೇಳ್ಕೊ ಏನೇಳ್ತದೊ."

ಮತ್ತೆ ಯಾರೂ ಆ ಮಾತನ್ನು ಮುಂದುವರಿಸುವ ಸಾಹಸ ಮಾಡಲಿಲ್ಲ. ಮಾತು ತೊಟ್ಟಿಯತ್ತ ಹೊರಳಿದಾಗ, ಕಣ್ಣನಿಗೂ ಧ್ಯಾಸ ಹೊಟ್ಟೆಯತ್ತ ಹೊರಳಿತು. ತಂಗಿಯನ್ನು ಕಂಡ ಸಂತೋಷದಲ್ಲಿ ಅದುವರೆಗೂ ಅವನಿಗೆ ತನ್ನ ಹೊಟ್ಟೆಗೇನಾದರೂ ಹಾಕಬೇಕೆಂದಾಗಲಿ, ಅದು ಹಸಿದಿರುವುದಾಗಲಿ ನೆನಪಿಗೆ ಬಂದಿರಲಿಲ್ಲ. ಈಗ ನೆನಪಿಗೆ ಬಂದಿತು.

"ನನ್ಗೇನಾರ ಉಳಿಸ್ಟ್ರೇನ್ಲಾ ತೊಟ್ಟೀಲಿ? ಇಲ್ಲಾ, ಎಲ್ಲಾ ನೀವೇ ತಿಂದು ಮುಗ್ಸಿಬಿಟ್ರಾ" ಎಂದು ಕೇಳುತ್ತಲೇ ಕಣ್ಣ ತೊಟ್ಟಿಯತ್ತ ಕಾಲು ಹಾಕಿದ. ತೊಟ್ಟಿಯ ಬಳಿ ಹುಡುಗರಾರ ಗದ್ದಲವೂ ಇಲ್ಲದ್ದರಿಂದ, ಆಕಳೊಂದು, ತೊಟ್ಟಿಯಲ್ಲಿದ್ದುದನ್ನು ಮೇಯುತ್ತಿತ್ತು. ಅದರ ಮೂತಿಯ ಮೇಲೆ ಒಂದೇಟು ಬಿಗಿದು, ಓಡಿಸಿ, ಕಣ್ಣ ನಾಲ್ಕಾರು ಎಲೆಗಳನ್ನು ಕೆದಕಿ, ಸಿಕ್ಕಿದ್ದನ್ನೆಲ್ಲವನ್ನೂ ಒಂದು ಎಲೆಗೆ ಹಾಕಿಕೊಂಡು ತಿಂದ. ತಿಂದು ಉಳಿದಿದ್ದರಲ್ಲಿ, ಉಂಡು ಮಿಕ್ಕುದು, ಹಸಿವು ಕೆರಳಿದ ಅವನ ಹೊಟ್ಟೆಗೆ ಸಾಕಾಗಲಿಲ್ಲ.

"ಎಂಥ ನನ್ಮಕ್ಳೋ ನೀವು–ಎಲ್ಲಾ ನೀವೇ ತಿಂದ್ಬುಡಾದಾ? ನಿಮ್ಹೊಟ್ಟೇಗೇನು ದೈಯ ಒಕ್ಕಿತ್ತಾ? ನಂಗೊಂದೊಸಿ ಇಡಾಕಾಗ್ಲಿಲ್ವಾ?" ಕಣ್ಣ ಅರಹೊಟ್ಟೆಯಿಂದ ಅತೃಪ್ತನಾಗಿ, ತನ್ನ ಗೆಳೆಯರನ್ನು ಕೇಳಿದ.

"ನೀನುಣ್ಣೆಲ್ಲಾಂತ ನಮ್ಗೇನು ಗೊತ್ತು ?"

"ನಾನುಣ್ಣೆಲ್ಲಾನ್ನೋದು ನಂಗೆ ಮರ್ತೋಗಿತ್ತು" ಕಣ್ಣ ನಗುತ್ತಾ ಹೇಳಿದ.

"ಯಾಕೆ, ತಂಗಿ ಸಿಕ್ಲೂಂತ ಸಂತೋಸ್ದಾಗೆ ಉಣ್ಣೋದು ಮರ್ತೋಗಿತ್ತು, ಬೆಪ್ನನ್ಮಗನೆ. ಅವಳ್ಮೊಕ ನೋಡಿದ್ರೆ ಹೊಟ್ಟೆ ತುಂಬ್ತದಾ?"

"ಅದ್ಯಾಕೋ ತುಂಬ್ದಂಗೆ ಇತ್ತು."

"ಯಾಕೆ?"

ಆ ಪ್ರಶ್ನೆಗೆ ಉತ್ತರ ಹೇಳಲು ಕಣ್ಣನಿಗೆ ಕೂಡಲೇ ತೋಚಲಿಲ್ಲ. ಮನಸಿಗನಿಸಿದ್ದನ್ನು ಯೋಚನೆ ಮಾಡದೆ ನೇರವಾಗಿ ಹೇಳಿದ. ಪ್ರಶ್ನೆ ಮತ್ತೆ ಅವನ ಮನಸ್ಸನ್ನು ಕೆಣಕಿತು. ಒಂದು ಗಳಿಗೆ ತಲೆ ಕೆರೆದುಕೊಂಡ, ಏನೋ ಹೊಳೆದಂತಾಯಿತು. ಅಷ್ಟೇ ಹೇಳಿದ:

"ಅನ್ನಾ ತಿನ್ನಾಕೆ ದಿನಾ ಸಿಕ್ತೈತೆ. ತಂಗಿ ಸಿಕ್ತಾಳಾ, ಅದ್ಕೆ."

"ನಂಗೇನೋ ಮಾಟ ಮಾಡವ್ನೆ ಇವ್ನು, ಅಷ್ಟೆ" ಎಂದ ಕಂದಸ್ವಾಮಿ. ಅವನ ಮಾತು ಕೇಳಿ ಕಣ್ಣ ಹುಡುಗಿಯತ್ತ ನೋಡಿದ. ಹೊಟ್ಟೆ ತುಂಬಿದ ಹುಡುಗಿ, ಇವರ ಮಾತುಗಳಿಗೆ ಕಿವಿ ಕೊಡದೆ, ನೆರಳಿನಲ್ಲಿ ಗೋಡೆಗೆ ಒರಗಿಕೊಂಡೇ ನಿದ್ರೆ ಮಾಡುತ್ತಿದ್ದಳು. ಅದನ್ನು ಕಂಡು ಕಣ್ಣ—

"ಜೇವಾರ್ಸಿ ಮುಂಡೇದು ಎಂಗ್ನಿದ್ದೆ ಮಾಡ್ತೈತೆ ನೋಡು" ಎಂದು ಹೇಳಿ, ಮಲಗಿದವಳನ್ನು ಎತ್ತಿ ಹೆಗಲ ಮೇಲೆ ಹಾಕಿಕೊಂಡು, ತಮ್ಮ ವಾಸಗೃಹಕ್ಕೆ ಅವಳನ್ನು ಕರೆದೊಯ್ದು, ಹಿಂದೆ ಬಂದ ಮುನಿಸಾಮಿಗೆ—

"ಮುನ್ಯಾ ಆ ಗೋಣಿತಟ್ಟು ಹಾಸ್ಬುಡೋ" ಎಂದ.

ಮುನಿಸಾಮಿ, ಧೂಳು ತುಂಬಿದ ಗೋಣಿಯತಟ್ಟನ್ನು ಕೊಡವಿ ಹಾಸಿದ. ಕಣ್ಣ ಹುಡುಗಿಯನ್ನು ಅದರ ಮೇಲೆ ಮೆತ್ತಗೆ ಮಲಗಿಸಿ, ತನ್ನ ಕಂಬಳಿಯ ತುಂಡನ್ನು ಅವಳಿಗೆ ಹೊದಿಸಿದ. ಬೀದಿಯ ಆ ಕೊನೆಯಿಂದ ಆರ್ಮುಗಂ ಕಣ್ಣನನ್ನು ತಾರಸ್ವರದಲ್ಲಿ ಕೂಗಿದ—

"ಕಣ್ಣಾ ಮರಕೋತಿ ಆಡಾಕೆ ಬರಾಕಿಲ್ವಾ?"

ಕಿವಿ ಬಿರಿಯುವ ಅವನ ಕೂಗನ್ನು ಕೇಳಿ ಮಲಗಿದ ಹುಡುಗಿ, ಹೊರಳಾಡಿದಳು. ಅದನ್ನು ಕಂಡ ಕಣ್ಣ, ಅರ್ಮುಗನಮೇಲೆ ಸಿಟ್ಟಾಗಿ ಹೇಳಿದ—

"ಮೆತ್ತಗೆ ಮಾತಾಡಲೇ ಕತ್ತೆ. ತಂಗೆವ್ವ ಮಲಗವ್ಳೆ"

"ಹಲ್ಲು ಕಡಿಯುತ್ತಾ, ಕಣ್ಣ, ಗಟ್ಟಿಯಾಗಿ ಮಾತನಾಡಲಾರದೆ, ಧ್ವನಿಯನ್ನು ಬಿಗಿ ಹಿಡಿದು ಹೇಳಿದುದನ್ನು ಕೇಳಿ ಮುನಿಸ್ವಾಮಿಗೆ ನಗು ಬಂತು. ಆದರೆ ಗಟ್ಟಿಯಾಗಿ ನಗದೆ ಕೇಳಿದ—

"ಒಳ್ಳೆ ತಂಗೆವ್ವ ಬಂದ್ಲು ನಿನ್ಗೆ. ಓಗ್ಲಿ, ನಾನೋಗ್ತೀನಿ. ಬರ್ತೀಯಾ ಇಲ್ವಾ ?"

ಒಂದು ಗಳಿಗೆ ಕಣ್ಣ ತಲೆ ಕೆರೆದುಕೊಂಡು ಯೋಚಿಸಿದ. ಆಟ ಅವನ ಮನಸ್ಸನ್ನು ಸೆಳೆಯುತ್ತಿತ್ತು. ಆದರೆ ಅವಳನ್ನು ಒಬ್ಬಳನ್ನೇ ಬಿಟ್ಟು ಹೋಗುವುದು ಹೇಗೆ? ಏಕೋ ಅವನಿಗೆ ಅದು ಸರಿ ಹೋಗಲಿಲ್ಲ.

"ನಾ ಬರಾಕಿಲ್ಲ, ನೀವೇ ಓಗ್ರಿ. ತಂಗೆವ್ವ ಏಳೋಗಂಟ ನಾನಿಲ್ಲೇ ಇರ್ತೀನಿ" ಎಂದು ಹೇಳಿ, ಎಲ್ಲರನ್ನು ಕಳಿಸಿದ.

ಎಲ್ಲರೂ ಹೋಗಿ ಸಪ್ಪಡಗಿದಮೇಲೆ, ಕಣ್ಣ ಮಲಗಿದ ತಂಗಿಯ ಮುಖವನ್ನೇ ನೋಡುತ್ತಾ ಕುಳಿತ. ನಿದ್ರೆಯಲ್ಲಿ ಅವಳ ಮುಖ ಅವನ ಮನಸ್ಸನ್ನು ಮತ್ತಷ್ಟು ಆಕರ್ಷಿಸಿತು. ಸಿಂಬಳದಿಂದ ಕರೆಗಟ್ಟಿದ ಮೂಗಿನ ಮೇಲೆ ಬಂದು ಕುಳಿತ ನೊಣವನ್ನು ಕೈಯನ್ನು ಬೀಸಿ ಓಡಿಸುತ್ತಾ ಕುಳಿತ. ಏಕೋ ಅವನ ಹೃದಯ ತೃಪ್ತಿಯಿಂದ ಭಾರವಾಗಿತ್ತು.

ಅವಳ ಮುಖವನ್ನು ನೋಡನೋಡುತ್ತಲೇ ಅವನೂ ಅವಳ ಮೇಲೆ ಕೈಹಾಕಿ, ಮಲಗಿ ನಿದ್ರೆಹೋದ.

ಸದ್ದಿಲ್ಲದೆ ಪ್ರವೇಶಿಸಿದ ಹುಡುಗಿ, ಅಂದಿನಿಂದ ಅವನ ಬಾಳ ಒಡತಿಯಾದಳು.

## ೧೨

ಯಾವುದೋ ಮಧುರ ನೆನಪಿನ ಬಲದಮೇಲೆ "ಇಂದು" ಎಂದು ಕರೆದು, ತನ್ನ ತಂಗಿಯನ್ನಾಗಿ ಮಾಡಿಕೊಂಡ ಹುಡುಗಿ, ಅವನ ಬಾಳ ವನವನ್ನು ಹೊಗುವ ಮೊದಲು, ಬಿರುಗಾಳಿಯಲ್ಲಿ ಬಿಟ್ಟ ಗಾಳಿಯ ಪಟದಂತೆ ಆಡುತ್ತಿದ್ದ ಕಣ್ಣನ ಜೀವನ, ಅವಳು ಆಗಮಿಸಿದ ಮೇಲೆ, ಹುಟ್ಟುಹಾಕಿ ನಡೆಸುವ ದೋಣಿಯಂತಾಯಿತು; ಅವಳ ಅಳು, ನಗುಗಳಿಗೆ ಆಳಾಗಿ ನಡೆಯಲಾರಂಭಿಸಿತು.

ಬಂದ ಮೊದಲ ನಾಲ್ಕು ದಿನ ಮಂಕಾಗಿ, ಮುದ್ದಾಗಿದ್ದ ಅವಳು, ಕೆಲದಿನಗಳಲ್ಲೇ, ಕಣ್ಣನ ಪ್ರೀತಿಯ ಕಾವಲಿನಲ್ಲಿ, ನೀರೆರೆದ ಶುಷ್ಕ ಲತೆ

ಯಂತೆ ಚಿಗಿತು, ಕಳಕಳಿಸಲಾರಂಭಿಸಿದಳು. ಕಣ್ಣ ಅವಳಿಗೆ ಮಾರು ಹೋದಂತೆ, ಅವಳೂ ಕಣ್ಣನನ್ನೇ ಅವಲಂಬಿಸಿದಳು. ಅವಳಿಗೆ ಎಲ್ಲವೂ ಕಣ್ಣನಿಂದಲೇ ಆಗಬೇಕು. ಊಟ ಮಾಡಿಸುವುದಕ್ಕೆ, ನೀರು ಕುಡಿಸು ವುದಕ್ಕೆ, ತಿರುಗಾಡಿಸಲು, ಮಲಗಿಸಿ ನಿದ್ದೆಮಾಡಿಸಲು–ಎಲ್ಲದಕ್ಕೂ ಅವನೇ. ಬೇರಾರ ಕೈಯಲ್ಲೂ ಮುಟ್ಟುತ್ತಿರಲಿಲ್ಲ. ಎದ್ದ ಕೂಡಲೇ "ಅಣ್ಣಾ" ಎನ್ನುತ್ತಿದ್ದಳು. ಮಲಗುವಾಗ, ಅವನ ಮುಖವನ್ನೇ ನೋಡುತ್ತಾ, ಕಣ್ಣನ್ನ ಬಾಡಿಸಿ ನಿದ್ರೆಮಾಡುತ್ತಿದ್ದಳು. ಕಣ್ಣನಿಗೂ ಅಷ್ಟೇ—ಅವಳಿಗೆ ಎಷ್ಟು ಸೇವೆ ಮಾಡಿದರೂ ತೃಪ್ತಿ ಇರಲಿಲ್ಲ. ಅವಳ ಆಗಮನದಿಂದ, ಅವನ ಹೃದಯದಲ್ಲಿ ಸುಪ್ತವಾಗಿದ್ದ ಅಕ್ಕರೆಯ ಅಕ್ಷಯ ಬನಿಯ ಬಾಗಿಲು ತೆರೆದಂತಾಗಿತ್ತು.

ಹಗಲು ಎದ್ದಾಗಿನಿಂದ, ಮತ್ತೆ ರಾತ್ರಿ ಮಲಗುವವರೆಗೆ, ಊರು ಸುತ್ತುವ ಕಣ್ಣ ಎಷ್ಟೋ ಜನ, ಅವಳ ವಯಸ್ಸಿನ ಹುಡುಗಿಯರನ್ನು ನೋಡಿದ್ದ. ಅವರ ಉಡುಪು, ಕೇಶಾಲಂಕಾರ, ಸಿಂಗಾರ ಎಲ್ಲವೂ ಅವನ ಕಣ್ಣನ್ನು ಹೊಕ್ಕು ಹೃದಯದಲ್ಲಿಳಿದಿದ್ದವು. ಈಗ ಇವಳು ಬಂದಮೇಲೆ, ಇವಳನ್ನು ಅವರ ಹಾಗೇ ಮಾಡಬೇಕೆಂಬ ಆಸೆ, ಅವನ ಹೃದಯದಲ್ಲಿ ಅಂಕುರಿಸಿತು. ಅವಳನ್ನು ನೋಡಿದಾಗ, ಬೇರೆ ಹುಡುಗಿಯರನ್ನು ಕಂಡಾಗ ಸಾವಿರ ಬಗೆಯಲ್ಲಿ ಹೊರಗಿರಲು ಯತ್ನಿಸುತ್ತಿತ್ತು ಅವನೊಳಗಿನ ಬಯಕೆ.

ಒಂದು ದಿನ ಅವಳನ್ನು ತನ್ನ ಗೆಳೆಯರ ಕಾವಲಲ್ಲಿ ಬಿಟ್ಟು, ಎಲ್ಲಿಯೋ ಹೋದವನು, ಹಿಂದಿರುಗುತ್ತಿರುವಾಗ, ದಾರಿಯಲ್ಲಿ ಒಂದೆರಡು ಹಲ್ಲುಹೋದ ಬಾಚಣಿಗೆ ಸಿಕ್ಕಿತು. ಆ ಹಣಿಗೆಯನ್ನು ಮಣ್ಣಿನಿಂದೆತ್ತಿ, ಧೂಳು ಒರೆಸಿ ನೋಡಿದ. ಅದರ ಹಲ್ಲುಗಳ ಮೇಲೆ ಬೆರಳಾಡಿಸಿದ. ಮುರುಕು ಬಾಚಣಿಗೆಯ ಹಲ್ಲುಗಳ ಮೆಟ್ಟಿಲ ಮೇಲೆ, ಏರಿ ಅವನ ಮನಸ್ಸು ಯಾವುದೋ ಕನಸನ್ನು ಕಾಣತೊಡಗಿತು ; ಅದರ ಮೋಡಿಗೆ ಸಿಲುಕಿ, ಧೂಳು ಹಿಡಿದು, ಕೆದರಿದ ಕೂದಲು, ತೋರಣವಾಗಿ ಮಿಂಚುವ ಚಿತ್ರ ಅವನ ಮನಸಿನ ಕಣ್ಣಿನಿದಿರು ಕಂಡಿತು. ಆಗವನಿಗೆ ಆ ಮುರುಕು

ಬಾಚಣಿಗೆ, ಯಾರೋ ಕೆಲಸಕ್ಕೆ ಬಾರದ್ದೆಂದು ಬೀದಿಯಲ್ಲಿ ಒಗೆದ ಕಸವಾಗಿ ಕಾಣದೆ, ಅಸಿದ್ಧ ವಜ್ರಕ್ಕೆ ಮೆರುಗಿಡುವ ಸಾಣೆಗಲ್ಲಿನಂತೆ, ಭಿಕಾರಿ ಹುಡುಗಿಯನ್ನು ರಾಜಕುಮಾರಿಯಾಗಿ, ಪರಿವರ್ತಿಸುವ ಶಕ್ತಿಯನ್ನುಳ್ಳ ದಿವ್ಯಾಸ್ತ್ರದಂತೆ ಕಾಣತೊಡಗಿತು. ತಾನು ನೋಡಿದ ಹುಡುಗಿಯೊಬ್ಬಳಂತೆ, ಲಕ್ಷಣವಾಗಿ ಬಾಚಿ ಹೆರಳು ಹಾಕಿ, ಹೂ ಮುಡಿಸಿದರೆ, ತನ್ನ ಇಂದು ಹೇಗೆ ಕಾಣಬಹುದು ಎಂದು ಯೋಚಿಸಿದ. ಅವನ ಮನಸಿನಲ್ಲಿಯ ಊಹಾಚಿತ್ರಕ್ಕೆ ರಂಗೇರಿದಂತೆ, ಅವನ ಬಯಕೆ ಬಲವತ್ತರವಾಗಿ, ನಡಿಗೆಯ ವೇಗ ಹೆಚ್ಚಿತು.

ದಾರಿಯುದ್ದಕ್ಕೂ, ಇಬ್ಬದಿಯ ದೊಡ್ಡ ಮನೆಗಳ ಮುಂದಿನ ಕೈತೋಟದಲ್ಲಿ ಹಲವಾರು ಬಣ್ಣದ ಹೂವುಗಳು, ಆವನ ಕಣ್ಣನ್ನು ಸೆಳೆದು, ಕನಸನ್ನು ಕೆಣಕುತ್ತಿದ್ದವು. ಹಾಗೇ ಹೂವನ್ನು ತೆಗೆದುಕೊಂಡು ಹೋಗಬಾರದೇಕೆ ಎಂದು ತೋಚಿತು. ಎರಡು ಕಡೆಯಲ್ಲೂ ಇಷ್ಟು ಕೋಟಿ ಹೂವುಗಳು ಕಾಣುತ್ತಿರುವಾಗ, ತನ್ನ ಇಂದುವಿನ ಹೆರಳಿಗೆ ಎರಡು ಹೂವು ಇಲ್ಲವೇ. ಹೂವುಗಳೇನೋ ಬೇಕಾದಷ್ಟಿದ್ದವು. ಆದರೆ ಹೂವಿಗೂ ಬಯಕೆಗೂ ನಡುವೆ, ಇಟ್ಟಿಗೆಯ ಗೋಡೆ, ಮುಳ್ಳು ಹಸುರಿನ ಬೇಲಿ ಅಡ್ಡನಿಂತಿದ್ದವು. ಅವನ್ನು ನಿವಾರಿಸಿ ಹೂವನ್ನು ಪಡೆಯುವುದು ಹೇಗೆ? ಎಲ್ಲಿಯಾದರೂ ಸುಲಭ ಸಿಗಬಹುದೋ ಏನೋ ಎಂದು ಎರಡು ಕಡೆಯಲ್ಲೂ ನೋಡುತ್ತಾ ಹೊರಟ.

ಒಂದು ಕಡೆ, ಮುಳ್ಳುಹಸಿರಿನ ಬೇಲಿಯಲ್ಲಿ ದೊಡ್ಡದೊಂದು ರಂಧ್ರವಿದ್ದುದು ಕಾಣಿಸಿತು. ಕಣ್ಣ ಅದರ ಬಳಿ ಸಾರಿ, ನೆಲದಮೇಲೆ ಮಲಗಿ, ಆ ರಂಧ್ರದಲ್ಲಿ ಇಣಿಕಿ ನೋಡಿದ. ರಂಧ್ರಕ್ಕೆ ಸ್ವಲ್ಪ ದೂರದಲ್ಲಿ ಗುಲಾಬಿಯ ಪೊದೆಯೊಂದು, ನೂರಾರು ಹೂವುಗಳನ್ನು ಅರಳಿಸಿರುವುದು ಕಾಣಿಸಿತು. ಆಸೆತುಂಬಿದ ಕಣ್ಣುಗಳಿಂದ ಅದನ್ನು ನೋಡಿದ. ಆದರೆ ಕೈಗೆ ಎಟುಕದಷ್ಟು ದೂರದಲ್ಲಿದ್ದ ಹೂವನ್ನು ಪಡೆಯುವುದು ಹೇಗೆ? ಹಾಗೇ ನೋಡುತ್ತಿರುವಾಗ ಮಾಲಿಯೊಬ್ಬನು, ದೊಡ್ಡ ಬುಟ್ಟಿಯೊಂದರಲ್ಲಿ, ಕುಯ್ದ ಹೂವುಗಳನ್ನು ತುಂಬಿಕೊಂಡು, ಗುಲಾಬಿಯ ಪೊದರಿನ ಬಳಿ ಬಂದುದು ಕಣ್ಣನಿಗೆ ಕಾಣಿಸಿತು.

"ಅಯ್ಯಾ" ಕಣ್ಣ ಅವನನ್ನು ಕೂಗಿದ. ಮೊದಲಬಾರಿ ಕೂಗಿದುದು ಅವನ ಕಿವಿಗೆ ಬಿದ್ದಂತಾಗಲಿಲ್ಲ. ಮತ್ತೊಂದು ಬಾರಿ ಸ್ವಲ್ಪ ಗಟ್ಟಿಯಾಗಿ ಕೂಗಿದ ಕಣ್ಣ. ಅವನು ಕೂಗು ಬಂದ ಕಡೆ ತಿರುಗಿನೋಡಿ, ಯಾರೂ ಕಣ್ಣಿಗೆ ಬೀಳದುದರಿಂದ, ಮತ್ತೆ ಹೂವಾಯುವುದರಲ್ಲಿ ತೊಡಗಿದ. ಮತ್ತಷ್ಟು ಗಟ್ಟಿಯಾಗಿ ಕೂಗಿದ ಕಣ್ಣ. ಧ್ವನಿ ಬೇಲಿಯತ್ತಲಿಂದ ಬರುತ್ತಿದ್ದುದನ್ನು ಅರಿತು, ಅವನು ಬೇಲಿಯ ಹತ್ತಿರ ಬಂದು, ಬೇಲಿಯ ಹೊರಗಡೆ, ರಂಧ್ರದಲ್ಲಿ ತಲೆಯಿಟ್ಟು ಕೂಗುತ್ತಿದ್ದ ಕಣ್ಣನನ್ನು ನೋಡಿದ.

"ಏನ್ಲಾ ಅದು?"

"ಒಂದೂವಾ ಕೊಡ್ತಿಯಾ?"

ಕಣ್ಣನ ಪ್ರಶ್ನೆಯನ್ನು ಕೇಳಿ, ಅವನ ಮುಖವನ್ನು ನೋಡಿದ. ಅವನ ಆಸೆತುಂಬಿದ ಕಣ್ಣುಗಳು, ಮಾಲಿಯ ಹೃದಯವನ್ನು ಹೊಕ್ಕವು. ಆದರೂ ಅವನ ಚಿಂದಿ, ಕೆದರಿದ ಕೂದಲನ್ನು ನೋಡಿ, ಇವನಿಗೇಕೆ ಹೂ ವೆಂದು ಸಂದೇಹವಾಯಿತು.

"ಅಯ್ಯೊ ದರಬೇಶಿ ಬಡ್ಡಿಮಗ್ನೆ, ನಿಂಗ್ಯಾಕ್ಲಾ ಹೂವು?"

"ನಂಗಲ್ಲ. ನನ್ನ ತಂಗೀಗೆ."

"ಎಲ್ಲೈತೋ ನಿನ್ತಂಗಿ?"

"ಅಲ್ಲೈತೆ. ಒಂದೂವಾ ಕೊಟ್ಬುಡು. ಒಂಟೊಯ್ತೀನಿ.

"ನಿಮ್ಮಪ್ಪಂದೇನ್ಲೆ ತೋಟಾ—ಹೂ ಕೇಳಾಕೆ? ಪುಕ್ಸಟ್ಟೆ ಸಿಕ್ತದಾ ಹೂವ?"

"ಮತ್ತೆ ಕಾಸ್ಕೊಡಬೇಕಾ? ಎಷ್ಟೊಂದೈತೆ ಅಲ್ಲಿ?"

"ಇದ್ರೆ, ಬಿಟ್ಟಿ ಕೊಡಾಕಾ ನೀರಾಕಿ ಬೆಳಸಿರೋದು?"

"ಬೇವಾರ್ಸಿ ನನ್ಮಗ, ನನ್ತವ ಕಾಸೆಲ್ಲೈತೆ?"

"ಇಲ್ಲವೇ!"

"ನಮ್ಮಂತೊರ್ಗೆಲ್ಲ ಯೊರು ಕೊಡ್ತಾರೆ?" ನೀನು ಹೂವಾನೇ ಕೊಡಕಿಲ್ಲಾಂತಿ, ಮತ್ಯಾರಾದ್ರೂ ಕಾಸ್ಕೊಡ್ತಾರ?"

ಅವನ ಮಾತು ಕೇಳಿ ಮಾಲಿಗೆ ನಗುಬಂತು.

"ಓಗ್ಲಿ, ಕಾಸಿಲ್ದಿದ್ರೆ ನಾನೇಳ್ದಂಗೆ ಕೇಳ್ತೀಯಾ; ಹೂ ಕೊಡ್ತೀನಿ."

"ಏನ್ಮಾಡ್ಬೇಕು?"

"ಬೆಳಗ್ನಿಂದ ಚಾಕ್ರಿ ದುಡ್ದು ಸೊಂಟ ಬಿದ್ದೋಗೈತೆ. ನೀನೊಸಿ ಹೂ ಕಿತ್ಕೊಡು. ನಿಂಗೂ ಒಂದೆಲ್ಡು ಊ ಕೊಡ್ತೀನಿ."

"ಇಲ್ಲಿಂದ ನಾ ಯಂಗೆ ಕೀಳ್ಲಿ. ಕೈಗೆ ಸಿಕ್ಕೋಹಾಂಗಿದ್ರೆ, ನಾನೇ ಕಿತ್ಕೋತಾ ಇದ್ದೆ."

"ಕಳ್ಳಬಡ್ಡಿಮಗ್ನೆ. ಅಂಗೇನಾರ ಹೇಳ್ದೆ ಕೇಳ್ದೆ ಹೂ ಕಿತ್ಕೊಂಡಿದ್ರೆ ಚರ್ಮಾ ಸುಲೀತಿದ್ದೆ."

"ಆ ಬುಡು. ನಾ ನಿನ್ಕೈಗೆ ಸಿಕ್ತಾ ಇದ್ನಾ. ಅತ್ಲಾಗ್ನೋರ್ಸಿ ಇತ್ಲಾಗೊಂಟ್ಹೋಯ್ತಾ ಇದ್ದೆ. ಮುದಿಗೊಲ್ಡು, ನೀನು ನನ್ನ ಸಮಕ್ಕೆ ಓಡೋಕಾಯ್ತದಾ? ಫಲೀಸನ್ ಕೈಗೂ ಸಿಕ್ತಾ ಇರ್ಲಿಲ್ಲ. ಓಗ್ಲಿ-ಹೂ ಕೊಡ್ತೀಯಾ?"

ಕಣ್ಣನ ಹೆಮ್ಮೆಯ ಮಾತು ಕೇಳಿ ಮಾಲಿಗೆ ನಗು ಬಂತು. ನಗುತ್ತಲೇ ಹೇಳಿದ—

"ಈಗ್ಯಾಕಾಮಾತು. ನಾನಾಗ್ಲೇ ಹೇಳಿದ್ನಲ್ಲ. ನಂಗಷ್ಟು ಹೂ ಕೊಯ್ಕೊಟ್ರೆ, ನಿಂಗೂ ಒಂದೆಲ್ಡು ಹೂ ಕೊಡ್ತೀನಿ. ಏನೇಳು?"

"ನಾನೊಳ್ಗ ಬ್ಬರಬೋದಾ?"

"ಯಾರೂ ಇದ್ದಂಗಿಲ್ಲ. ಬಾ."

ಕಣ್ಣ ರಂಧ್ರದಲ್ಲಿ ಚೂಟಿಯಾಗಿ ನುಸುಳಿದ. ಮಾಲಿ ಕಣ್ಣನ ಕೈಗೆ ಹೂ ಬಿಡಿಸುವ ಬುಟ್ಟಿಯನ್ನು ಕೊಟ್ಟು, "ಬಡ್ಡೀಲೇ ಕೊಯ್ಬ್ಯಾಡ. ವಸಿ ತೊಟ್ಟಿರ್ಲಿ. ಕುಂಡ್ದಾಗೆ ಮಡಗಾಕೆ" ಎಂದು ಹೇಳಿದ.

"ಕುಂಡ್ದಾಗೆ ಮಡ್ಗಾಕೇ!" ಮಾಲಿಯ ಮಾತು ಕೇಳಿ ಕಣ್ಣನಿಗೆ ಆಶ್ಚರ್ಯವಾಯಿತು. ಅವನು ಹೆಂಗಸರು ಹೂ ಮುಡಿಯುವುದನ್ನು ನೋಡಿ, ಹೂವಿರುವುದು ಅದಕ್ಕಾಗಿ ಎಂದು ತಿಳಿದಿದ್ದನೇ ವಿನಾ ಅದನ್ನು ಕುಂಡದಲ್ಲಿಟ್ಟು ಒಣಗಿಸುವುದು ಅವನಿಗೆ ಗೊತ್ತಿರಲಿಲ್ಲ. "ಮುಡ್ಕೊಂಬೋ ಹೂನ ಕುಯ್ದು ಕುಂಡ್ದಾಗಿಟ್ಟು ಒಣಗಸ್ತಾರಾ?" ತನ್ನ ಆಶ್ಚರ್ಯ ವನ್ನೇ ಪ್ರಶ್ನೆಯಾಗಿ ಕೇಳಿದ ಕಣ್ಣ.

“ಮತ್ತೆ ಇಷ್ಟೊಂದು ಹೂವಾ ಮುಡ್ಕ್ಯಾತಾರ, ಅವ್ರೇನು ಅಣ್ಣಾವ್ರು? ದಿನಾ ಎಲ್ಡೆಲ್ಡೊತ್ತು ಕುಂಡ್ದಾಗೆ ಹೊಸಾ ಹೂ ಇಡ್ತಾರೆ. ಸ್ವಲ್ಪ ಬಾಡಿತು ಅಂದ್ರೆ ತಿಪ್ಪೇಗಾಕ್ತಾರೆ. ಇಷ್ಟೊಂದು ಹೂ ಏನ್ಮಾಡಬೇಕು ?”

“ಯಾರ್ಗಾರ ನನ್ನಂಥೋರ್ಗೆ ಮುಡ್ಕಂಬಾಕೆ ಕೊಟ್ರೆ ಆಗಾಕಿಲ್ವಾ? ಇಂಥ ಒಳ್ಳೆ ಹೂ, ಕುಯ್ದು ಒಣಗ್ಸಾದಾ?” ಕಣ್ಣನಿಗೆ ನಗುನಗುವ ಹೂವನ್ನು ಮುಡಿದು ಸಂತೋಷ ಪಡದೆ, ಕುಂಡದಲ್ಲಿಟ್ಟು ಒಣಗಿಸುವುದು ಪರಮ ಅನ್ಯಾಯವೆಂದು ತೋರಿತು. ಮಾತನ್ನು ಮುಚ್ಚಿಡುವ ಅಭ್ಯಾಸವಿಲ್ಲದ ಅವನು, ತೋರಿದ ಮಾತನ್ನು ಸ್ಪಷ್ಟವಾಗಿ ಹೇಳಿದ. ಮಾಲಿಗೂ ಅವನ ಮಾತು ಸರಿಯೆಂದು ತೋರಿತೇನೋ.

“ಈ ದೊಡ್ಡ ಮನುಸ್ರ ಕತೆ ಎಲ್ಲಾ ಇಂಗೇನೇ. ಪುನುಗು ಎಚ್ಚಾಗಿದೇಂತ, ಎಲ್ಲೆಲ್ಲೋ ಅಚ್ಕೊಂಡಂಗೆ. ಹೋಗ್ಲಿ ಬಿಡು ನಂಗ್ಯಾಕೆ ದೊಡ್ಡೋರ ಸಮಾಚಾರ. ಅದೆಲ್ಲಾ ನಮ್ಗೇನು ತಿಳೀತದೆ. ಅವರನ್ನ ತಿಂದದ್ದಕ್ಕೆ ಏಳ್ಪಷ್ಟು ಗ್ಯೆಯ್ದುಬಿಡೋದು. ನನ್ನ ಬೀಡಿ ಮುಗಿಯೋತಂಕ ಅಷ್ಟು ಹೂ ಬಿಡ್ಸಿಬಿಡು. ಬೆಳಗ್ನಿಂದಾ ಬೀಡಿ ಕುಡಿಯೋಣಾಂದ್ರೆ ಪುರಸತ್ತಿಲ್ಲ” ಎಂದು ಹೇಳಿ ಅವನು ಬೀಡಿ ಹಚ್ಚಿದ.

ಅವನ ಮಾತು ಕೇಳಿ ಕಣ್ಣನಿಗೆ ದೊಡ್ಡ ಮನುಷ್ಯರೆಂಬುವರು ವಿಚಿತ್ರಮೃಗಗಳೆಂದು ತೋರಿತು. ಎಷ್ಟೊಂದು ಹೂವಿದೆ. ಅದನ್ನು ತಾವೂ ಮುಡಿಯುವುದಿಲ್ಲ, ಇತರರಿಗೂ ಕೊಡುವುದಿಲ್ಲ. ಮುಡಿಯಲ್ಲಿಡಬೇಕಾದ ಹೂವನ್ನು ಕುಂಡದಲ್ಲಿಟ್ಟು ಒಣಗಿಸುತ್ತಾರೆ. ಇದರ ತರ್ಕ ಅವನಿಗೆ ಅರ್ಥವಾಗಲಿಲ್ಲ ಮಾಲಿಯಂತೇ ಅವನೂ “ಎಲ್ಲಾರ ಆಳಾಗೋಗ್ಲಿ” ಎಂದು ತಾತ್ಸಾರದಿಂದ ಹೂ ಬಿಡಿಸತೊಡಗಿದ.

ಕುಯ್ದಷ್ಟೂ ಹೆಚ್ಚಾಗುತ್ತಿದ್ದಂತಿತ್ತು ಪೊದೆಯಲ್ಲಿನ ಪುಷ್ಪಭಂಡಾರ. ನರುಗೆಂಪು ಕಾಂತಿಯಿಂದ ಜೀವವಿದ್ದಂತೆ ಹೊಳೆಯುವ ಹೂವನ್ನು ಕುಯ್ದು ಬುಟ್ಟಿಗೆ ಹಾಕುವಾಗ, ಅವನಿಗೆ ಜೀವವಿರುವ ವಸ್ತುವನ್ನು ಚಿವುಟಿ ಕೊಲ್ಲುತ್ತಿದ್ದಂತೆ ತೋರಿತು. ಕುಯ್ಯುತ್ತಿದ್ದ ಹೂವನ್ನು ಬಿಟ್ಟು ನಿಂತು, ಒಂದು ಗಳಿಗೆ ಅರಳಿ ನಗುವ ಹೂವನ್ನೇ ನೋಡುತ್ತಾ ನಿಂತ.

ತನ್ನ ತಂಗಿ ಇಂದುವಿನ ನಗುಮುಖದಂತೆ ಕಂಡಿತು, ಅವನಿಗೆ ಜೊಗಸೆ ಯಗಲದ ಗುಲಾಬಿ. ಕೀಳಬಾರದು ಎನಿಸಿತು. ಆದರೆ ಮಾಲಿಗಳಿಗೆಯೋ ಕೀಳದಿದ್ದರೆ, ಗಿಡದಲ್ಲರಳಿದ ಹೂವು ತನ್ನ ತಂಗಿಯ ಮುಡಿಯ ಮೇಲೆ ಹೊಳೆಯುವ ದಾರಿ ಏನು ಎನಿಸಿತು. ಈ ಹೂವು ಗಿಡದ ಮೇಲೆ ಅರಳಿ, ಹೀಗೆ ಕೊಯ್ಸಿಕೊಳ್ಳುವುದಕ್ಕಿಂತ, ದಿನಾ ಗಿಡದಲ್ಲಿ ಹೂವರಳುವಂತೆ ಹೆಂಗಸರ ಕೂದಲಿನಲ್ಲೇ ಹೂವರಳಿದರಾಗದೇ? ದೇವರು ಹಾಗೇಕೆ ಮಾಡಲಿಲ್ಲ ಎಂದು ಚಿಂತಿಸಿದ. ಇವು ಹೀಗೆ ಕುಯ್ಸಿಕೊಂಡು ಸಾಯ ಲೆಂದೇ ದೇವರು ಸೃಷ್ಟಿಸಿದ್ದಾನೆ ಎಂದು ತೋರಿ, ಅವನ ಹೃದಯ ಕಹಿ ಯಾಯಿತು. ನಿಟ್ಟುಸಿರು ಬಿಟ್ಟು ಹೂವನ್ನು ಕುಯ್ದು ಬುಟ್ಟಿಗೆ ಹಾಕಿದ.

ಎಂದೂ ಹೂ ಕೊಯ್ದು ಅಭ್ಯಾಸವಿಲ್ಲದ ಕಣ್ಣನಿಗೆ, ಬೆನ್ನನ್ನು ಎತ್ತಿ ಇಳಿಸಿ, ಗುಲಾಬಿಯ ಮುಳ್ಳು ಚುಚ್ಚಿಸಿಕೊಂಡು, ಒಂದು ಪೊದೆಯ ಹೂ ಬಿಡಿಸುವುದರಲ್ಲೇ ಸಾಕಾಯಿತು. ಪುಟ್ಟಿಯನ್ನು ತೆಗೆದುಕೊಂಡು ಹೋಗಿ ಮಾಲಿಯ ಬಳಿ ಇಟ್ಟು—"ಇನ್ನು ಕೀಳಾಕೆ ನನ್ಕೈಲಾಗಾಕಿಲ್ಲ. ಸಾಕಾ ಗೋಯ್ತು. ಒಂದೆಲ್ಡು ಹೂ ಕೊಡು. ಹೊಂಟೋಯ್ತೀನಿ" ಎಂದ.

"ಥೂ ಸೋಮಾರಿ ನನ್ಮಗ್ನೆ. ಏನೇನೋ ಕಿಸಿತೀನೀಂತ ಕೊಚ್ಕಾತಾ ಇದ್ದೆ. ಒಂದು ಗಿಡದಾಗಿನ್ದು ಹೂ ಬಿಡಿಸೋದ್ರಾಗೇ ಸುಸ್ತಾ ಗೋಯ್ತು. ಇನ್ನು ಚಾಕ್ರಿ ಏನ್ಮಾಡ್ತಿ?"

"ನಾನ್ಯಾಕ್ಚಾಕ್ರಿ ಮಾಡ್ಲಿ."

"ಮತ್ತೆ. ಹೊಟ್ಟೆಗೇನು ಮಣ್ತಿನ್ತಿಯಾ?"

"ನಿಂಗಷ್ಟೆ ಗೊತ್ತಿರಾದು. ಹೊಟ್ಟೆಗೋಸ್ಕರ ಚಾಕ್ರಿ ಮಾಡ್ತಾರ?

"ಮತ್ತೇನ್ಮಾಡ್ತಿ?"

"ಎಲ್ಡೊತ್ತು ಹೊಟ್ಲೆಂದೆ ತೊಟ್ಟೇಲಿ ಸಿಕ್ಕಾಕಿಲ್ಲಾ ಆಯಾಗಿ" ಎಂದು ಮಾಲಿಯ ಮೂರ್ಖತನವನ್ನು ಅಣಕಿಸುವನಂತೆ ನಕ್ಕು "ನಿನ್ಗದೆಲ್ಲ ತಿಳಿಯಾಕಿಲ್ಲ. ದುಡೀತಿ ಅಷ್ಟೆ. ಓಗ್ಲಿ. ಹೂ ಕೊಟ್ಬುಡು, ಒಂಟೋಯ್ತೀನಿ" ಎಂದ. ಮಾಲಿಯ ಮುಖದಲ್ಲಿ ಕಣ್ಣನಿಗೆ ಅರ್ಥವಾಗದ ಯಾವುದೋ ಒಂದು ಭಾವ ಸುಳಿದು, ಮರೆಯಾಯಿತು.

"ಮನಸ್ನಾಗಿ ಉಟ್ಟ ತೊಟ್ಟೇಲಿ ತಿಂತೀಯಾ ?" ಮಾಲಿಯ ಧ್ವನಿಯಲ್ಲಿ ನೋವು ತುಂಬಿತ್ತು. ಕಣ್ಣನಿಗೆ ಅದು ಏಕೆಂದು ಗೊತ್ತಾಗಲಿಲ್ಲ.

"ನಿನ್ನಂಗೆ ಹಿಡಿಯೂಟಕ್ಕೆ ಮೂರೊತ್ತು ಚಾಕ್ರಿ ಮಾಡಿ ಸಾಯಲ್ಲ" ಎಂದ ಕಣ್ಣ. ಮಾಲಿಗೆ ಏಕೋ ಕಣ್ಣನ ಮಾತು ಸರಿ ಎಂದು ತೋರಿತು. ಕರ್ಕಶವಾಗಿ ಹೇಳಿದ.

"ಈ ಹೂ ತಗೊಂಡುಹೋಗು, ಎಂದು ಒಂದು ಹೂ ಕೇಳಿದ ಕಣ್ಣನಿಗೆ, ಹತ್ತು ಹೂವುಗಳನ್ನು ಕೊಟ್ಟ. ಕಣ್ಣ ಅವು ಬಿಸಲಿಗೆ ಬಾಡದಂತೆ, ತನ್ನ ಹರಿದ ಅಂಗಿಯ ಒಳಗೆ ಹಾಕಿ ಕೆಳಗೆ ಬೀಳದಂತೆ ಅಂಗಿಯನ್ನು ಸಿಕ್ಕರಿನಲ್ಲಿ ಸಿಕ್ಕಿಸಿ ಹೊರಡಲು ಸಿದ್ಧನಾದವನು, ಇದ್ದಕ್ಕಿದ್ದಂತೇ ಮಾಲಿಯ ಮುಖದಲ್ಲಿ ಮೂಡಿದ ಭೀತಿಯನ್ನು ಕಂಡು, ನಿಬ್ಬೆರಗಾಗಿ ನೋಡಿದ. ಅವನಿಗೂ ಗಾಬರಿಯಾಯಿತು.

"ಇವತ್ತು ಸಿಕ್ಯಾ ಕಳ್ಳ........ಮಗನೆ. ನನಗೆ ಗೊತ್ತಿತ್ತು ನಿನ್ನ ಆಟ" ಎಂಬ ಹೆಂಗಸಿನ ಕ್ರೂರತೆ ತುಂಬಿ ತುಳುಕುವ ತೀವ್ರವಾದ ಮಾತು, ಆ ಭೀತಿಯ ಬೆನ್ನು ಹತ್ತಿ ಬಂದಂತೆ ಕೇಳಿ, ತಟಕ್ಕನೆ ತಿರುಗಿ ನೋಡಿದ ಕಣ್ಣ. ಸುಂದರವಾದ ವಸ್ತ್ರಾಲಂಕಾರಗಳನ್ನು ಧರಿಸಿದ ಸ್ತ್ರೀಯೊಬ್ಬಳು, ಕ್ರೋಧವಿಕಾರವಾದ ಮುಖದಿಂದ ಅರಚಿದಳು—

"ನನಗೆ ಗೊತ್ತಿತ್ತು ನಿನ್ನ ಚಾಳಿ. ಅಷ್ಟೊಂದು ಹೂ ಏನಾಗ್ತದೆ ಅಂತ ನೋಡ್ತಾನೇ ಇದ್ದೆ. ದಿನಾ ಹೂ ಕದ್ದು, ಇವನ ಕೈಲಿ ಮಾರಾಟ ಮಾಡಸ್ತೀಯಾ? ನಿಮ್ಮಿಬ್ರನ್ನು ಜೈಲಿಗೆ ಹಾಕಿಸಿ, ಮೈ ಮುರಿಸುತ್ತೇನೆ. ಉಂಡಮನೆಗೆರಡು ಬಗೀತೀಯಾ ? ಬುದ್ಧಿ ಕಲಸ್ತಿನಿ ತಡಿ ನಿನಗಿವತ್ತು. ನಿಮ್ಮ ರಾಯರನ್ನೇ ಕರೆದು ತೋರಿಸ್ತೀನಿ, ನಿನ್ನ ವಿದ್ಯಾನ. ನಿನ್ನ ಕಳ್ಳ ಬಾಳಿಗಿಷ್ಟು ಬೆಂಕಿ ಹಾಕಾ."

"ಇಲ್ರವ್ವಾ, ನಾನು ಹೂ ಮಾಶ್ತಿರ್ಲಿಲ್ಲ. ಒಂದು ಹೂ ಕೊಡೂಂದ. ಕೊಟ್ಟೆ. ಒಟ್ಟೆ ಮೇಲೆ ಒಡೀಬೇಡ್ರವ್ವಾ. ಇನ್ಮ್ಯಾಕಿಂಗೆ ಕೊಡಾಕಿಲ್ಲ" ದೈನ್ಯ ತುಂಬಿದ ಸ್ವರದಲ್ಲಿ, ಅಂಗಲಾಚಿದ ಅವನು.

"ಒಂದು ಹೂ ಕೊಟ್ಯೋ. ಅವನು ಮುಡಿಲಿನಲ್ಲಿ ತುಂಬಿಕೊಂಡಿರೋದು ಒಂದೇ ಹೂವು. ಅದೆಲ್ಲಾ ಹೇಳಸ್ತೀನಿ. ತಡಿ. ಅವನಿಗೂ ನಾಲ್ಕು ಒದೆ ಬಿದ್ರೆ ಬಾಯ್ಬಿಡ್ತಾನೆ. ಲೋ....ಮಾದಾ....ಕಳ್ಳ ಸಿಕ್ಕಿ ಬಿದ್ದಿದಾನೆ, ಬಾರೋ...."

ಎಂದು ಆಕೆ ಮನೆಯಲ್ಲಿದ್ದ ಮತ್ತೊಬ್ಬ ಆಳನ್ನು ಕೂಗಿ, ಕಣ್ಣನ ತೋಳನ್ನು ಹಿಡಿದುಕೊಂಡಳು. ಕಣ್ಣನಿಗೆ ಗಾಬರಿಯಾಯಿತು. ಕೈ ಕೊಸರಿಕೊಳ್ಳಲು ಯತ್ನಿಸಿದ.

"ತಪ್ಪಿಸ್ಕೋತೀಯಾ, ಸೂ....ಮಗನೆ" ಎಂದು ಆಕೆ, ಅವನ ಕೆನ್ನೆಗೆ ಬಾರಿಸಿದಳು. ಕಣ್ಣ ಏಟು ತಿಂದು ಎಷ್ಟೋದಿನವಾಗಿತ್ತು. ಚುರುಕಾಗಿ ಬಿದ್ದ ಏಟಿಗೆ, ಅವನಲ್ಲಿ ಸಿಟ್ಟು ಕೆರಳಿತು.

"ಏ, ಕೈಯ್ಬಿಡೇ" ಎಂದು ಗುರುಗುಟ್ಟಿದ.

"ಏ ಅನ್ನ್ತೀಯಾ ಬೇಕೂಫ್?" ಎಂದು ಆಕೆ ಮತ್ತೆ ನಾಲ್ಕೇಟು ಏರಿಸಿದಳು. ಸಿಟ್ಟಿನಲ್ಲಿ ಕಣ್ಣನ ಗಾಬರಿ ಮರೆತುಹೋಯಿತು. ತೋಳು ಹಿಡಿದ, ಅವಳ ಮುಂಗೈಗೆ ಬಾಯಿ ಹಾಕಿ ಕಚ್ಚಿ, ಕೊಸರಿದ.

"ಅಯ್ಯಯ್ಯೋ" ಎಂದು ಚೀರಿ, ಕಣ್ಣನ ಕೈ ಬಿಟ್ಟಳಾಕೆ. ಇಬ್ಬರು ಮೂವರು ಓಡಿಬರುವ ಸದ್ದು ಕೇಳಿಸಿತು. ಒಂದು ಗಳಿಗೆ ಮರೆಯಾದ ಹೆದರಿಕೆ ಪ್ರವಾಹವಾಗಿ ಹರಿದಿತು. ಅವಳು ತೋಳು ಬಿಟ್ಟ ಕೂಡಲೇ ಕಣ್ಣ, ಬಲೆ ಜಾರಿದ ಜಿಂಕೆಯಂತೆ ಚಿಮ್ಮಿ, ಸೊಂಟದೆತ್ತರವಿದ್ದ ಬೇಲಿಯನ್ನು ಹಾರಿ ಓಡಿದ. ಹೆದರಿಕೆಯಲ್ಲಿ ಅವನಿಗೆ ದಿಕ್ಕು ದೆಸೆ ಯಾವುದೂ ತಿಳಿಯಲಿಲ್ಲ. ಆ ಗಾಬರಿಯಲ್ಲಿ ಅವನು ರಸ್ತೆಗೆ ಹಾರದೆ, ಪಕ್ಕದ ಮನೆಯ ಕಾಂಪೌಂಡಿನೊಳಗೆ ಧುಮುಕಿದ್ದ. ನೆರೆಮನೆಯ ಗದ್ದಲದಿಂದ, ಕೆರಳಿ ಅತ್ತಿತ್ತ ನೋಡುತ್ತಿದ್ದ ಆ ಮನೆಯ ನಾಯಿ, ಹಾರಿದ ಇವನನ್ನು ಕಂಡ ಕೂಡಲೇ, ಇವನತ್ತ ಚಿಮ್ಮಿತು. ಒಂದುಬಾರಿಯಾಗಲೇ ನಾಯಿಯಿಂದ ಕಡಿಸಿಕೊಂಡ ಕಣ್ಣ, ಮತ್ತೊಂದು ಬಾರಿ ಅದರ ಬಾಯಿಗೆ ಸಿಗಲಿಚ್ಛಿಸದೆ, ಎತ್ತರವಾಗಿ ಬೆಳೆದ ಮರವೊಂದನ್ನು ಸರ್ರನೆ ಏರಿ, ಬೀದಿಯ ಕಡೆಗೆ ಬಾಗಿದ, ಅದರ ರೆಂಬೆಯ ಮೇಲೆ, ವೇಗವಾಗಿ ತೆವಳಿ ಧುಮುಕಿದ.

ಪಕ್ಕದ ಮನೆಯ ಗದ್ದಲ, ರೇಗಿದ ನಾಯಿಯ ಬೊಗಳುವಿಕೆ ಯನ್ನು ಕೇಳಿದ ಆ ಮನೆಯವರು, ಹೊರಬಂದು ಅತ್ತಿತ್ತ ಹುಡುಕಿ, ಕೊಂಬೆಯ ಮೇಲೆ ಹೋಗುತ್ತಿದ್ದ ಕಣ್ಣನನ್ನು ಕಂಡು, "ಕಳ್ಳ, ಕಳ್ಳ" ಎಂದು ಕೂಗಿದರು.

ಕಣ್ಣ ಜೀವಕ್ಕೆ ಅಪಾಯವಾಗಬಹುದೆಂಬುದನ್ನೂ ಯೋಚಿಸದೆ, ಐದಾರು ಆಳು ಎತ್ತರವಾಗಿದ್ದ ಕೊಂಬೆಯಿಂದ ಒಂದೇ ಹಾರಿಗೆ ಬೀದಿ ಯಲ್ಲಿ ಹಾರಿ, ಉಸಿರು ತಿರುಗಿಸಿಕೊಳ್ಳಲೂ ನಿಲ್ಲದೆ ಓಡತೊಡಗಿದ. ಅವನ ಹಿಂದೆ ಅಟ್ಟಬರುವವರ ಕಾಲಸದ್ದು, ನಾಯಿಯ ಬಗಳುವಿಕೆ ಕೇಳುತ್ತಿತ್ತು. ಹಿಂತಿರುಗಿ ನೋಡದೆ, ಓಡುತ್ತಾ ರಾಜಮಾರ್ಗವನ್ನು ಬಿಟ್ಟು, ಬದಿಯ ಗಲ್ಲಿಯಲ್ಲಿ ನುಸುಳಿ, ಮನಸ್ಸುಬಂದ ಕಡೆ ಓಡಿದ.

ಎಷ್ಟು ಹೊತ್ತು ಹಾಗೆ ಓಡಿದನೋ, ಎಷ್ಟು ತಿರುವು ಸುತ್ತಿ ಗಲ್ಲಿಗಳನ್ನು ದಾಟಿದನೋ, ಓಟದಲ್ಲಿ ಅವನಿಗೆ ಗೊತ್ತಾಗಲಿಲ್ಲ. ಸಾಕಷ್ಟು ದೂರ ಬಂದೆ ನೆಂದು ಮನಸಿಗೆ ನೆಮ್ಮದಿಯಾದಮೇಲೆ, ಹಿಂದೆ ಓಡಿಬರುವವರ ಕಾಲ ಸದ್ದು ಕೇಳುವುದು ನಿಂತಮೇಲೆ, ಸೋತು, ನಿರ್ಜನವಾದ ಒಂದು ಕಡೆ ಕುಳಿತುಕೊಂಡ. ಓಟದ ಆಯಾಸ, ಗಾಬರಿಗೆ ಅವನ ಮೈ ನಡುಗು ತ್ತಿತ್ತು. ಏರಿಏರಿ ಬರುವ ಉಸಿರು, ಎದೆಯನ್ನು ಸೀಳುವಂತಿತ್ತು. ಬೆವರು ಧಾರಾಕಾರವಾಗಿ ಸುರಿಯುತ್ತಿತ್ತು. ಮರದಿಂದ ಹಾರಿದಾಗ ಮಂಡಿ ತರೆದಿದ್ದುದಲ್ಲದೆ, ಮರದಲ್ಲಿ ವೇಗವಾಗಿ ತೆವಳುವಾಗ, ಕಡ್ಡಿಗಳು ತಗಲಿ ಕೈಮೈಯೆಲ್ಲಾ ತರಚಿತ್ತು. ಇವಕ್ಕೆ ಕಾರಣಳಾದ ಹೆಂಗಸಿನ ಮೇಲೆ ಸಿಟ್ಟು ಉರಿದುಬಂತು.

"ಮಿಂಡರಗಾಳಿ. ಎಲ್ಲಾ ಹೂ ತಗೊಂಡ್ರೆ ಅವಳಪ್ಪನ್ಮನೆ ಗಂಟೊಯ್ತಾ?" ಎಂದು, ತನ್ನ ಸಿಟ್ಟನ್ನೆಲ್ಲಾ ತೀರಿಸಿಕೊಳ್ಳುವನಂತೆ ಕ್ಯಾಕರಿಸಿ ಉಗಿದ. ನೆತ್ತರಿಡುತ್ತಿದ್ದ ಗಾಯಗಳಿಗೆ ಕೈಯ್ಯಲ್ಲ ಉಗುಳಿ ಕೊಂಡು, ಲೇಪಮಾಡಿದ. ಅಬ್ಬಾ! ಬದುಕಿದೆ ಎಂದು ಕಣ್ಣ ಉಸಿರು ತಿರುಗಿಸಿಕೊಳ್ಳುವಹೊತ್ತಿಗೆ, ಪಕ್ಕದಲ್ಲೇ 'ಬೌ' ಎಂದದ್ದು ಕೇಳಿಸಿ, ತಿರುಗಿನೋಡಿದ. ಅದೇ ಆ ಮನೆಯ ನಾಯಿ! ಮನುಷ್ಯರು ಬಿಟ್ಟರೂ

ತಾನು ಬಿಡದೆ ಬೆನ್ನಟ್ಟಿಬಂದಿದೆ. ಅದರ ಸಣ್ಣ ಕಣ್ಣು, ಜೋಲುವ ನಾಲಿಗೆಯನ್ನು ನೋಡಿದ ಕಣ್ಣ. ಸಿಟ್ಟು, ಹೆದರಿಕೆಗಳು ಒಟ್ಟೊಟ್ಟಾಗಿ ಕವಿದು, ಅವನ ಕಣ್ಣನ್ನು ಕುರುಡುಮಾಡಿದವು. ಸೆಳೆದುಬಿಟ್ಟ ಉಕ್ಕಿನ ಕಂಬಿಯಂತೆ, ಪಕ್ಕದಲ್ಲಿದ್ದ ದೊಡ್ಡ ಕಲ್ಲೊಂದನ್ನೆತ್ತಿ ನಿಂತ. ನಾಯಿ, ಒಂದು ಗಳಿಗೆ, ಅತ್ತಿತ್ತ ಕತ್ತು ತಿರುಗಿಸಿ, ಕಣ್ಣನ ಮೇಲೆ ಹಾರಿತು.

"ಥೂ ಸಿನ್ನಪ್ಪ" ಎಂದವನೇ ಕಣ್ಣ ಶಕ್ತಿಯೆಲ್ಲವನ್ನೂ ಬಿಟ್ಟು, ಕಲ್ಲನ್ನು ನಾಯಿಯ ನೆತ್ತಿಯಮೇಲೆ ಅಪ್ಪಳಿಸಿದ. ಬೊಗಳಿ ಹಾರಿದ ನಾಯಿ ಕುಯ್ಗುಟ್ಟುತ್ತಾ ಮಲಗಿತು. ಅದರ ಮೇಲೆ ರೋಷ ಉಕ್ಕಿಬಂತು, ಕಣ್ಣನಿಗೆ. ಮಲಗಿದ ನಾಯಿಯ ಕಾಲುಗಳನ್ನು ಹಿಡಿದು, ಗರಗರ ತಿರುಗಿಸಿ, ನೆಲಕ್ಕೆ ಅಪ್ಪಳಿಸಿದ. ಅದು ಬದುಕಿರುವುದೋ, ಸತ್ತಿತೋ ಎಂಬುದನ್ನು ನೋಡದೆ, ನೆಲಕ್ಕೆ ಸೆಳೆಯುತ್ತಲೇ ಇದ್ದ. ಆಗ ಅವನ ಕೈಗೆ ನಾಯಿಯಲ್ಲದೆ ಮನುಷ್ಯರು ಸಿಕ್ಕಿದ್ದರೂ ಹಾಗೇ ಮಾಡುತ್ತಿದ್ದನೇನೋ.

ನಾಯಿಯನ್ನು ಸೆಳೆಸೆಳೆದು ಕೈಸೋತು, ನಿಲ್ಲಿಸಿದ ಕಣ್ಣ. ಇಳಿಸಿದ ಕಯ್ಯಿಂದ ಹಿಂಡಿದ ಬಟ್ಟೆಯಂತೆ ಜೋಲಾಡಿತು ನಾಯಿ. ಅದನ್ನು ದೂರ ಒಗೆದು ಕೈಕೊಡವಿಕೊಂಡು, ಮತ್ತ್ಯಾರಾದರೂ ಅದನ್ನು ನೋಡಿಯಾರೆಂದು, ಅಲ್ಲಿಂದ ಓಡಿದ ಕಣ್ಣ. ಮತ್ತೆ ತಮ್ಮ ಜಗಲಿಯನ್ನು ಸೇರುವವರೆಗೂ ನಿಲ್ಲಲಿಲ್ಲ.

ದಣಿದು ಬೇಸತ್ತ ಕಣ್ಣ ಜಗಲಿಯನ್ನು ಸೇರುವ ವೇಳೆಗೆ, ಅವನ ತಂಗಿ ಅಳುತ್ತಿರುವ ಸದ್ದು ಕೇಳಿಸಿತು. ಸಿಟ್ಟು ಕೆರಳಿ ಬಂತು ಅವನ ಮೈಯ್ಯಲ್ಲಿ.

"ಯಾವೋನ್ಲೇ ಅಳ್ಸೋರು?" ಎಂದು ಅರಚಿದ ಕಣ್ಣ. ಅವನ ಧ್ವನಿಯನ್ನು ಕೇಳಿ, ಇಂದುವನ್ನು ನೋಡಿಕೊಳ್ಳುತ್ತಾ ಕುಳಿತಿದ್ದ ಕಂದಸಾಮಿ, ಆರುಮುಗಂ ಇಬ್ಬರೂ ಬೆಂಕಿ ಮುಟ್ಟಿದಂತೆ ಬೆಚ್ಚಿಬಿದ್ದರು. ಅಷ್ಟು ಕರ್ಕಶವಾಗಿತ್ತು ಕಣ್ಣನ ಧ್ವನಿ. ಅವನ ಮುಖ ನೋಡಿದರು. ಎಂದೂ ಅವರ ಕಣ್ಣಿಗೆ ಅಷ್ಟು ಭಯಂಕರನಾಗಿ ಕಂಡಿರಲಿಲ್ಲ ಕಣ್ಣ. ಅವರ ಮೈ ಅಪ್ರಯತ್ನವಾಗಿ ಕಂಪಿಸಿತು.

"ಯಾಕೋ ಅಳೋದು ಅವ್ವ, ಛಾಂಚೋತ್ "

"ನಾವೇನೂ ಮಾಡ್ಲಿಲ್ಲ ಕಣ್ಣ. ನೀನೋದಾಗ್ಲಿಂದ ಅಣ್ಣಾ ಅಣ್ಣಾ ಅಂತ ಅಟಿತಗವ್ಪುಟ್ಟವ್ಳೆ. ಏನ್ಮಾಡಿದ್ರೂ ಸುಮ್ನಾಗ್ಲಿಲ್ಲ." ಭೀತಿಯಿಂದ ನಡುಗುವ ಧ್ವನಿಯಲ್ಲಿ ಹೇಳಿದ ಕಂದಸಾಮಿ.

"ಔದೇನೆ ಇಂದೀ?" ಕಣ್ಣ ಅವರ ಮಾತನ್ನು ನಂಬದೆ ತಂಗಿಯನ್ನು ಕೇಳಿದ.

ಕಣ್ಣನನ್ನು ನೋಡಿದ ಕೂಡಲೇ ಅವಳು ಅಳುವನ್ನು ನಿಲ್ಲಿಸಿ, "ಅಣ್ಣಾ" ಎಂದು ಅವನತ್ತ ಹಾರಿದಳು ಕಣ್ಣ ಅವಳನ್ನು ಎತ್ತಿ, ಎದೆಯ ಮೇಲೆ ಮಲಗಿಸಿಕೊಂಡು. ಅವಳ ಮೈ ಸೋಕಿದ ಕೂಡಲೇ, ಕಣ್ಣನಲ್ಲಿ ಹೆಡೆತೂಗುತ್ತಿದ್ದ ಕ್ರೋಧ, ಕರ್ಕಶತೆ ಎಲ್ಲಾ ಮಾಯವಾಗಿಹೋದವು.

"ನಿನ್ನ ರಾಪ್ರೂ ಒಡದ್ರಾ ಇಂದೀ ?"

"ಇಲ್ಲ." ಬಿಕ್ಕುತ್ತ ಹೇಳಿದಳು ಅವಳು.

"ಮತ್ಯಾಕಳ್ತಿರೋದು.?"

"ನೀನ್ಯಾಕೆ ನನ್ನ ಬಿಟ್ಹೋಗಿದ್ದು ?"

"ನಾನೆಲ್ಹಾರ ಓದ್ರೆ ಅಳ್ತಾರ ಉಚ್ಚಿ !

"ಊ. ನೀನೆಲ್ಹೋಗಿದ್ದೆ ?"

ತಟ್ಟಕ್ಕನೆ ಕಣ್ಣನಿಗೆ ಹೂವಿನ ನೆನಪು ಬಂತು. ಮಡಿಲಲ್ಲಿ ಬಿಗಿಯಾಗಿ ಸಿಕ್ಕಿಸಿದ ಹೂವುಗಳನ್ನು ಹೊರತೆಗೆದ. ಅವು ಅವನ ಮೈಯಕುದಿಗೆ ಸಿಕ್ಕಿ ಬಾಡಿದ್ದರೂ, ಪೂರಾ ಕಳೆಗೆಟ್ಟಿರಲಿಲ್ಲ.

"ನಿಂಗೆ ಹೂ ತರಾಕೆ ಹೋಗಿದ್ದೆ" ಎಂದು ಹೇಳಿ, ಅವಳನ್ನು ತನ್ನ ಬಳಿಗೆ ಎಳೆದುಕೊಂಡು, ಅವಳ ಕೆದರಿದ ತಲೆಯಲ್ಲೇ ನಾಲ್ಕು ಹೂ ಮುಡಿಸಿ, ಅವಳ ಮುಖವನ್ನೇ ದಿಟ್ಟಿಸಿ ನೋಡಿದ. ಅವಳ ಮುಖ ದಿವ್ಯಸುಂದರವಾಗಿ ಕಂಡಿತು, ಅವನಿಗೆ. ಅವಳನ್ನು ಬಾಚಿ ಮುತ್ತಿಟ್ಟು, ಮತ್ತೊಮ್ಮೆ ನೋಡಿ, ಪಕ್ಕದಲ್ಲಿದ್ದವರನ್ನು ಕೇಳಿದ—

"ಸಂದಾಕಿ ಕಾಣಾಕಿಲ್ವೇನ್ಲಾ ಲೌಡಿ"

ಅವರಿಬ್ಬರೂ ಅವನ ಅಭಿಪ್ರಾಯಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಕೆದರಿದ ಕೂದಲಲ್ಲಿ ಹೇಗೋ ಸಿಲುಕಿದ ಹೂಗಳು ಬಳ್ಳಿಯಲ್ಲಿ ಅರಳಿದ ಹೂವುಗಳಂತೆ ತೋರಿದವು. ಪುಷ್ಪಕಾಂತಿ ಯಿಂದೆಂಬಂತೆ, ಅತ್ತು ಕೆಂಪಾದ ಅವಳ ಮುಖ ರಂಜಿಸಿತು. ಕಣ್ಣೊಳಗೆ ಅವಳನ್ನು ಕುಡಿಯುವನಂತೆ ನೋಡಿದ ಕಣ್ಣ. ಅವನ ದಣಿವೆಲ್ಲಾ ಮರೆತುಹೋಯಿತು. ಅದುವರೆಗೂ ಬರೀ ಎಲೆಗಳೇ ತುಂಬಿದ ಅವನ ಹೃದಯದ ಬಳ್ಳಿಯಲ್ಲೇ ಹೂವರಳಿದಂತಾಯಿತು, ಮೈ ಪುಲಕಿತವಾಗಿ.

## ೧೪

ಒಂದು ದಿನ ರಾತ್ರಿ ಎಲ್ಲರೂ ಮಲಗಿದ್ದರು. ಇದ್ದಕ್ಕಿದ್ದಹಾಗೆ ಯಾರೋ "ಕಣ್ಣಾ"ಎಂದು ಕಿರುಚಿದರು. ನಿದ್ರೆಯಲ್ಲಿ ಮೈಮರೆತ್ತಿದ್ದ ಕಣ್ಣ ಭೀತಿತುಂಬಿದ ಆ ಕೂಗನ್ನು ಕೇಳಿ, ಮೈಮೇಲೆ ನೀರು ಸುರುಸಿ ದಂತಾಗಿ ಎದ್ದು ಕುಳಿತು, ಕಣ್ಣುಜ್ಜಿಕೊಂಡು ನೋಡಿದ. ನಾಲ್ಕೈದು ಜನ ಕೈಯಲ್ಲಿ ಲಾಂದರ ಹಿಡಿದುಕೊಂಡು ನಿಂತಿದ್ದರು. ಒಬ್ಬಾತ ಕತ್ತಲು ಕವಿದ ಕಟ್ಟೆಯ ಮೂಲೆ ಮೂಲೆಗೂ ಬ್ಯಾಟರಿಯ ಬೆಳಕು ಚೆಲ್ಲಿ ನೋಡುತ್ತಿದ್ದ. ಏಕೆಂಬುದು ಅವನಿಗೆ ಅರ್ಥವಾಗಲಿಲ್ಲ. ಕಟ್ಟೆಯ ಇನ್ನೊಂದು ಕಡೆ, ಪಳನಿ, ಭೀತಿತುಂಬಿದ ಕಣ್ಣಿನಿಂದ ಆ ಗುಂಪನ್ನು ನೋಡುತ್ತಿದ್ದ. ಅವರು ಯಾರು, ಮಾತಾಡದೆ ಏನು ನೋಡುತ್ತಿದ್ದಾರೆ ಎಂಬುದು ಅರಿವಾಗದೆ, ಕಣ್ಣನಿಗೂ ದಿಗಿಲಾಯಿತು. ಹೆದಹೆದರುತ್ತಲೇ ಕೇಳಿದ—

"ಏನ್ಬೇಕಾಗಿತ್ರಣ್ಣ ?"

"ಇವರದೊಂದು ಎಂಟು ಹತ್ತು ವರ್ಷದ ಹೆಣ್ಣು ಮಗು ತಪ್ಪಿಸಿ ಕೊಂಡಿದೆ. ಸಂಜೆಯಿಂದ ಹುಡುಕುತ್ತಾ ಇದೀವಿ. ಇಲ್ಲೆಲ್ಲಾದರೂ ಬಂದು ಮಲಗಿದೆಯೇನೋ ಎಂದು ನೋಡಿದಿವಿ. ಇಲ್ಲಿ ಯಾವುದಾದರೂ ಬಂದಿತ್ತೇನು?" ಬ್ಯಾಟರಿ ಹಾಕಿ ನೋಡುತ್ತಿದ್ದಾತ ಕೇಳಿದ.

ಇನ್ನು ಪೂರಾ ನಿದ್ದೆ ತಿಳಿಯಗದ ಕಣ್ಣನ ಮನಸಿನಲ್ಲಿ ಅಪಾಯ ಸೂಚನೆಯ ಗಂಟೆ ಮೊಳಗಿತು. ಇಂದುವನ್ನು ಕರೆದುಕೊಂಡು ಹೋಗಲು ಬಂದಿದಾರೆಯೋ ಇವರು ? ತಟಕ್ಕನೆ ತನ್ನ ಪಕ್ಕದಲ್ಲಿ ನಿದ್ರೆ ಹೋಗುತ್ತಿದ್ದ ಇಂದುವಿಗೆ ಅಡ್ಡವಾಗಿ ಸರಿದು—

"ಇಲ್ಯಾರೂ ಬರ್ಲಿಲ್ಲ" ಎಂದ. ಅವನ ಮಾತು ಏಕೋ ತೊದಲುತ್ತಿತ್ತು.

"ಅದ್ಯಾರು ನಿನ್ನ ಪಕ್ಕದಲ್ಲಿ ಮಲಗಿರೋದು ?" ಎಂದು ಗಡುಸಾಗಿ ಕೇಳಿದ ಮೊದಲು ಮಾತಾಡಿಸಿದಾತ.

"ಇಲ್ಲೆಲ್ಲಾ ಇರಲಿಕ್ಕಿಲ್ಲ ಅವಳು. ಇವನ ಹತ್ತಿರ ಯಾಕೆ ಬರ್ತ್ತಾಳೆ ?" ಇನ್ನೊಬ್ಬಾತ ತಗ್ಗು ಧ್ವನಿಯಲ್ಲಿ ಹೇಳಿದ.

"ನಿಮಗೆ ಗೊತ್ತಿಲ್ಲ ಸಾರ್. ಇವರೆಲ್ಲಾ ಐನಾತಿ ಕೊರಮರು. ನೋಡಲಿಕ್ಕೆ ಹೀಗಿದಾರೆ. ನಿಮ್ಮ ಹುಡುಗಿ ಮೈಮೇಲೆ ಒಡವೆ ಬೇರೆ ಇತ್ತು ಎನ್ತೀರಾ ? ಪುಸಲಾಯಿಸಿ ಕರೆದುಕೊಂಡು ಬಂದಿರಬಹುದು. ನೀವು ಸ್ವಲ್ಪ ಸುಮ್ನಿರಿ. ನಾನು ಹೊರಡಿಸುತ್ತೇನೆ" ಎಂದು ಆತ, ಕಣ್ಣನ ಕಡೆಗೆ ತಿರುಗಿ "ಅದ್ಯಾರೋ ನಿನ್ನ ಪಕ್ಕದಲ್ಲ ಮಲಗಿರೋದು ?" ಎಂದು ಮತ್ತಷ್ಟು ಜೋರಾಗಿ ಕೇಳಿದ.

"ನ........ನ........ನನ್ತಂಗಿ........" ಕಣ್ಣ ತೂಡರುತ್ತಾ ಹೇಳಿದ.

ಅವನು ತೊದಲು ಮಾತನಾಡಿದುದನ್ನು ಕೇಳಿ ಆತನ ಅನುಮಾನ ಮತ್ತಷ್ಟು ಬಲವಾಯಿತು." ಇತ್ಲಾಗೆದ್ದು ಬಾರೋ, ನಿನ್ತಂಗಿ ಹೇಗಿದಾಳೋ ನೋಡೋಣ" ಎಂದ. ಕಣ್ಣನ ಹೆದರಿಕೆ ಹೆಚ್ಚುತ್ತಾ ಹೋಯಿತು.

"ಇವಳು ನಿಮ್ಮ ಹುಡುಗಿಯಲ್ಲ, ನನ್ನ ತಂಗಿ"

"ನಿನ್ನ ತಂಗಿಯಾದರೆ, ಈ ಕಡೆ ಬಾ. ನೋಡೋಣ ಹೆಂಗಿದಾಳೋ. ನೋಡಿದರೆ ಮಾಸಿ ಹೋಗ್ತಾಳೇನೋ ನಿನ್ನ ತಂಗಿ!

"ನಿಮ್ಪಾದ್ದಾಣೆ, ಇವಳು ನಿಮ್ಮುಡುಗಿಯಲ್ಲ"

"ಇತ್ಲಾಗ್ಬಾರೋ ಅಂದ್ರೆ ಮತ್ತದೇ ಬೊಗಳ್ತೀಯಾ ಕತ್ತೆಮಗನೆ. ನಿಮಗೆ ಒಳ್ಳೆ ಮಾತಿನಲ್ಲಿ ಹೇಳಿದರೆ ಹಾಗೇ, ಚಂಡಾಲದೇವರು, ಚಪ್ಪಲಿ

ಇಲ್ಲದೆ ಮಾತಾಡೋಲ್ಲ" ಎಂದು, ಆತ ಮೆಟ್ಟಿಲು ಹತ್ತಿ ಕಣ್ಣ ಮಲಗಿದ್ದಲ್ಲಿಗೆ ಬಂದ. ಲಾಂದರ ಹಿಡಿದವರೂ ಆತನನ್ನು ಹಿಂಬಾಲಿಸಿದರು. ಕಣ್ಣ ಹತ್ತಿರವಾದ ದೀಪದ ಬೆಳಕಿನಲ್ಲಿ ಉದ್ದವಾದ ಕಾಕಿ ಬಣ್ಣದ ನಿಲುವಂಗಿಯನ್ನು ಗುರುತಿಸಿದ. ಪೋಲೀಸಿನವರು—ಭೀತಿಯಿಂದ ಅವನ ಎದೆ, ಸೀರಾಯಿತು. ಇಂದು ತನ್ನ ಕೈಬಿಟ್ಟು ಹೋಗುತ್ತಾಳೆ ಎನಿಸಿತು. ಅವಳನ್ನು ತಬ್ಬಿಕೊಂಡು, ಅವಳಮೇಲೆ ಮರೆಯಾಗಿ ಮಲಗಿದ.

ಮೆಟ್ಟಿಲಿಗೂ, ಕಣ್ಣ ಮಲಗಿದ್ದ ಜಾಗಕ್ಕೂ ನಡುವೆ ಕಂದಸ್ವಾಮಿ ಮಲಗಿ ಗೊರಕೆ ಹೊಡೆಯುತ್ತಿದ್ದ. ಕತ್ತಲಲ್ಲಿ ಅವನನ್ನು ಕಾಣದೆ, ಪೋಲೀಸಿನವನು, ಬೂಟುಗಾಲಿನಿಂದ ಕಂದಸಾಮಿಯ ತೊಡೆಯನ್ನು ತುಳಿದ. ಆ ನೋವಿಗೆ ಕಂದಸಾಮಿ ಕಿಟಾರೆಂದು ಚೀರುಚಿ, ಮೇಲಕ್ಕೆ ಚಿಮ್ಮಿದವನೇ, ಅಷ್ಟು ಜನರನ್ನು ಬ್ಯಾಟರಿ ಬೆಳಕು, ಲಾಂದರಗಳನ್ನು ಕಂಡು, ಭೂತವನ್ನು ಕಂಡವನಂತೆ ಗಡಗಡ ನಡುಗತೊಡಗಿದ. ಅವನ ಕೂಗಿನಿಂದ ನಿದ್ದೆ ಕೆಟ್ಟ ಆರ್ಮುಗಂ "ಲೇ ಯಾವ್ದೋ ನೋ ಕೂಗೋನು. ಬಿದ್ಕೊಳ್ತೀಯೋ ಹಲ್ಮುರಿಲೋ" ಎಂದು ಹೊದಿಕೆಯೊಳಗಿನಿಂದಲೇ ಅಬ್ಬರಿಸಿದ. ಅವನ ಪಕ್ಕದಲ್ಲೇ ಮಲಗಿದ್ದು, ಎಚ್ಚರವಾಗಿ ಎಲ್ಲವನ್ನು ನೋಡಿದರೂ ಬಾಯಿ ಬಿಡಲು ಧೈರ್ಯವಾಗದಿದ್ದ ಮುನಿಸಾಮಿ "ಲೇ ಆರ್ಮುಗಂ, ಪೋಲೀಸ್ನವ್ರು, ಬಂದವ್ರೆ ಕಣ್ಲಾ" ಎಂದು, ಆರ್ಮುಗನ ಪಕ್ಕೆಯನ್ನು ಮೊಳಕೈಯಿಂದ ತಿವಿದು, ಪಿಸುದನಿಯಲ್ಲಿ ಹೇಳಿದ. "ಅವ್ವಾ ಕೆಟ್ನೆ" ಎಂದು ಆರ್ಮುಗನೂ ನಡುಗುತ್ತಾ ಎದ್ದು ಕುಳಿತ. ಆಸ್ಪತ್ರೆಯ ಕಟ್ಟೆಯಿಂದ ಇವನನ್ನು ಓಡಿಸಿದ ಪೋಲೀಸಿನವನು, ಇವನಿಗೆ ಪೋಲೀಸರ ಚುರುಕನ್ನು ಚೆನ್ನಾಗಿಯೇ ಮುಟ್ಟಿಸಿದ್ದ.

ಒಬ್ಬೊಬ್ಬರಾಗಿ ಎದ್ದು ಕುಳಿತ ಅವರನ್ನು ನೋಡಿ, ಬಂದವರಿಗೂ ಆಶ್ಚರ್ಯವಾಯಿತು—"ಎಷ್ಟು ಜನ ಸೇರಿಕೊಂಡಿದಾರೆ ಇಲ್ಲಿ?" ಎಂದು.

"ನೋಡಿದ್ರಾ ಸಾರ್. ಎಷ್ಟು ಜನ ಇದಾರೆ ಇಲ್ಲಿ. ಒಳ್ಳೆ ಹಾವಿನ ಹುತ್ತ" ಎಂದು ಹೇಳಿ ಪೋಲೀಸಿನವನು, ಕಣ್ಣನ ಬಳಿ ಸಾರಿ, ಇಂದುವಿನ ಮೇಲೆ ಮಲಗಿದ್ದ ಅವನನ್ನು ಜುಟ್ಟು ಹಿಡಿದು, ಮೇಲಕ್ಕೆಳೆದು. ಒಂದು

ಪಕ್ಕಕ್ಕೆ ಎಬ್ಬಿದ. ಕಣ್ಣ ಆಕಾಶವೇ ನೆತ್ತಿಯ ಮೇಲೆ ಕವಿದುಬೀಳಲಿರುವವನಂತೆ, ನಡುಗುತ್ತಾ ನಿಂತುಕೊಂಡ. ಅವರು ತನ್ನ ತಂಗಿಯನ್ನು ಕರೆದುಕೊಂಡು ಹೋಗುತ್ತಾರೆ ಎಂಬ ದುಃಖ, ಕ್ರೋಧ ಅವನೊಳಗೆ ಅಲೆಅಲೆಯಾಗಿ ಅಪ್ಪಳಿಸುತ್ತಿತ್ತು. ಬೇರೆ ಯಾರಾದರೂ ಆಗಿದ್ದರೆ, ಮೇಲೆ ಬೀಳಲು ಹಿಂಜರಿಯದಿದ್ದ ಕಣ್ಣ, ಪೋಲೀಸಿನವನನ್ನು ಕಂಡು, ಧೈರ್ಯಗೆಟ್ಟು, ಸುಮ್ಮಗೆ ಬೆರಳುಗಳನ್ನು ಹೊಸಗಿಕೊಳ್ಳುತ್ತಾ ನಿಂತ.

ಪೋಲೀಸಿನವನು ಮುಖದ ತುಂಬಾ ಹೊದ್ದಿಕೆ ಹೊದ್ದು, ಯಾವುದನ್ನು ಅರಿಯದ ಗಾಢವಾದ ನಿದ್ರೆಯಲ್ಲಿ ಮಲಗಿದ, ಇಂದುವಿನ ಹೊದ್ದಿಕೆಯನ್ನು ಕಿತ್ತು, ಅವಳನ್ನು ಮುಖ ಮೇಲಾಗಿ ಮಲಗಿಸಿ, ಅವಳ ಮುಖದ ಮೇಲೇ ಬೆಳಕು ಬಿಟ್ಟು ನೋಡಿದ. ಒರಟಾದ ಎಳೆತಕ್ಕೆ ಎಚ್ಚರವಾದ ಇಂದು, ಕಣ್ಣುಬಿಟ್ಟು, ಕಣ್ಣು ಕೋರೈಸುವ ವಿದ್ಯುದ್ದೀಪದ ಬೆಳಕನ್ನು ಕಂಡು, ಗಾಬರಿಯಾಗಿ "ಅಣ್ಣಾ" ಎಂದು ಚೀರಿ, ಕಿರುಚಿದಂತೆಯೇ ಸುಮ್ಮನಾಗಿಬಿಟ್ಟಳು.

ಪೋಲೀಸಿನವನು ತನಗೆ ಅಡ್ಡವಾಗಿದ್ದುದರಿಂದ, ಅವನೇನು ಮಾಡಿದನೆಂಬುದನ್ನು ತಿಳಿಯದೆ ಕಣ್ಣ, ಎಳದ ಇಂದುವಿಗೆ ಹೊಡೆದನೇನೋ ಎಂದು ಊಹಿಸಿದ. ದುಃಖ ಒತ್ತರಿಸಿ ಬಂದಿತು.

"ಏ ಪೋಲೀಸ್ನೋರ ಆಕೇನ ಹೊಡಿಬ್ಯಾಡ. ನಿನ್ದೇನಾದ್ರೂ ಇದ್ರೆ ನನ್ನ ಒಡಿ. ನಿಮ್ಮುಡುಗಿ ಆಗಿದ್ರೆ ಕರಕೊಂಡೋಗು. ಆಕೇನ ಅಳಸ್ಬ್ಯಾಡ" ಎಂದ.

ಅವನ ಮಾತು ಕೇಳಿ ಪೋಲೀಸಿನವನು ತಟಕ್ಕನೆ ಹಿಂದಿರುಗಿ ಕಣ್ಣನ ಮುಖದ ಮೇಲೆ ಬೆಳಕು ಚೆಲ್ಲಿ ನೋಡಿದ. ಅವನ ಮುಖದ ಮೇಲೆ ಆಶ್ಚರ್ಯವಿತ್ತು. ಆದರೆ ಅದನ್ನಾವುದನ್ನೂ ತೋರಿಸದೆ, ದೂರ ನಿಂತಿದ್ದವರಿಗೆ—

"ನೋಡಿ ಸಾರ್. ಇಲ್ಲೊಂದು ಹುಡುಗಿ ಇದೆ. ನಿಮ್ಮ ಹುಡುಗೀನೇನೋ ನೋಡಿ" ಎಂದ. ಗುಂಪಿನಲ್ಲಿದ್ದವರ ಪೈಕಿ ಒಬ್ಬ ಬಂದು, ಬ್ಯಾಟರಿಯ ಬೆಳಕಿನಲ್ಲಿ, ಮಾತು ಸತ್ತು, ಕಣ್ಣರಳಿಸಿ ಭೀತಿಯ ಸಾಕಾರ

ಚಿತ್ರದಂತಿದ್ದ ಇಂದುವನ್ನು ನೋಡಿ "ನಮ್ಮ ಹುಡುಗಿ ಅಲ್ಲ. ಅನ್ಯಾಯವಾಗಿ ನಿದ್ರೆ ಕೆಡಿಸಿದ ಹಾಗಾಯಿತು ಪಾಪ ಈ ಮಗೂಗೆ" ಎಂದು ಹಿಂದಕ್ಕೆ ಹೋದರು. ಅರೆಗತ್ತಲಿನಲ್ಲೂ ಆತನ ಕಣ್ಣಲ್ಲಿ ನೀರು ಹೊಳೆಯುತ್ತಿರುವುದು ಕಣ್ಣನಿಗೆ ಕಾಣಿಸಿತು. ಅವನ ಕರಳು ಚುರುಕ್ಕೆಂದಿತು.

ಮಗುವನ್ನು ಕಳೆದುಕೊಂಡವರಿಗೆ, ತಮ್ಮ ಮಗು ಅಲ್ಲಿಲ್ಲವೆಂದು ಸಮಾಧಾನವಾದರೂ, ಪೋಲೀಸಿನವನಿಗೆ ಸಮಾಧಾನವಾದಂತಿರಲಿಲ್ಲ. ಹೋಗುವ ಮೊದಲು, ನಾಲ್ಕೂ ಕಡೆಗೆ ಬ್ಯಾಟರಿ ಹಾಕಿ ನೋಡಿ, ಕಣ್ಣನ ಮುಖದ ಮೇಲೆ ಪೂರಾ ಬೆಳಕು ಚೆಲ್ಲಿ ದಿಟ್ಟಿಸಿ ನೋಡಿದ. ಕಣ್ಣ ಗಾಬರಿಯಿಂದ ನಡುಗುತ್ತಾ ನಿಂತಿದ್ದ. ಪೋಲೀಸಿನವನು ತನ್ನನ್ನು ಹಾಗೆ ನೋಡುವುದನ್ನು ಕಂಡು, ಅವನ ಹೆದರಿಕೆ ಇದ್ದದೂ ಹೆಚ್ಚಾಯಿತು. ತೋಳುಗಳಿಂದ ಮುಖ ಮುಚ್ಚಿಕೊಂಡ.

"ನಿನ್ನ ಹೆಸರೇನೋ?"

"ಕಣ್ಣ."

"ಕಣ್ಣ....ಕಣ್ಣ...." ಎಂದು ಅವನ ಹೆಸರನ್ನು ತನಗೆ ತಾನೇ ಮೂರು ನಾಲ್ಕು ಬಾರಿ ಹೇಳಿಕೊಂಡು, ಮಲಗಿದ ಹುಡುಗಿಯ ಮೇಲೆ ಒಂದು ಬಾರಿ ಬೆಳಕು ಹಾಯಿಸಿ ನೋಡಿ, ಮೆಟ್ಟಲಿಳಿದು ಹೊರಟು ಹೋದ ಪೋಲೀಸಿನವನು. ಉಳಿದವರೂ ಅವನ ಹಿಂದೆಯೇ ಹೋದರು. ಅವರು ಮನೆಯಿಂದ ಮುಂದೆ ಸ್ವಲ್ಪದೂರ ಹೋದ ಮೇಲೆ, ಕಣ್ಣ ನಿಂತಿದ್ದಲ್ಲಿಂದ ಮುಂದೆ ಸರಿದು, ಅವರು ಗಲ್ಲಿಯನ್ನು ತಿರುಗಿ ಕಣ್ಣುಮರೆಯಾಗುವವರೆಗೂ ನೋಡುತ್ತಲೇ ಇದ್ದು, ಅವರ ಹೆಜ್ಜೆ, ಮಾತಿನ ಸದ್ದು ಕೇಳುವುದು ನಿಂತ ಮೇಲೆ, ಇಂದುವಿನ ಬಳಿ ಹೋಗಿ, ಅವಳನ್ನು ತಬ್ಬಿಕೊಂಡ.

ಅದುವರೆಗೂ ಭೀತಿಯಿಂದ ಮೂಕಳಾಗಿದ್ದ ಇಂದು, ಕಣ್ಣ ತನ್ನನ್ನು ತಬ್ಬಿಕೊಂಡ ಕೂಡಲೇ ಗಟ್ಟಿಯಾಗಿ ಅಳಲಾರಂಭಿಸಿದಳು. ಅರೆನಿದ್ರೆ, ಹೆದರಿಕೆ ಎಲ್ಲವೂ ಬೆರೆತಿತ್ತು ಅವಳ ಅಳುವಿನಲ್ಲಿ.

"ಇಂದೀ ಮಲಕ್ಕೋ ಇನ್ಯಾರೂ ಬರಾಕಿಲ್ಲ. ಅಳಬೇಡ" ಎಂದು ಕಣ್ಣ, ಅವಳಿಗೆ ಸಮಾಧಾನ ಹೇಳುತ್ತ ತಟ್ಟಿದ. ಅವಳ ಅಳು ಸಮಾಧಾನ

ವಾಗಿ, ನಿದ್ರೆ ಬರಲು ಅರ್ಧಘಂಟೆಯ ಮೇಲಾಯಿತು. ಉಳಿದವರಾರೂ ಮಲಗದೆ ಎದ್ದು ಕುಳಿತಿದ್ದರು. ಒಬ್ಬಿಬ್ಬರು ಬೀಡಿ ಹಚ್ಚಿದ್ದರು.

"ಯಾರತ್ರಾದ್ರೂ ಒಂದು ಬೀಡಿ ಇದ್ರೆ ಕೊಡ್ರೋ" ಎಂದು ಕೇಳಿದ ಕಣ್ಣ. ಯಾರೋ ಅವನ ಕಡೆಗೆ ಬೀಡಿ, ಕಡ್ಡಿಯ ಪೊಟ್ಟಣವನ್ನು ಒಗೆದರು. ಕಣ್ಣ ಬೀಡಿಯನ್ನು ಹಚ್ಚಿ, ಮೂಗು, ಬಾಯಿಗಳೆರಡರಿಂದಲೂ ಹೊಗೆ ಬಿಡುತ್ತಾ, ಆಕಾಶದಲ್ಲಿ ಹೊಳೆಯುತ್ತಿದ್ದ ನಕ್ಷತ್ರಗಳನ್ನು ನೋಡುತ್ತಾ ಕುಳಿತಿದ್ದ. ಯಾವುದೋ ಭೀತಿ, ಭಾರವಾದ ವಾತಾವರಣದಲ್ಲಿ ಬೆರೆತು, ಅವರೆಲ್ಲರ ಹೃದಯವನ್ನು ಒತ್ತುತ್ತಿರುವಂತಿತ್ತು.

"ಕಣ್ಣ, ನಾವಿಲ್ಲಿಂದ ಕಂಬಿ ಕೀಳ್ಬೇಕಾಗ್ತದೇನೋ?" ಎಂದು ಆರ್ಮುಗಂ ಅವರೆಲ್ಲರನ್ನೂ ಕಾಡಿಸುತ್ತಿದ್ದ ಭೀತಿಗೆ ಬಾಯಿ ಕೊಟ್ಟ.

"ಹಾಳ್ನೋಳೀಮಕ್ಳು. ಎಲ್ಲೋದ್ರೂ ನಂನಮ್ಯಾಲೇ ಕಣ್ಣು. ಅವರಿಗೆ ಎಲ್ಲಿಂದ ವಾಸ್ನೆ ಬರ್ತದೋ? ಏನಾದ್ರೂ ನಮ್ಮ್ಯಾಲೇ ಬೀಳ್ತಾರೆ" ಮುನಿಸ್ವಾಮಿ ಹೇಳಿದ.

"ಅವರ್ಮ್ರಕ ಕಂತ್ರೀನೇ ನಂಗಾಗಾಕಿಲ್ಲ. ಮನ್ನೆ ಮಾರ್ಕೆಟ್ಟಿನ್ತಾವ ಒಬ್ಬನ್ಮಗ, ಅವನೆಂಪ್ರ ಆಳಾಗ, ಬಿಟ್ಟನೇ ಒಂದ್ಪಟ್ಟೆ ಹೊರ್ಸಿ, ಎರಡ್ಮ್ಯಾಲಿ ನಡಸ್ಬಿಟ್ಟ. ನಮ್ಮಂತಾವ್ರೂ ಎಂದ್ರೆ, ಕೊಂಡ್ಕೊಂಡೋರಂಗ್ಮಾಡ್ತಾರೆ. ಯಾವತ್ತಾರ ಅವ್ರ ಚಟ್ಟ ಎತ್ರಸಬೇಕು ನೋಡು" ಎಂದು ಪಳನಿ ತನ್ನೆದೆಯ ಕಲೆಯನ್ನು ತೋಡಿಕೊಂಡ.

"ನಿನ್ಮ್ಯಾಕೋ ಬಾಳ ನೋಡ್ಕೊಂಡು, ಹೆಸ್ರ ಕೇಳ್ಕೊಂಡು ಓದ, ಆ ನನ್ಮಗ. ವಸಿ ಅವನ್ಮ್ಯಾಲೆ ನಿಗಾ ಮಡಗಿರು ಕಣ್ಣ" ಎಂದು ಮುನಿಸ್ವಾಮಿ ಎಚ್ಚರಿಸಿದ.

ಅದುವರೆಗೂ ಅವರ ಮಾತನ್ನು ಕೇಳಿಯೂ ಕೇಳದವನಂತೆ, ಬೀಡಿಯನ್ನು ಎಳೆದು ಹೊಗೆ ಬಿಡುತ್ತಾ, ಹೊಗೆಯ ಮರೆಯಲ್ಲಿ ಕಾಣುವ ಮುಗಿಲನ್ನು ನೋಡುತ್ತಾ ಕುಳಿತಿದ್ದ ಕಣ್ಣ ಆಗ ಮಾತನಾಡಿದ—

"ನನ್ಗೇನು ಮಾಡ್ತಾನೆ. ನನ್ಗಿರೋದೆಲ್ಲಾ ಇಂದೀದೇ ಎದ್ರಿಕೆ. ಅವ್ನೊಬ್ನು ಆಯ್ಯಾಗಿದ್ರೆ, ನಾಸಿನ್ಯಾತ್ಕೂ ಹೆದರಾಕಿಲ್ಲ. ಏನ್ಬಂದ್ರೂ ಒಂದ್ಕೈ ನೋಡ್ಕೋತೀನಿ."

"ನಿನ್ಹೀವ್ಕೆ ಇದೊಂದು ಕಷ್ಟ್ರ ಆಗಿತ್ತು. ಆಳುಡ್ಗಿ. ಬಂದಾಗ್ಲಿಂದ ನಿನಗೆ ಬರೀ ಗಾಸಾರಾಸ್ಗೇ. ಅಮ್ಕಿಂದು ತಿನ್ನೋರು ನಮ್ಗೆ ಯಾಕೆ ಇದೆಲ್ಲಾ. ನಾನೊಂದ್ಮಾತೇಳ್ತೀನಿ ಕೇಳ್ತೀಯಾ ಕಣ್ಣಾ?" ಆಮ್ಮುಗಂ ಕೇಳಿದ.

"ಏನು?"

"ಎಲ್ಲಾರೂ ಈ ವುಡ್ಗೀನ ಅಟ್ಟಿಡು. ಇವಳ್ಗೇವೆ ಮಾಡಿ ನಿನ್ಗೇನು ಸುಕಾ ಆಗ್ಬೇಕಾಗ್ಯೆತೆ? ನಿನ್ಗೇನು ಮಾಡಾಕ್ತಾಳಾ ಚಿನಾಲಿ........"

ಆರ್ಮುಗ ಮಾತು ಮುಗಿಸುವುದರೊಳಗಾಗಿ, ಅವನು ನಾಲಿಗೆಯುನ್ನು ಕಚ್ಚಿಕೊಳ್ಳುವಂತೆ ಅವನ ಬಾಯಿನ ಮೇಲೆ ಹೊಡೆದ ಕಣ್ಣ. ಹೊಡೆದೇನೊ ಹೊಡೆದ. ಆದರೆ ಮುರುಗಳಿಗೆಯೇ ಎಳೆಯ ಮಗುವಿನಂತೆ ಗಟ್ಟಿಯಾಗಿ ಅಳುತ್ತಾ ಕಣ್ಣ,

"ಆರ್ಮುಗಾ, ನನ್ತಂಗೀನ್ಬಿಟ್ಟು ನಾನ್ಯಂಗೋ ಇರ್ಲೀ" ಎಂದು ಕೇಳಿದ.

ಆರ್ಮುಗ ಪೋಲೀಸಿನವನ ಭೀತಿಯಿಂದ, ಆ ಗಳಿಗೆಯಲ್ಲಿ ತೋಚಿದ ಮಾತಾಡಿ, ಮರುಗಳಿಗೆಯೇ, ಕಣ್ಣನಿಗೆ ಅವಳ ಮೇಲಿರುವ ಪ್ರೀತಿಯ ನೆನಪು ಬಂದು, ಆಡಿದ ಮಾತಿಗೆ ಪಶ್ಚಾತ್ತಾಪ ಪಡಲಾರಂಭಿಸಿದ್ದ. ಕಣ್ಣನ ಅಳುವನ್ನು ಕಂಡು, ಅವನು ಏಟು ಬಿದ್ದುದನ್ನು ಮರೆತು ಹೇಳಿದ,

"ನನ್ಗ್ಯಾಕೋ ಬುದ್ಧಿ ನೆಟ್ಟಗಿಲ್ಲ ಕಣ್ಣ.! ಏನೇನೊ ಮಾತಾಡ್ತೀನಿ." ಎಂದ.

"ನಿನ್ಬುದ್ಧಿ ಅಲ್ಲ, ನಾವಿವತ್ತು ಎದ್ದಗಳಿಗೇನೇ ನೆಟ್ಟಗಿಲ್ಲ," ಎಂದ ಕಣ್ಣ.

"ಎದ್ದಗಳಿಗೆ ಏನು, ನಾವುಟ್ಟಿದ ದಿನಾನೇ ಸಂದಾಕಿಲ್ಲ. ನಮ್ಮಂತೋರು ಭೂಮಿ ಮ್ಯಾಲಿರಬಾರ್ದು. ಎಲ್ಲಾರ ಕಣ್ಣೂ ನಮ್ಮನ್ಕಂಡ್ರೆ ಚುಚ್ಚೈತೆ." ಎಂದ ಪಳನಿ, ತಾನು ಕಂಡಂತ ಬಾಳಕಹಿಯನ್ನೆಲ್ಲಾ ಆ ಮಾತಿನಲ್ಲಿ ಭಟ್ಟಿ ಇಳಿಸಿ.

ಅದುವರೆಗೂ ಹಾಯಾಗಿ ಮಲಗಿದ್ದ ಇಂದು, ಕನಸಿನಲ್ಲೇನೋ ಕಂಡವಳಂತೆ, ಚಿಟ್ಟನೆ ಚೀರಿದಳು. ಚಾಟಿಯ ಏಟು ತಿಂದವನಂತೆ ಕಣ್ಣ

ಎಗರಿಬಿದ್ದು, ಅವಳನ್ನು ತಬ್ಬಿಕೊಂಡು, ನಂಜುಬೆರೆತ ಕರ್ಕಶ ಸ್ವರದಲ್ಲಿ ಹೇಳಿದ,

“ಆಯಾಗಿ ನಿದ್ದೆ ಮಾಡ್ತಿದ್ವ್ರಾಗೀನ ಎದರಿಸಿಬಿಟ್ರು, ಅವರ್ಮನೆ ಎಕ್ಕ ಉಟ್ಹೋಗ.” ಉಳಿದವರೇನೂ ಮಾತಾಡಲಿಲ್ಲ. ಆ ರಾತ್ರಿ ಅವರಾರಿಗೂ ನಿದ್ದೆ ಬರಲಿಲ್ಲ.

## ೧೫

ಬೇಸಿಗೆ ಕಳೆದು ಮಳೆಗಾಲ ಬಂದಿತು. “ಹಾಳು ಮಳೆ” ಎಂದು ಇವರೆಲ್ಲರೂ ಮೂಗೆಳೆಯುತ್ತಿದ್ದರೂ, ಇಂದುವಿಗೆ ಮಾತ್ರ, ಅದು ವಸಂತ ಕಾಲದಂತಿತ್ತು. ಹಗಲೂ, ರಾತ್ರಿ ಮುತ್ತುಹಿಡಿದಂತೆ, ಬಿಟ್ಟುಬಿಟ್ಟು ಬಾರಿಸುವ ಮುಂಗಾರಿಯ ಮಳೆಯಲ್ಲಿ ತೊಯ್ದು, ಅವರೆಲ್ಲರಿಗೂ ಜೇಜಾರಾಗಿದ್ದಿತು. ಬೆಳಗ್ಗೆಯೆಲ್ಲಾ ಎಷ್ಟು ಅಲೆದರೂ, ರಾತ್ರಿ ಯಾವ ಚಿಂತೆಯೂ ಇಲ್ಲದೆ ನಿದ್ದೆ ಮಾಡುತ್ತಿದ್ದರು. ಆದರೆ ಮಳೆ ಸುರಿಯಲಾರಂಭಿಸಿದಮೇಲೆ ಅದಕ್ಕೂ ಅವಕಾಶವಿಲ್ಲವಾಯಿತು. ಹಂಚು ಹಾರಿಹೋದ ಮಾಡು, ಜರಡಿಯಂತೆ, ಬಿದ್ದ ನೀರನ್ನೆಲ್ಲಾ, ಜಗಲಿಯ ಮೇಲೆ ಮಲಗಿದವರ ಮೇಲೆಯೇ ಎರಚುತ್ತಿತ್ತು. ತೊಯ್ದ ಬಟ್ಟೆ ಒಣಗಲು ಅವಕಾಶವೇ ಇರಲಿಲ್ಲ. ಅದಕ್ಕೆ ಪೋಷಕವಾದಂತೆ ಹಗಲೂ ರಾತ್ರಿ ಚಳಿ. ಬೆಳಗ್ಗೆ ಹತ್ತುಗಂಟೆಯಾದರೂ ಸೂರ್ಯನ ಮುಖ ಕಾಣುತ್ತಿರಲಿಲ್ಲ. ಕಂಡರೂ, ಆ ಸೂರ್ಯನು ಕಾವುಕೊಡದೆ, ಭಾರವಾದ ಮೋಡದ ಮರೆಯಲ್ಲಿ ಅಡಗಿ, ಸೂರ್ಯನು ಹೆಣದಂತೆ ಕಾಣಿಸುತ್ತಿದ್ದ. ಗಟ್ಟಿಮುಟ್ಟಾಗಿ, ರೋಗವನ್ನೇ ಬೆದರಿಸಿ ಬೆಳೆದ ಆ ಹುಡುಗರೂ, ನೆಗಡಿ, ಕೆಮ್ಮು ಎಂದು ನರಳಲಾರಂಭಿಸಿ, “ಹಾಳ್ಮಳೆಗಾಲ ಎಂದ್ಮಾಗೀತದೋ” ಎಂದು ಶಪಿಸುತ್ತಿದ್ದರು.

ಇಂದುವಿನ ಪಾಲಿಗೆ ಮಾತ್ರ ಅದಾವುದೂ ಕಷ್ಟವಿದ್ದಂತಿರಲಿಲ್ಲ. ಭಾರವಾಗಿ, ಕಪ್ಪಗೆ ಕಾಡಾನೆಗಳ ಹಿಂಡಿನಂತೆ ಮುಗಿಲನ್ನು ತುಂಬಿದ

ಮೋಡಗಳು, ನೆಲವನ್ನು ನಡುಗಿಸುವ ಗುಡುಗು, ಕತ್ತಲನ್ನು ಕತ್ತಲಾಗಿ ಸಿದ ಕಾರ್ಗಾಲದ ಮುಗಿಲಿನಲ್ಲಿ, ಆಕಾಶದ ಒಂದಂಚಿನಿಂದ, ಇನ್ನೊಂದು ಅಂಚಿನವರೆಗೆ, 'ಛಿಲ್ಲೆಂದು' ಕಣ್ಣು ಕೋರೈಸಿ ಸೆಳೆದು, ಅಲ್ಲಿ, ಇಲ್ಲಿ, ಗಳಿಗೆ ಗೊಂದುಬಾರಿ, ಗಳಿಗೆಗೊಂದು ಕಡೆ ಚಿಮ್ಮುವ ಮಿಂಚುಗಳನ್ನು ನೋಡಿ, ನವಿಲಿನಂತೆ ಹರ್ಷದಿಂದ ಕುಣಿದಾಡುತ್ತಿದ್ದಳು. ಬೀದಿಯ ಕೆಂಪು ಕೆಸರಿನಲ್ಲಿ ನೊರೆಗಟ್ಟಿ ಹರಿವ ನೀರನ್ನು ಕಂಡು ಹಿಗ್ಗುತ್ತಿದ್ದಳು. ಚರಂಡಿ ಯಲ್ಲಿ ಹರಿವ ನೀರಿನಲ್ಲಿ, ಮೆಟ್ಟಿಲಮೇಲೆ ಕುಳಿತು, ಕಾಲಾಡಿಸುತ್ತ, ಕಾಲನ್ನು ಕೊಚ್ಚಿಕೊಂಡು ಹೊಗಲೆಳೆಸುವ ನೀರಿನ ವೇಗವನ್ನು ನೋಡಿ, ಹಿಗ್ಗಿನಿಂದ ಕೇಕೆ ಹಾಕುತ್ತಿದ್ದಳು. ಸೂರಿನಿಂದ ಹನಿಹನಿಯಾಗಿ ಜಿನುಗುವ ನೀರಿಗೆ, ಚಾತಕೆಯಂತೆ ನಾಲಿಗೆಯೊಡ್ಡಿ, ತೊಟಕ್ಕೆಂದು ಬಿದ್ದ ನೀರನ್ನು ಹೀರಿ ಚಪ್ಪಾಳೆ ತಟ್ಟುತ್ತಿದ್ದಳು. ಮಳೆ ನಿಂತಾಗ, ಮನೆಯ ಮುಂದೆ, ಹಸಿಯ ಮಣ್ಣಿನ ಮೇಲೆ ಕಾಲು ಚಾಚಿ, ಕೈಗಳಿಂದ ಹಸಿಯ ಮಣ್ಣನ್ನು ಬಗೆದು, ಕಾಲುಗಳ ಮೇಲೆ ಗೋಪುರಾಕಾರವಾಗಿ ಗುಬ್ಬಚ್ಚಿಯ ಗೂಡು ಕಟ್ಟಿ, ಕುಬೇರನ ಅಲಕಾವತಿಯನ್ನು ನಿರ್ಮಿಸಿದ ವಿಶ್ವಕರ್ಮ ನಂತೆ, ಹರ್ಷದಲ್ಲಿ ಹೂವಾಗುತ್ತಿದ್ದಳು.

ಉಳಿದವರಿಗೆ ಹೇಗೋ, ಅವಳಿಗೆ ಮಾತ್ರ ವರ್ಷಋತು, ಹರ್ಷಋತುವಾಗಿತ್ತು.

ಆದರೆ ಅವಳ ಆಟ, ಕಣ್ಣನಿಗೆ ಪ್ರಾಣಸಂಕಟವಾಗಿತ್ತು. ಒಂದು ಮಳೆಗಾಲಕ್ಕೆ ತನ್ನ ಅವ್ವನನ್ನು ಬಲಿಗೊಟ್ಟಂದಿನಿಂದ, ಮಳೆಗಾಲವೆಂದರೆ ಕಣ್ಣ ಹೆದರಲಾರಂಭಿಸಿದ್ದ. 'ನಿರ್ನ್ನಾಗಾಡಬ್ಯಾಡ' ಎಂದು ಎಷ್ಟು ಹೇಳಿದರೂ ಅವಳು ಕೇಳುತ್ತಿರಲಿಲ್ಲ. ಅವಳ ಸಂತೋಷವನ್ನು ಕಂಡು, ಇವನಿಗೂ ಗಟ್ಟಿಯಾಗಿ ಗದರಿಸಿ, ಅವಳ ಆನಂದಕ್ಕೆ ಭಂಗತರಲು ಇಷ್ಟವಿರಲಿಲ್ಲ. ಉಳಿದವರು ಏನೆಂದರೂ ಲೆಕ್ಕಿಸದ ಇಂದು, ಇವನು ಒಂದು ಬಾರಿ ಗಟ್ಟಿಯಾಗಿ ಗದರಿದರೆ, ಎರಡೆರಡು ದಿನ ಮಂಕಾಗಿ ಕೂಡುತ್ತಿದ್ದುದು, ಅವನಿಗೇ ಅನುಭವವಾಗಿ, ಅವಳನ್ನು ಗದರಿಸಲು ಹೆದರುತ್ತಿದ್ದ. ಅವಳು ಅವನ ಬಾಳಿನ ನಗೆಮಲ್ಲಿಗೆ. ಏತಕ್ಕಾದರೂ

ಅದನ್ನು ಬಾಡಿಸಲು ಅವನಿಗೆ ಮನಸ್ಸಿರಲಿಲ್ಲ. ಇದರ ಜೊತೆಗೆ, ಅವಳು ಮಳೆನೀರಿನೊಂದಿಗೆ ಚಿನ್ನಾಟವಾಡುತ್ತಾ ಓಗ್ಗಿ ಕುಣಿದಾಡುವುದನ್ನು ಕಂಡು, ಅವನ ಹೃದಯವೂ ಹಗುರಾಗುತ್ತಿತ್ತು. ಎಷ್ಟೋ ಬಾರಿ, ಸಾಂಕ್ರಾಮಿಕವಾದ ಅವಳ ಆನಂದದ ಉತ್ಸಾಹಕ್ಕೆ ಇವರೂ ಬಲಿಯಾಗಿ, ಅವಳೊಂದಿಗೆ ಮಳೆನೀರಿನಲ್ಲಿ ಆಟವಾಡುತ್ತಿದ್ದ. ಅವಳು ತನ್ನ ಮೇಲೆ ಮಳೆನೀರನ್ನು ತೂರಿದಾಗ, ಕಾಮನ ಹಬ್ಬದ ಓಕುಳಿಯನ್ನೆರಚಿಸಿಕೊಂಡವನಂತೆ, ಹುಚ್ಚಾಗಿ ಕೇಕೆ ಹಾಕುತ್ತಿದ್ದ. ಮಳೆಯಲ್ಲಿ ಜೂಗರಿಸುತ್ತ, ಚಳಿಯಡಗಿಸಲು ಗೋಣಿಯಪಟ್ಟಿ ಹೊದ್ದು, ಬೀಡಿ ಕುಡಿಯುತ್ತಾ ಕುಳಿತ ತನ್ನ ಗೆಳೆಯರ ಮೇಲೂ ನೀರೆರಚಿ, ಅವರೂ ಉತ್ಸಾಹಗೊಂಡು, ತಮ್ಮೀರ್ವರ ವಸಂತೋತ್ಸವದಲ್ಲಿ ಪಾಲುಗೊಳ್ಳುವಂತೆ ಮಾಡುತ್ತಿದ್ದ.

ಎಷ್ಟು ಉತ್ಸಾಹವಿದ್ದರೂ, ಎಷ್ಟು ಆನಂದವಿದ್ದರೂ ಮಳೆಗಾಲದ ಭೀತಿ, ಅವನೊಳಗೆ ಕುಟ್ಟಿ ಹುಳುವಿನಂತೆ ಕೊರೆಯುತ್ತಲೇ ಇತ್ತು. ಅದಕ್ಕಾಗಿ, ಇಂದುವನ್ನು ಗದರಿಸಲಾಗದ ಸಂಕಟಕ್ಕಾಗಿ, ಮಳೆಗಾಲವನ್ನೇ ಶಪಿಸುತ್ತಿದ್ದ.

ಕಡೆಗೊಂದು ದಿನ ಇವನ ಹೆದರಿಕೆಯನ್ನು ನಿಜಮಾಡುವುದಕ್ಕೇ ಎನ್ನುವಂತೆ, ಮೈ ಕೆಂಡವಾಗಿ ಮಲಗಿದಳು ಇಂದು. ಮೈಯೊಳಗೆ ಏರುವ ಬಿಸಿಗೆ, ಮೂಗಿನ ಹೊಳ್ಳೆಗಳನ್ನು ಹೊಯ್ಯುತ್ತಾ ಮಲಗಿದವಳನ್ನು ಕಂಡು ಕಣ್ಣು ಸಿಡಿಲು ಬಡಿದವನಂತಾದ. ಗಾಳಿಯಲ್ಲಿ ಹರ್ಷದಿಂದ ಹಾರಾಡುತ್ತಿದ್ದ ಹಕ್ಕಿಗೆ ಗುಂಡಿನೇಟು ಬಿದ್ದಂತಾಯಿತು. ಮುಗಿಲಿನಲ್ಲಿ ತೂಗುತ್ತಿದ್ದ ಕಾರ್ಮೋಡ ಅವನ ಹೃದಯವನ್ನೇ ಪ್ರವೇಶಿಸಿದಂತಾಯಿತು. ತನಗೇ ಮಾರಿಜ್ವರ ಬಂದವನಂತೆ, ಕಣ್ಣು, ಬಿಸುಸುಯ್ದು ಪಾತಾಳಕ್ಕಿಳಿದು ಹೋದ.

ಅವನಿಗೆ ಆಡುವ ಹುಡುಗಿಯನ್ನು ಆಡಿಸುವುದು ಗೊತ್ತಿತ್ತೇ ವಿನಾ, ಹಾಸಿಗೆ ಹಿಡಿದ ಹುಡುಗಿಯನ್ನು ಶುಶ್ರೂಷೆ ಮಾಡುವುದು ಗೊತ್ತಿರಲಿಲ್ಲ.

ಉಳಿದವರೂ "ನೀರ್ನಾಗಾಡಿದಾಳೆ, ಮಸಿ ಮೈ ಬೆಚ್ಚಾಗದೆ" ಎಂದು ಮೊದಲ ಎರಡು ದಿನ ಸಮಾಧಾನ ಮಾಡಿಕೊಂಡರು. ಆದರೆ, ಮೊದಲ

ಎರಡುದಿನ ಅವರು ತಂದುಕೊಟ್ಟ ಆಹಾರವನ್ನು ಸ್ವಲ್ಪವಾದರೂ ತಿನ್ನುತ್ತಿದ್ದ ಇಂದು, ಮೂರನೆಯ ದಿನದಿಂದ, ಆಹಾರವನ್ನೂ ಬಿಟ್ಟುಬಿಟ್ಟಳು. ಯಾರೆಷ್ಟು ಬಲವಂತ ಮಾಡಿದರೂ, ಕಣ್ಣನೇ, ಹೃದಯವನ್ನು ಸಿಗಿಯುತ್ತಿದ್ದ ವಿಹ್ವಲತೆಯಲ್ಲಿ ಕ್ಷುಬ್ಧನಾಗಿ ಗದರಿಸಿದರೂ, ಅತ್ತಳೇ ವಿನಾ, ಅನ್ನವನ್ನು ತಿನ್ನಲಿಲ್ಲ. ಮೂರು ದಿನಕ್ಕೇ ಅರಳಿದ ಹೂವಿನಂತೆ ಕಳಕಳಿಸುತ್ತಿದ್ದ ಹುಡುಗಿ, ಬಿಸಿಗಿಟ್ಟ ಎಳೆಯ ಬಾಳೆಯ ಎಲೆಯಂತೆ ಕಂದಿ ಹೋದಳು.

ಇಂದು ಕಣ್ಣನ ಪ್ರಾಣವಾದಂತೆ, ಆ ಹುಡುಗರೆಲ್ಲರ ಹೃದಯವಾಗಿದ್ದಳು. ಪ್ರೀತಿಯನ್ನರಿಯದ ಅವರ ಹೃದಯವಲ್ಲವಳು ತನ್ನ ತಿಂಗಳ ಬೆಳಕಿನಂಥ ನಗುವಿನಿಂದ, ಅನಂತಪ್ರೇಮದ ನೆಲೆಯನ್ನು ಮೂಡಿಸಿದ್ದಳು. ಅವಳು ಮಲಗಿರುವದನ್ನೇ ಕಂಡು, ಉಸಿರು ಕಟ್ಟಿದಂತಾದ ಹುಡುಗರಿಗೆ, ಕಣ್ಣನ ವ್ಯಥೆಯನ್ನು ಕಂಡು, ಕರುಳು ಕತ್ತರಿಸಿದಂತಾಯಿತು. ಇಂದುವಿನ ಜೊತೆಗೆ ಕಣ್ಣನೂ ಊಟ, ನಿದ್ದೆ ಬಿಟ್ಟು ಕುಳಿತುಬಿಟ್ಟ. ಯಾರೆಷ್ಟು ಬಲವಂತ ಮಾಡಿದರೂ ಕುಳಿತಕಡೆಯಿಂದ ಕದಲಲಿಲ್ಲ.

ಜ್ವರ ಬಂದು ಮಲಗಿದ ಹುಡುಗಿ, ಜ್ವರದ ಬಿಸಿಗೆ ತುಟಿಯೊಣಗಿ, ಮುಖ ಕುಂದಿ, ಬೆಂಕಿಯ ಮೇಲೆ ಮಲಗಿದಂತೆ, ವ್ಯಥೆಪಡುತ್ತಿದ್ದರೆ, ಕಣ್ಣ ಭೂತದರ್ಶನವಾದವನಂತೆ, ಬರಿಗಣ್ಣ, ಬಿದುಗಣ್ಣನಾಗಿ, ನಿದ್ರೆಗೆಟ್ಟು ಉರಿಗಣ್ಣನಾಗಿ, ಅವಳ ಜ್ವರದ ತಾಪವನ್ನೆಲ್ಲಾ ತಾನೇ ಅನುಭವಿಸುತ್ತಿರುವಂತೆ ಬೇಯುತ್ತಿದ್ದ. ಅವಳ ಬೇಗೆಯಲ್ಲಿ ಅವನ ಜೀವಶಕ್ತಿಯೆಲ್ಲಾ ಕುಂಠಿತವಾಗಿ ಹೋದಂತಾಗಿತ್ತು. ಅವನಿಗೆ ನನಾಡನಾಡಲು ಕೂಡಾ ಶಕ್ತಿಯಿದ್ದಂತಿರಲಿಲ್ಲ. ಆಗಾಗ, ಎಲುಬು ಮೂಳೆ ಯಾದ ಕೈಗಳನ್ನು ಬಿಗಿಯಾಗಿ ಹಿಡಿದು, ಜ್ವರದ ತಾಪಕ್ಕೆ ತೂಗುವ ಅವಳ ಎಳೆಗೆನ್ನೆಯನ್ನೊರಗಿಸಿ ಕಂಬನಿಗರೆಯುತ್ತಿದ್ದ. ಒಮ್ಮೊಮ್ಮೆ ದುಃಖ ಎದೆ ಬಿರಿದು ಬಂದಾಗ, ಬಿಕ್ಕಿಬಿಕ್ಕಿ ಅಳುತ್ತಿದ್ದ. "ಇಂದೀ, ಇಂದೀ, ನನ್ನಿಬಿಟ್ಹೋಗ್ತೀಯಾ?" ಎಂದು ಆವೇಶದಿಂದ ಹೊರಳಾಡುತ್ತಿದ್ದ. ಆಗಾಗ ಅಸಹಾಯಕನಾಗಿ, ಸುತ್ತ ಕಲೆತ ಗೆಳೆಯರ ಮೋರೆಯನ್ನು ನೋಡಿ, ಹತ್ತಿರವಿದ್ದ

ಳೆಯರ ಕುತ್ತಿಗೆಗೆ, ಜೋತುಬಿದ್ದು "ಮುನ್ಯಾ, ನನ್ನಾಯಿಗೆ ಬರೆ ಕ್ಬೇಕು ಕಣೋ. ಆವತ್ತು ಸುಮ್ನಿರಲಾರ್ದೆ ಇಂದೀನ ಬೊಯ್ದುಬಿಟ್ಟೆ. ಂಟೋಯ್ತಾಳಲ್ಲೋ ಮುನ್ಯಾ" ಎಂದು ಅಳುತ್ತಿದ್ದ. ಅವನನ್ನು ಡಿಯುವುದೇ ಕಷ್ಟವಾಯಿತು ಅವರಿಗೆ. ಈ ಇಬ್ಬರಿಗೂ ಆಘಾತವಲ್ಲಿ ವರೆಲ್ಲರಿಗೂ ಮತಿ ಮಂಕು ಕವಿದಂತಾಗಿತ್ತು.

ಹೀಗೆ ನಾಲ್ಕುದಿನ ಕಳೆದ ಮೇಲೆ, ಒಂದು ದಿನ ಆರ್ಮುಗಂ, ತಲೆ ಯನ್ನು ಕೆರೆದುಕೊಂಡು ಹೇಳಿದ—

"ಹಿಂಗಳ್ತಾ ಕೂತ್ರೆ ಏನಾಯ್ತದೆ ಕಣ್ಣಾ. ಯಾರಾದ್ರೂ ಡಾಕ್ಟ್ರಿಗೆ ೀರ್ಸಿ ವಸಿ ಔಸ್ತ ಕೊಡ್ಸಿದ್ರೆ ತೇಲ್ಕೋತಾಳೆ. ಅದ್ಬಿಟ್ಟು ಅಳ್ತಾ ಕೂತ್ರೆ ಂದೀನೂ ಬದಕಾಕಿಲ್ಲ, ನೀನೂ ಸತ್ತೋಯ್ತೀಯ."

ಅವನ ಮಾತು ಕೇಳಿ ಕಣ್ಣ ಏನೂ ಉತ್ತರ ಕೊಡದೆ ತಲೆಯಾಡಿ ದ. ಆರ್ಮುಗನಿಗೆ ಅದು ಅರ್ಥವಾಗಲಿಲ್ಲ.

"ಯಾಕೆ, ಅಂಗಾಗಾಕಿಲ್ವಾ?"

"ನಿಂಗೊತ್ತಿಲ್ಲಾ ಆರ್ಮುಗ. ಡಾಕ್ಟ್ರುಗಳೆಲ್ಲಾ ದೈಯ ಇದ್ದಾಗೆ. ಹಾತೆತ್ತಿದರೆ ಕಾಸು ಅಂತಾರೆ. ನಮ್ಮತ್ರೆಲ್ಲೈತೆ ಕಾಸು? ಕಾಸಿಲ್ದೆ ಔಸ್ತ ಡಾಕಿಲ್ಲಾಂತ ಒಬ್ನಾಗ್ಲೆ ನಮ್ಮವ್ವನ್ನ ನುಂಗಿಬಿಟ್ಟ."

"ಯಾಕೆ, ಸರ್ಕಾರಿ ಆಸ್ಪತ್ರೆ ಇಲ್ವಾ? ಅವರಪ್ಪನ ಮನೆ ಗಂಟ್ಕೊ ತ್ತಾರಾ?" ಆರ್ಮುಗನಿಗೆ ಕಣ್ಣನ ಮಾತು ಹಿಡಿಯಲಿಲ್ಲ.

"ಆಸ್ಪತ್ರೆ ಔಸ್ತ ಕುಡಿದು ಬದುಕಿದೋನ್ಯಾರು? ನಮ್ಮಂಥೋರ್ನ ಂಡ್ರೆ, ಔಸ್ತಾಂತ ಬರೀ ನೀರೊಯ್ತಾರೆ. ಅದೂ ಬೈಕೊಂಡು. ಆ ಔಸ್ತ ಕುಡಿದೋನು ಕಂಡಿತ ಉಳಿಯಾಕಿಲ್ಲ. ಅಲ್ಲಿ ಒಳ್ಳೆ ಔಸ್ತ ಕೊಡಾದೆಲ್ಲಾ ಾರ್ನಲ್ಲಿ ಬಂದೋರ್ಗೆ, ರೊಪ್ಗಾಗಿ ಬಟ್ಟೆ ಆಕ್ಕೊಂಡು ಬಂದೋರ್ಗೇನೇ. ಇಲ್ಲಿ ಓದ್ರೆ ಬಾಗ್ಲು ಕಾಯ್ಬೇಕು, ಇಲ್ವಾ ಕಹಿನೀರು ಕುಡಿದು ಸಾಯ್ಬೇಕು—ನಮ್ಮ ಕುಪ್ಪ ಸತ್ತಂಗೆ." ಮುನಿಸ್ವಾಮಿ ತನ್ನ ಅನುಭವ ವನ್ನು ಹೇಳಿದ.

"ನನ್ನಿಂದೂ ಸಾಯೋದಾದ್ರೆ ಅಂಗೆ ಸತ್ತೋಗ್ಲಿ. ಅಂತಿಂತ ಕೆಟ್ಟ ೀರು ಕುಡಿದು ಬಾಯಿ ಕೆಡಸಿಕೊಂಡ್ಯಾಕೆ ಸಾಯ್ಬೇಕು" ಎಂದ ಕಣ್ಣ

"ಅದ್ನೋಡಾಕಿಂತ, ಅವಳಿಂಗೇ ಓಗ್ಬಿಟ್ರೆ, ನಾನೂ ಎಲ್ಲಾರೂ ಉರ್ಲ್ಲ ಹಾಕ್ಕೊಂಡು ಸತ್ತೋಯ್ತೀವಿ"

ಅದುವರೆಗೂ ಮಾತನಾಡದ ಕಂದಸ್ವಾಮಿಗೆ ಇದ್ದಕ್ಕಿದ್ದಂತೆ ಸ್ಫೂರ್ತಿ ಬಂದಂತಾಯಿತು. ಹೇಳಿದ,

"ಅವರ್ಯಾರೂ ಬ್ಯಾಡ ಕಣ್ಣ. ಅಲ್ಲೊಬ್ರು ಪಂಡಿತ್ರವ್ರೆ. ಬಾಳ ಒಳ್ಳೇರು. ಅವರ್ತಾವ ನಮ್ಮಿಂದೀನ ಕರಕೊಂಡೋಗಾನ."

"ಯಾರೆಷ್ಟು ಒಳ್ಳೇರಾದ್ರು, ನಮ್ಮಂತೋರ್ಗೆಲ್ಲ ಔಸ್ತ ಕೊಡ್ತಾರೇನೊ." ನಿರುತ್ಸಾಹದಿಂದ ಕಣ್ಣ ಹೇಳಿದ.

"ನಿಂಗಷ್ಟೇ ಗೊತ್ತಿರಾದು. ಅವರ್ಸಮಾಚಾರ ನಿಂಗೊಂತಿಲ್ಲ. ಒಂದಿನ ಎಂಗಾಯ್ತು ಅಂತೀಯ. ನಾನು ಅಕ್ಕಿಪೇಟೇಲಿ ಬರ್ತಾಇದ್ದೆ. ಯಾವನೋ ಒಬ್ನು ವೈಮ್ಯಾಲೆ ಸೈಕಲ್ ಬುಟ್ಬುಟ್ಟ. ಬಿದ್ದೇಟಿಗೆ ನಂಗೆ ಬುಲ್ಡೇನೆ ಬಿಚ್ದಂಗಾಗಿತ್ತು. ಮೈಯೆಲ್ಲಾ ರಾವಾ ರಕ್ತ. ಸುತ್ತಮುತ್ತ ಜನ ಗೇರಾಯಿಸಿದ್ರು. ಟಿಸ್ ಪುಸ್ ಅಂತ ಅದೇನೇನೋ ಏಳ್ದ. ನಾಯಿ ಕುನ್ನಿ ಸತ್ರೆ ಗದ್ಲ ಮಾಡೋಜನಾ ಸುಮ್ನಾಗೋದ್ರು. ಅದ್ಯಾಕೆ ಎಷ್ಟೋ ಜನ ನನ್ನೇ ಬೈದ್ರು, ಕಣ್ಣು ನೆತ್ತಿಮ್ಯಾಲಿಟ್ಕೊಂಡೋಡ್ತೀಯಾಂತ. ನೀನು ಸತ್ತ್ಯಾ ಬದುಕಿದ್ಯಾಂತ ಕೂಡಾ ಒಬ್ರಾರ ಕೇಳ್ಲಿಲ್ಲ. ನನ್ಗೆ ಒಂದ್ಕಡೆ ಪ್ರಾಣಓಗಾ ಅಂತ ನೋವ್ರು, ಮ್ಯಾಲಿವರ ಬೈಗ್ಳು. ಸಾಕಾಗೋಗಿತ್ತು. ಆ ಹೊತ್ನಾಗ ಅಂಗ್ಡಿಲಿದ್ದೀವಯ್ಯ ಬಂದು, ಜನಾನೆಲ್ಲಾ 'ಆತನ್ನ ಅಂಗೆ ಬಿಟ್ರಾ, ಟೇಸನ್ಗೆ ಗೊಯ್ಯಬೇಕಾಗಿತ್ತು' ಅಂತ ಗದ್ಲ ಮಾಡಿ, ನನ್ನ ಕರಕೊಂಡೋಗಿ, ಗಾಯಎಲ್ಲಾ ತೊಳೆದು ಔಸ್ತ ಆಕಿ, ಮ್ಯಾಲೆ ಎಲ್ಡು ದಿನಕ್ಕೆ ಮುಲಾಮು ಕೊಟ್ಟಿದ್ದ. ನಮ್ಮ ಇಂದೀನ ಆತನ್ತಾವ ಕರಕೊಂಡೊದ್ರೆ ಕಂಡ್ತ ಔಸ್ತ ಕೊಡ್ತಾನೆ. ನನ್ಮಾತು ಕೇಳು ಕಣ್ಣ. ಇಂದೀ ಸಾಯೋದೂ ಬ್ಯಾಡ, ನೀನುರ್ಲಾಕೊಳ್ಳೋದೂ ಬ್ಯಾಡ."

ಅವನ ಮಾತು ಕೇಳಿ ಕತ್ತಲು ಕವಿದ ಅವನ ಹೃದಯದಲ್ಲಿ ಆಸೆಯ ಹೊಂಗಿರಣ ಮೂಡಿತು.

"ನಿಜಾನಾ ಕಂದಾ ?" ಕಣ್ಣ ಇನ್ನೂ ನಂಬಲಾಗದೆ ಕೇಳಿದ.

"ಸುಳ್ಳಾದ್ರೆ ನೀನ್ಮಾಡಿದ್ದು ಮಾಡಿಸ್ಕೋತೀನಿ. ಆಯ್ತಾ ?" ಎಂದು ಕಂದಸಾಮಿ ಮರುಸವಾಲು ಹಾಕಿದ.

ಕೂಡಲೇ ಎಲ್ಲರೂ ಸೇರಿ, ಮಳೆ ಕೊಂಚ ಬಿಟ್ಟ ಕೂಡಲೇ, ತಮ್ಮ ಬಳಿ ಇದ್ದ ಹೊದಿಕೆಯನ್ನೆಲ್ಲಾ ಹೊದಿಸಿ, ಇಂದುವನ್ನು ವೈದ್ಯರ ಬಳಿ ಕೊಂಡೊಯ್ದರು.

ಕಂದಸಾಮಿ ಕೊಟ್ಟ ಭರವಸೆ ಸುಳ್ಳಾಗಲಿಲ್ಲ.

## ೧೬

ಮತ್ತೆ ಇಂದು ಕಣ್ಣು ತೆರೆದು ಆಡತೊಡಗಿದಳು. ಇನ್ನೂ ಮಳೆ ಬರುತ್ತಿದ್ದರೂ, ಅವರೆಲ್ಲರಿಗೂ ಹಿತವಾದ ಬಿಸಿಲು ಕಾಯುತ್ತಿರುವಂತೆ ತೋರಿತು. ಕಣ್ಣನಿಗಂತೂ—ಅವಳು ಹಾಸಿಗೆ ಹಿಡಿದಾಗ ಒಂದು ತರಹ ಹುಚ್ಚು ಹಿಡಿದಿದ್ದರೆ, ಈಗ ಮತ್ತೊಂದು ತರಹ ಹುಚ್ಚು ಹಿಡಿದಂತಾಗಿತ್ತು.

ಯಾರೆಷ್ಟು ಬೈದರೂ ಸರಿಯೆ ಎಂದು, ಹೋಟಲುಗಳ ಬಳಿ, ಕಾಡಿ, ಬೇಡಿ, ದಿನಕ್ಕೆರಡು ಮೂರು ಬಾರಿ, ಇಂದುವಿಗೆ ಬಿಸಿಯಾಗಿ ಕಾಫಿ ತಂದು ಹುಯ್ಯುತ್ತಿದ್ದ. ಬೀದಿಯಲ್ಲಿ ಸಿಕ್ಕ ಕಾಗದದ ಚೂರುಗಳನ್ನಾರಿಸಿ ತಂದಿಟ್ಟುಕೊಂಡು, ವೈದ್ಯರು ಹೇಳಿದಂತೆ, ಇಂದು ಕೇಳಿದಾಗ, ಮುನಿಸ್ವಾಮಿ ಎಲ್ಲಿಂದಲೋ ಸಂಪಾದಿಸಿ ತಂದುಕೊಟ್ಟ ಸಿಗರೇಟು ಡಬ್ಬದಲ್ಲಿ ಬಿಸಿನೀರು ಕಾಯಿಸಿ ಕುಡಿಸುತ್ತಿದ್ದ. ನಾಲ್ವರೂ ಸೇರಿ, ಬೆಂಗಳೂರೆಲ್ಲಾ ಅಲೆದು, ಕಲೆತ ದುಡ್ಡಿಯನ್ನೆಲ್ಲಾ ಖರ್ಚು ಮಾಡಿ, ಹೇಗಾದರೂ ಒಂದೆರಡಾಣೆ ಹುಟ್ಟಿಸಿಕೊಂಡುಬಂದು, ಎರಡು ಹೊತ್ತು ಅವಳಿಗೆ ಹಾಲು ಹಾಕುತ್ತಿದ್ದರು.

ಒಂದು ದಿನ, ಅವರ ಗುಂಪಿನಲ್ಲಿ, ಸಣ್ಣಪುಟ್ಟ ಸಾಮಾನುಗಳನ್ನು ಎಗರಿಸುವುದರಲ್ಲಿ ಕೈಪಳಗಿಸಿಕೊಳ್ಳುತ್ತಿದ್ದ ಪಳನಿ, ಎಲ್ಲಿಂದಲೋ, ಚಳಿಯಲ್ಲಿ ನಡುಗುತ್ತಿದ್ದ ಇಂದುವಿಗೆಂದು ಒಂದು 'ಸ್ವೆಟರ್' ಹಿಡಿದುಕೊಂಡು ಬಂದ. ಅದನ್ನು ಕಂಡು ಅವರೆಲ್ಲರೂ ನಿಬ್ಬೆರಗಾದರು.

"ಇದೆಲ್ಲಿತ್ತೋ ಪಳ್ನಿ ?" ಮೃದುವಾದ ಉಣ್ಣೆಯ ಸ್ವೆಟರನ್ನು ಮುಟ್ಟಿನೋಡುತ್ತಾ ಕಣ್ಣ ಕೇಳಿದ.

"ಇಂಗೇ ಎಲ್ಲೋ ಇತ್ತು ತಂದೆ."

"ಯಾರು ಕೊಟ್ರು ?"

"ಯಾರಾದ್ರೂ ಕೊಡ್ತಾರಾ ? ಅದೂ ನಮ್ಮಂತೋರ್ಗೆ. ಅಲ್ಯಾರ್ದೋ ಮನೇಲಿ ಹಿತ್ಲಲ್ಲಿ ಒಣಗಾಕಿದ್ರು. ಸಿಗ್ತಿಂದೀಗಿರ್ಲಿ ಅಂತ ಅಂಗೆ ಕೈಯಾಗಿಡಕೊಂಬಂದೆ."

"ಮನೆಆಳ ನನ್ಮಗ್ನೆ ಕಳ್ತನ ಮಾಡಾಕಿಳ್ದುಬುಟ್ಯಾ?"

"ಮತ್ತೇನ್ಮಾಡಾದು. ಕೇಳಿದ್ರೆ ಕೊಡಾಕಿಲ್ಲ, ಕೊಂಡ್ಕೊಳ್ಳಾಕೆ ನಮ್ತಾವ ಕಾಸಿಲ್ಲ. ಹೆಂಗಾರಾ ಜೀವ ಹಿಡಕೊಂಡಿರಬೇಕಲ್ಲ ಮತ್ತೆ."

"ನಿನಗ್ಯಾಕ್ಕೊಡಬೇಕು ಏಳು. ನಿನ್ತಾವ ಕಾಸಿಲ್ದೋದ್ದು ಅವರ ತಪ್ಪೆ ?"

" ಅಲ್ಲ, ನಾನಿಂಗುಟ್ಟಿದ್ದು ನನ್ತಪ್ಪೆ ?"

ಅವರ ತರ್ಕಕ್ಕೆ ಉತ್ತರ ಕೊಡುವ ವಿಚಾರಶಕ್ತಿ ಕಣ್ಣನಿಗಿರಲಿಲ್ಲ. ಎಷ್ಟೋ ಬಾರಿ ಅವನಿಗೂ ಬೇಡಿದುದನ್ನು ಪಡೆಯಲಾಗದೆಹೋದಾಗ ಹಾಗೇ ಅನಿಸಿತ್ತು. ಅವನವ್ವ ಸಾಯುವ ಮೊದಲು ಹೇಳಿದ 'ದುಡ್ಡಿಲ್ದೋರು ಬಿಕ್ಸೆ ಬೇಡೋದು ತಪ್ಪಲ್ಲ, ಸುಳ್ಳೇಳೋದು, ಕಳ್ತನ ಮಾಡೋದು ತಪ್ಪು' ಎಂದ ಮಾತು, ಅವನ ಮನಸ್ಸು ಆ ದಾರಿಯಲ್ಲಿ ಹರಿಯಲು ಅಡ್ಡವಾಗಿತ್ತು. ಅದರ ಜೊತೆಗೆ ಪೋಲೀಸರ ಹೆದರಿಕೆಯೂ ಇತ್ತು. ಅದೇ ಮಾತನ್ನೇ ಹೇಳಿದ,

"ಹಿಂಗೇ ಮಾಡಿ, ಎಂದಾರ ಪೋಲೀಸ್ನೋರ ಕೈಗೆ ಸಿಕ್ಕು, ನಿನ್ದೆಯ್ಯ ಬಿಡಸ್ತಾರೆ."

"ಸಿಕ್ದೋರೆಲ್ಲಾ ಒದೀತಾರೆ. ಅವ್ರೂ ಒದಿಲೇಳು. ಪುಗಸಟ್ಟೆ ಒದಿಸ್ಕೊಳ್ಳೋಕಿಂತ ಮಜಾ ಮಾಡಿ ಒದಸ್ಕೊಳ್ಳೋದು."

"ಕೆಟ್ಟಾರೀಗ್ಬಿದ್ಬುಟ್ಟೆ ಪಳ್ನಿ ನೀನು. ಇಂಗಾದ್ರಾಗಾಕಿಲ್ಲ. ಇನ್ನ್ಯಾವತ್ತಾರ ಇಂತ ಕೆಲ್ಸ ಮಾಡಿದ್ರೆ, ನಾನೇ ನಿನ್ನ ಚರ್ಮ ಸುಲ್ದು ಬಿಡ್ತೀನಿ. ಕಳ್ತನ ಯಾಕೋ ಮಾಡ್ಬೇಕು, ತಿಂದು ಸೊಕ್ಕ. ಎಲ್ದೊತ್ತು ತೊಟ್ಟೀಲಿ ಅನ್ನಾ ಸಿಕ್ಕಾಕಿಲ್ವಾ, ಊಟ ಆಯ್ತು. ಇಲ್ಮಲಗಾಕೆ ಮನೆ

ಆಯ್ತು. ಎಲ್ಲಾರ ಅನ್ನ ಪನ್ನ ಸಿಕ್ರೆ ಅದೂ ಆಗೋಯ್ತು. ಮತ್ಕಳ್ತನ ಮಾಡೋದ್ಯಾಕೆ? ನಾನೊಪ್ಪಲ್ಲ"

"ನಿನ್ಮಾತು ಕೇಳಿದ್ರೆ ಸಾಯೋವರ್ಗೂ ಇಂಗೇ ಇರ್ಬೇಕ ಯ್ತು. ನನ್ಗೇನಾಸೆ ಇಲ್ವಾ. ನಾನೇನ್ಮರಾನ. ಎಲ್ರಂಗ್ನಾನೂ ಒಂದಿನನಾರಾ ಸುಕ್ವಾಗಿರಬ್ಯಾಡ್ವಾ?"

"ಸುಕ್ವಾಗಿರಬೇಕಾಗಿದ್ರೆ ಪತಕೊಂಬರಬೇಕಾಗಿತ್ತು. ಬೀದೀಲಿ ಉಟ್ಟಿ ಬಂಗ್ಲೇಲಿರಬೇಕಂದ್ರೆ ಎಂಗೆ?"

"ಎಲ್ಲಿ ಮಾಕೇಳ್ಳು ಕಣ್ಣಾ. ನಾನಿಂಗೇ ಉಟ್ಬೇಕೂಂತ ಯಾರ್ಗಾರೂ ಕಾಲಿಗ್ಬಿದ್ದು ಕೇಳ್ಕೊಂಡಿದ್ನಾ? ಯಾರೋ ಉಟ್ಟಿಸಿಬಿಟ್ರು. ಉಟ್ಟಿದ್ವಿ. ಇಂಗೂ ಇಷ್ಟು ದಿನ ಆಯ್ತು. ಎಲ್ಲಾ ದಿನ ಮಜಾನೂ ಮಾಡಿ ಓಗ್ಬಿಡಾದು ಬಂದಂಗೆ. ಅದ್ರಾಗೆಲ್ಲಾ ತಪ್ಪೇನೈತೆ?"

"ಯಾವೋನು ಸಂಗಿದೆಲ್ಲಾ ಏಳ್ಕೊಟ್ಟಿದ್ದು; ನಮ್ಜೊತೇಲಿರ್ಬೇಕೂಂದ್ರೆ ಈ ಚಾಲೆಲ್ಲಾ ಬಿಟ್ಬಿಡ್ಬೇಕು. ಗೊತ್ತಾಯ್ತು. ಇವತ್ಕೊನೆ, ನಿನ್ನ ಕಳ್ಳಾಟಕ್ಕೆ"

"ಇಲ್ಲಾಂದ್ರೆ...."

"ಇಲ್ಲಿಂದ ಓಡ್ಸಿಬಿಡ್ತೀನಿ. ಏಟಿಂಗೆ ಬೀಳ್ತದೆ ಮರೆತೋಯ್ತಾ?"

ಪಳನಿ ಮಾತು ಬೆಳೆಸಿದರೆ, ಮರೆತುಹೋದ ಪ್ರಸಂಗ ಆಗಲೇ ನೆನಪಿಗೆ ಬರುವಂತಾಗಬಹುದೆಂದು ಹೆದರಿದ. ಸುಮ್ಮನಿದ್ದು ಮಾತು ಮುಗಿಸಲೆತ್ನಿಸಿದ. ಆದರೆ ಕಣ್ಣನಿಗೆ ಅದು ಬೇಕಾಗಿರಲಿಲ್ಲ. ಅವನ ಪಾದವನ್ನು ಕಂಡು ರೇಗಿ ಕೇಳಿದ—

"ಕಳ್ತನ ಮಾಡೋಕೆ ನೀನೇನು ಕೊರಮರಿಗೆ ಹುಟ್ಟಿದ್ಯಾ ಲೌಡಿಮಗನೆ?"

ಆ ಮಾತು ಕೇಳಿ ಪಳನಿಗೂ ಸ್ವಲ್ಪ ರೇಗಿತು—

"ಯಾರಿಗೆ ಹುಟ್ಟಿದ್ದೇಂತ ನೀನು ಕಂಡಿದ್ಯಾ? ಕಂಡಿದ್ರೆ ಎಲ್ಲಾರ ಕೈಲೂ ಹಾದರಗಿತ್ತಿಮಗನೆ ಅಂತ ಯಾಕೆ ಉಗಿಸ್ಕೋಬೇಕಾಗಿತ್ತು ನಾವು? ಯಾವಳೋ ಹಾದ್ರ ಮಾಡಿದ್ರೆ ಅದು ನನ್ತಪ್ಪಾ? ಹಾಳ್ಮುಳೆಮಕ್ಳು

ಯಾರೋ ಸುಕ ಪಟ್ಟಿದ್ದಕ್ಕೆ ನಾವೀಗ ಅನುಭವ್ಸಬೇಕಾ? ಇಷ್ಟುದಿನ ಎಂಗೋ ಆಯ್ತು. ಇನ್ನು ನನ್ನ ಕೈಲಿ ಅಂಗಿರಾಕಾಗಾಕಿಲ್ಲ."

ಕಣ್ಣಸಿಗೆ ಅವನ ಪ್ರಶ್ನೆಗೆ ಹೇಗೆ ಉತ್ತರ ಕೊಡಬೇಕೆಂದು ಹೊಳೆಯಲಿಲ್ಲ. ಬೇಸರವಾಗಿ ಹೇಳಿದ—

"ಹಂಗಿರಕಾಗ್ದೆ ಓದ್ರೆ ಇಲ್ಲಿಂದ ಒಂಟೋಗು. ನಿನ್ನ ಕಳ್ಳೊಡವೆ ನಮ್ಮಿಂದೀಗೆ ಬ್ಯಾಡ" ಎಂದು, ಅವನು ತನ್ನ ಕೈಯಲ್ಲಿ ಕೊಟ್ಟ ಸ್ವೆಟರನ್ನು ಅವನ ಮುಖಕ್ಕೆ ಒಗೆದ. ಪಳನಿಗೆ ಆ ಮಾತು ಕೇಳಿ ಚಾಟಿಯಿಂದ ಹೊಡೆದ ಹಾಗಾಯಿತು. "ಇಂದಿಗೆ ಇದು ಬೇಡ" ಎಂದದ್ದು ಕೇಳಿ, ಬೇರಾವ ಮಾತಿಗೂ ಬೆದರದಿದ್ದ ಅವನು ಮೆತ್ತಗಾದ. ಅವರಿಬ್ಬರಾಡುವ ಮಾತನ್ನೂ ಸುಮ್ಮನೆ ಕುಳಿತು ಕೇಳುತ್ತಿದ್ದಳು ಇಂದು. ಪಳನಿ ಇಂದುವನ್ನೇ ಪ್ರಶ್ನೆ ಮಾಡಿದ—

"ನಿನಗಿದು ಬ್ಯಾಡ್ವಾ ಇಂದೀ?"

ಇಂದು ಅವನ ಪ್ರಶ್ನೆಗೆ ತಾನು ಉತ್ತರ ಕೊಡದೆ, ಕಣ್ಣನ ಮುಖವನ್ನು ನೋಡಿದಳು. ಕಣ್ಣ ತಲೆಯಲ್ಲಾಡಿಸಿದ.

"ಊಹೂ. ನಂಗ್ಬ್ಯಾಡ" ಎಂದಳು ಇಂದು, ನಿರ್ಧಾರವಾಗಿ ತಾನೂ ತಲೆಯಲ್ಲಾಡಿಸಿ.

ಆ ಮಾತು ಕೇಳಿ ಪಳನಿ ಪಾತಾಳಕ್ಕಿಳಿದುಹೋದ. ಆ ಸ್ವೆಟರನ್ನವನು, ಮೂರು ನಾಲ್ಕು ಗಂಟೆ ಹೊಂಚು ಕಾದು, ಇಂದುವನ್ನು ಆಶ್ಚರ್ಯಗೊಳಿಸಿ ಸಂತೋಷಪಡಿಸಬೇಕೆಂದು ತಂದಿದ್ದ. ಆದರೆ ಅವಳೇ ಬೇಡವೆಂದ ಕೂಡಲೇ ಅವನ ಕರುಳನ್ನು ಕತ್ತರಿಸಿದಂತಾಯಿತು. ಅವನ ಬಿಗುಹೆಲ್ಲ ಭಗ್ನವಾಗಿಹೋಯಿತು. ಕಣ್ಣಲ್ಲಿ ನೀರು ಹಾಕಿ—

"ಅಂಗನ್ಬ್ಯೇಡಾ ಇಂದಿ. ನೀನಿಕ್ಕಿಕೊಳ್ಳಾಕೇ ತಂದದ್ದು" ಎಂದು ಅಂಗಲಾಚಿದ.

"ಅಂಗಂದ್ರೆ ಅಣ್ಣನ್ನ ಕೇಳು. ಅವನು ಬ್ಯಾಡಾಂದ್ರೆ ನಾನಿಕ್ಕಿಕೊಳ್ಳಾಕಿಲ್ಲ" ಎಂದು ಇಂದು ಪಳನಿ ಕೊಡಬಂದ ಸ್ವೆಟರನ್ನು ದೂರ ತಳ್ಳಿದಳು. ಪಳನಿ ಶರಣಾಗತನಾದ.

"ಕಣ್ಣಾ ಇಸ್ಕೋಲಿಂಗ್ಮಾಡಾಕಿಲ್ಲ. ಇಂದೀಗಿದ್ನ ತೊಟ್ಕೊಂತ ಏಳ್ಬಡು."

"ಕಂಡ್ತ ಮಾಡಾಕಿಲ್ವಾ?"

"ಊಹೂ."

"ಅಂಗಂತ ಇಂದೀನ್ಮುಟ್ಟಿ ಆಣೆ ಮಾಡ್ಬುಡು. ಒಪ್ಕೋತೀನಿ."

ಕಾದ ಸೀಸದ ರಸವನ್ನಾದರೂ ಹಿಂದು ಮುಂದೆ ನೋಡದೆ ಕುಡಿಯುತ್ತಿದ್ದನೇನೋ ಪಳನಿ. ಆದರೆ ಇಂದುವನ್ನು ಮುಟ್ಟಿ ಕಳ್ಳತನ ಮಾಡುವುದಿಲ್ಲವೆಂದು ಆಣೆ ಮಾಡುವುದು ಕಷ್ಟವಾಯಿತು. ಯೋಚಿಸಿ, ಯೋಚಿಸಿ, ಕಡೆಗೊಮ್ಮೆ ಬೇರೆ ದಾರಿಯಿಲ್ಲವೆಂದು, ಇಂದುವಿನ ಕೈಯನ್ನು ಹಿಡಿದು—

"ಇಂದೀ, ನಿನ್ನಾಣೇಗೂ ಇನ್ಮ್ಯಾಕೆ ಕಳ್ತನ ಮಾಡಾಕಿಲ್ಲಾ" ಎಂದ.

"ಅಂಗಾದ್ರೆ ಇಂದಿ ಅದನ್ನ ತೊಟ್ಕೊತಾಳೆ. ಅಲ್ವೇನೇ ಇಂದಿ?"

"ಹೂ, ನೀನೇಳಿದ್ರೆ ಇಟ್ಕೋತೀನಿ" ಎಂದು ಸ್ವೆಟರನ್ನು ತೆಗೆದುಕೊಂಡಳು. ಪಳನಿಗೆ ಅರ್ಧರಾತ್ರಿಯಲ್ಲೆಬ್ಬಿಸಿ, ಅರ್ಧರಾಜ್ಯ ಕೊಟ್ಟಷ್ಟು ಸಂತೋಷವಾಯಿತು. ಸಂತೋಷದಲ್ಲೇ ಹೇಳಿದ—

"ಎಲ್ಲಾದ್ಕೂ ಈ ರಂಡೇದೇ ದರ್ಬಾರಾಗೋಯ್ತು. ಚೋಟುದ್ದ ಅವ್ಳೆ. ಅವ್ಳೇಳ್ದಂಗೇ ಕೇಳ್ಬೇಕು."

"ಊಮತ್ತೆ. ನಮ್ಮಿಂದಿ ದೇವ್ರಿದ್ದಂಗೆ" ಎಂದ ಕಣ್ಣ ಹೆಮ್ಮೆಯಿಂದ.

"ಆಗೋಯ್ತಲ್ಲಾ ಇದ್ನಿನ್ಯಾರ್ಗೂ ಏಳ್ಬೇಡ ಕಣ್ಣ" ಎಂದ ಪಳನಿ.

"ಅಂಗೇ ಆಗ್ಲಿ" ಎಂದ ಕಣ್ಣ.

## ೧೭

ಎಂದೂ ತನಗೆ ಇಂಥದು ಬೇಕು ಎಂದು ಕಣ್ಣನನ್ನಾಗಲಿ, ಯಾರನ್ನಾಗಲಿ ಕೇಳದಿದ್ದ ಇಂದು ಆ ದಿನ ಮಧ್ಯಾಹ್ನ ಬಾಯಿಬಿಟ್ಟು ಕೇಳಿದಳು—

"ಅಣ್ಣಾ, ನಾನೊಂದ್ಕೇಳ್ತೀನಿ. ತಂದ್ಕೊಡ್ತೀಯಾ?"

ಅವಳಾಡಿದ ಮಾತನ್ನು ಕೇಳಿ ಚೌಕಾಬಾರವನ್ನಾಡುತ್ತ ಕುಳಿತ ನಾಲ್ವರಿಗೂ ಆಶ್ಚರ್ಯವಾಯಿತು.

"ಏನ್ಬೇಕು ಇಂದೀ?"

"ಸಿಟ್ಟಾಗಾಕಿಲ್ಲ ಅಂದ್ರೆ ಕೇಳ್ತೀನಿ."

"ನಿನ್ಮೇಲೆ ಸಿಟ್ಟಾಗ್ತೀವಾ? ಅದೇನ್ಬೇಕು ಹೇಳು."

"ಬೆಳಿಗ್ಗೆ ಅದೆಲ್ಲೋ ಕರಕೊಂಡೋಗಿದ್ದಲ್ಲಾ ಪ್ಯಾಟೇಲಿ...."

"ಹೂ."

"ಅಲ್ಲೊಂದು ಹಣ್ಣಂಗಡಿ ಇರ್ಲಿಲ್ವಾ........"

"ಹೂ. ಮೆಜೆಸ್ಟಿಕ್ ಚೌಕ್ದಾಗೆ."

"ಅದೇ. ಅಂಥ ಹಣ್ಣು, ನಂಗೊಂದು ತಂದ್ಕೊಡ್ತೀಯಾ?"

ಕಣ್ಣಿನ ಮಿಂಚನ್ನು ಆಸೆಯ ಮಸೆಗಲ್ಲಿನ ಮೇಲೆ ಹರಿತ ಮಾಡಿ, ಕಣ್ಣನ ಹೃದಯದಲ್ಲದನ್ನು ನಾಟಿ, ಕೇಳಿದಳು ಇಂದು, ಎಂದೂ ಅವನನ್ನು ಇಂಥದು ಬೇಕು ಎಂದು ಕೇಳದ ಇಂದು. ಕಣ್ಣ ಉತ್ತರಕೊಡದೆ ಅವಳ ಮುಖವನ್ನೇ ನೋಡಿದ.

"ವಾ! ಬಡ್ಡಿಹತ್ತೋಳೆ. ಎಲ್ಲಾ ಬಿಟ್ಟು ಎಂಥಾದ್ನೇಳಿದ್ಲು ನೋಡ್ದಾ ಕಣ್ಣ. ಹಣ್ಣಾಗ್ಬೇಕಂತೆ. ದುಡ್ಡೆಲ್ಲೈತೆ, ಎಲ್ಲಾರ ಒಂದು ಪುಟ್ಗಂಟು ಮಡ್ಗಿದೀಯಾ?"

ಆರ್ಮುಗ ನಗುತ್ತಾ ಇಂದುವಿನ ಕೆನ್ನೆಯನ್ನು ಹಿಂಡಿ ಪ್ರಶ್ನೆಮಾಡಿದ. ತನ್ನ ಬೇಡಿಕೆಗೆ ಕಣ್ಣ ಉತ್ತರ ಕೊಡದಿದ್ದುದನ್ನೂ, ಆರ್ಮುಗ ಅದನ್ನು ಕೇಳಿ ನಕ್ಕುದನ್ನೂ ನೋಡಿ, ಇಂದುವಿಗೆ ತಾನು ಆ ಮಾತು ಕೇಳಬಾರದಾಗಿತ್ತು, ತನ್ನದು ಈಡೇರುವ ಬಯಕೆಯಲ್ಲ ಎಂದು ತೋರಿತು. ಬೆಳಗಿನಿಂದಲೂ ಕೇಳಬೇಕು, ಕೇಳಬೇಕು ಎಂದಿದ್ದ ತನ್ನ ಬಯಕೆಯನ್ನು, ತಿಳಿಸುವ ಧೈರ್ಯವಿರದೆ, ಕಡೆಗೆ ಬಯಕೆಯ ಒತ್ತಡವನ್ನು ತಡೆಯಲಾರದೆ ಕೇಳಿದ್ದಳು. ಈಗ—ಕೇಳಿಯೂ ಸಾರ್ಥಕವಿಲ್ಲವಾಯಿತು. ತಟಕ್ಕನೆ ಅವಳ ಕಣ್ಣಲ್ಲಿ ನೀರು ತುಂಬಿತು.

"ನಂಗಾಹಣ್ಣು ಬ್ಯಾಡಣ್ಣ" ಎಂದಳು ಗೋಡೆಯತ್ತ ಮುಖ ಮಾಡಿ. ಕಣ್ಣನಿಗೆ ಅವನ್ನು ಕಂಡು, ತನ್ನ ಮೇಲೆ, ಆರ್ಮುಗನ ಮೇಲೆ–ಎಲ್ಲರ ಮೇಲೂ ಸಿಟ್ಟು ಬಂತು.

"ಬಾಯ್ಮುಚ್ಕೊಂಡಿರಾಕಾಗಾಕಿಲ್ಲೇನ್ಲಾ ? ನಿನ್ಕೇಳಿದ್ನಾ ?'' ಎಂದ.

"ನನ್ಕೇಳಿಲ್ಲ. ತಪ್ಪಾಯ್ತು. ನಿನ್ನೆ ಕೇಳಿದ್ಲು ತಂದ್ಕೊಡು'' ಎಂದ ಆರ್ಮುಗ ನಗುತ್ತಾ.

"ತಂದ್ಕೊಟ್ಟೆ ಕೊಡ್ತೀನಿ, ನೀನ್ಯಾವೋನು ಹೇಳೋಕೆ?" ಎಂದು ತಟಕ್ಕನೆ ಮೇಲೆದ್ದು ಹೊರಡಲನುವಾದ ಕಣ್ಣ.

''ಆಟ ಬಿಟ್ಬಿಟ್ಟೇ ಒಂಟೋಯ್ತೀಯಾ ಕಣ್ಣ ?'' ಪಳನಿ ಕೇಳಿದ.

''ಈಗ್ಬಂದ್ಬಿಟ್ತೀನಿ. ನನ್ದೆಲ್ಲು ಕಾಯಿ ಹಣ್ಣಾಗದೆ. ಆಟ ಕೆಡಿಸ್ಬ್ಯಾಡ. ಲೇ ಕಂದ, ನಿನ್ತಾವಾ ಕಾಸೇನಾದ್ರೂ ಐತಾ ?''

"ಎಲ್ಲೈತೆ. ಬೆಳಗ್ಗೆ ಎಲ್ಲೋ ಮೂರ್ಕಾಸು ಸಿಕ್ಕಿತ್ತು. ಬೀಡಿ ತಗೊಂಡೆ" ಕಂದಸಾಮಿ ಹೇಳಿದುದನ್ನು ಕೇಳಿ ಕಣ್ಣ, ಪಳನಿಯ ಕಡೆ ನೋಡಿದ. ಅವನೂ ಇಲ್ಲವೆಂದು ತಲೆಯಾಡಿಸಿದ. ಮುನಿಸಾಮಿಯದೂ ಅದೇ ಹಾಡಾಯಿತು.

"ಎಲ್ಲಾ ಬೇವಾರ್ಸಿ ನನ್ಮಕ್ಳು. ಸಮಯಾಂದ್ರೆ ಕಾಸಿರಾಕಿಲ್ಲ'' ಎಂದು ಕಣ್ಣ ಹಾಗೇ ಹೊರಡಲನುವಾದ.

''ನನ್ತಾವ ಅರ್ಕಾಸೈತೆ ತಗೋ ಕಣ್ಣ'' ಎಂದು, ಅದುವರೆಗೂ ಸುಮ್ಮನಿದ್ದ ಆರ್ಮುಗ, ಉಡಿದಾರಕ್ಕೆ ಕಟ್ಟಿದ್ದ, ಸಣ್ಣ ಚೀಲದಲ್ಲಿದ್ದ ಮೂರು ಕಾಸಿನ ಬಿಲ್ಲೆಗಳೆರಡನ್ನು ತೆಗೆದು ಕಣ್ಣನ ಕೈಗೆ ಕೊಡಹೋದ.

"ನಿನ್ಕಾಸು ನಂಗೆ ಬ್ಯಾಡ'' ಎಂದ ಕಣ್ಣ ರಚ್ಚೆನಿಂದ.

"ನನ್ಗೆಲ್ಲಾ ಗೊತ್ತೈತೆ. ತಮಾಷೆಗಂದ್ರೆ ಸಿಟ್ಬಾಗ್ತೀಯಲ್ಲಾ ಕಣ್ಣಾ. ಇಂದಿ ನನ್ತಂಗಿ ಅಲ್ವಾ ?''

"ಅಂಗಾದ್ರೆ ಕೊಡು'' ಎಂದು ಕಣ್ಣ ಅವನು ಕೊಟ್ಟುದನ್ನು ತೆಗೆದು ಕೊಂಡ.

"ಲೇ ಅಲ್ಕ ಆರ್ಮುಗ. ನನ್ಮಗನೆ, ಕಾಸ್ಕಡಗಿಕೊಂಡು ಬೆಳಗ್ನಿ ನಿಂದಾ ನಂಗೇ ಬೀಡೀಗೆ ಬೋಳಿಸಿದೇನ್ಲಾ?" ಎಂದು ಕೇಳಿದ ಕಂದಸ್ವಾಮಿ.

"ಬೆಳಿಗ್ಗೆ ಯಾವ್ನೋನ್ತಾವ ಇತ್ತು?"

"ಮತ್ತೀಗೆಲ್ಲಿಂದ ಬಂತು. ಆಕಾಸ್ದಿಂದ ಉದುರ್ತಾ?"

"ನಿಮ್ಮಜ್ಜಿ ತಲ್ಯಾಗುದರ್ತದೆ ಕೂರೆ. ಅಲ್ಲಾ ಕುರುಡ ಕೂತಿರೋದಿಲ್ವಾ, ಕಾಶಿ ಇಶ್ವೇಶ್ವರನ ಗುಡಿ ತಾವ."

"ಊ."

"ಅವನ್ಮುಂದೆ ಈವತ್ತೆರಡು ಮೂರಾಣೆ ಕಾಸು ಬಿದ್ದಿದ್ವು. ಪಕ್ಕಾಗೆ ಇದ್ದಿದ್ಲಲ್ಲಾ ಆಯಮ್ಮ ಅವಳೂ ಇರಲಿಲ್ಲ. ಅಂಗೇ ಕರ್ಚಿಗಿರ್ಲೀಂತ ಆರ್ಮ್ಯಾಕಸ್ತಗೊಂಡ್ಬಂದೆ."

"ಥೂ ಅಲ್ಕಾಬಡ್ಡಿಮಗ್ನೆ, ತಿರುಪೇರ್ತಾವ ಕಾಸು ಹೊಡದ್ಯಾ. ಶಿವರಾತ್ರಿಗೆ ಏಕಾಸೀಗ್ಗಂಟ್ಬಿದ್ದಂಗಾಯ್ತು" ಎಂದ ಮುನಿಸಾಮಿ, ಉರುಳಿ ಉರುಳಿ ನಗುತ್ತ.

"ಅವನೇನು ಗೇಯ್ದು ದುಡಿದಿದ್ದಾ? ಶಿವ ಕೊಟ್ಟ, ಶಿವಾ ತಗೊಂಡ. ನಾನೂ ಅವನಂಗೇ 'ಕಾಸಿಲ್ದೋರಿಗೆ ನೀನೆ ಶಿವಾ' ಅಂದ್ಬುಟ್ಟೆ. ತೀರೋಯ್ತಲ್ಲಾ" ಎಂದ ಆರ್ಮುಗ ನಗುತ್ತಾ.

"ಎಲ್ಲಾ ಕಳ್ರಾಗೋದ್ರಿ ನನ್ಮಕ್ಳಾ ನೀವು. ಆಮೇಲೆ ಬಂದು ವಿಚಾರಿಸ್ಕೊಂತೀನಿ" ಎಂದು, ಆರ್ಮುಗನ ಮಾತಿಗೆ ತಾನೂ ನಗುತ್ತ, ಕಂದಸ್ವಾಮಿಯು ಕಿವಿಯಲ್ಲಿಟ್ಟುಕೊಂಡಿದ್ದ ಬೀಡಿಯ ತುಂಡನ್ನು ಎಳೆದುಕೊಂಡು, ಹಚ್ಚಿಕೊಳ್ಳುತ್ತಾ, 'ಇಂದೀ, ಈಗ ಹಣ್ತರ್ತೀನಿ' ಎಂದು ಹೇಳಿ ಕಣ್ಣ, ಹಣ್ಣು ತರಲು ಹೊರಟ.

ಜಗಲಿಯಿಂದ ಮೆಜೆಸ್ಟಿಕ್ ಚೌಕಕ್ಕೆ ಹೋಗುವ ದಾರಿಯಲ್ಲಿ ಕಣ್ಣ, ಇನ್ನೆಲ್ಲಾದರೂ ಮೂರುಕಾಸು, ಆರುಕಾಸು ಸಿಕ್ಕುವುದೇನೋ ಎಂದು ಬೇಡಿ ನೋಡಿದ. ಆದರೆ ಬೇಡಿದ್ದೊಂದೇ ಆಯಿತೇ ವಿನಾ, ಬೇರೆಲ್ಲೂ ಮೂರುಕಾಸು ಕೂಡಾ ಹುಟ್ಟಲಿಲ್ಲ. ಕಡೆಗೆ ಇದ್ದ ಆರುಕಾಸನ್ನೇ ಹಿಡಿದು ಹಣ್ಣಿನ ಅಂಗಡಿಯ ಬಳಿ ಸಾರಿದ.

ಹಣ್ಣಿನ ಅಂಗಡಿಯಲ್ಲಿ ಬಗೆಬಗೆಯ, ಬಣ್ಣಬಣ್ಣದ ಹಣ್ಣುಗಳನ್ನು ಗೋಪುರವಾಗಿ, ಮೆಟ್ಟಿಲು ಮೆಟ್ಟಿಲಾಗಿ ಏರಿಸಿದ್ದರು. ದ್ರಾಕ್ಷಿಹಣ್ಣಿನ ಗೊಂಚಲುಗಳನ್ನು ತೋರಣದಂತೆ ಕಟ್ಟಿದ್ದರು. ಎಷ್ಟುತರಹ ಹಣ್ಣುಗಳು. ಅವನ್ನು ನೋಡಿಯೇ ಕಣ್ಣನ ಕಣ್ಣು ಕೋರೈಸಿ, ಅವನ ನಾಲಿಗೆಯ ಮೇಲೆ ನೀರಾಡಿತು. ಅಲ್ಲಿದ್ದ ಒಂದೊಂದು ಜಾತಿಯ ಹಣ್ಣನ್ನೂ, ಮೂಟೆ ಗಟ್ಟಿ ತೆಗೆದುಕೊಂಡು ಹೋಗಿ ಕೊಡಬಹುದಾದರೆ, ಇಂದು ಎಷ್ಟು ಕುಣಿದಾಡಬಹುದೆಂದು ಹಾಗೆಯೇ ಊಹಿಸಿದ. ಊಹೆಗೇ ಅವನ ತಲೆ ಗಿಮ್ಮೆಂದಿತು. ಆ ಊಹೆ, ಬರೀ ಊಹೆಯಾಗಿಯೇ ಬಾಳಿ ಅಳಿಯ ಬೇಕಾದ ಊಹೆ. ಅವನ ಕೈಯ್ಯಲ್ಲಿದ್ದುದು ಆರುಕಾಸು. ಅದಕ್ಕೆ ಒಂದಾದರೂ, ಆ ಸುಂದರವಾದ ಹಣ್ಣು ಬರುತ್ತದೋ ಇಲ್ಲವೋ ಎಂದು ಅನುಮಾನವಾದಾಗ, ಇನ್ನು ಮೂಟೆಗಟ್ಟಿ ಒಯ್ಯುವುದಕ್ಕುಂಟೆ. ತೆವಳ ಲಾಗದ ಹೆಳವ, ಆಗಸಕ್ಕೆ ಹಾರಬಯಸಿದಂತಿತ್ತು ಅದು. ಅಂಥ ಬಯಕೆ ಸತ್ಯವಾಗುವುದುಂಟೆ? ಆದರೂ ಏನಾದರೂ ಒಂದು ಅದ್ಭುತವಾಗಿ, ಒಂದೇ ಒಂದುದಿನದ ಮಟ್ಟಿಗಾದರೂ ಹಾಗಾಗಬಹುದಾದರೆ........"

ತಂಗಿಗೆ ಹಣ್ಣು ಕೊಳ್ಳಬಂದ ಕಣ್ಣ, ಅಂಗಡಿಯ ಮುಂದೆ ನಿಂತು ಕನಸು ಕಾಣುವುದರಲ್ಲಿ ತನ್ಮಯನಾಗಿದ್ದ. ಕಡೆಗೆ ಅಂಗಡಿಯವನೇ ಅವನನ್ನು ಎಚ್ಚರಿಸಿದ.

"ಏ, ಏನ್ಬೇಕೋ ......

ಕಾಣುತ್ತಿದ್ದ ಕನಸಿನ ಪಾಲಿಗೆ, ಆ ಕೂಗು ಕತ್ತರಿಯಾಗಿ, ಕನಸು ಕಡಿದು, ಎಚ್ಚರವಾದ ಕಣ್ಣ. ಅವನ ಮೂರ್ಖತನಕ್ಕೆ ಅವನಿಗೇ ನಗು ಬಂತು. 'ಮಂಕ್ಬಡ್ಡಿಮಗ್ನೆ' ಎಂದು ತನ್ನನ್ನು ತಾನೇ ಬೈದುಕೊಂಡ.

"ಏ, ಯಾಕಂಗ್ನಿಂತಿದಿಯೋ ಬಕ್ರಾ, ಏನ್ಬೇಕು ?" ಅಂಗಡಿಯವನೇ ಮತ್ತೊಮ್ಮೆ ಕೇಳಿದ.

"ಎಂತದಾರ ಒಂದೊಳ್ಳೆ ಅಣ್ಣು ಕೊಡಿ" ಎಂದು, ಕಣ್ಣ ಅವನ ಮುಂದೆ, ತನ್ನ ಬಳಿ ಇದ್ದ ಆರುಕಾಸನ್ನಿಟ್ಟ. ಆರುಕಾಸು ಕೊಟ್ಟು, ಹಣ್ಣು ಕೇಳುವ ಈ ಚಿಂದಿಯುಡನ ಧಾರ್ಷ್ಟ್ಯಕ್ಕೆ ಅಂಗಡಿಯವನಿಗೆ ನಗು ಬಂತು. ಕಣ್ಣನನ್ನು ನೋಡಿ ತಾತ್ಸಾರವಾಗಿ ನಗುತ್ತಾ ಹೇಳಿದ—

"ಎಲ್ಲಾರ ವಾಕಂಪೂಪ್ಪು ಏನೋ ಹೋಗು. ಆರುಕಾಸಿಗೆ ಹಣ್ಣು ಬರೋದಿಲ್ಲ."

"ಅಂಗನ್ಬ್ಯಾಡ್ರಿ, ಎಂಥದಾರ ಒಂದೊಳ್ಳೆ ಹಣ್ಣೊಟ್ಬುಡಿ. ಪುಣ್ಯ ಬರ್ತದೆ."

"ಕೊಟ್ಬುಡಾಕೆ ನಾನು ಛತ್ರ ಇಟ್ಟಿಲ್ಲ. ನಿನ್ನ ಆರುಕಾಸು ತಗೊಂಡು ಹೋಗು. ಇಲ್ದೆಹೋದ್ರೆ ಇನ್ನಷ್ಟು ದುಡ್ತಗಿ."

"ನನ್ತವ ಅಷ್ಟೆ ಇರೋದು. ಎಚ್ಗೆ ಇದ್ರೆ ವೊದ್ಲೇ ಕೊಡ್ತಾಇದ್ದೆ. ನನ್ತಂಗೀಗೆ ಹಣ್ತಿನ್ನೋ ಖಾಯಿಷ್ ಆಗಿದೆ."

"ಒಂದ್ಸಲ ಹೇಳಿದ್ರೆ ಗೊತ್ತಾಗಲ್ವೇನೋ ಬಚ್ಚಿ, ಹೋಗೊ. ಸುಮ್ನೆ ನಿಂತ್ಕೊಂಡು ಬರೋ ಗಿರಾಕಿಗೆ ಅಡ್ಡ ಮಾಡಬ್ಯಾಡ."

"ನಾನಡ್ಡಾ ನಿಂತ್ಕಳ್ಳಾಕಿಲ್ಲ. ಒಂದಣ್ಣು ಕೊಟ್ಬುಡಿ. ಒಂಟೋಗ್ತೀನಿ."

"ಅದಲ್ಲಾಕಣೋ ದಾಸಯ್ಯ ಅಂದ್ರೆ ಗೋಡೆ ಹಿಂದೆ ಹೋಗಿ 'ಟಿಂಗ್' ಅದ್ನಂತೆ. ಒಂದ್ಸಲ ಹೇಳಿದ್ನಲ್ವಾ. ಹೋಗೋ". ಕೇಳಿದಷ್ಟು ಹಣಕೊಡುವ ಗಿರಾಕೆಗಳಿಗೇ ದಬಾಯಿಸುವುದು ಅಭ್ಯಾಸವಾದ, ಹಣ್ಣಿನಂಗಡಿಯವನು, ಅಷ್ಟು ಮಾತಾಡಿದ್ದಕ್ಕೇ ಸಹನೆ ಸತ್ತು ಹೇಳಿದ. ಕಣ್ಣ ಮತ್ತೇನೋ ಮಾತಾಡುವುದಕ್ಕೆಹೋದ. ಆದರೆ ಅದಕ್ಕೆ ಅವಕಾಶ ಕೊಡದೇ ಅವನು—

"ಇನ್ನೊಂದಫಾ ಮಾತಾಡಿದ್ರೆ ಮುಸಡೀ ಮೇಲೆ ಹೊಡೀತೀನಿ. ಹೋಗಿಲ್ಲಿಂದ, ಬೇವಾರ್ಸಿ ನನ್ಮಗ್ನೆ" ಎಂದ.

ಅವನು ಬೈದಿದ್ದನ್ನು ಕೇಳಿ ಕಣ್ಣನಿಗೆ ಹೊಟ್ಟೆಯಲ್ಲಿ ಕೆಂಡವನ್ನು ಕಲಸಿದಂತಾಯಿತು. ಆದರೂ ತನ್ನ ಸಿಟ್ಟನಿಂದ, ಇಂದುವಿನ ಬಯಕೆಯನ್ನು ಕೆಡಿಸಲು ಇಚ್ಛಿಸದೆ, ಸರಿದುಹೋಗುತ್ತಿದ್ದ ಸಹನೆಯನ್ನು ತಡೆದು

"ನಿಮ್ಮಂತೋರೇ ಗರೀಬರ ಮ್ಯಾಲೆ ರೇಗಿದ್ರೆಂಗೆ...."

ಅಂಗಡಿಯವನಿಗೆ ವಾಗ್ವಾದವನ್ನು ಮುಂದುವರಿಸಲು ಇಚ್ಛೆ ಇರಲಿಲ್ಲ. ಈ ಚಿಂದಿಯ ಭಿಕಾರಿಯ ಹತ್ತಿರ, ಐದು ಬೆರಳಿಗೂ ಹತ್ತು

ಉಂಗರವಿಟ್ಟು, ನವಾಬಗಿರಿ ನಡೆಸುವ ತಾನು, ಅವನೊಂದಿಗೆ ಮಾತಾಡುತ್ತಾ ಕೂಡುವುದೇ ? ಎಂಥವರಾದರೂ ಸರಿಯೆ, ಸ್ವಲ್ಪ ಚಾಕಾಸಿ ಮಾಡಿದರೂ, ಮಡಗ್ಬಿಟ್ಹೋಗಿ ಸಾರ್, ನೀವು ಹತ್ತ್ರೆನ್ನೋಕಾಲ ಬಂದಿಲ್ಲ' ಎಂದು 'ಗರಂ' ಆಗಿ ಹೇಳುತ್ತಿದ್ದ ತಾನು ಇವನ ಕೈಲಿ ಚರ್ಚೆ ಮಾಡುವುದೇ—

"ಹೋಗ್ರೋ ಅಂದ್ರೆ, ನಿನ್ನ..." ಎಂದು ಹಲ್ಲು ಕಡಿಯುತ್ತಾ, ಅಂಗಡಿಯ ಮುಂದೆ ನಿಂತ ಕಣ್ಣನ ಎದೆಗೆ ಕೈಹಾಕಿ, ಕಸುವಿನಿಂದ ದಬ್ಬಿದ. ಅನಿರೀಕ್ಷಿತವಾದ ಆ ನೂಕುವಿಕೆಗೆ ಕಣ್ಣ ತೂಗಿಬಿದ್ದ. ಕಾಲು-ರಸ್ತೆಯ ಕಲ್ಲಿನ ಅಂಚು, ಅವನ ಬೆನ್ನಿಗೆ ಬಲವಾಗಿ ಬಡಿದು, ಮೈಯ್ಯಲ್ಲಿ ನೋವು ಮಿಂಚಿನಂತೆ ಚಿಮ್ಮಿತು. ತುಳಿದ ಹಾವಿನಂತೆ ಸಿಡಿದೆದ್ದ ಕಣ್ಣ. ಉಕ್ಕಿದ ಸಿಟ್ಟಿನಲ್ಲಿ ಎಲ್ಲವೂ ಮರೆತುಹೋಯಿತು.

"ಯಾಕೋ ದಬ್ಬಿದ್ದು.....ಮಗ್ನೆ ? ನಿನ್ನೇನು ಧರ್ಮಾ ಕೊಡೂಂತ ಕೇಳಿದ್ನಾ ? ಅಂಗ್ಡಿ ಬಿಟ್ಟು ಇಳಿ, ತೋರಿಸ್ತೀನಿ. ಸುಮ್ನಿದ್ರೆ ಕೈ ಮಾಡ್ತೀಯಾ"

"ಪಕಡ್ರೆ ಉಸ್ಕು" ಎಂದು ಕೂಗಿ ಕೆರಳಿದ ಅಂಗಡಿಯವನು, ಕೆಳಗೆ ಧುಮುಕಿ, ಮೇಲಿ ಏಳಬಂದ ಕಣ್ಣನ ಮುಸುಡಿಯ ಮೇಲೆ ಮುಷ್ಟಿಯಿಂದ ಗುದ್ದಿದ. ಏಟಿನ ಜೋರಿಗೆ ಕಣ್ಣನ ನೆತ್ತಿಯಲ್ಲಿ ಮಿಂಚು ಗಳು ಸುತ್ತಿದಂತಾಯಿತು. ತಾನು ಮುಷ್ಟಿ ಕಟ್ಟಿ ನುಗ್ಗಿದ. ಆದರೆ ಅಷ್ಟರಲ್ಲೇ ಇನ್ನಿಬ್ಬರು ಅವನ ಕೈಹಿಡಿದರು. ಯಾರೋ ಅವನ ಬೆನ್ನಿನಮೇಲೆ ಗುದ್ದಿದರು. ಮತ್ತೊಬ್ಬರು ಕಾಲು ಎಳೆದು ಕೆಡವಿದರು. ಕೆಳಗೆ ಬಿದ್ದು ತಲೆ ಎತ್ತುತ್ತಿದ್ದ ಕಣ್ಣನ ತಲೆಯನ್ನೇ ಪಾಪಾಸು ಹಾಕಿದ ಕಾಲಿನಿಂದ ಝಾಡಿಸಿದ ಅಂಗಡಿಯವನು. ಆ ಹೊಡೆತಕ್ಕೆ ಕಣ್ಣ ನಾಲಿಗೆಯನ್ನು ಕಚ್ಚಿದ. ಅವನ ಮೂಗು, ಬಾಯಿಗಳಿಂದ ರಕ್ತ ಸುರಿಯಲಾರಂಭಿಸಿತು. ಮೊಳಕೈಯ್ಯಿಂದ ಸುರಿಯುತ್ತಿದ್ದ ರಕ್ತವನ್ನು ಜ್ಜಿಕೊಂಡು, ಪೆಟ್ಟು ತಗಲಿದ ಕಾಡುಹಂದಿಯಂತೆ ಕಣ್ಣ, ಕೊಡವಿಕೊಂಡು ಮೇಲೆದ್ದ. ಯಾರೋ ಅವನ ಕಣ್ಣುಗಳಲ್ಲಿಯೇ ಉಗಿದರು. ಯಾರೋ ಅವನ ತೋಳು

ಗಳೆರಡನ್ನೂ ತಿರುಚಿ, ಹಿಡಿದುಕೊಂಡಿದ್ದರು. ಅಂಗಡಿಯವನು, ಅಸಹಾಯಕನಾಗಿ ನಿಂತ ಅವನ ಮುಖಮೋರೆಗಳಿಗೆ, ಹಿಂಗೈಯಿಂದ ಪ್ರಹರಿಸುತ್ತಿದ್ದ, ತನ್ನ ಸಿಟ್ಟು ತೀರುವವರೆಗೆ. ಸುತ್ತಮುತ್ತ ಜನ ಘೇರಾಯಿಸಿದರು. ಅಂಗಡಿಯವನ ಉಗುಳು ಕಣ್ಣನ್ನು ತುಂಬಿದ್ದುದರಿಂದ, ಕೈಗಳನ್ನೂ ಯಾರೋ ಬೆನ್ನಹಿಂವಕ್ಕೆಳೆದು ಹಿಡಿದುಕೊಂಡಿದ್ದರಿಂದ, ಕಣ್ಣನಿಗೇನೂ ಕಾಣಿಸುತ್ತಿರಲಿಲ್ಲ. ಅಷ್ಟರಲ್ಲೇ ಪೋಲೀಸಿನವನೊಬ್ಬನು ಬಂದು, ಹಿಡಿದಿದ್ದವನಿಂದ ಕಣ್ಣನನ್ನು ಬಿಡಿಸಿದ. ಒಂದು ಕೈಬಿಟ್ಟಮೇಲೆ ಕಣ್ಣ, ಅಂಗಿಯ ತುದಿಯಿಂದ ಕಣ್ಣುಮೂಗುಗಳನ್ನು ಒರಸಿಕೊಂಡ. ಒರಸಿಕೊಂಡಷ್ಟೂ ವೇಗವಾಗಿ ಹರಿಯುತ್ತಿತ್ತು ರಕ್ತ. ಪೋಲೀಸಿನವನನ್ನ ಕಂಡ ಕೂಡಲೇ ಕಣ್ಣನಲ್ಲಿ ಉಳಿದಿದ್ದ ಶಕ್ತಿಯೆಲ್ಲವೂ ಸತ್ತುಹೋಯಿತು. ಕತ್ತುಮುರಿದ ಹಕ್ಕಿಯಂತೆ, ಪೋಲೀಸಿನವನ ಕೈಯಲ್ಲಿ ಭಾರವಾಗಿ ಜೋಲಿದ. ಸುತ್ತ ಕಲೆತು, ತಲೆಗೊಂದು ಮಾತಾಡುತ್ತಿದ್ದ ಜನದ ಮಾತು ಒಂದೂ ಅವನಿಗೆ ಅರ್ಥವಾಗಲಿಲ್ಲ. ಕಿವಿಯಲ್ಲೇನೋ ಮೊರೆಯುತ್ತಿತ್ತು. ತಲೆಯಲ್ಲಿನ್ನೂ ಮಿಂಚುಗಳು ಹೊಳೆಯುತ್ತಲೇಇದ್ದವು. ಕಣ್ಣಿನಿಂದಲೂ ಕಿಡಿಗಳು ಸುರಿಯುತ್ತಿದ್ದವು. -

"ನಿಮ್ಕೆಲಸಕ್ಕೆ ನೀವು ಹೋಗ್ರಿ ಸಾರ್. ಆಗಿಹೋಯಿತಲ್ಲ. ಟ್ರಾಫಿಕ್‌ಗೆ ಅಡ್ಡಿ ಮಾಡಬೇಡಿ."

ಆ ಮೊರೆತದಲ್ಲೂ ಎಲ್ಲಿಯೋ ಕೇಳಿದಂತಿತ್ತು ಆ ಪೋಲೀಸಿನವನ ಧ್ವನಿ. ಆದರೆ ಅದ್ಯಾವುದೂ ಅವನಿಗೆ ಬೇಕಾಗಿರಲಿಲ್ಲ. ಅಂತಿಮ ತೀರ್ಮಾನವನ್ನು ಕೇಳಿದ ಖೈದಿಯಂತಿದ್ದ ಕಣ್ಣ. ಅವನು ಅಂದಿನವರೆಗೂ ಪೋಲೀಸಿನವರ ಕೈಗೆ ಸಿಕ್ಕಿರಲಿಲ್ಲ. ಅವರ ಹೆಸರಿಗೇ ಹೆದರಿ, ಭೂಮಿಯಲ್ಲಿ ಹುದುಗುತ್ತಿದ್ದ. ಹುಲಿ ಎಂದರೆ ಹೆದರುವವನ ಎದುರಿಗೆ ಹುಲಿಯೇ ಬಾಯಿ ತೆರೆದು ನಿಂತಂತಾಯಿತು. ತನ್ನ ಕಥೆ ಮುಗಿಯಿತು ಎಂದುಕೊಂಡ. ತಾನು ತರುವ ಹಣ್ಣಿಗಾಗಿ ಕಾದು ಕುಳಿತ ಇಂದುವಿನ ನೆನಪು ನುಗ್ಗಿ ಬಂತು. ಹಣ್ಣು ತರುವುದಿರಲಿ, ಅವಳ ಮುಖ ಕೂಡಾ ನೋಡುವಂತಿಲ್ಲ ಇನ್ನು. ಪೋಲೀಸರ ಕೈಗೆ ಸಿಕ್ಕು, ಜೈಲಿಗೆ ಹೋಗಲಿರುವವನಿಗೆ ತಂಗಿ

ಎಲ್ಲಿ, ಸ್ನೇಹಿತರೆಲ್ಲಿ? ಇನ್ನೆಂದೋ ಅವರ ಮುಖ ನೋಡುವುದು. ತಾನು ಪೋಲೀಸರ ಕೈಯಿಂದ ಪಾರಾಗಿ ಬರುವ ವೇಳೆಗೆ ತಾನೆಲ್ಲೋ ಅವರೆಲ್ಲೋ? ಒಂದು ಸಲ ಇಂದೂಗೆ ಹೇಳಿ, ಮುತ್ತುಕೊಟ್ಟು ಬರಬಹುದಾದರೆ..? ಆಮೇಲೆ ಗಲ್ಲಿಗೇರಿಸಿದರೂ ಸರಿಯೆ.

ಕ್ರೋಧ, ಅಸಹಾಯಕತೆ, ನಿರಾಶೆಗಳ ಮಡಲಿನಲ್ಲಿ ಮೂಡಿದ ಮಾರ್ದವತೆಯೂ ವಿಷವಾಗಿ ಬಂತು. ಬಲಾತ್ಕಾರವಾಗಿ ಬೇವಿನಸೊಪ್ಪು ಜಗಿಯಬೇಕಾಗಿ ಬಂದವನಂತೆ, ನೆನಪುಗಳನ್ನು ಮೆಲಕುಹಾಕುತ್ತಿದ್ದ.

ಪೋಲೀಸಿನವನು ಅಂಗಡಿಯವನನ್ನು ಕೇಳಿದ: "ಏನ್ಮಾಡಿದ ಇವನು?"

ಪೋಲೀಸಿನವನ ಪರಿಚಯವಿದ್ದ ಅಂಗಡಿಯವನು ಹೇಳಿದ— "ಇವರ್ಪಾಳಿ ನಿಂಗೊತ್ತಿಲ್ವಾ ರಾಜಪ್ಪ. ಎಲ್ಲಿಬಿಟ್ರಾರೋ. ಭಾರಿ ಕೊಂಡ್ಕೊಳ್ಳೋರ್ಹಾಗೆ ಹಣ್ಣು ಕೇಳಾಕೆ ಬರ್ತ್ತಾರೆ, ಮೂರು ಕಾಸು ಹಿಡಿದು. ಕಣ್ಣು ಸ್ವಲ್ಪ ಅತ್ಲಾಗಿತ್ಲಾಗೆ ಆದ್ರೆ, ಕೈಯಿಗೆ ಸಿಕ್ಕಿದ್ದನ್ನೆತ್ಕೊಂಡೋಡೋಗ್ತಾರೆ. ಐನಾತಿ ಕಳ್ಬಡ್ಡಿಮಕ್ಳು. ಲಾಕಪ್ನಲ್ಲಿಟ್ಟುಕೊಂಡು, ಎರಡು ದಿನ ಮೈ ಕಾಯಿಸಿದ್ರೆ ಹುಚ್ಚೆಳಿಸೋಗ್ತದೆ. ಹೆಂಗಿದಾನೆ ನೋಡು. ಬಾಯಾಗೆ ಬೆಣ್ಣೆ ಇಟ್ರೆ ಕರಗೋದಿಲ್ಲ! ಇವನ...." ಪೋಲೀಸಿನವನು ತಡೆಯದಿದ್ದರೆ, ಪುತ್ತಿ ಕಣ್ಣನಿಗೆ ಏಟು ಬೀಳುತ್ತಿತ್ತು. ಹೆದರಿ ಪೋಲೀಸಿನವನ ಮೈಯ್ಯಪ್ಪೇ ಹುದುಗಿದ ಕಣ್ಣ.

"ಇವರೆಲ್ಲಾ ಕಳ್ರೇ. ಪಡ್ಡರ ಗ್ಯಾಂಗಿದ್ದ ಹಾಗೆ. ಹಣ್ಣಂಗಡಿ ಹತ್ರ ಬಂದರೆ ಹಾಗೆ, ಬಸ್‌ನ ಹತ್ತಿರ ಸಾಮಾನು ತರ್‍ತಿಸೀಂತ ಬರ್ತಾರೆ. ಸ್ವಲ್ಪ ಎಚ್ಚರ ತಪ್ಪಿದರೆ, ಸಿಕ್ಕಿದ್ದನ್ನು ಹಾರಿಸಿಬಿಡ್ತಾರೆ. ಹದ್ದಿದ್ದ ಹಾಗೆ. ನಾನು ಹೇಳ್ತೀನಿ ಕೇಳಿ—ಸ್ಟೇಷನ್ನಿಗೆ ಕರೆದುಕೊಂಡು ಹೋಗಿ, ಚೆನ್ನಾಗಿ ಮೈ ಮೆತ್ತಗೆ ಮಾಡಿ." ಗುಂಪಿನಲ್ಲಿದ್ದವನೊಬ್ಬ ಹೇಳಿದ.

"ಎಲ್ಲೋ ಬಿಟ್ಟ ಕೂಳು ಬಿದ್ದಿದ್ರದೆ. ಮೈ ಸೊಕ್ಕು ಇನ್ನು ಹೇಗೆ ತೀರಬೇಕು ಹೇಳಿ. ಅಲ್ಲಲ್ಲಿ ಕಳ್ಳತನ ಮಾಡೋದೇ ಇವರ ಕಸಬು. ಅವನ ಮುಖ ನೋಡಿ—ಮೈಲಿ ದೂರಕ್ಕೂ ಕಳ್ಳಾಂತ ಕಾಣ್ತದೆ" ಮತ್ತೊಬ್ಬ ಸೇರಿಸಿದ.

"ನಾನಿವತ್ತು ಹುಷಾರಾಗಿದ್ದೆ, ಸಿಕ್ಕುಬಿದ್ದ" ಎಂದ, ಅಂಗಡಿಯವನು ತನ್ನ ಸಾಮರ್ಥ್ಯವನ್ನೂ, ಜಾಣ್ಮೆಯನ್ನೂ ತಾನೇ ಮೆಚ್ಚಿಕೊಳ್ಳುತ್ತಾ.

ಎಲ್ಲರ ಬಾಯಲ್ಲೂ ಒಂದೇ ಮಾತು, ತೀರ್ಮಾನದ ಮಾತು— ಇವನು ಕಳ್ಳ. ಇದ್ದಕ್ಕಿದ್ದಂತೇ ಕಣ್ಣನಲ್ಲಿದ್ದ ಅಸಹಾಯಕತೆ, ನಿರಾಶೆ ಎಲ್ಲವೂ ದಳ್ಳುರಿಯಾಗಿ ಉರಿದ ಕ್ರೋಧದಲ್ಲಿ ಮರೆಯಾಗಿ ಹೋಯಿತು. ಸುತ್ತ ನಿಂತವರು ಮನುಷ್ಯರಲ್ಲ. ಕಾಡಿನ ಮೃಗಗಳು. ಇವರಿಗೆ ನ್ಯಾಯ, ಅನ್ಯಾಯ ಯಾವುದೂ ಬೇಕಿಲ್ಲ. ಹೇಗಾದರೂ ಸರಿ—ತನ್ನಂಥವರನ್ನು ಬೇಟೆಯಾಡಲೆಂದೇ ಶಪಥ ತೊಟ್ಟಿದಾರೆ ಇವರು.

ಇವರಿಗೆ ನಾನೇನೂ ಅನ್ಯಾಯ ಮಾಡಲಿಲ್ಲ. ಯಾರನ್ನೂ ಹೊಡೆಯಲಿಲ್ಲ, ಬೈಯಲಿಲ್ಲ, ಕಳ್ಳತನ ಮಾಡಲಿಲ್ಲ. ಆದರೂ ಇವರ ದೃಷ್ಟಿಯಲ್ಲಿ ನಾನು ಕಳ್ಳ. ಅಷ್ಟು ಏಟು ತಿಂದ ತನ್ನ ಬಗ್ಗೆ ಒಬ್ಬರಾದರೂ, ಒಂದಾದರೂ ಕನಿಕರದ ಮಾತಾಡಲಿಲ್ಲ. ನೀನೇನು ಮಾಡಿದೆ ಎಂದು ಕೇಳುವಷ್ಟು ತಾಳ್ಮೆಯೂ ಇವರಿಗಿಲ್ಲ. ತನ್ನಂತಹವರ ಬಗ್ಗೆ ಇವರಿಗಿರುವುದೊಂದೇ—ಅಗಮ್ಯ ರಕ್ತದಾಹ!

ತಟಕ್ಕನೆ ಅವನ ಮನಸ್ಸು ಸಿಟಿದು ಹೇಳಿತು—"ಇದೊಂದು ಬಾರಿ ಏನಾಗುವುದೋ ಆಗಲಿ. ಬದುಕಿಬಂದರೆ ಸೇಡುತೀರಿಸುತ್ತೇನೆ."

ಸುತ್ತ ನಿಂತ ಒಬ್ಬೊಬ್ಬರ ಮನೆಯನ್ನು ಹೇಗೆ ಲೂಟಿ ಮಾಡಿ, ಬೆಂಕಿ ಹಚ್ಚಿ, ಒಬ್ಬೊಬ್ಬರನ್ನು ಮೈ ರಕ್ತಕೀಳುವಂತೆ ಸಾಯಬಡಿದು, ಕರುಳು ಬಗೆದು ಕತ್ತಿಗೆ ಜೋಮಾಲೆ ಹಾಕಿಕೊಳ್ಳುವ ಕನಸು ಕಾಣತೊಡಗಿತು, ಉನ್ಮತ್ತವಾದ ಅವನ ಮನಸ್ಸು. ಈ ಜಗತ್ತಿನಲ್ಲಿ ತನ್ನ ಪಾಲಿಗೆ ಸತ್ಯ, ಕರುಣೆ, ಪ್ರೀತಿ ಒಂದೂ ಇಲ್ಲ. ಇವರಿಗೆ ರಕ್ತ ಬೇಕಾಗಿದೆ. ಅವರ ರಕ್ತವನ್ನೇ ಅವರಿಗೆ ಕುಡಿಸುತ್ತೇನೆ ಎಂದು ಶಪಥ ತೊಡುತ್ತಿತ್ತು ಅವನ ಮಿದುಳು.

ಅಂಗಡಿಯವನು ಪೋಲೀಸಿನವನಿಗೆ ಒಂದು ಸಿಗರೇಟು ಕೊಟ್ಟು, ತಾನೇ ಅವನ್ನು ಅವಸರಿಗಾಗಿ ಹೊತ್ತಿಸಿ, ವ್ಯಾಪಾರಕ್ಕಿಟ್ಟಿದ್ದ ಹಣ್ಣಿನಲ್ಲಿ ಎರಡನ್ನು ಪೋಲೀಸಿನವನಿಗೆ ಕೊಟ್ಟ.

## ೧೫೧

"ನನಗ್ಯಾಕೆ ಇದು?" ಎಂದು ಕೇಳಿದ-ಪೋಲೀಸಿನವನು.

"ಇಲ್ಲಿ ತಗೊಂಡೋಗು ರಾಜಪ್ಪ. ಮನೇಲಿ ಮಕ್ಳಿಲ್ವಾ. ತಿನ್ತಾವೆ. ಎಷ್ಟೋ ಹಣ್ಣು ಕೊಳೆತು ನಷ್ಟ ಆಗುತ್ತೆ. ನಿನಗೆ ಕೊಟ್ಬರೆ ನಷ್ಟವೇ?" ಎಂದ ಅಂಗಡಿಯವನು.

ಹಾಗೆಂದು ತನಗೊಂದು ಹಣ್ಣು ಕೊಡಬಾರದಿತ್ತೆ? ತನ್ನ ಇಂದಿ ಮಗುವಲ್ಲವೇ? ಊಹು—ತಾನವರ ದೃಷ್ಟಿಯಲ್ಲಿ ಮನುಷ್ಯನಲ್ಲ, ತನ್ನ ಇಂದಿ ಮಗುವಲ್ಲ—ತಾವೆಲ್ಲಾ ಒಂದೇ, ಕಂಡಲ್ಲಿ ಕೊಲ್ಲಬೇಕಾದ ಪಶು. ಇರಲಿ ತೋರಿಸುತ್ತೇನೆ ಎಂದಿತು ಅವನ ಪ್ರಕ್ಷುಬ್ಧವಾದ ಮನಸ್ಸು.

ಏಕೋ ಅವನಿಗೆ ತಾನು ಕಳ್ಳತನ ಮಾಡಬಾರದೆಂದು ಪಳನಿಗೆ ಹೇಳಿದ ಮಾತು ನೆನಪಿಗೆ ಬಂತು. ಕಳ್ಳತನವೇಕೆ, ಕೊಲೆಮಾಡಿದರೂ ತಪ್ಪಲ್ಲ ಎನಿಸಿತು ಈಗ. ಇವರೇ ತಮ್ಮ ಅಸಹನೆ, ಅನ್ಯಾಯ, ಪಶುತನ ದಿಂದ ತನ್ನನ್ನು ಆ ದಾರಿಗೆ ತಳ್ಳುತ್ತಿರುವಾಗ, ತಾನು ಹೋಗುವುದು ತಪ್ಪಲ್ಲ.

"ಎಂಗಿದ್ರೂ ಸಿಕ್ದೋರೆಲ್ಲಾ ಒದೀತಾರೆ. ಪುಗಸಟ್ಟೆ ಒದಿಸ್ಕೊಳ್ಳಾಕಿಂತ ಮಜಾ ಮಾಡಿ ಒದಿಸ್ಕೊಳ್ಳಾದು" ಎಂದು ಹೇಳಿದ ಪಳನಿಯ ಮಾತು, ಮತ್ತೆ ಮತ್ತೆ ಅವನ ಎದೆಯಲ್ಲಿ ಮಾರ್ದನಿಗೊಡಲಾರಂಭಿಸಿತು.

ಪೋಲೀಸಿನವನು ಗುಂಪನ್ನು ಬಿಡಿಸಿ, ಕಣ್ಣನನ್ನು ಕರೆದುಕೊಂಡು ಹೊರಟ. ಬಲಿಗೆ ಹೋಗುವ ಕುರಿಯಂತೆ ಕಣ್ಣ ಅವನನ್ನು ಹಿಂಬಾಲಿಸಿದ—ಹತ್ತಿರವಿದ್ದ ಉಪ್ಪಾರಪೇಟೆ ಪೋಲೀಸು ಸ್ಟೇಷನ್ನಿನಲ್ಲಿ ತನಗಾಗಲಿರುವುದನ್ನು ಊಹಿಸುತ್ತಾ.

## ೧೮

ಪೋಲೀಸಿನವನು ತನ್ನನ್ನು ಮೆಜೆಸ್ಟಿಕ್ ಚೌಕದಿಂದ, ನೇರವಾಗಿ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡುಹೋಗಬಹುದೆಂದು ನಿರೀಕ್ಷಿಸಿದ್ದ ಕಣ್ಣ. ಆದರೆ ಅವನು ಹಾಗೆ ಮಾಡದೆ, ಮೆಜೆಸ್ಟಿಕ್

ಟಾಕೀಸಿನ ಇದಿರುಗಡೆಯ, ರೈಲ್ವೆ ಸ್ಟೇಷನ್ನಿಗೆ ಹೋಗುವ ರಸ್ತೆಯಲ್ಲಿ ಕರೆದುಕೊಂಡು ಹೊರಟ. ಎಲ್ಲಿಗೆ ಕರೆದುಕೊಂಡುಹೋಗುತ್ತಾನೋ, ತಾನು ಊಹಿಸಿದುದಕ್ಕಿಂತ ಹೆಚ್ಚಿನ ಶಿಕ್ಷೆ ಮತ್ತಾವುದು ಕಾದಿದೆಯೋ ಎಂದು ಹೆದರಿಕೆಯಾಯಿತು ಕಣ್ಣನಿಗೆ. ಆದರೆ ಎಲ್ಲಿಗೆಂದು ಕೇಳುವ ಧೈರ್ಯವೂ ಅವನಿಗಿರಲಿಲ್ಲ. ಸುಮ್ಮನೆ ಹಿಂಬಾಲಿಸಿದ.

ಮೆಜೆಸ್ಟಿಕ್ ಸಿನಿಮಾದ ಇದಿರು ರಸ್ತೆಯಲ್ಲಿ ಅಷ್ಟುದೂರ ನಡೆದು, ಪೋಲೀಸಿನವನು ಕಣ್ಣನೊಡನೆ, ತುಳಸಿ ತೋಟವನ್ನು ಹೊಕ್ಕು, ಹುಲ್ಲಿನಮೇಲೆ ಕುಳಿತು, ಕಣ್ಣನಿಗೂ ಕೂಡಲು ಸನ್ನೆಮಾಡಿದ. ಕಣ್ಣ ಕುಳಿತುಕೊಂಡಮೇಲೆ, "ಅವನ ಕೈಬಿಟ್ಟು "ಎಲ್ಲಾರಾ ಓಡೋಗೋಕೆ ನೋಡಿದ್ರೆ, ನಿನ್ನ ಮೈಚರ್ಮ ಸುಲಿದು ಉಪ್ಪಾಕ್ಬಿಡ್ತೀನಿ" ಎಂದು ಎಚ್ಚರಿಸಿದ. ಕಣ್ಣ ಮಾತನಾಡದೆ ಕುಳಿತುಕೊಂಡ. ಸ್ವಲ್ಪ ಹೊತ್ತು ಅವನೂ ಮಾತಾಡಲಿಲ್ಲ. ಬಲಿಯುತ್ತಿದ್ದ ಸಂಜೆಗತ್ತಲಿನಲ್ಲಿ ಅವನು ಸೇದುತ್ತಿದ್ದ ಸಿಗರೇಟಿನ ತುದಿಯ ಕೆಂಡ ಮಂಕಾಗಿ ಹೊಳೆಯುತ್ತಿತ್ತು.

"ಲೇ, ನಿನ್ನೆಸ್ರು ಕಣ್ಣಾ ಅಲ್ಲೇನೋ ?" ಮಾತಾಡದೆ ಕುಳಿತಿದ್ದವನು, ಇದ್ದಕ್ಕಿಂದಂತೆಯೇ ಕೇಳಿದ. ಅವನು ಆ ಪ್ರಶ್ನೆಯನ್ನು ಕೇಳಿದ ಕೂಡಲೇ ಕಣ್ಣನಿಗೆ ಒಂದು ರಾತ್ರಿ, ಯಾವುದೋ ತಪ್ಪಿಸಿಕೊಂಡುಹೋದ ಹುಡುಗಿಯನ್ನು ಹುಡುಕಿಕೊಂಡು, ತಾವು ಮಲಗಿದ್ದಲ್ಲಿಗೆ ಬಂದ ಪೋಲೀಸಿನವನ ನೆನಪಾಯಿತು. ಹಾಗೇ ಆದಿನ ತನ್ನ ಗೆಳೆಯರು "ಕಣ್ಣ ನಿನ್ಗೇನೋ ಗಾಸಾರ ಕಾದೈತೆ. ನಿನ್ನೆಸ್ರು ಎಲ್ಡು ಮೂರ್ಸಲ ಏಳ್ಕೊಂಡೋದ' ಎಂದು ಎಚ್ಚರಿಸಿದುದೂ ನೆನಪಿಗೆ ಬಂತು. ಅಂದಿನಿಂದಲೂ ಆ ಹೆದರಿಕೆ ಅವನ ಹೃದಯದಲ್ಲೊಂದು ಕಡೆ ಇದ್ದೇಇತ್ತು. ಈಗ ಅದು ಇಂದ್ರಜಾಲದ ಭೂತದಂತೆ ನೆಲದಿಂದ ನೀಲಿಯವರೆಗೆ ಬೆಳೆಯಿತು.

"ಹೂ" ಉಸಿರು ಕಟ್ಟಿದವನಂತೆ ಕಣ್ಣ ಉತ್ತರಕೊಟ್ಟ.

"ನಿನ್ತಂಗಿ... ಅವಳ್ಹೆಸರೇನು ?"

"ಇಂದೀ...."

"ಚೆನ್ನಾಗಿದಾಳೇನೋ ಅವಳು."

ಇವನಿಗೇಕೆ ಇಂದಿಯ ವಿಚಾರ. ತನ್ನ ಜೊತೆಯಲ್ಲಿದ್ದಳೆಂದು. ಅವಳನ್ನು ಹಿಡಿದುಕೊಂಡುಬರುತ್ತಾರೆಯೋ? ಪೋಲೀಸರ ಕೈಯ್ಯಲ್ಲಿ, ಇಂದಿ! ಕಲ್ಪನೆಗೇ ಕಂಗೆಟ್ಟುಹೋದ ಕಣ್ಣ

"ಅನ್ಯೇನೂ ತಪ್ಮಾಡ್ಲಿಲ್ಲ. ನಾಸ್ಸಿಕ್ಕಿದೀನಲ್ಲ. ಬೇಕಾದ್ರೆ ನನ್ನ ಸೂಲಿಕ್ಹಾಕ್ಬಿಡಿ. ನಿಮ್ತ್ರ ನಮ್ರ್ಸಕ್ಕೆ ಅನಳ್ತ್ಹ್ಯೆಲೆ ಮಾತ್ರ ಕೈಸಾಸ್ಬೇಡಿ. ಅರೀಮೋಳು. ಒಂದೇಟು ಬಿದ್ರೆ ಸತ್ತೇಹೋಯ್ತಾಳೆ" ಎಂದು ಅಂಗಲಾಚಿದ ಕಣ್ಣ.

"ನಿನ್ತಂಗೀ ಮೇಲೆ ಅಷ್ಟು ಪ್ರೀತಿ ಇದ್ರೆ, ಈ ಕಸಬಿಗೆ ಯಾಕೆ ಇಳಿದೆ?"

"ನಾನೇನೂ ತಪ್ಮಾಡ್ಲಿಲ್ಲ."

"ಹಣ್ಣು ಕದಿಯೋದು ತಪ್ಪಲ್ವೆ? ನಿನ್ನೊಂದ್ಮಾತು ಕೇಳ್ತೀನಿ ನಿಜ ಹೇಳ್ತೀಯಾ?"

"ಹೂ"

"ನಿನ್ತಂಗಿ ಆಣೇಗೂ?"

"ನನ್ನಿಂದಿ ಆಣೇಗೂ ನಾನು ಸುಳ್ಳೇಳಾಕಿಲ್ಲ. ಎಂಗಿದ್ರು ಇಡಕೊಂಡೋಗ್ತೀರ. ಸುಮ್ಸುಮ್ನೆ ಕಳ್ಳ್ರಂದ್ರು, ತಿಳ್ದೂತಿಳ್ದೂ ನಾನ್ಯಾಕೆ ಸುಳ್ಳೇಳ್ಲಿ?"

"ಹಾಗಾದರೆಸರಿ. ನೀನಿವತ್ತು ಕಳ್ಳತನ ಮಾಡಲಿಕ್ಕೆ ಬಂದಿದ್ದೆಯಾ? ನೀನು ಸುಳ್ಳು ಹೇಳಿದರೆ ನನಗೆ ಗೊತ್ತಾಗುತ್ತೆ."

"ನನ್ತಂಗಿ ಆಣೆ ಇಟ್ಟೆಲ್ಲಾ. ನಾನು ಕಳ್ತನಕ್ಕೆ ಬಂದಿರ್ಲಿಲ್ಲ. ನಮ್ಮಿಂದೀಗೆ ಜರಾ ಬಂದು ಸೇತ್ಗಾಗಿದ್ಲು. ಎಂದೂ ಇಲ್ದೋಳು ಇವತ್ತು ಇಣ್ಣಾ ಅನ್ಬೇಕು ಅಂದ್ಲು. ಅದ್ಕಾಗಿನ್ನ ಆರ್ಸಾಕಿತ್ತು. ಇಣ್ತಾರೋನಾಂತ ಬಂದೆ. ಆನಸ್ತಗನ ಬಾಯಾಗೆ ಅರ್ಸ್ತಸಿಕ್ದೆ. ಅಣ್ಣೂ ಕೊಡಲಿಲ್ಲ, ಪೋಲೀಸ್ಗೂ ಕೊಟ್ಟೆಟ್ಟ."

"ನಿನ್ನ ಮಾತು ಯಾರಾದರೂ ನಂಬ್ತಾರೇನೋ ಕಣ್ಣಾ?"

"ನಂಬಾಕಿಲ್ಲ. ನಂಗೊತ್ತೈತೆ. ಯಾರಾದ್ರೂ ನಂಬಾಕೆ ನಾನೇನು ದೊಡ್ಮನುಸ್ನಾ. ಬೇವಾರ್ಸಿ ಬಡ್ಡಿಮುಗ ನಾನು. ಅಪ್ಪ ಅಮ್ಮ ಇಲ್ದೋನು.

ಅದ್ಕೆ ಕಂಡೋರೆಲ್ಲಾ ಒದೀತಾರೆ. ಏನೇಳ್ದ್ರು ಸುಳ್ಳೂಂತಾರೆ. ಅದ್ಕೆ ನಾನೇನ್ಮಾಡ್ಲಿ."

ಪೋಲೀಸಿನವನು ಕತ್ತಲಲ್ಲಿ ಕಣ್ಣನ ಕೆದರಿದ ತಲೆಗೂದಲನ್ನು ನೇವರಿಸಿದ. ಅವನ ಹಸ್ತಸ್ಪರ್ಶದಿಂದ ಕಣ್ಣ ಹೃದಯದಲ್ಲಿ ಏನೊ ಆದ ಹಾಗಾಗಿ, ಗಟ್ಟಿಯಾಗಿ ಅಳಲಾರಂಭಿಸಿದ.

"ಏ, ಸುಮ್ನಿರು" ಎಂದು ಗದರಿಸಿದ ಅವನು. ಕಣ್ಣ ಹೆದರಿ ತಟಕ್ಕನೆ ಅಳು ನಿಲ್ಲಿಸಿಬಿಟ್ಟ. ಸ್ವಲ್ಪಹೊತ್ತು ಪೋಲೀಸಿನವನು ಏನೂ ಮಾತಾಡಲಿಲ್ಲ. ಕಣ್ಣನೂ ಸುಮ್ಮನೆ ಕುಳಿತಿದ್ದ.

"ನಿನ್ನಂತೋರ್ನ ನಾನು ಬಾಳ ಜನ ಹುಡುಗರ್ನ ಕಂಡಿದೀನಿ. ಇವತ್ತಲ್ಲಾ ನಾಳೆ, ಎಲ್ಲಾರೂ ಜೈಲಿಗೆ ಹೋಗೋರೆ. ಅದು ನಿನ್ನ ತಪ್ಪಲ್ಲ. ನಿಮ್ಮ ಕಸುಬಿನ ತಪ್ಪು. ಬಿಟ್ಟಿ ಕೂಳು ತಿಂದು ಬೆಳೆದರೆ, ಅದು ಕಲಿಸೋದು ಕಳ್ಳತಾನಾನೇ?"

"ಹೊಟ್ಗಿಲ್ದೋರು ನಾವು ತೊಟ್ಟೇಲಿ ತಿನ್ದೆ ಮತ್ತೇನ್ಮಾಡಬೇಕು? ಯಾರಾದ್ರೂ ಕರದಿಕ್ತಾರ ನಮ್ಗೆಲ್ಲಾ"

"ಯಾರಾದರೂ ಏಕೆ ಕೊಡಬೇಕು ನಿನಗೆ? ಏನು ಕೇಡಾಗಿದೆ ನಿನಗೆ? ಕೈಕಾಲು ಗಟ್ಟಿಯಾಗಿಲ್ವಾ. ದುಡಿಯೋಕಾಗಾಕಿಲ್ವ." ಒಂದು ಗಳಿಗೆ ಇದ್ದಕ್ಕಿದ್ದಂತೇ ಮಾತು ನಿಲ್ಲಿಸಿ, ಥಟಕ್ಕನೆ ಕೇಳಿದ "ನಿನ್ನ ಸ್ಟೇಷನ್ನಿಗೆ ಕರೆದುಕೊಂಡುಹೋದ್ರೆ ಏನಾಗುತ್ತೆ ಗೊತ್ತೆ?"

"ಹೂ, ಸ್ಟೇಷನಲ್ಲಿ ಕೂಡ್ಕೊಂಡು ಚೆನ್ನಾಗಿ ಒದೀತಾರೆ...."

"ಆಮೇಲೆ?"

"ಜೈಲ್ಗಾಕ್ತಾರೆ."

"ಹೂ. ಜೈಲಿಗೆ ಹಾಕ್ತಾರೆ. ನೀನೆಂದಾದರೂ ಜೈಲಿಗೆ ಹೋಗಿದೀಯಾ?"

"ಇಲ್ಲ."

"ಅದರ ವಿಷಯ ನಿನಗೆ ಗೊತ್ತಿಲ್ಲ ಕಣ್ಣ. ಒಂದ್ಸಲ ಜೈಲಿಗೆ ಹೋದೋರು ಮತ್ತೆ ಮತ್ತೆ ಜೈಲಿಗೆ ಹೋಗ್ತಾ ಇರೋದೆ. ತೊಟ್ಟಿಕೂಳು

ಮೈಗಂಟದಂತೆ, ಜೈಲಿನಲ್ಲಿರೋದು ಮೈಗೆ ಒಂಟಿಹೋಗುತ್ತೆ, ಎರಡುಸಲ ಆಯಿತೂಂದ್ರೆ. ನಿನ್ನಂಥೋರು ಎಷ್ಟು ಜನಾನ ನಾನು ನೋಡಿದೀನಿ ಕಣ್ಣ. ಮೊದಲು ಸಲ ತಿಳಿದೋ, ತಿಳಿಯದೆಯೋ, ತಪ್ಪು ಮಾಡಿಯೋ, ಮಾಡದೆಯೋ ಜೈಲಿಗೆ ಹೋಗುತ್ತಾರೆ. ಒಂದೆರಡು ಸಲ ಹಾಗಾದ್ರೆ, ಆಮೇಲೆ ಜೈಲಿನ ಅನ್ನವೇ ರುಚಿಯಾಗಿ, ಹೊರಗೆ ಬಂದ್ರೂ, ಜೈಲಿಗೆ ಹೋಗುವ ದಾರಿಯನ್ನೇ ಹುಡುಕುತ್ತಾರೆ. ಒಂದುಸಲ ಕದ್ದ ಕೈ ಹತ್ತು ಸಲ ಕದಿಯುತ್ತೆ. ಕಳ್ತನ ಕಲಿಯೋದು, ಹೆಂಡಾ ಕುಡಿಯೋದು ಅಭ್ಯಾಸಾ ಮಾಡೋದೂ ಎರಡೂ ಒಂದೆ. ಒಂದುಸಲ ಬಂದ್ರೆ ಬಿಡೋ ಕಾಗೋದಿಲ್ಲ.

"ಯಾಕೆ ?"

"ನೀನೀಗ ದುಡಿಯೋದು ಬಿಟ್ಟು, ತೊಟ್ಟ ಅನ್ನ ಯಾಕೆ ತಿನ್ನಿ ಹೇಳು. ಕಷ್ಟ ಇಲ್ದೆ ಸಿಕ್ತದೆ ಅಂತ ಅಲ್ವೆ. ಅದೂ ಹಂಗೇ. ನೀನು ಕಷ್ಟಪಡದೆ, ಕಂಡೋರು ದುಡಿದದ್ದನ್ನ ಲಪಟಾಯಿಸಿ ಮಜಾಮಾಡೋದು ಸುಖ ಅಲ್ವೆ. ಒಂದು ದಿನ ಕದ್ದರೆ, ನಾಲ್ಕುದಿನ ಸುಖವಾಗಿರಬಹುದು ಅಂತ. ಆದ್ರೆ ಆ ಫಜೀತಿ ಮನುಷ್ಯನಾಗಿ ಹುಟ್ಟಿದವನಿಗೆ ಬೇಡ. ಒಂದು ಸಲ ನಮ್ಮ ದಫ್ತರಿನಲ್ಲಿ ದಾಖಲಾದರೆ, ಆ ಮನುಷ್ಯನ ಹಣೆಬರಹ ಮುಗಿದಂತೆಯೇ. ಎಲ್ಲಿ ಸಿಕ್ಕಿದರಲ್ಲಿ ಒದೀತೀವಿ, ಬೈಯ್ತೀವಿ. ನಾಯಿ ಹಾಗೆ ಯಾರ್ಗೂ ಕಾಣ್ದೆ ತಿರುಗಬೇಕಾದ್ದೇ ಒಂದ್ಸಲ ಕಳ್ಳ ಅನಿಸಿ ಕೊಂಡೋನು."

"ಕೆಟ್ದು ಅಂತ ತಿಳಿದೂ ಕಳ್ತನ ಮಾಡ್ತಾರಾ ?" ಅರ್ಥವಾಗದೆ ಕಣ್ಣ ಕೇಳಿದ.

"ಮದ್ದಿಕ್ಕಿ ಜನರನ್ನು ಕೊಲ್ಲೋದು ಕೆಟ್ಟದಲ್ವಾ ?"

"ಹೂ."

"ಅದು ಕೆಟ್ಟದೂಂತ ದಿಳಿದ್ರೂ, ಕಲಿತ ಮೇಲೆ ಅದು 'ಅವರಿಗಿಡು, ಇವರಿಗಿಡು, ನಿನ್ನ ಗಂಡನಿಗಿಡು, ಮಕ್ಕಳಿಗಿಡು' ಅನ್ನುತ್ತಂತೆ ಆ ವಿದ್ಯೆ. ಕಳ್ತನಾನೂ ಹಾಗೇ. ಒಂದ್ಸಲ ಮಾಡಿದ್ರೆ, 'ಆ ಮನೇಲಿ ಮಾಡು, ಈ

ಮನೇಲಿ ಮಾಡು' ಅನ್ನುತ್ತೆ. ಅದಕ್ಕೆ ಆ ವಿದ್ಯೆ ಕಲೀಬಾರದು. ದುಡೀದೆ, ಸಿಕ್ಕಿದ ಅನ್ನ ತಿನ್ನುತ್ತಿದ್ದರೆ, ಸೋಮಾರಿತನ ಬರುತ್ತೆ. ಸೋಮಾರಿತನ ಏನೂ ಕೆಲಸ ಇಲ್ಲದೆ ಹೋದರೆ ಕಳ್ಳತನ ಮಾಡು ಅನ್ನುತ್ತೆ. ಅದಕ್ಕೆ ಮೈನ ದುಡಿಸಬೇಕು. ತಿನ್ನೋ ಅನ್ನಾನ ಗೆಯ್ದು ತಿನ್ನಬೇಕು ಕಣ್ಣ. ನೀನೇನು ನಾಯೀನ? ಯಾರ್‍ಯಾರೋ, ಅವರಿಗೇನು ರೋಗ ಇರ್‍ತದೋ ಅವರ ಎಂಜಲೆಲ್ಲಾ ತಿನ್ನೋಕೆ? ನಾಯಿಗೆ ಯಾರಾದ್ರೂ ಗೌರವ ಕೊಡ್ತಾರ? ನಾಯಿ ಹಂಗೆ ಇರೋರ್‍ಗೂ ಅಷ್ಟೆ. ಯಾರೂ ಗೌರ್‍ವ ಕೊಡೋಲ್ಲ. ಬೈಯ್ತಾರೆ, ಒದೀತಾರೆ. ಇಷ್ಟೆಲ್ಲ ಅನುಭವಿಸೋಕಿಂತ ಮೂಟೆ ಹೊತ್ತು ಜೀವನ ಮಾಡೋದು ಮೇಲಲ್ವಾ? ದುಡಿದರೆ ಕಾಸು ಸಿಗುತ್ತೆ. ಇವತ್ತಿನ ಹಾಗೆ ಯಾರಾದ್ರೂ ಮಾತಾಡಿದರೆ ಎಣಿಸ್ಕೋ ಅಂತ ಮುಖದ್ಮೇಲೆ ಕಚ್ಚಿಕೊಳ್ಳೋ ಹಾಗೆ, ಕಾಸು ಎಸೀಬಹುದು. ನನ್ನ ಮಾತು ಅರ್ಥವಾಯಿತೆ ಕಣ್ಣಾ?"

"ಹೂ" ಮಂತ್ರಮುಗ್ಧನಂತೆ ಅವನ ಮಾತನ್ನು ಕೇಳುತ್ತಿದ್ದ ಕಣ್ಣ ಹೇಳಿದ.

"ಏಳು ಹಾಗಾದರೆ ಹೋಗೋಣ" ಎಂದ ಅವನು. ಕಣ್ಣನನ್ನು ಕವಿದ ಇಂದ್ರಜಾಲ ಹಿಡಿದುಹೋಯಿತು. ಪೋಲೀಸಿನವನು ತನ್ನಲ್ಲಿ ಅಷ್ಟು ವಿಶ್ವಾಸದಿಂದ ಆಡಿದ ಮಾತು ಕೇಳಿ, ಅವನ ಹೃದಯದಲ್ಲೊಂದು ಆಸೆ ಮೂಡಿತು.

"ಅಯ್ಯಾ ನೀವು ಕ್ವಾಪ ಮಾಡ್ಕೊಳಲ್ಲಾಂದ್ರೆ ಒಂದ್ಮಾತು ಕೇಳ್ತೀನಿ."

"ಏನು?"

"ಎಂಗಾದ್ರೂ ಜೈಲಿಗೆ ಕರಕೊಂಡೋಗ್ತೀರಾ? ಬಡೋದು ಎಷ್ಟು ದಿನ ಆಗ್ತದೋ ಏನೋ. ಒಂದ್ಸಲ ನಮ್ಮಿಂದೀನ ತೋರಿಸ್ತೀರ. ಆಮೇಲೇನಾರ ಮಾಡ್ರಿ" ಹೃದಯವನ್ನೇ ತೆಗೆದು ಹರವಿದಂತಿತ್ತು ಅವನು ಬೇಡಿದ ರೀತಿ.

“ಥೂ ಮಂಕುಬಡ್ಡಿಮಗನೆ. ನಾನೇಳಿದ್ದು ನಿನಗರ್ಥ ಆಗ್ಲಿಲ್ವೆ. ನಿನ್ನ ಜೈಲಿಗೆ ಹಿಡುಕೊಂಡು ಹೋಗೋಲ್ಲ. ಬಿಟ್ಟಿಟ್ಟಿದೀನಿ. ನಾಳೆನಿಂದ ಎಲ್ಲಾದರೂ ಕೆಲಸ ಮಾಡೋ ಮನಸ್ಸು ಮಾಡು. ಮತ್ತಿಂಥ ಫಜೀತಿಗೆ ಸಿಕ್ಕಿಕೋಬೇಡ.”

ಆ ಮಾತು ಕೇಳಿದವನೇ ಕಣ್ಣ ಕರಗಿದ ಮೇಣದಂತೆ ಪೋಲೀಸಿನವನ ಕಾಲಿನ ಮೇಲೆರಗಿದ. ಬೂಟುಗಾಲುಗಳನ್ನು ತಬ್ಬಿ ಮುತ್ತಾಡಿದ.

“ಲೇ—ಇನ್ನ. ಬೂಡ್ಸು ಕೆಡ್ತದೆ ಏಳೋ. ನೆಟ್ಟಗೆ ಓಡು ಈಗ. ಇನ್ನೊಂದ್ಸಲ ಯಾರ ಕೈಗೂ ಸಿಗಬಾರದು”

“ಅಯ್ಯಾ, ನನ್ಮ್ಯಾಲೆ ಬಾಳ ದಯಾ ಮಾಡಿದ್ರಿ. ಮರೆಯಾಕಿಲ್ಲ.” ಯಾಕಯ್ಯಾ. ಎಲ್ಲಾರಂಗೆ ನಿಮ್ಗೂ ನನ್ನ ಕಂಡ್ರೆ ಹಿಡಕಂಡು ಮಡಗ್ಬೇಕು ಅನ್ಸಾಕಿಲ್ವಾ ?”

“ಊಹು”

“ಯಾಕೆ ?”

“ಎಷ್ಟುಕ್ಕೇಳ್ತೀಯೋ? ನಿನ್ನ ಹೆಸರಿನೋನೆ, ನಿನ್ನ ವಯಸ್ಸಿನೋನೇ ನನಗೂ ಒಬ್ಬ ಮಗಾ ಇದ್ದ. ಸತ್ತೋದ, ಹಾಳಾದೋನು. ಇನ್ನ ಇಲ್ಲಿಂದ ಹೋಗ್ತೀಯೋ ಒದೀಬೇಕೋ” ಮೃದುವಾಗಿ ಮಾತಾಡಿದ ಅವನು ತಟಕ್ಕನೆ ಕೆರಳಿ ಹೇಳಿದ. ಕಣ್ಣ ಬಿಲ್ಲಿನಿಂದ ಬಿಟ್ಟ ಬಾಣದಂತೆ ಓಡಿದ.

ಅಷ್ಟುದೂರ ಹೋಗುತ್ತಿದ್ದ ಕಣ್ಣನನ್ನು, ಏನೋ ಜ್ಞಾಪಿಸಿಕೊಂಡು ಕೂಗಿದ ಆತ—“ಲೇ ಕಣ್ಣಾ” ಮತ್ತೇನೋ ವಕ್ರಿಸಿತೆಂದು ಹೆದರುತ್ತಲೇ ಬಂದ ಕಣ್ಣ. “ಏನಯ್ಯಾ ?”ಎಂದು ಕೇಳಿದ.

“ನಿನ್ತಂಗೀಗೆ ಹಣ್ಣ ತಗೊಂಡು ಹೋಗಾಕಿಲ್ವಾ. ಮತ್ತೇಹೋಯ್ತು. ಬೆಪ್ಪನ್ಮಗನೆ.” ಎಂದು, ತನ್ನ ಜೇಬಿನಲ್ಲಿದ್ದ ಅಂಗಡಿಯವನು ಕೊಟ್ಟ ಹಣ್ಣುಗಳನ್ನು ತೆಗೆದು ಕಣ್ಣನಿಗೆ ಕೊಟ್ಟ ಆತ.

“ನಿಮ್ಮಗೀಗೆ ಬ್ಯಾಡ್ವಾ ?” ಎಂದು ಕೇಳಿದ ಕಣ್ಣ.

“ಇರಲಿ ತಗೊಂಡು ಹೋಗೋ ಸುಮ್ನೆ .... ಅಂದ ಹಂಗೆ ಕಣ್ಣ, ನಿನ್ತಂಗೀ ಹೆಸರೇನು ?”

"ಇಂದೀ ಇಂದೀ" ಎಂದು ಕೂಗಿ ಹೇಳುತ್ತಾ, ಎರಡೂ ಕೈಯ್ಯಲ್ಲಿ ಹಣ್ಣು ಹಿಡಿದು ಓಡಿದ ಕಣ್ಣ.

ತನ್ನ ಬಾಳ ದಿಗಂತದ ಮೇಲೆ ಕವಿದ ಕಾರಾಗೃಹವಾಸದ ಕರಾಳ ಛಾಯೆಯಿಂದ ಬಿಡುಗಡೆಯಾಗಿ ಬಂದ ಕಣ್ಣ. ಆ ಗಳಿಗೆಯಲ್ಲಿ ಅವನ ಹೃದಯದಲ್ಲಿ, ಅವನ ಕರುಣೆ ಹರ್ಷದ ಹೊನಲನ್ನು ಹರಿಯಿಸಿದ್ದಿತು. ಆದರೆ ಏರಿಬಂದ ಹರ್ಷದ ಉಕ್ಕು, ಸ್ವಲ್ಪ ಹೊತ್ತಿನ ಬಳಿಕ ಇಳಿದು ಹೋಯಿತು. ಅದು ಇಳಿದುಹೋದಂತೆ ಅವನು ಹೇಳಿದ ಮಾತು ನೆನಪಾಗಿ, ಹಿಂದೊಂದು ಗಳಿಗೆ ಎಷ್ಟು ಹಗುರವಾಗಿತ್ತೋ ಅಷ್ಟೇ ಭಾರ ವಾಯಿತು ಅವನ ಹೃದಯ.

"ನೀನು ನಾಯೀನಾ, ಎಂಜಲು ತಿನ್ನೇಕಾ?" ಮುಳ್ಳಿನಂತೆ ಮುರಿಯುತ್ತಿತ್ತು ಮಾತು, ಅವನ ಮನಸಿನಲ್ಲಿ.

ಹೊಡಸಿಕೊಂಡ ದಣಿವು, ಎಂದಿನಂತೆಯೇ ಹಸಿವು ಅವನನ್ನು ಯಾಂತ್ರಿಕವಾಗಿ ಉಳಿದವರೊಂದಿಗೆ, ಎಂಜಲು ತೊಟ್ಟಿಯತ್ತ ಎಳೆದು ಕೊಂಡುಹೋಯಿತು. ಕವಿದ ಕತ್ತಲಿನಲ್ಲಿ, ಒಂದು ಗಳಿಗೆ ಹಸಿವೊಂದು ವಿನಾ ಉಳಿದಾವುದೂ ನೆನಪಿಲ್ಲದಂತಾಯಿತು ಕಣ್ಣನಿಗೆ. ಎಲ್ಲರಂತೆ ತಾನೂ ಒಂದು ಎಂಜಲು ಹಾಳೆಯನ್ನೆಳೆದುಕೊಂಡು ತಿನ್ನಲು ಕೂತ. ಒಂದು ತುತ್ತು ಗಂಟಲೊಳಗೆ ಇಳಿದಿತು. ಕತ್ತಲಲ್ಲಿ ಹುಡುಗರೊಂದಿಗೇ, ತೊಟ್ಟಿಗೆ ನುಗ್ಗಿದ ನಾಯಿಯೊಂದನ್ನು, ಯಾರೋ ಅಟ್ಟಿದುದರಿಂದ, ಅದು ಕುಯ್ಗುಡುತ್ತಾಹೋಗಿ, ಅಷ್ಟುದೂರದಲ್ಲಿ ನಿಂತು ಬಗುಳಲಾರಂಭಿಸಿತು. ಅದರ ಬಗಳುವಿಕೆಯನ್ನು ಕೇಳಿದ ಕೂಡಲೇ, ಬಾಯೊಳಗಿದ್ದ ಅನ್ನ ಕಹಿಯಾಗಿಹೋಯಿತು. ಉಗಿದುಬಿಟ್ಟ. ಅವನ ಪಕ್ಕದಲ್ಲಿ ಕುಳಿತು, ತಾನೂ ಒಂದು ಎಂಜಲುಹಾಳೆಯಿಂದ ಆಯ್ದು ತಿನ್ನುತ್ತಿದ್ದ, ಇಂದುವನ್ನು ಕೇಳಿದ

"ಇಂದೀ ಸಂದಾಕ್ಕೈತಾ ಅದು?" ಅವನ ಧ್ವನಿಯಲ್ಲಿ ಅವಳ ಅರಿವಿಗೆ ನಿಲುಕದ ಬಿಗಿತವಿತ್ತು,

"ಹೂ" ಎಂದು ತಲೆಯಾಡಿಸಿದಳು ಅವಳು, ತೃಪ್ತಿಯಿಂದ ಊಟ ಮಾಡುತ್ತಾ, ಕಣ್ಣ ಸ್ವಲ್ಪಹೊತ್ತು ಮತ್ತೆ ಅವಳನ್ನು ಮಾತಾಡಿಸದೆ ನೋಡುತ್ತಿದ್ದ.

"ಯಾರ್‍ಯಾರ ಎಂಜ್ಲೋ, ಅವರಿಗೆ ಎಂಥೆಂಥ ರೋಗಾನೋ...."

ಇಂದು, ಜಗತ್ತನ್ನೇ ಮರೆತು ಉದರಾರಾಧನೆಯಲ್ಲಿ ತಲ್ಲೀನಳಾಗಿದ್ದಳು. ಆ ಮಾತು ನೆನಪಿಗೆ ಬಂದು, ಊಟ ಮಾಡುತ್ತಿದ್ದ ತಂಗಿಯನ್ನು ಕಂಡು ಕಣ್ಣನ ಮೈ ಗಡಗಡ ನಡುಗಿತು. ತಟಕ್ಕನೆ ಅವಳ ಕೈಯ ಎಲೆಯನ್ನು ಕಿತ್ತುಕೊಂಡ.

"ಅಣ್ಣಾ ಅಸ್ವಾಗ್ತದೆ. ನಂಗದು ಬೇಕು" ಎಂದಳು ಇಂದು. ಅವಳ ಮಾತು ಕೇಳಿದ ಕೂಡಲೇ ಅವಳ ಹಸಿವು ಭೂತಾಕಾರವಾಗಿ ಅವನ ಕಣ್ಣೆದಿರು ನಿಂತಿತು. ಅವಳಿಗೆ ಅನ್ನ ಹಾಕುವ ದಾರಿಯಾವುದು? ಮಾತನಾಡದೆ ಕಣ್ಣ, ಎಲೆಯನ್ನು ಅವಳ ಕೈಗೆ ಕೊಟ್ಟ. ಅವನ ಕಣ್ಣಿನಿಂದ ನೀರು ಧಾರಾಕಾರವಾಗಿ ಹರಿಯುತ್ತಿರುವುದನ್ನು ಅವಳು ಕಾಣಲಿಲ್ಲ. ಅವಳು ಊಟ ಮಾಡುವುದನ್ನು ನೋಡಲಾಗದೆ ಕಣ್ಣ ಮೊಳಕಾಲಲ್ಲಿ ಮುಖ ಹುದುಗಿಸಿ ಗೋಡೆಗೆ ಒರಗಿಕೂತ.

ಪೋಲೀಸಿನವನ ಅನಿರೀಕ್ಷಿತ ಕರುಣೆ, ಅವನ ಬಾಳಿನಲ್ಲಿ ಅವನರಿಯದ ಹಾಲಾಹಲವನ್ನು ಮೂಡಿಸಿ, ಅವನನ್ನು ಬಳಲಿಸುತ್ತಿತ್ತು. ಸುಮ್ಮನೆ ಕಡೆದ ವಿಗ್ರಹದಂತೆ ಕುಳಿತಿದ್ದ.

ಹೋಟಲಿನ ಹಿತ್ತಲ ಬಾಗಿಲು ತೆರೆದ ಕರ್‍ರ್ರೆಂಬ ಸದ್ದಾಯಿತು. ಕಣ್ಣ ಕುಳಿತಿದ್ದಂತೆಯೇ ತಲೆಎತ್ತಿ ನೋಡಿದ. ಹೋಟಲಿನ ಲೋಟ ತೊಳೆಯುವ ಆಳು, ತೊಟ್ಟಿಯಿಂದ ಆಯುತ್ತಿದ್ದವರನ್ನು ನೋಡುತ್ತಿದ್ದವನು, ಸುಮ್ಮನೆ ಗೋಡೆಗೊರಗಿ ಕುಳಿತ ಕಣ್ಣನನ್ನು ನೋಡಿ 'ಲೇ, ಇಲ್ಬಾರೋ' ಎಂದ.

"ಏನು?" ಎಂದ ಕುಳಿತಲ್ಲಿಂದಲೇ ಕಣ್ಣ. ಏಳಲು ಕೂಡಾ ಅವನಿಗೆ ಶಕ್ತಿ ಇದ್ದಂತಿರಲಿಲ್ಲ.

"ಕೂಗಿದ್ರೆದ್ದು ಬರಕಾಗಲ್ವೇನೋ, ನನ್ಮಗನೆ. ಬಿಟ್ಟ ಕೂಳ್ಬಿದ್ರೆ ಸ್ಟೈಯಂಗಾಡಸ್ತದೆ ನಿನ್ಗೆ. ಅಲ್ಯಾಕ್ತಕ್ಕಂಡೇನು ಕಡೀತಿದೀಯಾ? ಎದ್ಬಂದು

ಎಲ್ಲ ಕೊಡ ನೀರಾದ್ರೂ ಸೇದ್ಕೊಟ್ಟು ಹೋಗು." ಹೋಟೆಲಿನ ಹುಡುಗ ಕೂಗಿದ, ಅಧಿಕಾರ ವಾಣಿಯಿಂದ.

ಇಷ್ಟು ದಿನವೂ ಅವನು ಈ ಹುಡುಗರಿಂದ ಆಗಾಗ ತನಗೆ ಬೇಕಾದ ಕೆಲಸವನ್ನೇನಾದರೂ ಮಾಡಿಸಿಕೊಳ್ಳುತ್ತಿದ್ದ. ಸಾದೆ ಸೀಳಿ ಕೊಡುವುದು, ಬೇಕಾದಾಗ ಒಂದೆರಡು ಬಿಂದಿಗೆ ನೀರು ಸೇದುವುದು, ಅವನ ಕಾಲಿಗೆ ಎಣ್ಣೆ ತಿಕ್ಕುವುದು ಮೊದಲಾದ ಸೇವೆಯನ್ನು ಹುಡುಗರು ಮಾಡುತ್ತಿದ್ದರು. ಅದು ತಪ್ಪೆಂದಾಗಲಿ, ಅದನ್ನು ಪ್ರತಿಭಟಿಸಬೇಕೆಂದಾಗಲಿ, ಅವರಿಗೆ ಎಂದೂ ತೋರಿರಲಿಲ್ಲ.

ಆದರೆ ಈದಿನ ಅದೇಕೋ ಕಣ್ಣನಿಗೆ, ಅವನ ಅಧಿಕಾರವಾಣಿ ಅಸಹ್ಯವಾಗಿ ತೋರಿತು. ಅವನೊಳಗೆ ಯಾವುದೋ ಶಕ್ತಿ ಕೆರಳುತ್ತಿತ್ತು. ಅದು ಅವನನ್ನು ಕೇಳಿತು. "ನೀನೇಕೆ ಅವನ ಸೇವೆ ಮಾಡಬೇಕು ? ಆ ಮಾತಿಗೆ ಉತ್ತರ ಕೊಡಲಾರದೆ, ಮೌನವಾಗಿ ಕುಳಿತಿದ್ದ ಕಣ್ಣ.

"ಇತ್ಬಾರ್ಲೇ ಎಷ್ಟ್ಸಲ ಕೂಗೋದು ?

"ನಾನ್ಬರಾಕಿಲ್ಲ, ಬೇಕಾದ್ರೆ ನೀನ್ಸೇದ್ಕೊ " ಎಂದ ಕಣ್ಣ.

"ಲವಡಿ ಮಗನೆ, ಆಗ್ಲೆ ಅಷ್ಟಕ್ಬಂಡ್ಬುಟ್ಯಾ ಎಂಜಲೆಲೇಲಿ ತಿನ್ನೋದು ಮರತೋಯ್ತುಂತ ಕಾಣಸ್ತದೆ "

"ಯಾಕೋ ಬಾಳ ಬೊಯ್ತಿ. ನಿಂಗೆ ಎಂಜಲು ಲೋಟ ತೊಳಿಯೋದು ಮರತೋಯ್ತಾ ?" ಕಣ್ಣ ಕೆರಳಿ ಪ್ರತ್ಯುತ್ತರ ಕೊಟ್ಟ. ಆ ಸಂಜೆ ಪೋಲೀಸಿನವನ ಕರುಣೆಯ ಅಮೃತವರ್ಷದಲ್ಲಿ ಮರೆಯಾದ, ಅವನ ಹೃದಯದಲ್ಲಿ ಜಗತ್ತಿನ ಮೇಲೇ ಹುಟ್ಟಿದ ಕ್ರೋಧ, ಕೆದರಿ ಹೆಡೆಯಾಡತೊಡಗಿತು.

"ಅಲ್ಮುರಿದುಬಿಡ್ತೀನಿ ಬಡ್ಡಿಮಗ್ನೆ. ಎಂಗಂದ್ರಂಗೆ ಮಾತಾಡ್ತೀಯಾ ?" ಎಂದು ಹೋಟಲ ಹುಡುಗ ಕಣ್ಣನ ಮೇಲೆ ಮುಂದುವರಿದ. ಕಣ್ಣ ಮಿಗದ ಬೇಟೆ ತಗಲಿದ ಬೇಟೆಯ ನಾಯಂತೆ, ಎದ್ದುನಿಂತ. ಕಣ್ಣನಿಗೆ ಆದಿನ ಆದುದನ್ನು ಅವನ ಬಾಯಿಂದಲೇ ಕೇಳಿದ ಅವನ ಸ್ನೇಹಿತರು, ಮತ್ತಿಲ್ಲಿ ಏನು ಆಗುವುದೋ ಎಂದು ಹೆದರಿದರು. ಅಷ್ಟಾಗ

"ಏ, ಅವನ್ನಂಟೀಗೋಗ್ಬ್ಯಾಡ ಇವತ್ತು. ನಿಂಗ್ಬೇಕಾದ್ರೆ ನಾನು ನೀರು ಸೇದಿಕೊಡ್ತೀನಿ." ಎಂದ, ಅಡ್ಡಬಂದು.

"ಯಾವಾನಾದ್ರೂ ಇವತ್ತು ನೀರು ಸೇದ್ಕೊಟ್ರೆ, ಅವನೆಣ ವಾಲಿಸ್ತೀನಿ. ಅದೇನು ಕೊಸೀತಾನೋ ಕೊಸೀಲಿ. ಗುರ್ರಂದ್ರೆ ಎದ್ರಿಬಿಡ್ತೀನಿ ಅಂತ ತಿಳ್ಕಂಡವ್ರೇನೋ ಎಲ್ಲಾ. ನಾನೂ ಸುಮ್ನಿರೋಗಂಟೆ ಮನ್ಸ." ಎಂದು, ಕಣ್ಣ ನೀರು ಸೇದಲು ಹೋಗುವೆನೆಂದ ಆರ್ಮ್ಯಗನನ್ನು ತೋಳು ಹಿಡಿದು ಎಳೆದ.

"ನೀನೊಬ್ಬ ಕೆಟ್ಟರೋದು ಸಾಲ್ದೆ, ಎಲ್ಲಾರ್ನೂ ಕೆಡಸ್ತೀಯ?" ಹೋಟಲ ಹುಡುಗ ಕೇಳಿದ.

"ಯಾರ್ನ್ಸಮಾಚಾರ ಕಟ್ಕೊಂಡು ನಿನ್ಗೇನು. ನಿನ್ನ ಚಾಕ್ರಿ ಬೊಗಳೋಗೋ!" ಕಣ್ಣ ಸಿಟಿದು ಉತ್ತರಕೊಟ್ಟ.

ಕಣ್ಣ ಹೀಗೆ ಮಾತನಾಡಿದುದನ್ನು ಅವನೆಂದೂ ಕೇಳಿರಲಿಲ್ಲ. ಅವನಿಗೂ ರೇಗಿತು. ಹತ್ತಿರ ಬಿದ್ದಿದ್ದ ಸೌದೆಯ ಸೀಳನ್ನು ಕೈಲಿಹಿಡಿದು, ಹಿತ್ತಲಬಾಗಿಲಿನಿಂದ ಬೀದಿಗೆ ಇಳಿದ. ಚೆನ್ನಾಗಿ ತಿಂದು ಬೆಳೆದ ಅವನ ತೋಳೂ ಜಗಳಕ್ಕೆ ಕರೆಯುತ್ತಿತ್ತು.

"ನಿಮ್ಗಲ್ಲಿ ತಿನ್ನಾಕೆ ಬಿಟ್ಟಿದ್ದು ತಪ್ಪಾಯ್ತು. ಹೆಚ್ಕಂಡ್ಬಿಟ್ಟೆ. ಇವತ್ಮಾಡ್ತೀನಿ ತಾಳು"

"ಹೋಗೋ, ತೊಟ್ಟೆ ನಿಮ್ಮಪ್ಪಂದಲ್ಲ, ನೀನೇನು ದುಡ್ಡು ತಂದಾಕ್ತಿಯಾ, ಇದ್ರಾಗೆ."

"ಹೋಟಲ ಆಳು ಸೌದೆಯ ಸೀಳನ್ನು, ಗುರಿ ನೋಡಿ, ರೊಯ್ಯೆಂದು ಕಣ್ಣನಮೇಲೆ ಬೀಸಿದ. ನಿಂತಿದ್ದ ಕಣ್ಣ, ಬೀಸಿ ಬರುವ ಕಟ್ಟಿಗೆಗೆ ಸಿಗದೆ, ತಟ್ಟನೆ ಕುಳಿತು, ಹಾಗೇ ಆ ಹೋಟಲವನ ಮೇಲೆ ಕುಪ್ಪಳಿಸಿದ. ಅವನ ಮೇಲೆ ಬಿದ್ದ ಜೋರಿಗೆ, ಹೋಟಲ ಹುಡುಗ ನೆಲಕ್ಕುರುಳಿದ. ಕಣ್ಣ ಅವನ ಎದೆಯನ್ನು ಹತ್ತಿಕುಳಿತು, ಅವನ ಕುತ್ತಿಗೆಯನ್ನು ಹಿಡಿದು—

"ಇನ್ನೊಂದ್ಸಲಾ ಬೊಯ್ತಿಯಾ ನನ್ಮಗನೆ. ತೊಟ್ಟೇಲಿ ತಿನ್ನೋರೂಂತ ಎಲ್ಲಾ ದೌಲತ್ಮಾಡ್ತೀರಾ?"

ಆದುವರೆಗೂ ಅವನೊಳಗೆ ಕಟ್ಟಿ ಮೊರೆಯುತ್ತಿದ್ದ ರೋಷ, ರೇಗಿಸಿದ ಸರ್ಪದಂತೆ ಚಿಮ್ಮಿತು. ಮುಷ್ಟಿಯಿಂದ ಅವನ ಪಕ್ಕೆಗೆ ಗುದ್ದಲಾರಂಭಿಸಿದ. ಅವನ ಕಣ್ಣಿಗೆ ಕೆಳಗುರುಳಿದ ಹೋಟಲು ಹುಡುಗ, ತನ್ನನ್ನು ಅಸಹಾಯಕನನ್ನಾಗಿ ಹೊಡೆದು, ರಕ್ತ ಕಾರಿಸಿದವರ ಪ್ರತೀಕದಂತೆ ಕಂಡ. ಹಿಂದೊಂದು ದಿನ ಅವನನ್ನು ಅಟ್ಟಿಸಿಕೊಂಡು ಬಂದು, ಮೇಲೆ ಹಾರಿದ ನಾಯಿಯ ನೆನಪಾಯಿತು ಕಣ್ಣನಿಗೆ, ಅದೇ ಕ್ರೋಧ ಕವಿದು ಅವನ ಕಣ್ಣು ಕುರುಡಾಯಿತು.

ಉಳಿದವರು ಹಾಗೇ ಬಿಟ್ಟರೆ ಏನಾಗುವುದೋ ಎಂದು ಹೆದರಿ, ಕಣ್ಣನನ್ನು ಎಳೆದುಕೊಂಡರು. ಮಣ್ಣಿನಿಂದೆದ್ದ ಹೋಟಲ ಹುಡುಗ ಗುರುಗುಟ್ಟುತ್ತಾ ಕಣ್ಣನತ್ತ ನೋಡಿದ.

ಸಿಟ್ಟಿನಿಂದ ಬೆಂಕಿಯ ನಾಲಗೆಯಂತೆ ಉರಿಯುತ್ತಿದ್ದ ಕಣ್ಣ—
"ಬರ್ತೀಯಾ ಇನ್ನೊಂದ್ಸಲ"

ಎಂದು ತನ್ನ ತೋಳು ಹಿಡಿದವರ ಕೈಯನ್ನು ಕೊಸರಿದ. ಜೀವಂತ ಜ್ವಾಲೆಯಂತೆ ಉರಿಯುತ್ತಿರುವ ಕಣ್ಣನನ್ನು ಕೆಣಕಲು ಮತ್ತೆ ಅವನಿಗೆ ಧೈರ್ಯವಾಗಲಿಲ್ಲ. 'ಇರ್ಲಿ ನೋಡ್ಕೋತೀನಿ' ಎಂದವನೇ ಒಳಗೆ ಹೋಗಿ ಬಾಗಿಲು ಹಾಕಿಕೊಂಡ.

"ಅದೇನ್ನೋಡ್ಕೋತಾನೋ ನೋಡ್ಕಳ್ಳಿ" ಎಂದು ತಾತ್ಸಾರವಾಗಿ ಬಾಗಿಲಿನತ್ತ ಉಗುಳಿದ ಕಣ್ಣ. ಆ ಕ್ರೋಧದಲ್ಲಿ ಅವನಿಗೆ ಎಲ್ಲವೂ ಮರೆತುಹೋಗಿ, ಹಸಿವು ಕೂಗಿತು. ತೊಟ್ಟಿಯಿಂದ ಎಲೆಯೊಂದನ್ನೆಳೆದುಕೊಂಡು, ತೊಟ್ಟಿಯಲ್ಲಿ ಬಿದ್ದುದನ್ನಾರಿಸಿಕೊಂಡು ತಿನ್ನಲಾರಂಭಿಸಿದ.

"ಕಣ್ಣಾ ಇವತ್ತ್ಯಾಕೊ ನಿನ್ಗಾಸಾರ ಸೆಟ್ಲಿಲ್ಲ. ಹೋತ್ತವ ಎಲ್ಲ ಜಗ್ಗಾನೇ ಆಗ್ತೈತೆ." ಎಂದ ಅರ್ಮುಗ.

"ಇಂಗೆಲ್ಲ ಕ್ವಾಪಾ ಮಾಡ್ಕಾಬಾರ್ದು ಕಣ್ಣಾ. ತೊಟ್ಟೀಲಷ್ಟು ಅನ್ನ ಆಯಾಗಿ ಎಲ್ಡೊತ್ತೂ ಸಿಗ್ತದೆ. ಅದನ್ಯಾಕೆ ಕೆಡಿಸ್ಕೊಬೇಕು." ಎಂದ ಕಂದಸ್ವಾಮಿ.

"ನೀನೂ ಬುದ್ಧಿ ಎಳಾಕ್ಬಂದೇನ್ಲೇ ಕುನ್ನೀ" ಎಂದು ಘರ್ಜಿಸಿ ಕೇಳಿದ ಕಣ್ಣ. ಅವನ ಕಣ್ಣ ಕೂರಾದ ನೋಟಕ್ಕೆ ಕತ್ತರಿಸಿ ಕಂದಸಾಮಿ, ಆರ್ಮುಗನ ಹಿಂದೆ ಸರಿದ.

"ಬೇಷ್ಮಾಡ್ದೆ ಕಣ್ಣ, ಒಂದೊಂದ್ಸಲ ಹಿಂಗ್ತೊಣ್ರೇರಿಸ್ದೆ ಓದ್ರೆ, ನಾವೂ ಮನಸ್ರನ್ನೋದೇ ಮರತೋಯ್ತುದೆ ಈ ಜನಕ್ಕೆ" ಎಂದು ಪಳನಿ ಕಣ್ಣ ಮಾಡಿದುದನ್ನು ಸಮರ್ಥಿಸಿದ.

ಕಣ್ಣನಿಗೆ ಅದಾವುದೂ ಬೇಕಿರಲಿಲ್ಲ. ಕಣ್ಣರಳಿಸಿ ತನ್ನ ತಂಗಿಯನ್ನು ಅರಸಿ "ಇಂದೀ, ಮಲ್ಗಾಕೆ ಓಗಾಣ ಬಾ" ಎಂದು ಕರೆದ. ಅದುವರೆಗೂ ಜಗಳವಾದುದನ್ನು ಗಾಬರಿಯಿಂದ ನೋಡುತ್ತಾ, ಅಣ್ಣನ ಹತ್ತಿರ ಬರಲು ಧೈರ್ಯ ಸಾಲದೆ ದೂರ ನಿಂತಿದ್ದ ಇಂದು, ಅವನು ಕೂಗಿದ ಕೂಡಲೇ ಓಡಿ ಬಂದಳು. ಹತ್ತುವರ್ಷದ ಹುಡುಗಿಯನ್ನು, ಹುಲ್ಲು ಹೊರೆಯಂತೆ ಹೆಗಲಮೇಲೆ ಹಾಕಿಕೊಂಡ ಕಣ್ಣ. ಸಂಜೆಯ ಜಗಳದಲ್ಲಿ ಕಾಲುರಸ್ತೆಯ ಕಲ್ಲಂಚು ತಗಲಿ ನೊಂದ ಬೆನ್ನು ಹೊರಲಾರೆ ಎಂದಿತು. ಹಾಗೇ ಕೆಳಗಿಳಿಸಿ, ಅವಳ ಕೈಹಿಡಿದುಕೊಂಡು ಹೋದ.

ಯಾವ ಯಾವುದೋ ಭಾವನೆಯಲ್ಲಿ ಸಿಲುಕಿ, ಅವನ ಮನಸ್ಸು ಬುಟ್ಟಿಯಲ್ಲಿಟ್ಟ ಹಾವಿನಂತೆ ಬುಸುಗುಟ್ಟುತ್ತಿತ್ತು.

*　　*　　*　　*

ಹೋಟೆಲ ಆಳು, ಹುಡುಗರಮೇಲೆ ಕುದಿಯುವ ನೀರನ್ನು ಎಸೆದು ಮರುದಿನವೇ ತನ್ನ ಹಗೆ ತೀರಿಸಿಕೊಂಡ. ಬಿಸಿನೀರಿನ ಬಾಣಕ್ಕೆ ಬಲಿಯಾಗಿ ನೆಲದಲ್ಲೊರಗಿದ ಇಂದುವನ್ನು ಎತ್ತಿತಂದು ಮಲಗಿಸಿದ ಕಣ್ಣ. ನೋವು ತಡೆಯಲಾರದೆ, ಹೊರಳುತ್ತಿರುವ ಇಂದುವಿನ ನೋವು ಹಿಂಡುವ ಮುಖವನ್ನು ದಿಟ್ಟಿಸಿ ನೋಡಿದ.

ಅಷ್ಟು ವರ್ಷಗಳ ಅವನ ಜೀವನ ಅವನ ಕಣ್ಣೆದಿರು ಮಿಂಚಿತು.

ಒತ್ತಿಹಿಡಿದು, ತಟಕ್ಕನೆ ಕೈಬಿಟ್ಟ ಉಕ್ಕಿನ ಪಟ್ಟಿಯ ಸುರಳಿಯಂತೆ, ಅವನ ಕಣ್ಣು ಕೋರೈಸುವಂತೆ ವೇಗವಾಗಿ, ಅವನ ಬಾಳೆಲ್ಲವೂ ಅವನ ಕಣ್ಣೆದಿರು ಕಂಡಿತು.

ಆ ವೇಗಕ್ಕೆ, ಅದರ ತಾಪಕ್ಕೆ, ಅವನ ತಲೆ ಸುತ್ತುತ್ತಿತ್ತು. ಮಂಜಾದ ಕಣ್ಣಿನಿಂದ, ನರಳುತ್ತಾ ಮಲಗಿದ ಇಂದುವನ್ನು ನೋಡ ತೊಡಗಿದ. ಇಂದು, ಅವನ ತಂಗಿ, ಅವನ ಹೃದಯ, ಕುದಿನೀರಿನ ಬೊಬ್ಬೆಗಳ ಹೊರಲಾಗದ ಉರಿ ಹೊರೆ ಹೊರ್ತಾ ನರಳುತ್ತಿದಾಳೆ. ನಿಕ್ಕರಿನ ಜೇಬಿನಲ್ಲಿದ್ದ ಬೀಡಿಯನ್ನು ತೆಗೆದು ಹೊತ್ತಿಸಿ ಗೋಡೆಗೆ ಒರಗಿಕೊಂಡ.

## ೨೦

ಇಂದು ನೋವಿನಿಂದ ನರಳುತ್ತಿದ್ದಳು. ಅವನ ಹೃದಯವನ್ನೇ ಎಳೆಎಳೆಯಾಗಿ, ಹರಿತವಾದ ಚೂರಿಯಿಂದ ಕತ್ತರಿಸುವಂತೆ, ನರಳುತ್ತಿದ್ದಳು. ಯೋಚಿಸಿ ಬೇಸತ್ತ ಅವನು ರೇಗಿ "ಸುಮ್ನೇ ಮಲಕ್ಕೋ" ಎಂದು ಕಿರುಚಿದ.

ಒಂದು ಗಳಿಗೆ ಚಿಂತಿಸಿ ಸ್ತಬ್ಧವಾಗಿದ್ದ ಮಿದುಳು, ಮತ್ತೆ ಕೆರಳಿ ಹೇಳಿತು—

"ನಿನ್ನ ಸಿಟ್ಟಿಗಾಗಿ, ಈ ನೋವಿಗೆ ಗುರಿಯಾದಳು ಇಂದು. ಅವಳ ಮೇಲೆ ರೇಗುತ್ತೀಯಾ ?" ತನ್ನೊಳಗೇ ಕೇಳಿ ಬಂದ ಆ ಮಾತು ಕೇಳಿ, ಮುಖಕ್ಕೆ ಘಟ್ಟಿಸಿದಂತಾಯಿತು ಕಣ್ಣನಿಗೆ. ಸುತ್ತುವ ತಲೆಯನ್ನು ಹಿಡಿದು, ಎರಡೂ ಮುಷ್ಟಿಯಲ್ಲಿ ತಲೆಯ ಕೂದಲನ್ನು ಬಿಗಿ ಹಿಡಿದು, ನರಪಶುವಿನಂತೆ ನರಳುತ್ತಿರುವ ಇಂದುವನ್ನು ನೋಡಿದ. ಅವನಿಗೆ ಅವನು ತಿಳಿಯದ ಏನೋ ಆಗುತ್ತಿತ್ತು. ತಲೆಯೊಳಗೆ ಏನೇನೋ ಭೋರ್ಗರೆದು ಬರುತ್ತಿದ್ದವು.

ಇಂದು ಒಂದು ಬಾರಿ ನರಳಿ ಕೂಗಿದಳು "ಅಣ್ಣಾ"

ಆ ಮಾತು ಕೇಳಿ ಎಂದಿನಂತೆ ಕಣ್ಣನ ಹೃದಯದಲ್ಲಿ ಹೂವರಳದೆ, ಹಿಮ ಸುರಿದಂತಾಯಿತು.

"ಅಣ್ಣ" ಅವಳು ನಿನ್ನ ತಂಗಿ. ಎಂಥ ಅಣ್ಣ ನೀನು. ನಾಚಿಕೆ ಯಾಗುವುದಿಲ್ಲ. ಇವರಮೇಲೆ ರೇಗುತ್ತಿ ? ನಿನ್ನಮೇಲೇ ಸಿಟ್ಟು ಬರುವು

ದಿಲ್ಲವೇ? ಅವಳಿಗೆ ಯಾರ ಹಿಂಸೆಯೂ ಇಲ್ಲದೆ ಎರಡು ಹೊತ್ತು ಅನ್ನ ಹಾಕಲು ಶಕ್ತಿಯಿಲ್ಲದ ನೀನು ಎಂಥ ಅಣ್ಣ" ಯಾರೋ ವಿಕಟವಾಗಿ ನಕ್ಕು ಕೇಳಿದರು.

"ತೊಟ್ಟಿಯಿಂದ ತಿನ್ನುವ ಈ ನಾಯಿಯ ಬಾಳು ಎಷ್ಟುದಿನ? ಕಣ್ಣ, ನಿನ್ನಂತೆ ನಿನ್ನ ತಂಗಿಯನ್ನು ನಾಯಿಯನ್ನಾಗಿ ಮಾಡಿದೆ. ಈ ಸುಖ ಕೊಡಲೆಂದೇ ನೀನು ಅವಳನ್ನು ತಂಗಿ ಎಂದು ಎತ್ತಿಕೊಂಡದ್ದು"—ಮತ್ತೆ ಯಾರೋ ಕಂಬನಿ ಇಟ್ಟು ಕೇಳಿದರು ಕಣ್ಣನನ್ನು.

"ದುಡಿದುಹಾಕು, ದುಡಿದು ತಿನ್ನು" ಇದೆರಡೇ ಮಾತನ್ನೇ ಖಡ್ ಖಡ್ ಎಂದು ಕಾದಕಬ್ಬಿಣವನ್ನು ಸುತ್ತಿಗೆಯಿಂದ ಜಡಿಯುತ್ತಿರುವಂತೆ ಜಡಿಯುತ್ತಿದ್ದರು, ಅವನ ಮಿದುಳಿನಲ್ಲಿ.

"ನೀನು ದುಡಿದು, ನೀನು ದುಡಿದು ತಂದ ಅನ್ನವನ್ನು ತಂಗಿಗೆ ಹಾಕಿದ್ದರೆ, ಅವಳು ಕುದಿನೀರಿಗೆ ಸಿಕ್ಕಿ ಪ್ರಾಣಬಿಡುವ ಅವಸ್ಥೆ ಬರುತ್ತಿತ್ತೆ?" ಎಲ್ಲಿಯದೋ ಒಂದು ಕರ್ಕಶ ಧ್ವನಿ ಹಂಗಿಸಿ ಕೇಳಿತು.

"ಚಾಕ್ರಿ ಮಾಡೋದು ನಮ್ಜಾತಿ ಜನಗ್ಳ ಹಣೇಲಿ ಬರ್ದಿಲ್ಲ ಕಣ್ಣ, ನಾವು ಬೇಡಿ ತಿನ್ನಲು ಹುಟ್ಟಿದವರು"— ಯಾರೋ ಹೆಂಗಸು ಅಳುತ್ತಾ ಹೇಳಿದಳು ಆ ಮಾತನ್ನು. ಅವಳ ಅಳುವ ಬಾಯಿನಲ್ಲಿ ಒತ್ತಿ ಹಿಡಿದು, ಮತ್ತೊಂದು ಮೃದುವಾದ ಗಂಭೀರ ಸ್ವರ ಹೇಳಿತು—

"ಬಿಕ್ಷೆ ಬೇಡುವುದು ಪಾಪ, ಬಿಕ್ಷೆ ಬೇಡುವುದು ಅವಮಾನ. ಕಣ್ಣಾ, ನೀನು ಗಂಡಸು ಮಗ ಅಲ್ವೆ? ಅಳುವವರು ಗಂಡಸರಲ್ಲ"

ಅದರೊಂದಿಗೇ ಬೆರೆತು ಬಂದ ಧೃಢಕಂಠ ಹೇಳಿತು—

"ತೊಟ್ಟೀಲಿ ನಾಯ್ಗಳ ಹಾಗೆ ತಿನ್ನೋರನ್ನ ಜನ, ನಾಯಿಗಳನ್ನು ಕಂಡಹಾಗೇ ಕಾಣುತ್ತಾರೆ. ಗೌರವ ಕೊಡೋದಿಲ್ಲ. ಒದೀತಾರೆ ಬೈಯುತ್ತಾರೆ. ಇದಕ್ಕಿಂತ ಮೂಟೆ ಹೊತ್ತು ಬದುಕುವುದು ಮೇಲಲ್ಲವೇ?"

ನೂರಾರು ಶಬ್ದಗಳು ಅವನ ಸುತ್ತಾ ಕೇಳಿಯೂ ಕೇಳಿಸದಂತೆ ಪಿಸುಗುಟ್ಟುತ್ತಿದ್ದವು. ಅವಕ್ಕೆ ಶ್ರುತಿ ಹಿಡಿದಂತೆ, ಇಂದು "ಅಣ್ಣಾ ಅಣ್ಣಾ" ಎಂದು ಮುಲುಗುತ್ತಿದ್ದಳು.

ಅವನ ಕಣ್ಣೆದಿರು ಮುದ್ದಾದ ಮುಖವೊಂದು ತೇಲಿ ಬಂದಿತು. ಥಳಥಳ ಜೋಡಿ ನಕ್ಷತ್ರದಂತೆ ಹೊಳೆಯುವ ಕಣ್ಣುಗಳು ಕಣ್ಣನನ್ನೇ ದಿಟ್ಟಿಸಿ ನೋಡುತ್ತಾ ಕಂಬನಿ ದುಂಬಿದವು.

"ನನಗೂ ಹೀಗೆ ಮಾಡ್ತಿದ್ದಾ ಕಣ್ಣಾ"

ಅತ್ತಿತ್ತ ಸುಳಿಯಲು ಅವಕಾಶವಿಲ್ಲದೆ, ಸುತ್ತಿಸಿ ಸುತ್ತಿಸಿ, ಹತ್ತು ನಾಲಿಗೆಯ ಚಾಟಿಯಿಂದ ಹೊಡೆದಂತಾಯಿತು ಕಣ್ಣನಿಗೆ.

"ಇಂದೂ ಇನ್ಮೇಲಂಗ್ಮಾಡಕಿಲ್ಲ" ಎಂದು ಚಿಟ್ಟನೆ ಚೀರಿ, ಕುಳಿತಿದ್ದವನು ಮೇಲೆದ್ದು ನಿಂತ.

ಅವನ ಮೈಯಿಂದ ಬೆವರು ಧಾರಾಕಾರವಾಗಿ ಬಸಿಯುತ್ತಿತ್ತು. ತನ್ನನ್ನೇ ತಾನು ನೋಡಿಕೊಂಡ ಕಣ್ಣ—

ಅಗಲವಾದ ಎದೆ, ತೆಳುವಾದರೂ ಉಕ್ಕಿನ ತಂತಿಯಂತೆ ಬಿಗಿದ ತೋಳುಗಳು, ಸ್ಥಿರವಾಗಿ ನಿಂತ ತುಂಬುತೊಡೆ—

ತನಗೆ ತಾನೇ ಹೇಳಿಕೊಂಡ ಕಣ್ಣ—

"ನಾನು ನಾಯಿಯಲ್ಲ, ಗಂಡಸು!"

ಅವನ ನೆತ್ತಿಯಲ್ಲಿ ಏನೋ ಬೆಳಕು ಹೊಳೆಯಿತು. ತನಗೆ ತಾನೇ ಮೂರು ನಾಲ್ಕು ಬಾರಿ ಹೇಳಿಕೊಂಡ "ನಾನು ಗಂಡಸು, ನಾನು ಗಂಡಸು, ಜಗತ್ತನ್ನೇ ಮಣಿಸಿ ದುಡಿಯ ಬಲ್ಲೆ"

ತನ್ನ ಮೈ ಅಗಾಧವಾಗಿ ಬೆಳೆದು, ನೆತ್ತಿ ಮುಗಿಲನ್ನು ಸೋಕುವುದೇನೋ ಎನಿಸಿತು ಕಣ್ಣನಿಗೆ. ತನ್ನನ್ನಿನ್ನು ಯಾರೂ ತುಳಿಯಲಾರರು ಎನಿಸಿತು. ಈ ಸಂತೋಷದಲ್ಲೇ ಕೂಗಿ ಹೇಳಿದ—

"ಇಂದೀ ನಾನು ಗಂಡಸು. ನಾನು ದುಡ್ಡು ಹಾಕ್ತೀನೆ. ನೀನು ತೊಟ್ಟೀಲಿ ತಿನ್ನಬ್ಯಾಡ."

ನೋವಿನಿಂದ ಬಾಡಿದ ಇಂದುವಿನ ಕಣ್ಣು, ನಿಧಾನವಾಗಿ ಅಗಲವಾಗಿ ನೇಸರನ್ನು ಕಂಡ, ಕಮಲದಂತೆ ತೆರೆಯಿತು, ಕಣ್ಣನ ಕೂಗನ್ನು ಕೇಳಿ.

# ತ. ರಾ. ಸು. ಅವರ ಕೃತಿಗಳು

| | | | |
|---|---|---|---|
| ೧. | ರಕ್ತತರ್ಪಣ | (ಕಾದಂಬರಿ) | ೧ ೮ ೦ |
| ೨. | ಪಾರಿಜಾತ | ( ,, ) | ೧ ೧೫ ೦ |
| ೩. | ಬೇಡದ ಮಗು | ( ,, ) | ೧ ೧೫ ೦ |
| ೪. | ಮುಂಜಾವಿನಿಂದ ಮುಂಜಾವು | ( ,, ) | ೨ ೧೨ ೦ |
| ೫. | ಪುರುಷಾವತಾರ | ( ,, ) | ೧ ೧೫ ೦ |
| ೬. | ಜ್ವಾಲಾ | ( ನಾಟಕ ) | ಅಚ್ಚಿನಲ್ಲಿ |
| ೭. | ಸಾಹಸಜೀವಿ ಸಿಂದಾಬಾದ್ | | ,, |

ಆನಂದ್ ಬ್ರದರ್ಸ್ — ಪ್ರಕಾಶಕರು — ಬೆಂಗಳೂರು.